ಬುಧವಾರ, ಏಪ್ರಿಲ್ 3, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 94 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಂತ್ರಜ್ಞಾನ

ಎಐ ತಂತ್ರಜ್ಞಾನವು ಔಷಧಗಳ ಸಂಶೋಧನೆಗೂ ಒದಗುತ್ತಿದೆಯಂತೆ!

ಆಳ-ಅಗಲ: ಭಾರತದ ಚೆಸ್ ಕಲಿಗಳ ಮೇಲೆ ಕೌತುಕದ ಕಣ್ಣು

ಚುನಾವಣಾ ಬಾಂಡ್: ಎಸ್‌ಬಿಐ ಬಹಿರಂಗಕ್ಕೆ ಎಸ್‌ಬಿಐ ನಕಾರ 13

ಅಭ್ಯರ್ಥಿಗಳ 'ಜಾತಿವೃಕ್ಷ' 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,903 ▼	22,453 ▼	₹71,130 (ಬೆಂಗಳೂರು) ▼	₹77,800 (ಬೆಂಗಳೂರು) ▲	83.42 ▼

'ನ್ಯಾಯ–ಅನ್ಯಾಯ'ದ ರಾಜಕೀಯ

ಬೆಂಗಳೂರು: ಲೋಕಸಭೆ ಚುನಾವಣೆ ಅಖಾಡ ರಂಗೇರುತ್ತಿದ್ದು, ಚುನಾವಣೆ ಘೋಷಣೆ ಬಳಿಕ ಮೊದಲ ಬಾರಿಗೆ ಕರ್ನಾಟಕಕ್ಕೆ ಕಾಲಿಟ್ಟ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜ್ಯಕ್ಕೆ ಕೇಂದ್ರ 'ನ್ಯಾಯ' ಕೊಟ್ಟಿದೆ ಎಂದು ಬಲವಾಗಿ ಪ್ರತಿಪಾದಿಸಿದ್ದಾರೆ. ಕೇಂದ್ರ ಅನ್ಯಾಯ ಮಾಡುತ್ತಿದೆ ಎಂದು ಅಧಿಕಾರ ಸ್ವೀಕರಿಸಿದ ಮೊದಲ ದಿನದಿಂದಲೂ ಅಬ್ಬರಿಸುತ್ತಲೇ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ 'ಅನ್ಯಾಯ'ದ ಪಟ್ಟ ಕೊಟ್ಟಿದ್ದಾರೆ.

ಅಮಿತ್ ಶಾ ವಾದ

ಭ್ರಷ್ಟಾಚಾರದಲ್ಲಿ ಮುಳುಗಿರುವ ಕಾಂಗ್ರೆಸ್ ಸರ್ಕಾರಕ್ಕೆ ಕರ್ನಾಟಕದ ಅಭಿವೃದ್ಧಿ ಬೇಕಿಲ್ಲ. ಜನರ ಹಿತ ಮರೆತು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಕುರ್ಚಿಗಾಗಿ ಕಿತ್ತಾಟ ನಡೆಸುತ್ತಿದ್ದಾರೆ. ಒಬ್ಬರು ಕುರ್ಚಿ ಉಳಿಸಿಕೊಳ್ಳಲು ಒದ್ದಾಡುತ್ತಿದ್ದರೆ ಮತ್ತೊಬ್ಬರು ಕುರ್ಚಿ ಕಿತ್ತುಕೊಳ್ಳಲು ಪರದಾಡುತ್ತಿದ್ದಾರೆ

ಕರ್ನಾಟಕ ಬರದಿಂದ ಸಂಕಷ್ಟಕ್ಕೆ ತುತ್ತಾಗಿದೆ. ಆದರೆ ಕಾಂಗ್ರೆಸ್ ಸರ್ಕಾರ ಬರದ ಬಗ್ಗೆ ನಿರ್ಲಕ್ಷ್ಯ ವಹಿಸಿದ್ದೂ ಅಲ್ಲದೇ, ಪರಿಹಾರಕ್ಕೆ ಮೂರು ತಿಂಗಳು ತಡವಾಗಿ ಮನವಿ ಸಲ್ಲಿಸಿದೆ. ಈಗ ಈ ವಿಷಯದಲ್ಲಿ ರಾಜಕೀಯ ಮಾಡುತ್ತಿದೆ.

ಯುಪಿಎ ಅವಧಿಯ 10 ವರ್ಷ ಮತ್ತು ನಮ್ಮ ಅವಧಿಯ ಹತ್ತು ವರ್ಷಗಳ ಲೆಕ್ಕ ಕೊಡಲು ಬಂದಿದ್ದೇನೆ.

ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ 10 ವರ್ಷದಲ್ಲಿ ಕರ್ನಾಟಕಕ್ಕೆ ₹1.42 ಲಕ್ಷ ಕೋಟಿ ಕೊಟ್ಟರೆ, ಮೋದಿ ನೇತೃತ್ವದ ಎನ್‌ಡಿಎ 10 ವರ್ಷಗಳಲ್ಲಿ ₹4.91 ಲಕ್ಷ ಕೋಟಿ ಕೊಟ್ಟಿದೆ. ಯುಪಿಎ ಅವಧಿಗಿಂತ ಮೂರು ಪಟ್ಟು ಹೆಚ್ಚು ಹಣ ನೀಡಿದ್ದೇವೆ.

ಕರ್ನಾಟಕದ ಜನ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ. ಡಿ.ಕೆ.ಶಿವಕುಮಾರ್ ಅವರ ಭ್ರಷ್ಟಾಚಾರದ ಬಗ್ಗೆ ಎಲ್ಲರಿಗೂ ಗೊತ್ತಿರುವಂತಹದ್ದೇ. ಇವೆಲ್ಲದರ ಪರಿಣಾಮ ಕರ್ನಾಟಕದಲ್ಲಿ ಅಭಿವೃದ್ಧಿಯೇ ನಿಂತು ಹೋಗಿದೆ.

ಬೆಂಗಳೂರು ಅಭಿವೃದ್ಧಿಗೆ ಮೋದಿಯವರು ನೀಡಿದಷ್ಟು ಕೊಡುಗೆಯನ್ನು ಬೇರೆ ಯಾರೂ ಕೊಟ್ಟಿಲ್ಲ. ರಸ್ತೆಗಳು, ರೈಲ್ವೆ ವ್ಯವಸ್ಥೆ, ವಿಮಾನ ನಿಲ್ದಾಣಗಳು, ಮೆಟ್ರೊ ಇವೆಲ್ಲದಕ್ಕೂ ಅತಿ ಹೆಚ್ಚಿನ ಅನುದಾನ ನೀಡಿದ್ದೇವೆ.

ಬಿಜೆಪಿಯ ಚುನಾವಣಾ ಪ್ರಚಾರವನ್ನು ಸುಳ್ಳುಗಳ ಮೂಲಕವೇ ಅಮಿತ್ ಶಾ ಉದ್ಘಾಟಿಸಿದ್ದಾರೆ. ಇದಕ್ಕಾಗಿ ಅವರಿಗೆ ಅಭಿನಂದನೆಗಳು.

195 ತಾಲ್ಲೂಕುಗಳಿಗೆ ₹ 4,860 ಕೋಟಿ ಬರ ಪರಿಹಾರ ಕೋರಿ 2023ರ ಸೆಪ್ಟೆಂಬರ್ 22ರಂದೇ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವರಿಗೆ ಮೊದಲ ಮನವಿ ಸಲ್ಲಿಸಲಾಗಿತ್ತು. ಒಟ್ಟು 236 ತಾಲ್ಲೂಕುಗಳಿಗೆ ₹ 18,171.44 ಕೋಟಿ ಬರ ಪರಿಹಾರ ಕೋರಿ ನಾನೇ ಪತ್ರ ಬರೆದಿದ್ದೆ. ಇಷ್ಟಾದರೂ ಕೇಂದ್ರ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರೊಂದಿಗೆ ಡಿಸೆಂಬರ್ 19ರಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವರಾದ ನಿಮ್ಮನ್ನು ಭೇಟಿಮಾಡಿದ್ದೆ. ವಾರದೊಳಗೆ ಸಭೆ ನಡೆಸಿ, ಬರ ಪರಿಹಾರ ಬಿಡುಗಡೆ ಮಾಡುವ ಭರವಸೆ ನೀಡಿದ್ದೀರಿ. ಭರವಸೆ ಈಡೇರಿಸದೇ ಈಗ ರಾಜ್ಯಕ್ಕೆ ಬಂದು ಕರ್ನಾಟಕಕ್ಕೆ ನೀವು ಮಾಡಿರುವ ಘನಘೋರ ಅನ್ಯಾಯವನ್ನು ಮುಚ್ಚಿಹಾಕಲು ಸುಳ್ಳಿನ ಮೊರೆ ಹೋಗಿದ್ದೀರಿ.

ಬರಪೀಡಿತರ ಬದುಕಿನ ಜೊತೆ ಕೊಳಕು ರಾಜಕೀಯ ಮಾಡದೆ ಬರ ಪರಿಹಾರ ಬಿಡುಗಡೆ ಮಾಡಿ. ತಪ್ಪಿದ್ದಲ್ಲಿ ಜನರು ತಕ್ಕ ಉತ್ತರ ನೀಡುತ್ತಾರೆ.

ಸಿದ್ದರಾಮಯ್ಯ ಪ್ರತಿವಾದ

ಬರ ಪರಿಹಾರ ಕೋರಿ ರಾಜ್ಯ ಸರ್ಕಾರ ಮೂರು ತಿಂಗಳು ತಡವಾಗಿ ಮನವಿ ಸಲ್ಲಿಸಿದೆ ಎಂಬ ಆರೋಪಕ್ಕೆ ನೀವು ಬಯಸುವ ಕ್ರಮದಲ್ಲೇ (ಕ್ರೊನಾಲಜಿ) ಉತ್ತರ ಕೊಡುತ್ತೇನೆ. ನಾನು ನಿಮ್ಮ ಮುಂದಿಡುವ ಸತ್ಯವನ್ನು ಸುಳ್ಳೆಂದು ಸಾಬೀತುಪಡಿಸಿದರೆ ರಾಜಕೀಯದಿಂದಲೇ ನಿವೃತ್ತಿಯಾಗುತ್ತೇನೆ. ಆಗದಿದ್ದರೆ ನೀವೇನು ಮಾಡಬೇಕು ನೀವೇ ನಿರ್ಧರಿಸಿ

ಪ್ರಚಾರ ಭರಾಟೆ ಚನ್ನಪಟ್ಟಣದಲ್ಲಿ ಮಂಗಳವಾರ ನಡೆದ ರೋಡ್ ಶೋನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಸಿ.ಪಿ.ಯೋಗೇಶ್ವರ್, ಬಿ.ವೈ.ವಿಜಯೇಂದ್ರ, ಡಾ.ಸಿ.ಎನ್. ಮಂಜುನಾಥ್ ಹಾಗೂ ಎಚ್.ಡಿ.ಕುಮಾರಸ್ವಾಮಿ ಭಾಗವಹಿಸಿದ್ದರು

ವಿವರ 05

ಬಿಜೆಪಿ– ಜೆಡಿಎಸ್ ಕೋರ್ ಕಮಿಟಿ ಸಭೆಯಲ್ಲಿ ಶಾ ಸೂಚನೆ

ಎಲ್ಲ ಹಂತದಲ್ಲಿ ಸಮನ್ವಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟದಲ್ಲಿ ಎಲ್ಲ ಹಂತದಲ್ಲಿ ಸಮನ್ವಯ ಸಾಧಿಸಲು ತಕ್ಷಣದಿಂದಲೇ ಕಾರ್ಯಪ್ರವೃತ್ತರಾಗಬೇಕು. ಸ್ಥಳೀಯವಾಗಿ ಇರುವ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಎಲ್ಲ ಕ್ಷೇತ್ರಗಳಲ್ಲೂ ಜಂಟಿ ಸಮನ್ವಯ ಸಮಿತಿ ರಚಿಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಎರಡೂ ಪಕ್ಷಗಳ ನಾಯಕರಿಗೆ ಸೂಚಿಸಿದ್ದಾರೆ.

ನಗರದ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಮಂಗಳವಾರ ಬಿಜೆಪಿ-ಜೆಡಿಎಸ್ ಜಂಟಿ ಕೋರ್ ಕಮಿಟಿ ಸಭೆ ನಡೆಸಿದ ಅವರು, ಲೋಕಸಭಾ ಚುನಾವಣಾ ಸಿದ್ಧತೆ ಕುರಿತು ಎರಡೂ ಪಕ್ಷಗಳ ಪ್ರಮುಖರ ಜತೆ ಚರ್ಚಿಸಿದರು. ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ಜೆಡಿಎಸ್ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ, ಮಾಜಿ ಸಚಿವರಾದ ಬಂಡೆಪ್ಪ ಕಾಶೆಂಪೂರ, ವೆಂಕಟರಾವ್ ನಾಡಗೌಡ ಸೇರಿದಂತೆ ಎರಡೂ ಪಕ್ಷಗಳ ಹಲವು ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು.

'ಕೆಲವು ಕ್ಷೇತ್ರಗಳಲ್ಲಿ ಪೂರ್ಣ ಪ್ರಮಾಣದ ಹೊಂದಾಣಿಕೆಯ ವಾತಾವರಣ ಸೃಷ್ಟಿಯಾಗದೇ ಇರುವ ಕುರಿತು ಕುಮಾರಸ್ವಾಮಿ ಅವರು ಅಮಿತ್ ಶಾ ಗಮನಕ್ಕೆ ತಂದರು. ಅಂತಹ ಕ್ಷೇತ್ರಗಳನ್ನು ಗುರುತಿಸಿ ಸ್ಥಳೀಯ ಬಿಜೆಪಿ ಮುಖಂಡರ ಜತೆ ಚರ್ಚಿಸಿ ಸಮನ್ವಯ ಸಾಧಿಸಲು ಕ್ರಮ ಕೈಗೊಳ್ಳುವಂತೆ ತಮ್ಮ ಪಕ್ಷದ ನಾಯಕರಿಗೆ ಶಾ ಸೂಚಿಸಿದರು' ಎಂದು ಸಭೆಯಲ್ಲಿದ್ದ ಜೆಡಿಎಸ್ ನಾಯಕರೊಬ್ಬರು ತಿಳಿಸಿದರು.

'ಎರಡೂ ಪಕ್ಷಗಳ ಮುಖಂಡರು ವೈಯಕ್ತಿಕ ಪ್ರತಿಷ್ಠೆ ಬದಗಿಟ್ಟು ಒಗ್ಗಟ್ಟಿನಿಂದ ಚುನಾವಣೆ ಎದುರಿಸಬೇಕು. ಯಾವುದೇ ಕ್ಷೇತ್ರದಲ್ಲಿ ಮಿತ್ರಪಕ್ಷಗಳ ಮಧ್ಯೆ ಸಮನ್ವಯದ ಕೊರತೆ, ಗೊಂದಲ ಉದ್ಭವಿಸಿದಲ್ಲಿ ತಕ್ಷಣ ತಮ್ಮ ಗಮನಕ್ಕೆ ತರಬೇಕು ಎಂಬ ಸೂಚನೆ ನೀಡಿದರು' ಎಂದರು.

ವರದಿ ವಿನಿಮಯಕ್ಕೆ ಸೂಚನೆ: 'ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ಜೆಡಿಎಸ್ ಪಕ್ಷದ ವತಿಯಿಂದ ನಡೆಸಿರುವ ಸಮೀಕ್ಷೆಯ ವರದಿಯನ್ನು ಕುಮಾರಸ್ವಾಮಿ ಅವರು ಅಮಿತ್ ಶಾ ಅವರಿಗೆ ನೀಡಿದರು. ಪ್ರತಿ ಕ್ಷೇತ್ರದಲ್ಲಿನ ಸವಾಲುಗಳ ಕುರಿತು ತಮಗಿರುವ ಮಾಹಿತಿಯನ್ನೂ ಹಂಚಿಕೊಂಡರು. ಬಿಜೆಪಿ ನಡೆಸಿರುವ ಸಮೀಕ್ಷೆಯ ವರದಿಯನ್ನು ಜೆಡಿಎಸ್ ನಾಯಕರ ಜತೆ ಹಂಚಿಕೊಳ್ಳುವಂತೆ ಪಕ್ಷದ ನಾಯಕರಿಗೆ ಶಾ ಸೂಚಿಸಿದರು' ಎಂದು ಜೆಡಿಎಸ್ ಮೂಲಗಳು ತಿಳಿಸಿವೆ.

ಎರಡೂ ಪಕ್ಷಗಳ ಮುಖಂಡರ ಮಧ್ಯೆ ಸಮನ್ವಯ ಸಾಧಿಸಲು ಕುಮಾರಸ್ವಾಮಿ ಅವರ ಪ್ರಯತ್ನವನ್ನು ಅಮಿತ್ ಶಾ ಶ್ಲಾಘಿಸಿದ್ದಾರೆ. ಅದೇ ಮಾದರಿಯಲ್ಲಿ ಬಿಜೆಪಿ ನಾಯಕರು ಕೂಡ ಜೆಡಿಎಸ್ ನಾಯಕರ ಮನೆಗಳಿಗೆ ಭೇಟಿ ನೀಡುವಂತೆ ನಿರ್ದೇಶನ ನೀಡಿದ್ದಾರೆ ಎಂದು ಜೆಡಿಎಸ್ ನಾಯಕರು ತಿಳಿಸಿದ್ದಾರೆ.

'ಏಕೆ ಸ್ಪರ್ಧಿಸಬಾರದೆಂದು ಅಮಿತ್ ಶಾಗೆ ಕೇಳಿದ್ದೇನೆ'

'ಇವತ್ತು ಬೆಳಿಗ್ಗೆ ಅಮಿತ್ ಶಾ ಅವರು ದೂರವಾಣಿ ಕರೆ ಮಾಡಿ ಚುನಾವಣೆಗೆ ನಿಲ್ಲಬೇಡಿ ಎಂದರು. ನಾನು ಯಾಕೆ ನಿಲ್ಲಬಾರದು ಎಂದು ಪ್ರಶ್ನಿಸಿದೆ. ಅವರು ದೆಹಲಿಗೆ ಕರೆದಿದ್ದಾರೆ. ಹೋಗುತ್ತೇನೆ' ಎಂದು ಶಿವಮೊಗ್ಗ ಕ್ಷೇತ್ರದಲ್ಲಿ ಬಂಡಾಯ ಎದ್ದಿರುವ ಬಿಜೆಪಿಯ ಹಿರಿಯ ನಾಯಕ ಕೆ.ಎಸ್.ಈಶ್ವರಪ್ಪ ಹೇಳಿದರು.

ಶಿವಮೊಗ್ಗದಲ್ಲಿ ಮಾತನಾಡಿದ ಅವರು, 'ಹಿಂದೆ ಸಂಗೊಳ್ಳಿ ರಾಯಣ್ಣ ಬ್ರಿಗೇಡ್ ನಿಲ್ಲಿಸಲು ಹೇಳಿದ್ದರು ನಿಲ್ಲಿಸಿದ್ದೆ. ನನ್ನ ಮೇಲೆ ಕೇಸ್ ಬಿತ್ತು. ನಾನು ತಪ್ಪು ಮಾಡಿಲ್ಲ ಎಂಬ ತೀರ್ಪು ಬಂತು. ನನ್ನನ್ನು ಪುನಃ ಮಂತ್ರಿ ಮಾಡುವುದಾಗಿ ಯಡಿಯೂರಪ್ಪ, ಬೊಮ್ಮಾಯಿ ಹೇಳಿದರು. ಅಲ್ಲಿಯೂ ಮೋಸ ಆಯಿತು. ಈ ಬಾರಿ ಧರ್ಮ ಗೆಲ್ಲುತ್ತೋ ಹಣ ಗೆಲ್ಲುತ್ತೋ ನೋಡೋಣ. ನೀವು ನನ್ನ ಪರವಾಗಿ ಜನರ ಬಳಿ ಮತ ಕೇಳುವಾಗ ನಿಮ್ಮ ಕಣ್ಣ ಮುಂದೆ ಮೋದಿ, ಓಂ ಶಕ್ತಿ, ಮಾರಿಕಾಂಬ ಬರಬೇಕು. ಏ.12ರಂದು ನಾಮಪತ್ರ ಸಲ್ಲಿಸುತ್ತೇನೆ' ಎಂದರು.

ಎಎಪಿ ಸಂಸದ ಸಂಜಯ್ ಸಿಂಗ್‌ಗೆ ಜಾಮೀನು

ಆರು ತಿಂಗಳ ಬಳಿಕ ಜೈಲಿನಿಂದ ಬಿಡುಗಡೆ • ರಾಜಕೀಯ ಚಟುವಟಿಕೆ ಮುಂದುವರಿಸಲೂ ಸಮ್ಮತಿ

ಸಂಜಯ್ ಸಿಂಗ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಎಎಪಿಯ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಅವರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ಜಾಮೀನು ಮಂಜೂರು ಮಾಡಿದೆ. ಜಾಮೀನು ನೀಡಲು ಜಾರಿ ನಿರ್ದೇಶನಾಲಯ (ಇ.ಡಿ) ಯಾವುದೇ ಆಕ್ಷೇಪ ವ್ಯಕ್ತಪಡಿಸಲಿಲ್ಲ.

ಜಾಮೀನು ಕೋರಿ ಸಿಂಗ್ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ದೀಪಂಕರ್ ದತ್ತಾ ಮತ್ತು ಪಿ.ಬಿ.ವರಾಳೆ ಅವರ ಪೀಠವು, ಆರು ತಿಂಗಳಿಂದ ಜೈಲಿನಲ್ಲಿರುವ ಸಿಂಗ್ ಅವರಿಗೆ ಜಾಮೀನಿನ ಮೇಲೆ ಬಿಡುಗಡೆಗೆ ನಿರ್ದೇಶನ ನೀಡಿತು.

'ಸಿಂಗ್ ಅವರು ತಮ್ಮ ರಾಜಕೀಯ ಚಟುವಟಿಕೆ ಮುಂದುವರಿಸಬಹುದು. ಆದರೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆಗಳನ್ನು ನೀಡುವಂತಿಲ್ಲ' ಎಂದು ಪೀಠ ಈ ವೇಳೆ ಸೂಚಿಸಿತು.

ಇದಕ್ಕೂ ಮುನ್ನ, ಸಿಂಗ್ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವುದಕ್ಕೆ ತನಿಖಾ ಸಂಸ್ಥೆಗೆ ಯಾವುದೇ ಅಭ್ಯಂತರವಿಲ್ಲ ಎಂದು ಜಾರಿ ನಿರ್ದೇಶನಾಲಯದ ಪರ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ಪೀಠಕ್ಕೆ ತಿಳಿಸಿದರು.

ಆದಾಗ್ಯೂ ಸಿಂಗ್ ಅವರ ಬಳಿ ಯಾವುದೇ ಹಣ ಪತ್ತೆಯಾಗಿಲ್ಲವಲ್ಲ ಎಂದು ಪ್ರಶ್ನಿಸಿದ ಪೀಠವು, ಅವರ ವಿರುದ್ಧದ ₹ 2 ಕೋಟಿ ಲಂಚದ ಆರೋಪವನ್ನು ವಿಚಾರಣೆ ವೇಳೆ ಪರಿಶೀಲಿಸಬಹುದು ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಅವರಿಗೆ ಸೂಚಿಸಿತು.

ಸಿಂಗ್ ಪರವಾಗಿ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ವಾದ ಮಾಡಿದರು. ಸಿಂಗ್ ಅವರನ್ನು ಇ.ಡಿ ಕಳೆದ ವರ್ಷದ ಅಕ್ಟೋಬರ್ 4ರಂದು ಬಂಧಿಸಿತ್ತು.

ಲೋಕಸಭೆ ಚುನಾವಣೆಗೆ ಮುಂಚಿತವಾಗಿ ಎಎಪಿ ನಾಯಕನಿಗೆ ಜಾಮೀನು ದೊರೆತಿರುವುದು ಪಕ್ಷದ ನಾಯಕರು, ಕಾರ್ಯಕರ್ತರನ್ನು ಕೊಂಚ ನಿರಾಳರನ್ನಾಗಿಸಿದೆ. ಆದರೆ, ಈ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಅವರ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಇನ್ನೂ ತಿಹಾರ್ ಜೈಲಿನಲ್ಲಿದ್ದಾರೆ.

ಸತ್ಯಮೇವ ಜಯತೆ: ಸಂಜಯ್ ಸಿಂಗ್ ಅವರಿಗೆ ಜಾಮೀನು ಸಿಕ್ಕ ನಂತರ ದೆಹಲಿ ಸಚಿವೆ ಆತಿಶಿ ಅವರು ತಮ್ಮ 'ಎಕ್ಸ್'ನಲ್ಲಿ 'ಸತ್ಯಮೇವ ಜಯತೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಅಣ್ಣಂದಿರಾದ ಅರವಿಂದ್‌ಜಿ, ಮನೀಶ್ ಸಿಸೋಡಿಯಾ, ಸತ್ಯೇಂದ್ರ ಜೈನ್ ಬಿಡುಗಡೆ ಬಾಕಿ ಇರುವುದರಿಂದ ಸಂತಸ ಅಪೂರ್ಣವಾಗಿದೆ
ಅನಿತಾ ಸಿಂಗ್, ಸಂಜಯ್ ಸಿಂಗ್ ಪತ್ನಿ

ಪ್ರಜಾಪ್ರಭುತ್ವದಲ್ಲಿ ಇದು ಮುಖ್ಯವಾದ ದಿನ. ಸಂಜಯ್ ಸಿಂಗ್‌ಗೆ ಜಾಮೀನು ಸಿಕ್ಕಿರುವುದು ಭರವಸೆಯನ್ನು ಇನ್ನೂ ಉಳಿಸಿದೆ
ಸೌರಭ್ ಭಾರದ್ವಾಜ್, ದೆಹಲಿ ಸಚಿವ

ಇ.ಡಿ ವಿರೋಧಿಸದ ಕಾರಣ ಸಂಜಯ್ ಅವರಿಗೆ ಜಾಮೀನು ದೊರೆತಿದೆ. ಹೀಗಾಗಿ ಇನ್ನು ಮುಂದೆ ಇ.ಡಿ, ಸಿಬಿಐ ಸೇಡಿನ ರಾಜಕೀಯದಲ್ಲಿ ತೊಡಗಿವೆ ಎಂದು ಹೇಳಿಕೊಳ್ಳುವ ಹಕ್ಕು ಎಎಪಿಗೆ ಇಲ್ಲ
ಶೆಹಜಾದ್ ಪೂನಾವಾಲ, ಬಿಜೆಪಿ ರಾಷ್ಟ್ರೀಯ ವಕ್ತಾರ

10 ನಕ್ಸಲರ ಹತ್ಯೆ

ರಾಯಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಮಂಗಳವಾರ ಭದ್ರತಾ ಸಿಬ್ಬಂದಿ ಜೊತೆ ನಡೆದ ಗುಂಡಿನ ಚಕಮಕಿಯಲ್ಲಿ ಮಹಿಳೆ ಸೇರಿದಂತೆ 10 ನಕ್ಸಲರು ಹತ್ಯೆಗೀಡಾಗಿದ್ದಾರೆ.

ಜಿಲ್ಲೆಯ ಲೇಂದ್ರಾ ಬಳಿಯ ಅರಣ್ಯದಲ್ಲಿ ನಕ್ಸಲ್ ನಿಗ್ರಹ ಪಡೆ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ, ಸುದೀರ್ಘಾವಧಿ ಗುಂಡಿನ ಚಕಮಕಿ ನಡೆಯಿತು ಎಂದು ಐಜಿಪಿ ಸುಂದರರಾಜ್ ತಿಳಿಸಿದ್ದಾರೆ.

ಗುಂಡಿನ ಚಕಮಕಿಯ ಬಳಿಕ ಮೊದಲಿಗೆ ನಾಲ್ವರು ನಕ್ಸಲರ ಶವಗಳು ಕಂಡುಬಂದವು. ಶೋಧ ಮುಂದುವರಿಸಿದಾಗ ಮತ್ತೆ ಆರು ನಕ್ಸಲರ ಶವಗಳು ಪತ್ತೆಯಾದವು ಎಂದು ಅವರು ತಿಳಿಸಿದ್ದಾರೆ.

ಮಷಿನ್ ಗನ್, ಪಾಯಿಂಟ್ 303 ರೈಫಲ್, 12 ಬೋರ್ ಗನ್, ಗ್ರನೇಡ್ ಲಾಂಚರ್, ಶೆಲ್‌ಗಳು ಹಾಗೂ ಇತರೆ ಶಸ್ತ್ರಾಸ್ತ್ರಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಶೋಧ ಕಾರ್ಯ ಮುಂದುವರಿದಿದೆ. ಮೃತ ನಕ್ಸಲರ ಗುರುತು ಪತ್ತೆಯಾಗಿಲ್ಲ. ಇವರು, ಮಾವೋವಾದಿಗಳ ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಪಡೆಯ ಸದಸ್ಯರು ಎಂದು ಮೇಲ್ನೋಟಕ್ಕೆ ಗೊತ್ತಾಗಿದೆ ಎಂದು ತಿಳಿಸಿದ್ದಾರೆ.

ಸದಸ್ಯ ಹುದ್ದೆಗಾಗಿ ₹4 ಕೋಟಿ ವಂಚನೆ

ಮುಖ್ಯಮಂತ್ರಿ, ರಾಜ್ಯಪಾಲರ ಸಹಿ ನಕಲು • ಸರ್ಕಾರಿ ನೌಕರ ಸೇರಿ ನಾಲ್ವರ ಸೆರೆ

ಪ್ರಜಾವಾಣಿ ವಾರ್ತೆ

ರುದ್ರೇಶ್

ರಿಯಾಜ್

ಯೂಸುಫ್

ಸಿ.ಚಂದ್ರಪ್ಪ

ಕೆಪಿಎಸ್‌ಸಿ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್ಸಿ) ಸದಸ್ಯ ಹುದ್ದೆಗೆ ನೇಮಕ ಮಾಡಿಸುವುದಾಗಿ ಹೇಳಿ ಚಿತ್ರಕಲಾ ಶಿಕ್ಷಕಿಯೊಬ್ಬರಿಂದ ₹ 4.10 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಸರ್ಕಾರಿ ನೌಕರ ಸೇರಿ ನಾಲ್ವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕಲಬುರಗಿಯ ಶಾಲೆಯೊಂದರ ಶಿಕ್ಷಕಿ ನೀಲಮ್ಮ ಬೆಳಮಗಿ ಅವರು ವಂಚನೆ ಬಗ್ಗೆ ದೂರು ನೀಡಿದ್ದರು. ಅದರನ್ವಯ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಸಿಸಿಬಿ ಪೊಲೀಸರಿಗೆ ವಹಿಸಿ ಕಮಿಷನರ್ ಬಿ. ದಯಾನಂದ್ ಆದೇಶ ಹೊರಡಿಸಿದ್ದರು.

'₹ 5 ಕೋಟಿಗೆ ಒಪ್ಪಂದ ಮಾಡಿಕೊಂಡು, ಮುಂಗಡವಾಗಿ ಶಿಕ್ಷಕಿಯಿಂದ ₹ 4.10 ಕೋಟಿ ಪಡೆದು ವಂಚಿಸಲಾಗಿತ್ತು. ಆರೋಪಿಗಳಾದ ತಾವರೆಕೆರೆಯ ರಿಯಾಜ್ ಅಹ್ಮದ್ (41), ಮಲ್ಲೇಶ್ವರದ ಯೂಸುಫ್ ಸುಬ್ಬೆಕಟ್ಟೆ (47), ಕನಕಪುರ ತಾಲ್ಲೂಕಿನ ಹಾರೋಶಿವನಹಳ್ಳಿಯ ರುದ್ರೇಶ್ (35) ಹಾಗೂ ಚಿಕ್ಕಮಗಳೂರು ಕಳಸ ತಾಲ್ಲೂಕಿನ ಸಿ. ಚಂದ್ರಪ್ಪ (44) ಅವರನ್ನು ಬಂಧಿಸಲಾಗಿದೆ. ನಾಲ್ವರು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ಬಿ. ದಯಾನಂದ್ ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಆರೋಪಿ ಚಂದ್ರಪ್ಪ, ತೋಟಗಾರಿಕೆ ಇಲಾಖೆ ನೌಕರ. ರಿಯಾಜ್ ಅಹ್ಮದ್, ನೌಕರರ ವರ್ಗಾವಣೆ ದಂಧೆಯಲ್ಲೂ ಭಾಗಿಯಾಗಿದ್ದ ಮಾಹಿತಿ ಇದೆ. ಇನ್ನೊಬ್ಬ ಆರೋಪಿ ಯೂಸುಫ್, ಮಲ್ಲೇಶ್ವರದಲ್ಲಿರುವ ಕಂಪನಿಯೊಂದರ ಮಾಲೀಕ. ಮತ್ತೊಬ್ಬ ಆರೋಪಿ ರುದ್ರೇಶ್, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕನಕಪುರ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದನೆಂಬ ಮಾಹಿತಿ ಲಭ್ಯವಾಗಿದೆ' ಎಂದು ಹೇಳಿದರು.

7ನೇ ಪುಟ ನೋಡಿ

ಗುತ್ತಲು ಕೆರೆ ಕಲುಷಿತ: ಆಡು, ಕುರಿ ಸಾವು, ಜನರಿಗೆ ಚರ್ಮರೋಗ

ಲಕ್ಷಾಂತರ ಮೀನುಗಳ ಮಾರಣಹೋಮ

• ಎಂ.ಎನ್.ಯೋಗೇಶ್

ಮಂಡ್ಯ: ನಗರದ ಹೊರವಲಯದಲ್ಲಿರುವ ಗುತ್ತಲು ಕೆರೆ ಗಬ್ಬೆದ್ದು ನಾರುತ್ತಿದ್ದು 3 ಕಿ.ಮೀ.ವರೆಗೂ ದುರ್ವಾಸನೆ ಬೀರುತ್ತಿದೆ. ಕೆರೆ ಕಲುಷಿತಗೊಂಡಿದ್ದರಿಂದ ಹಿನ್ನೆಲೆಯಲ್ಲಿ 3 ದಿನಗಳಿಂದೀಚೆಗೆ ಲಕ್ಷಾಂತರ ಮೀನುಗಳು ಮೃತಪಟ್ಟಿವೆ.

ಕಪ್ಪು ಬಣ್ಣಕ್ಕೆ ತಿರುಗಿರುವ ಕೆರೆಯ ನೀರಿನಲ್ಲಿ ಸತ್ತ ಮೀನುಗಳು ತೇಲಾಡುತ್ತಿವೆ. 5 ಲಕ್ಷಕ್ಕೂ ಹೆಚ್ಚು ಮೀನುಗಳು ಮೃತಪಟ್ಟಿವೆ ಎಂದು ಅಂದಾಜು ಮಾಡಲಾಗಿದೆ. ಸುತ್ತಮುತ್ತ ಸಹಿಸಲಸಾಧ್ಯವಾದ ಕೆಟ್ಟ ವಾಸನೆ ಹರಡಿದ್ದು ಜನರು ಮಾಸ್ಕ್ ಧರಿಸಿ, ಮುಖಕ್ಕೆ ಟವೆಲ್ ಕಟ್ಟಿಕೊಂಡು ಓಡಾಡುತ್ತಿದ್ದಾರೆ.

ನಗರದ ಗುತ್ತಲು ಬಡಾವಣೆ ಸೇರಿ ತಾವರಗೆರೆ, ಯತ್ತಗದಹಳ್ಳಿ, ಆಲಹಳ್ಳಿ ವ್ಯಾಪ್ತಿಯಲ್ಲಿರುವ ಗುತ್ತಲು ಕೆರೆ 242 ಎಕರೆ ವಿಸ್ತೀರ್ಣ ಹೊಂದಿದೆ. ಮಳೆ ಕೊರತೆ, ನಾಲೆ ನೀರು ಬಾರದೆ ನೀರಿನ ಪ್ರಮಾಣ ತಗ್ಗಿದೆ. ನಗರದ ಕೊಳಚೆ ನೀರು ಶುದ್ಧೀಕರಣಗೊಳ್ಳದೇ ಕೆರೆಗೆ ನೇರವಾಗಿ ಹರಿಯುತ್ತಿರುವ ಕಾರಣ ಕೆರೆ ಕಲುಷಿತಗೊಂಡಿದೆ ಎಂದು ಸ್ಥಳೀಯರು ಹೇಳಿದರು.

ಕೆರೆ ಸಮೀಪದ ಮನೆಗಳ ಮಕ್ಕಳಿಗೆ ಜ್ವರ, ಶೀತ ಜ್ವರ ಕಾಣಿಸಿಕೊಂಡಿದೆ. ಹಲವರು ಚರ್ಮದ ತುರಿಕೆಯಿಂದ ಪರಿತಪಿಸುತ್ತಿದ್ದಾರೆ. 'ಬೇಸಿಗೆ ರಜೆಯಿದ್ದು ಮಕ್ಕಳು ಮನೆಯಲ್ಲೇ ಇವೆ. ದುರ್ವಾಸನೆ ಸಹಿಸಲಾಗದೆ ಹಲವರು ಮಕ್ಕಳನ್ನು ಬೇರೆ ಊರುಗಳಿಗೆ ಕಳುಹಿಸಿದ್ದಾರೆ' ಎಂದು ಯತ್ತಗದಹಳ್ಳಿಯ ಚೌಡೇಗೌಡ ಹೇಳಿದರು.

ಒಳಚರಂಡಿ ನೀರು ಶುದ್ಧೀಕರಿಸಲು ಕೆರೆ ಪಕ್ಕದಲ್ಲೇ ನಿರ್ಮಿಸಿರುವ ಶುದ್ಧೀಕರಣ ಘಟಕ ಹಾಳಾಗಿ ವರ್ಷವೇ ಕಳೆದಿದ್ದು, ತ್ಯಾಜ್ಯ ನೇರವಾಗಿ ಕೆರೆಯೊಡಲು ಸೇರುತ್ತಿದೆ. ಕೆರೆ ನೀರು ಕುಡಿದ ಸುತ್ತಲಿನ ಗ್ರಾಮಗಳ 10ಕ್ಕೂ ಹೆಚ್ಚು ಆಡು– ಕುರಿ ಸತ್ತಿವೆ. ಯತ್ತಗದಹಳ್ಳಿಯ ಚಿಕ್ಕಬೋರೇಗೌಡರ ನಾಲ್ಕು ಆಡುಗಳು ಭಾನುವಾರ ಮೃತಪಟ್ಟಿವೆ.

'ಕೆರೆ ಸುತ್ತಲೂ ರಾಸಾಯನಿಕ ಸಿಂಪಡಿಸಿ, ದುರ್ವಾಸನೆ ತಪ್ಪಿಸುವಂತೆ ನಗರಸಭೆ, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ದುರ್ವಾಸನೆ ತಡೆಯಲಾಗದೆ ಮನೆ ಬಿಟ್ಟು ಬೆಂಗಳೂರಿಗೆ ಬಂದಿದ್ದೇನೆ' ಎಂದು ಯತ್ತಗದಹಳ್ಳಿಯ ಸಿದ್ದರಾಮಯ್ಯ ಹೇಳಿದರು.

ಗುತ್ತಲು ಕೆರೆಯಲ್ಲಿ ಸತ್ತು ಬಿದ್ದಿರುವ ಮೀನುಗಳು –ಪ್ರಜಾವಾಣಿ ಚಿತ್ರ; ಧನುಷ್ ಡಿ.ವಿ

ಮೀನುಗಳ ಸಾವಿನ ಕಾರಣ ಪತ್ತೆ ಹಚ್ಚಲಾಗುತ್ತಿದೆ. ದುರ್ವಾಸನೆ ನಿವಾರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ
ಕುಮಾರ, ಜಿಲ್ಲಾಧಿಕಾರಿ

ಬೆಳೆ ಹಾನಿ ಭೀತಿ

ಗುತ್ತಲು ಕೆರೆ ಅಚ್ಚುಕಟ್ಟು ಪ್ರದೇಶದ ನೂರಾರು ಎಕರೆ ಪ್ರದೇಶದಲ್ಲಿ ರೈತರು ಕಬ್ಬು, ಭತ್ತ, ತರಕಾರಿ ಬೆಳೆದಿದ್ದಾರೆ. ಕಲುಷಿತ ನೀರು ಕೃಷಿ ಭೂಮಿಗೆ ಹರಿಯುತ್ತಿದ್ದು ಬೆಳೆ ಹಾನಿ ಭೀತಿಯೂ ಎದುರಾಗಿದೆ. 'ವಿಷಯುಕ್ತ ನೀರು ಹರಿಯುತ್ತಿರುವುದರಿಂದ, ಕಾಯಿ ಕಟ್ಟುವ ಹಂತಕ್ಕೆ ಬಂದಿರುವ ಭತ್ತ ಸುಟ್ಟು ಹೋಗುತ್ತಿದೆ' ಎಂದು ರೈತ ಕಂಬೇಗೌಡ ಹೇಳಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಮತ್ತೆ ಬಂತು ಚುನಾವಣೆ • ದಟ್ಟಣೆ ಮುಕ್ತ ಬೆಂಗಳೂರು ಯಾವಾಗ – ಜನರ ಪ್ರಶ್ನೆ

ದಟ್ಟಣೆಗೆ ಶಾಶ್ವತ ಪರಿಹಾರ ಮರೀಚಿಕೆ

1,10,48,537 ಬೆಂಗಳೂರಿನಲ್ಲಿ ನೋಂದಣಿಯಾದ ಒಟ್ಟು ವಾಹನಗಳ ಸಂಖ್ಯೆ (2022-23ರವರೆಗೆ)

73,55,292 ದ್ವಿಚಕ್ರ ವಾಹನಗಳು

23,54,055 ಕಾರುಗಳ ಸಂಖ್ಯೆ

2,60,788 ನಾಲ್ಕು-ಮೂರು ಚಕ್ರಗಳ ಗೂಡ್ಸ್ ವಾಹನಗಳ ಸಂಖ್ಯೆ

1,21,224 ಬಸ್‌ಗಳು

3,01,645 ಆಟೊ ರಿಕ್ಷಾ

2,65,096 ಟ್ಯಾಕ್ಸಿಗಳು

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ವಿಸ್ತರಣೆಯಾಗದ ರಸ್ತೆಗಳು, ಇಕ್ಕಟ್ಟಾದ ರಸ್ತೆಯಲ್ಲಿ ಸಾಲುಗಟ್ಟಿ ನಿಲ್ಲುವ ವಾಹನಗಳು, ದಟ್ಟಣೆಯಲ್ಲಿ ಸಿಲುಕಿ ಪರದಾಡುವ ಪ್ರಯಾಣಿಕರು, ಅತಿಕ್ರಮಗೊಂಡ ಪಾದಚಾರಿ ಮಾರ್ಗಗಳು ಹಾಗೂ ಶಬ್ದ-ವಾಯು ಮಾಲಿನ್ಯದಿಂದ ಕಿರಿಕಿರಿ ಅನುಭವಿಸುವ ಜನ...

ಹಲವು ಚುನಾವಣೆಗಳು ನಡೆದು, ಸರ್ಕಾರಗಳು ಹಾಗೂ ಜನಪ್ರತಿನಿಧಿಗಳು ಬದಲಾದರೂ ಈ ಸಮಸ್ಯೆಗಳಿಗೆ ಮಾತ್ರ ಶಾಶ್ವತ ಪರಿಹಾರ ಸಿಗುತ್ತಿಲ್ಲ. 'ದಟ್ಟಣೆ ಮುಕ್ತ ಬೆಂಗಳೂರು' ಮಾಡುವ ಆಶ್ವಾಸನೆ ನೀಡಿ ಅಧಿಕಾರ ಹಿಡಿಯುವ ಜನಪ್ರತಿನಿಧಿಗಳು, ಅದಕ್ಕೆ ತಕ್ಕಂತೆ ಪ್ರಯತ್ನ ಮಾಡುತ್ತಿಲ್ಲವೆಂಬ ಆರೋಪವಿದೆ.

'ಉದ್ಯಾನ ನಗರಿ' ಖ್ಯಾತಿಯ ಬೆಂಗಳೂರಿಗೆ, 'ದಟ್ಟಣೆ ನಗರ' ಎಂಬ ಅಪಖ್ಯಾತಿಯೂ ಸೇರಿಕೊಂಡಿದೆ. ಈ ಕಳಂಕ ಅಳಿಸಲು ಸೂಕ್ತ ವೈಜ್ಞಾನಿಕ ಯೋಜನೆಗಳು ಜಾರಿಗೆ ಬಂದಿಲ್ಲ. ಆಳುವವರು, ತಾತ್ಕಾಲಿಕ ಪರಿಹಾರಗಳನ್ನಷ್ಟೇ ನೀಡಿ ಕೈ ತೊಳೆದುಕೊಳ್ಳುತ್ತಿದ್ದಾರೆ. ಪರಿಣಾಮ ಜನರು, ನಿತ್ಯವೂ ದಟ್ಟಣೆಯಲ್ಲಿ ಸಿಲುಕಿ ಹಿಡಿಶಾಪ ಹಾಕುತ್ತಿದ್ದಾರೆ. ಈ ಚುನಾವಣೆಯಲ್ಲಿ ಮತದಾರರು 'ದಟ್ಟಣೆ' ವಿಷಯವನ್ನು ಪಕ್ಷದವರಿಗೆ ನೆನಪಿಸುವ ಸಾಧ್ಯತೆ ಇದೆ.

ಮತ ಮಂಥನ

ಪರಿಹಾರ ಕಾಣದ ತಾಣಗಳು: ಬಳ್ಳಾರಿ ರಸ್ತೆ, ಮೈಸೂರು ರಸ್ತೆ, ತುಮಕೂರು ರಸ್ತೆ, ಕನಕಪುರ ರಸ್ತೆ, ಹೊಸೂರು ರಸ್ತೆ, ವೈಟ್‌ಫೀಲ್ಡ್, ಬೆಳ್ಳಂದೂರು, ಕೆ.ಆರ್. ಪುರ ಹಾಗೂ ಸುತ್ತಮುತ್ತ ರಸ್ತೆಗಳಲ್ಲಿ ಬೆಳಿಗ್ಗೆ-ಸಂಜೆ 'ಸಂಚಾರ ದಟ್ಟಣೆ' ಕಾಯಂ. ಈ ಮಾರ್ಗಗಳಲ್ಲಿ ಮೇಲ್ಸೇತುವೆ ಹಾಗೂ ಕೆಳ ಸೇತುವೆಗಳ ಕೊರತೆ, ಕೆಲ ಮೇಲ್ಸೇತುವೆಗಳನ್ನು ಅವೈಜ್ಞಾನಿಕ ರೀತಿಯಲ್ಲಿ ನಿರ್ಮಿಸಿರುವುದರಿಂದಲೂ ದಟ್ಟಣೆ ಸಮಸ್ಯೆಗೆ ಮುಕ್ತಿ ಸಿಕ್ಕಿಲ್ಲವೆಂಬುದು ಜನರ ಅಭಿಪ್ರಾಯವಾಗಿದೆ.

ಇನ್ನು, ಯಲಹಂಕ ಉಪನಗರ, ವಿದ್ಯಾರಣ್ಯಪುರ, ಕೊಡಿಗೇಹಳ್ಳಿ ಸೇರಿದಂತೆ ಹಲವು ಕಡೆಗಳಲ್ಲಿ ಮೇಲ್ಸೇತುವೆಗಳು, ಕೆಳ ಸೇತುವೆಗಳು ಹಾಗೂ ರಸ್ತೆ ವಿಸ್ತರಣೆಗೆ ಬೇಡಿಕೆ ಇದೆ. ಅದಕ್ಕೆ ತಕ್ಕಂತೆ ಯೋಜನೆಗಳ ಅನುಷ್ಠಾನ ಆಗುತ್ತಿಲ್ಲ. ಈ ಬಗ್ಗೆ ಜನರಲ್ಲಿ ಬೇಸರವಿದೆ.

'ಪಾದಚಾರಿ' ಮಾರ್ಗ ಒತ್ತುವರಿ: ಮಲ್ಲೇಶ್ವರ, ರಾಜಾಜಿನಗರ, ವಿಜಯನಗರ, ಬೈಯಪ್ಪನಹಳ್ಳಿ, ಎಚ್‌ಎಎಲ್, ವೈಟ್‌ಫೀಲ್ಡ್, ಕೆ.ಆರ್.ಪುರ, ರಾಜರಾಜೇಶ್ವರಿನಗರ ಸೇರಿದಂತೆ ನಗರದ ಜನದಟ್ಟಣೆಯ ಪ್ರದೇಶಗಳಲ್ಲಿನ ಪಾದಚಾರಿ ಮಾರ್ಗಗಳು ಒತ್ತುವರಿಯಾಗಿವೆ. ಹೀಗಾಗಿ ಪಾದಚಾರಿಗಳು ಅನಿವಾರ್ಯವಾಗಿ ರಸ್ತೆಗಿಳಿಯುತ್ತಾರೆ. ಇದು ದಟ್ಟಣೆಗೆ ಕಾರಣವಾಗುತ್ತದೆ.

ತುಮಕೂರು ರಸ್ತೆಯಲ್ಲಿ ದಟ್ಟಣೆ ನಿಯಂತ್ರಣಕ್ಕಾಗಿ ನಿರ್ಮಿಸಿರುವ ಪೀಣ್ಯ ಮೇಲ್ಸೇತುವೆ ಆಗಾಗ್ಗೆ ದುರಸ್ತಿಗೆ ಬರುತ್ತದೆ. ದುರಸ್ತಿ ಸಂಬಂಧ 2022ರಿಂದ ವಾಹನಗಳ ಓಡಾಟ ಸಂಪೂರ್ಣ ಬಂದ್ ಆಗಿತ್ತು. ಈಗಲೂ ಭಾರಿ ವಾಹನಗಳನ್ನು ಹೊರತುಪಡಿಸಿ ಇತರೆ ವಾಹನಗಳ ಸಂಚಾರಕ್ಕಷ್ಟೇ ಅವಕಾಶ ಮಾಡಿಕೊಡಲಾಗಿದೆ. ಯಾವ ಸಮಯದಲ್ಲಿ ಸೇತುವೆ ಬಂದ್ ಮಾಡುತ್ತಾರೆ ಎಂದೇ ಗೊತ್ತಾಗುವುದಿಲ್ಲ. ಈ 'ಸೇತುವೆ ಸಮಸ್ಯೆ'ಗೆ ಶಾಶ್ವತ ಪರಿಹಾರ ಸಿಕ್ಕಂತೆ ಕಾಣುತ್ತಿಲ್ಲ.

ಹೊರವರ್ತುಲ ರಸ್ತೆಯಲ್ಲೂ ದಟ್ಟಣೆ: ವೈಟ್‌ಫೀಲ್ಡ್, ಐಟಿಪಿಎಲ್ ಸೇರಿದಂತೆ ಹಲವು ಪ್ರದೇಶಗಳಿಗೆ ಹೊಂದಿಕೊಂಡಂತೆ ಹೊರ ವರ್ತುಲ ರಸ್ತೆ ನಿರ್ಮಿಸಲಾಗಿದ್ದು, ಅಲ್ಲಿಯೂ ದಟ್ಟಣೆ ಹೆಚ್ಚಾಗಿದೆ. ಪ್ರತಿಷ್ಠಿತ ಕಂಪನಿಗಳಿರುವ ಈ ಪ್ರದೇಶಗಳಲ್ಲಿ ಬೆಳಿಗ್ಗೆ ಹಾಗೂ ಸಂಜೆ ದಟ್ಟಣೆ ಕಿರಿಕಿರಿ ತಪ್ಪುತ್ತಿಲ್ಲ. ಇದೇ ಕಾರಣದಿಂದ ಹೊರ ವರ್ತುಲ ರಸ್ತೆಗಳ ಕಂಪನಿಗಳ ಸಂಘ (ಒಆರ್‌ಆರ್‌ಸಿಎ), ಬೆಂಗಳೂರು ತೊರೆಯುವುದಾಗಿ ಎಚ್ಚರಿಕೆ ಸಹ ನೀಡಿತ್ತು. ಸಿಲ್ಕ್ ಬೋರ್ಡ್ ಜಂಕ್ಷನ್ ಹಾಗೂ ಸುತ್ತಮುತ್ತಲಿನ ದಟ್ಟಣೆಗೂ ಸದ್ಯಕ್ಕೆ ಶಾಶ್ವತ ಪರಿಹಾರ ಸಿಕ್ಕಿಲ್ಲ.

ಕೇಬಲ್ ಅಳವಡಿಕೆ, ಒಳಚರಂಡಿ ನಿರ್ಮಾಣ, ಕಾವೇರಿ ನೀರಿನ ಪೂರೈಕೆ ಸೇರಿದಂತೆ ವಿವಿಧ ಕಾಮಗಾರಿಗಳ ಹೆಸರಿನಲ್ಲಿ ಹಲವೆಡೆ ರಸ್ತೆ ಅಗೆಯಲಾಗಿದೆ. ರಸ್ತೆಗೆ ಇಳಿಯುವ ಹೊಸ ವಾಹನಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಮನೆಗೊಂದು ವಾಹನಕ್ಕಿಂತ, ವ್ಯಕ್ತಿಗೊಂದು ವಾಹನಗಳು ಕಂಡುಬರುತ್ತಿವೆ. ಪ್ರತಿ ವಾಹನದ ನೋಂದಣಿ ಪ್ರಕ್ರಿಯೆ ಮಾತ್ರ ಅಚ್ಚುಕಟ್ಟಾಗಿ ನಡೆಯುತ್ತಿದ್ದು, ವಾಹನಗಳ ಸಂಖ್ಯೆಗೆ ತಕ್ಕಂತೆ ಸೌಕರ್ಯಗಳ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲವೆಂಬ ದೂರುಗಳಿವೆ. ದಟ್ಟಣೆ ತಗ್ಗಿಸಲು 'ಟನಲ್ ರಸ್ತೆ' ಯೋಜನೆ ಮೊರೆ ಹೋಗಲಾಗಿದೆ. 'ಇದು ಸಾಧ್ಯವೇ' ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಕೆಲ ಇಕ್ಕಟಾದ ರಸ್ತೆಗಳ ವಿಸ್ತರಣೆಗೆ ಯೋಜನೆಗಳು ಇದ್ದರೂ ಸಂಪೂರ್ಣವಾಗಿ ಅನುಷ್ಠಾನ ಆಗುತ್ತಿಲ್ಲ. ಬಹುತೇಕ ರಸ್ತೆಗಳ ವಿಸ್ತರಣೆಗೆ ಯೋಜನೆಗಳೇ ಇಲ್ಲ.

ನಗರದ ಶೇಷಾದ್ರಿ ರಸ್ತೆಯಲ್ಲಿ ಉಂಟಾಗಿದ್ದ ದಟ್ಟಣೆಯಲ್ಲಿ ಸಾಲುಗಟ್ಟಿ ನಿಂತಿದ್ದ ವಾಹನಗಳು – ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಮುಖ್ಯಾಂಶಗಳು

- ದಟ್ಟಣೆ ನಗರವೆಂಬ ಅಪಖ್ಯಾತಿ
- ನಿತ್ಯ ಬೆಳಿಗ್ಗೆ-ಸಂಜೆ ವಿಪರೀತ ದಟ್ಟಣೆ
- ಮೇಲ್ಸೇತುವೆ, ಕೆಳಸೇತುವೆ ಅವೈಜ್ಞಾನಿಕ

ತಾತ್ಕಾಲಿಕ ಪರಿಹಾರ

ಭಾರತೀಯ ಮೋಟಾರು ವಾಹನಗಳ ಕಾಯ್ದೆ ಹಾಗೂ ಕರ್ನಾಟಕ ಪೊಲೀಸ್ ಕಾಯ್ದೆ ನಿಯಮಗಳನ್ನು ಜಾರಿಗೆ ತರಲು ಕೆಲಸ ಮಾಡುತ್ತಿರುವ ಸಂಚಾರ ಪೊಲೀಸರು, ದಟ್ಟಣೆಗೆ ತಾತ್ಕಾಲಿಕ ಪರಿಹಾರ ಮಾತ್ರ ಕಂಡುಕೊಳ್ಳುತ್ತಿದ್ದಾರೆ. ರಸ್ತೆಗಳು, ಪಾದಚಾರಿ ಮಾರ್ಗ, ವೃತ್ತಗಳ ಅಭಿವೃದ್ಧಿ ಹೊಣೆ ಸ್ಥಳೀಯ ಸಂಸ್ಥೆಯದ್ದಾಗಿದೆ. ಆದರೆ, ಆಳುವವರ ನಿರ್ಲಕ್ಷ್ಯದಿಂದ ಶಾಶ್ವತ ಪರಿಹಾರ ಇಲ್ಲದಂತಾಗಿದೆ.

ದಟ್ಟಣೆ ನಿಯಂತ್ರಿಸುವ ಬಗ್ಗೆ ಪ್ರತಿ ಚುನಾವಣೆ ಸಂದರ್ಭದಲ್ಲೂ ಭರವಸೆ ನೀಡುವ ಜನಪ್ರತಿನಿಧಿಗಳು, ಗೆದ್ದ ನಂತರ ಈ ಬಗ್ಗೆ ಮಾತನಾಡುವುದಿಲ್ಲ. ತಾವೇ ದಟ್ಟಣೆಯಲ್ಲಿ ಸಿಲುಕಿದರೂ 'ಇದು ದೊಡ್ಡ ಸಮಸ್ಯೆಯಲ್ಲ' ಎಂಬಂತೆ ವರ್ತಿಸುತ್ತಿದ್ದಾರೆ. ದಿನದ ದುಡಿಮೆ ನಂಬಿ ಬದುಕುವ ಜನರಿಗೆ ಮಾತ್ರ ದಟ್ಟಣೆಯೇ ದೊಡ್ಡ ಶಾಪವಾಗಿದೆ. ದಟ್ಟಣೆ ನಿಯಂತ್ರಿಸಲು ಪೊಲೀಸರು ತಂತ್ರಜ್ಞಾನಗಳ ಸಹಾಯ ಪಡೆದಿದ್ದಾರೆ. ಇಂಥ ತಾತ್ಕಾಲಿಕ ಕ್ರಮಗಳಿಂದ ದಟ್ಟಣೆಗೆ ಪರಿಹಾರ ಸಿಗುತ್ತಿಲ್ಲ.

'ಸೊರಗುತ್ತಿರುವ ಮೊಡೆರಾಟೊ'

ನಗರದ ಹಲವು ವೃತ್ತಗಳಲ್ಲಿ ದಟ್ಟಣೆ ನಿಯಂತ್ರಿಸಲು 'ವಾಹನಗಳ ದಟ್ಟಣೆ ಆಧರಿಸಿ ಸ್ವಯಂಚಾಲಿತ ಸಿಗ್ನಲ್ ನಿರ್ವಹಣೆ ತಂತ್ರಜ್ಞಾನ (ಮೊಡೆರಾಟೊ)' ವ್ಯವಸ್ಥೆ ಅಳವಡಿಸಲಾಗಿದ್ದು, ಇದಕ್ಕೆ ಈವರೆಗೂ ಚಾಲನೆ ಸಿಕ್ಕಿಲ್ಲ.

ಜಪಾನ್‌ನಲ್ಲಿ ಜಾರಿಯಲ್ಲಿರುವ ಸ್ವಯಂಚಾಲಿತ ಸಿಗ್ನಲ್ ವ್ಯವಸ್ಥೆ ಇದು. ಬಹುತೇಕ ವೃತ್ತಗಳಲ್ಲಿ ಸುಧಾರಿತ ಸಿಗ್ನಲ್ ದೀಪಗಳು ಹಾಗೂ ಉಪಕರಣಗಳನ್ನು ಜೋಡಿಸಲಾಗಿದೆ. ಅವುಗಳನ್ನು ಪ್ಲಾಸ್ಟಿಕ್ ಹೊದಿಕೆಯಿಂದ ಮುಚ್ಚಲಾಗಿದೆ.

'ಅತಿ ಹೆಚ್ಚು ದಟ್ಟಣೆ: ಬೆಂಗಳೂರು ಮೊದಲು'

ವಿಶ್ವ ಹಾಗೂ ಭಾರತದ ಸಂಚಾರ ದಟ್ಟಣೆ ಬಗ್ಗೆ ಅಧ್ಯಯನ ನಡೆಸಿದ್ದ ಲಂಡನ್‌ನ 'ಟಾಮ್ ಟಾಮ್' ಸಂಸ್ಥೆಯು 2023ನೇ ಸಾಲಿನ ವರದಿಯನ್ನು ಇತ್ತೀಚೆಗೆ ಬಿಡುಗಡೆ ಮಾಡಿದೆ. ಕೇಂದ್ರ ವಾಣಿಜ್ಯ ಪ್ರದೇಶ (ಸಿಬಿಡಿ) ಹಾಗೂ ಇತರೆ ಪ್ರದೇಶಗಳಲ್ಲಿ ಅತಿ ಹೆಚ್ಚು ದಟ್ಟಣೆಯಿರುವ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಮೊದಲ ಸ್ಥಾನದಲ್ಲಿದೆ. ವಿಶ್ವದ ನಗರಗಳ ಪಟ್ಟಿಯಲ್ಲಿ 6ನೇ ಸ್ಥಾನದಲ್ಲಿದೆ. ಪುಣೆ, ನವದೆಹಲಿ, ಮುಂಬೈ ಕ್ರಮವಾಗಿ ಎರಡು, ಮೂರು ಹಾಗೂ ನಾಲ್ಕನೇ ಸ್ಥಾನದಲ್ಲಿವೆ.

ಲೋಕಸಭಾ ಚುನಾವಣೆ | ಮತದಾರರು ಏನಂತಾರೆ?

ಲೋಕಸಭಾ ಸದಸ್ಯರಾಗಿ ಆಯ್ಕೆಯಾಗುವವರು ಬಡವರಪರ ಕಾಳಜಿ ಉಳ್ಳವರಾಗಿರಬೇಕು. ಭ್ರಷ್ಟಾಚಾರ ಮುಕ್ತ ಆಡಳಿತ ನೀಡಬೇಕು. ಪರಿಸರ ಪ್ರೇಮಿಯಾಗಿ ಹೆಚ್ಚು ಹೆಚ್ಚು ಮರ-ಗಿಡಗಳನ್ನು ಬೆಳೆಸುವಂತಹ ಯೋಜನೆಗಳನ್ನು ತರಬೇಕು. ಕ್ಷೇತ್ರದಲ್ಲಿ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು. ಯುವ ಸಮುದಾಯಕ್ಕೆ ಉದ್ಯೋಗ ಕೊಡಿಸುವಲ್ಲಿ ಕ್ರಮಕೈಗೊಳ್ಳಬೇಕು.

ಜಯರಾಮಯ್ಯ, ಬಾಲಾಜಿ ಬಡಾವಣೆ

ಹೆಮ್ಮಿಗೆಪುರ ವಾರ್ಡ್‌ನ ತಲಘಟ್ಟಪುರವು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತದೆ. ಆದರೆ, ಪಕ್ಕದಲ್ಲಿರುವ ರಾಜರಾಜೇಶ್ವರಿ ನಗರ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಕ್ಕೆ ಸೇರಿದರೆ, ಗುಬ್ಬಲಾಳ, ದೊಡ್ಡಕಲ್ಲಸಂದ್ರ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರಕ್ಕೆ ಬರುತ್ತದೆ. ಹೀಗೆ ಹರಿದು ಹಂಚಿ ಹೋಗಿರುವ ತಲಘಟ್ಟಪುರ ಗ್ರಾಮವನ್ನು ಬೆಂಗಳೂರು ದಕ್ಷಿಣ ಅಥವಾ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಕ್ಕೆ ಸೇರಿಸಬೇಕು. ಅಂದಾಗ ಮಾತ್ರ ಈ ಗ್ರಾಮದ ಅಭಿವೃದ್ಧಿ ಆಗಲಿದೆ. ಸದ್ಯ ಗ್ರಾಮಕ್ಕೆ ಕಾವೇರಿ ಕುಡಿಯುವ ನೀರಿನ ಸೌಲಭ್ಯವಿಲ್ಲ. ಬೀಡಾಡಿ ದನಗಳ ಸಮಸ್ಯೆ ಹೆಚ್ಚಾಗಿದೆ. ಸಂಚಾರ ದಟ್ಟಣೆ ಹಾಗೂ ಬಿಬಿಎಂಪಿ ಉದ್ಯಾನಗಳ ನಿರ್ವಹಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕಿದೆ.

ಟಿ.ವಿ.ಬಿ ರಾಜನ್, ನಮ್ಮನೆ ಅಪಾರ್ಟ್‌ಮೆಂಟ್, ತಲಘಟ್ಟಪುರ

ನನ್ನ ಕ್ಷೇತ್ರ ನನ್ನ ಕಾರ್ಯಸೂಚಿ

ಲೋಕಸಭೆ ಚುನಾವಣೆಯ ಅಭ್ಯರ್ಥಿಯು ನಿಮ್ಮ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾಡಬೇಕಾಗಿರುವುದೇನು? ನಿಮ್ಮ ಕಾರ್ಯಸೂಚಿಯನ್ನು 100 ಪದಗಳ ಮಿತಿಯಲ್ಲಿ ಬರೆಯಿರಿ. ಹೆಸರು, ವಿಳಾಸ, ಭಾವಚಿತ್ರ ಜತೆಗಿರಲಿ

96060 38256

'ಸಿದ್ದರಾಮಯ್ಯಗೆ ಅಧಿಕಾರ ಕಳೆದುಕೊಳ್ಳುವ ಭಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕ ಸ್ಥಾನ ಗಳಿಸದಿದ್ದರೆ ಅಧಿಕಾರ ಕಳೆದುಕೊಳ್ಳುವ ಭಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇದ್ದಾರೆ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ. ದೇವೇಗೌಡ ಹೇಳಿದರು.

ನಗರದ ತಾಜ್ ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಮಂಗಳವಾರ ನಡೆದ ಬಿಜೆಪಿ-ಜೆಡಿಎಸ್ ಜಂಟಿ ಕೋರ್ ಕಮಿಟಿ ಸಭೆಗೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರಿಯಬೇಕಾದರೆ ವರುಣ ಕ್ಷೇತ್ರದಲ್ಲಿ 60,000 ಮತಗಳ ಮುನ್ನಡೆ ಕೊಡಿ ಎಂದು ಸಿದ್ದರಾಮಯ್ಯ ಸೋಮವಾರ ಮನವಿ ಮಾಡಿದ್ದಾರೆ. ಇದರ ಹಿಂದೆ ಅಧಿಕಾರ ಕಳೆದುಕೊಳ್ಳುವ ಭಯವಿದೆ' ಎಂದರು.

'ಸಿದ್ದರಾಮಯ್ಯ ಅವರು ಅವರ ಮನಸ್ಸಿನಲ್ಲಿ ಇರುವುದನ್ನು ಹೇಳಿದ್ದಾರೆ. ಮುಖ್ಯಮಂತ್ರಿ ಬದಲಾವಣೆ, ನಾಲ್ವರಿಗೆ ಉಪ ಮುಖ್ಯಮಂತ್ರಿ ಹುದ್ದೆ ನೀಡುವ ಕುರಿತು ಕಾಂಗ್ರೆಸ್ ಪಕ್ಷದಲ್ಲಿ ಒಂದು ವರ್ಷದಿಂದ ಚರ್ಚೆ ನಡೆಯುತ್ತಿದೆ. ಲೋಕಸಭೆ ಚುನಾವಣೆ ಬಳಿಕ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸುತ್ತಾರೆ ಎಂದು ಅವರ ಪಕ್ಷದವರೇ ಮಾತನಾಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಈ ಚುನಾವಣೆಯಲ್ಲಿ ಬಹುಮತ ಬಂದರೆ ನಾನು ಉಳಿಯುತ್ತೇನೆ, ಇಲ್ಲವಾದರೆ ಕೆಳಕ್ಕಿಳಿಸುತ್ತಾರೆ ಎಂಬ ಸಂದೇಶವನ್ನು ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ನೀಡಿದ್ದಾರೆ' ಎಂದು ಹೇಳಿದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಮಂಗಳವಾರ ನಡೆದ ಬಿಜೆಪಿ ಶಕ್ತಿ ಕೇಂದ್ರ ಪ್ರಮುಖರ ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಕ್ಷದ ಅಭ್ಯರ್ಥಿಗಳಾದ (ಎಡದಿಂದ) ಕೆ.ಸುಧಾಕರ್, ತೇಜಸ್ವಿ ಸೂರ್ಯ, ಡಾ.ಸಿ.ಎನ್.ಮಂಜುನಾಥ್, ಶೋಭಾ ಕರಂದ್ಲಾಜೆ, ಪಿ.ಸಿ.ಮೋಹನ್ ಅವರೊಂದಿಗೆ ಕಾರ್ಯಕರ್ತರೆಡೆಗೆ ಕೈ ಬೀಸಿದರು. – ಪ್ರಜಾವಾಣಿ ಚಿತ್ರ

'ಕೈ' ಹಿಡಿದ ಬಚ್ಚೇಗೌಡ, ಪುಟ್ಟ ಅಂಜನಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಶಾಸಕ, ಜೆಡಿಎಸ್ ಮುಖಂಡ ಚಿಕ್ಕಬಳ್ಳಾಪುರದ ಕೆ.ಪಿ. ಬಚ್ಚೇಗೌಡ ಮತ್ತು ಶಿಡ್ಲಘಟ್ಟದ ಮುಖಂಡ ಪುಟ್ಟ ಅಂಜನಪ್ಪ ತಮ್ಮ ಬೆಂಬಲಿಗರ ಜತೆ ಮಂಗಳವಾರ ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಸಚಿವರಾದ ಕೃಷ್ಣ ಬೈರೇಗೌಡ, ಡಾ.ಎಂ.ಸಿ. ಸುಧಾಕರ್, ಇಬ್ಬರಿಗೂ ಪಕ್ಷದ ಧ್ವಜ ನೀಡಿ ಸ್ವಾಗತಿಸಿದರು. ಕೋಲಾರ ಮತ್ತು ಚಿಕ್ಕಬಳ್ಳಾಪುರ ಕ್ಷೇತ್ರದ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಕೆಲವು ಮುಖಂಡರು ತಮ್ಮ ಬೆಂಬಲಿಗರ ಜತೆ ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಸೇರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, 'ಕಾಂಗ್ರೆಸ್ ಪಕ್ಷ ಸೇರಿದ ನಂತರ ಹಳಬರು, ಹೊಸಬರು ಎನ್ನುವ ತಾರತಮ್ಯ ನಮ್ಮಲ್ಲಿ ಇಲ್ಲ. 50 ವರ್ಷ ಪಕ್ಷ ಕಟ್ಟಿರುವವರು ಮತ್ತು ಹೊಸಬರನ್ನು ಒಟ್ಟಿಗೆ ತೆಗೆದುಕೊಂಡು, ಎಲ್ಲ ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಮರೆತು ಒಟ್ಟಾಗಿ ಹೋಗಬೇಕು' ಎಂದು ಸಲಹೆ ನೀಡಿದರು.

'ಆಪರೇಷನ್ ಕಮಲ' ಮಾಡಿ ಮುಖ್ಯಮಂತ್ರಿ ಗಾದಿಯಿಂದ ಕೆಳಗೆ ಇಳಿಸಿದವರ ಜತೆಗೆ ಎಚ್.ಡಿ. ಕುಮಾರಸ್ವಾಮಿ ನೆಂಟಸ್ತನ ಮಾಡಿಕೊಂಡಿದ್ದಾರೆ. ಎಂತಹ ನೀಚ ರಾಜಕಾರಣ ಮಾಡುತ್ತಿದ್ದಾರೆ ಎಂದು ಜನ ಅವರನ್ನು ನೋಡಿ ನಗುತ್ತಿದ್ದಾರೆ' ಎಂದರು.

'ಚಿಕ್ಕಬಳ್ಳಾಪುರದಲ್ಲಿ ಜಾತಿ, ನೀತಿಯ ಮಾತುಗಳು ಕೇಳಿಬರುತ್ತಿದೆ. ಕುಮಾರಸ್ವಾಮಿ ಅವರನ್ನು ಅಧಿಕಾರದಿಂದ ಕೆಳಗೆ ಇಳಿಸುವಾಗ ಎಲ್ಲಿ ಹೋಗಿತ್ತು ಈ ಜಾತಿ, ನೀತಿ? ಕಾಂಗ್ರೆಸ್ ಪಕ್ಷ ಎಂಟು ಮಂದಿ ಒಕ್ಕಲಿಗರಿಗೆ ಟಿಕೆಟ್ ನೀಡಿದೆ. ಜೆಡಿಎಸ್ ಮತ್ತು ಬಿಜೆಪಿಯಿಂದ ಒಂದೇ ಕುಟುಂಬದ ಮೂರು ಮಂದಿ ಚುನಾವಣೆ ಎದುರಿಸುತ್ತಿದ್ದಾರೆ. ದೇವೇಗೌಡರು ತಮ್ಮ ಅಳಿಯನನ್ನೇ ಬಿಜೆಪಿಯಿಂದ ನಿಲ್ಲಿಸಿದ ಮೇಲೆ ಜೆಡಿಎಸ್ ಚಿಹ್ನೆ ಮತ್ತು ಆ ಪಕ್ಷಕ್ಕೆ ಬೆಲೆಯೇ ಇಲ್ಲದಂತಾಗಿದೆ' ಎಂದು ಹೇಳಿದರು.

'ಸಿ.ಎಂ. ಇಬ್ರಾಹಿಂ ಅವರ ಮಗ ಕೂಡ ಕಾಂಗ್ರೆಸ್ ಸೇರಲು ಮುಂದೆ ಬಂದಿದ್ದಾರೆ. ಸಾಕಷ್ಟು ಅಲ್ಪಸಂಖ್ಯಾತರು, ಒಕ್ಕಲಿಗ ನಾಯಕರು ಸೇರಿದಂತೆ ಎಲ್ಲ ವರ್ಗಗಳ ಜನರು ಪಕ್ಷ ಸೇರಲು ಮುಂದೆ ಬರುತ್ತಿದ್ದಾರೆ' ಎಂದರು.

ರಾಜಕೀಯ ತಂತ್ರಗಾರಿಕೆ: '60 ಸಾವಿರ ಮತಗಳ ಲೀಡ್ ಕೊಟ್ಟರೆ ನನ್ನನ್ನು ಟಚ್ ಮಾಡುವವರಿಲ್ಲ' ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಅವರು ತಮ್ಮ ಮತದಾರರ ಬಳಿ ಶಕ್ತಿ ನೀಡುವಂತೆ ಕೋರುತ್ತಿದ್ದಾರೆ. ಇದು ಅವರ ರಾಜಕೀಯ ತಂತ್ರಗಾರಿಕೆ. ಇದು ಸಹಜ. ನಾನು ನಮ್ಮ ಕ್ಷೇತ್ರಕ್ಕೆ ಹೋದಾಗ ನಾವು ನಮ್ಮ ಮತದಾರರ ಬಳಿ ಕೇಳುತ್ತೇವೆ' ಎಂದರು.

ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಡಿ.ಕೆ.ಶಿವಕುಮಾರ್ ಮಾತನಾಡಿದರು.ಕೆ.ಪಿ.ಬಚ್ಚೇಗೌಡ, ಪುಟ್ಟ ಅಂಜನಪ್ಪ, ಶಾಸಕ ಪ್ರದೀಪ್ ಈಶ್ವರ್, ಸಚಿವ ಡಾ.ಎಂ.ಸಿ.ಸುಧಾಕರ್ ಇದ್ದರು

ಕಾಂಗ್ರೆಸ್‌ಗೆ ಮಾದಿಗ ಸಮುದಾಯದ ಬೆಂಬಲ: ಹನುಮಂತಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆ ಮಾಜಿ ಸದಸ್ಯ ಎಲ್. ಹನುಮಂತಯ್ಯ (ಪರಿಶಿಷ್ಟ ಜಾತಿ ಎಡಗೈ) ಅವರಿಗೆ ಕೊನೆ ಕ್ಷಣದಲ್ಲಿ ಕೋಲಾರ ಕ್ಷೇತ್ರದ ಟಿಕೆಟ್ ಕೈತಪ್ಪಿದರೂ, ಒಟ್ಟು ಸಮುದಾಯದ ಹಿತದೃಷ್ಟಿಯಿಂದ ಕೋಲಾರವೂ ಸೇರಿದಂತೆ ಎಲ್ಲ ಕಡೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸಲು ಕರ್ನಾಟಕ ಮಾದಿಗ ಸಮುದಾಯದ ಮುಖಂಡರು ನಿರ್ಧರಿಸಿದ್ದಾರೆ.

ಕಬ್ಬನ್ ಪಾರ್ಕ್‌ನಲ್ಲಿರುವ ಟೆನಿಸ್ ಅಸೋಸಿಯೇಶನ್ ಸಭಾಂಗಣದಲ್ಲಿ ಎಲ್. ಹನುಮಂತಯ್ಯ ಅವರ ನೇತೃತ್ವದಲ್ಲಿ ಸಮುದಾಯದ ಮುಖಂಡರ ಸಭೆ ಮಂಗಳವಾರ ನಡೆಯಿತು. ಪ್ರಸ್ತುತ ರಾಜಕೀಯ ಪರಿಸ್ಥಿತಿ ಮತ್ತು ಸಮಸ್ಯೆಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು.

ವಿಧಾನಸಭೆಯಿಂದ ರಾಜ್ಯಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಒಕ್ಕಲಿಗ ಮತ್ತು ಅಲ್ಪಸಂಖ್ಯಾತರಿಗೆ ಮತ್ತೆ ಅವಕಾಶ ನೀಡಿದ ಕಾಂಗ್ರೆಸ್ ಪಕ್ಷ, ಪರಿಶಿಷ್ಟ ಜಾತಿಯಲ್ಲಿ ಪ್ರತಿಭಾವಂತರಾದ ಹನುಮಂತಯ್ಯ ಅವರಿಗೆ ಟಿಕೆಟ್ ನಿರಾಕರಿಸಲು ಕಾರಣವೇನು? ಅವರೇನು ತಪ್ಪು ಮಾಡಿದ್ದಾರೆ ಎನ್ನುವುದಕ್ಕೆ ಕಾಂಗ್ರೆಸ್ ನಾಯಕರು ಉತ್ತರ ನೀಡಬೇಕು ಎಂದು ಸಭೆಯಲ್ಲಿ ಆಗ್ರಹ ವ್ಯಕ್ತವಾಯಿತು.

'ಕೋಲಾರ ಲೋಕಸಭಾ ಕ್ಷೇತ್ರಕ್ಕೆ ಅಭ್ಯರ್ಥಿಗಳ ಆಯ್ಕೆ ವಿಷಯ ಬಂದಾಗ ನನ್ನ ಹೆಸರು ಮುಂಚೂಣಿಗೆ ಬಂದಿತ್ತು. ಟಿಕೆಟ್ ಪಡೆದುಕೊಳ್ಳಲು ಪ್ರಯತ್ನವೂ ನಡೆದಿತ್ತು. ಆದರೂ ಬೇರೊಬ್ಬರಿಗೆ ಟಿಕೆಟ್ ನೀಡಲಾಗಿದೆ. ಪರಿಶಿಷ್ಟ ಜಾತಿ ಅದರಲ್ಲೂ ಮಾದಿಗ ಸಮುದಾಯದಲ್ಲಿರುವ ಪ್ರತಿಭಾವಂತರನ್ನು ಈ ರೀತಿ ಕಾಂಗ್ರೆಸ್ ನಿರ್ಲಕ್ಷಿಸುವುದು ಸರಿಯಲ್ಲ ಎಂದು ಸಭೆಯಲ್ಲಿ ಚರ್ಚೆ ನಡೆಯಿತು. ಕಾಂಗ್ರೆಸ್‌ನಿಂದ ಆಗಿರುವ ತಾರತಮ್ಯ, ಅನ್ಯಾಯದ ಮಧ್ಯೆಯೂ, ಸಮುದಾಯದ ಮತಗಳು ಇತರ ಪಕ್ಷಗಳಿಗೆ ಚದುರಿ ಹೋಗದೆ ಕಾಂಗ್ರೆಸ್‌ನ್ನು ಬೆಂಬಲಿಸಬೇಕು ಎಂದು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ' ಎಂದು ಎಲ್. ಹನುಮಂತಯ್ಯ ತಿಳಿಸಿದರು.

ರಘುವೀರ್ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷರಾಗಿದ್ದ ರಘುವೀರ್ ಎಸ್. ಗೌಡ ಅವರನ್ನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಬೆಂಗಳೂರು ನಗರ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರಾಗಿಯೂ ರಘುವೀರ್ ಗೌಡ ಕಾರ್ಯ ನಿರ್ವಹಿಸಿದ್ದರು. ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಕಾರ್ಯವೈಖರಿಯನ್ನು ಪರಿಗಣಿಸಿ ಅವರನ್ನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ನೇಮಿಸುವಂತೆ ರಾಜ್ಯ ನಾಯಕರು ಎಐಸಿಸಿಗೆ ಶಿಫಾರಸು ಮಾಡಿದ್ದರು.

ಕೆ.ಸುಧಾಕರ್ ವಿರುದ್ಧ ರಕ್ಷಾ ರಾಮಯ್ಯ ಪರೋಕ್ಷ ವಾಗ್ದಾಳಿ

ಗೋಬ್ಯಾಕ್: ಬಿಜೆಪಿ ಗೆಲುವು ಹೇಗೆ ಸಾಧ್ಯ?

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: 'ರಾಜ್ಯದಲ್ಲಿ ಸಚಿವರಾಗಿದ್ದಾಗ ಮಾಡಿರುವ ಕೆಲಸಗಳನ್ನು ನೋಡಿ ಯಲಹಂಕ ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರೇ ಗೋಬ್ಯಾಕ್ ಚಳವಳಿ ನಡೆಸುತ್ತಿರುವಾಗ ಗೆಲುವು ಹೇಗೆ ಸಾಧ್ಯ' ಎಂದು ಬಿಜೆಪಿ ಅಭ್ಯರ್ಥಿ ಡಾ.ಕೆ. ಸುಧಾಕರ್ ಅವರ ಹೆಸರು ಹೇಳದೆ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ ಕುಟುಕಿದರು.

ನಗರದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿ, 'ಸ್ವಪಕ್ಷದವರೇ ಇವರ ಕೆಲಸಗಳನ್ನು ಮೆಚ್ಚಿಕೊಳ್ಳುತ್ತಿಲ್ಲ' ಎಂದರು.

'ರಾಜ್ಯದಲ್ಲಿ ಕಾಂಗ್ರೆಸ್, ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಯನ್ನು ಈಡೇರಿಸುವ ಮೂಲಕ ಮಾತು ಉಳಿಸಿಕೊಂಡಿದೆ. ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ಹತ್ತು ವರ್ಷಗಳು ಕಳೆದಿದ್ದರೂ ದೇಶದ ಜನರಿಗೆ ನೀಡಿದ್ದ ಯಾವುದೇ ಭರವಸೆಗಳನ್ನು ಈಡೇರಿಸದೆ ಕಾಂಗ್ರೆಸ್ ಗ್ಯಾರಂಟಿಗಳನ್ನು ನಕಲು ಮಾಡಿಕೊಂಡು ಚುನಾವಣೆಗೆ ಮತದಾರರ ಮುಂದೆ ಬಂದಿದೆ' ಎಂದು ಆರೋಪಿಸಿದರು.

ಲೋಕಸಭಾ ಚುನಾವಣೆ: ಮತದಾನಕ್ಕೆ ಪ್ರೇರೇಪಿಸಲು ನಾಲ್ವರು ರಾಯಭಾರಿಗಳು

ಮತ ಜಾಗೃತಿಗೆ 'ನಮ್ಮ ಬೆಂಗಳೂರು ಐಕಾನ್ಸ್' : ತುಷಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಮತದಾನ ಮಾಡುವಂತೆ ಮತದಾರರಲ್ಲಿ ಜಾಗೃತಿ ಮೂಡಿಸಲು ನಾಲ್ವರು ಖ್ಯಾತನಾಮರನ್ನು 'ನಮ್ಮ ಬೆಂಗಳೂರು ಐಕಾನ್ಸ್' ಆಗಿ ನಿಯೋಜನೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ತಿಳಿಸಿದರು.

'ನಮ್ಮ ಬೆಂಗಳೂರು ಐಕಾನ್ಸ್' ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಿದ ಅವರು, 'ಮತದಾನ ಮಾಡಲು ನಗರದ ಜನತೆಗೆ ಹುಮ್ಮಸ್ಸು ತುಂಬಿಸುವ ಸಲುವಾಗಿ ಹಾಗೂ ಚುನಾವಣಾ ಹಬ್ಬಕ್ಕಾಗಿ ರಾಯಭಾರಿಗಳು ನಮ್ಮ ಜೊತೆ ಕೈಜೋಡಿಸಿ, ಜಾಗೃತಿ ಮೂಡಿಸಲಿದ್ದಾರೆ' ಎಂದು ಹೇಳಿದರು.

'ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕಾದರೆ ಎಲ್ಲರೂ ತಪ್ಪದೆ ಮತಗಟ್ಟೆಗೆ ತೆರಳಿ ಮತದಾನ ಮಾಡಬೇಕು. ಮತ ಚಲಾಯಿಸುವುದು ಎಲ್ಲರ ಆದ್ಯ ಕರ್ತವ್ಯ ಹಾಗೂ ಜವಾಬ್ದಾರಿ. ಮತಗಟ್ಟೆಗಳ ಬಳಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಕಲ್ಪಿಸಲಾಗಿರುತ್ತದೆ. ಅಭ್ಯರ್ಥಿಗೆ ಮತ ಚಲಾಯಿಸಲು ಇಷ್ಟವಿಲ್ಲದಿದ್ದರೆ 'ನೋಟಾ' ಮಾಡುವುದಕ್ಕೂ ಅವಕಾಶವಿದೆ' ಎಂದರು.

ಬ್ಯಾಡ್ಮಿಂಟನ್ ಆಟಗಾರ ಅನೂಪ್ ಶ್ರೀಧರ್ ಮಾತನಾಡಿ, 'ಮತದಾನ ಮಾಡುವುದು ನಮ್ಮೆಲ್ಲರ ಕರ್ತವ್ಯ. ನಾವು ಮತದಾನ ಮಾಡಿಲ್ಲವಾದಲ್ಲಿ ಪ್ರಶ್ನೆ ಮಾಡಲು ಅರ್ಹರಿರುವುದಿಲ್ಲ. ಆದ್ದರಿಂದ ನಾವೆಲ್ಲರೂ ತಪ್ಪದೆ ಮತದಾನ ಮಾಡೋಣ' ಎಂದರು.

ನಟಿ ಹಾಗೂ ರೂಪದರ್ಶಿ ನೀತು ವನಜಾಕ್ಷಿ ಮಾತನಾಡಿ, 'ನಮ್ಮ ನಾಯಕರನ್ನು ನಾವು ಆಯ್ಕೆ ಮಾಡಬೇಕು. ಆದ ಕಾರಣ ಎಲ್ಲರೂ ತಮ್ಮ ಸ್ವಇಚ್ಛೆಯಿಂದ ಮುಂದೆ ಬಂದು ತಪ್ಪದೆ ಮತ ಚಲಾಯಿಸಬೇಕು' ಎಂದು ಹೇಳಿದರು.

ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಕಾಂತರಾಜ್, ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್, ಸ್ವೀಪ್ ನೋಡಲ್ ಅಧಿಕಾರಿಯಾದ ಪ್ರತಿಭಾ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

'ನಮ್ಮ ಬೆಂಗಳೂರು ಐಕಾನ್ಸ್' ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್, ಚುನಾವಣೆ ರಾಯಭಾರಿಗಳಾದ ನೀತು ವನಜಾಕ್ಷಿ, ರಮೇಶ್ ಅರವಿಂದ್, ಅನೂಪ್ ಶ್ರೀಧರ್ ಭಾಗವಹಿಸಿದ್ದರು

'ನಮ್ಮ ಬೆಂಗಳೂರು ಐಕಾನ್ಸ್'

- ರಮೇಶ್ ಅರವಿಂದ್, ಚಿತ್ರ ನಟ ಮತ್ತು ನಿರ್ದೇಶಕ
- ನೀತು ವನಜಾಕ್ಷಿ, ನಟಿ ಹಾಗೂ ರೂಪದರ್ಶಿ
- ಅನೂಪ್ ಶ್ರೀಧರ್, ಬ್ಯಾಡ್ಮಿಂಟನ್ ಆಟಗಾರ
- ಅರ್ಚನಾ ಜಿ ಕಾಮತ್, ಟೇಬಲ್ ಟೆನಿಸ್ ಆಟಗಾರ್ತಿ

ಮತಕ್ಕೆ ಬದಲಾವಣೆಯ ಶಕ್ತಿ: ರಮೇಶ್

ಚಿತ್ರನಟ ರಮೇಶ್ ಅರವಿಂದ್ ಮಾತನಾಡಿ, 'ಏಪ್ರಿಲ್ 26ರಂದು ಚುನಾವಣಾ ಹಬ್ಬ. ಎಲ್ಲರೂ ಸಡಗರದಿಂದ ಮತಗಟ್ಟೆಗೆ ತೆರಳಿ ಮತದಾನ ಮಾಡೋಣ. ಒಂದು ಮತಕ್ಕೆ ಎಲ್ಲವನ್ನೂ ಬದಲಿಸುವ ಶಕ್ತಿಯಿದೆ. ಆದ್ದರಿಂದ ಎಲ್ಲರೂ ತಪ್ಪದೆ ಮತದಾನ ಮಾಡಬೇಕು' ಎಂದು ತಿಳಿಸಿದರು.

'ಚುನವಣಾ ವ್ಯವಸ್ಥೆಯಲ್ಲಿ ನಾವು ಮತದಾನ ಮಾಡಿದರೆ ಏನೂ ಬದಲಾಗುವುದಿಲ್ಲ ಎಂಬ ಮನೋಭಾವವಿದ್ದರೆ ಅದನ್ನು ಮೊದಲು ತಲೆಯಿಂದ ತೆಗೆಯಿರಿ. ಜವಾಬ್ದಾರಿಯಿಂದ ಎಲ್ಲರೂ ಒಂದಾಗಿ ಮತದಾನ ಮಾಡಿ ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಉತ್ತಮ ಸಮಾಜವನ್ನು ರೂಪಿಸಿ' ಎಂದು ಪ್ರೇರೇಪಿಸಿದರು.

‘ಸಿದ್ದರಾಮಯ್ಯ ವಿರುದ್ಧ ಪ್ರಾಥಮಿಕ ಸಾಕ್ಷ್ಯಗಳಿಲ್ಲ’

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ‘ಸಿದ್ದರಾಮಯ್ಯ ಮತದಾರರಿಗೆ ಯಾವತ್ತು ಆಮಿಷ ಒಡ್ಡಿದರು, ಎಲ್ಲಿ ಒಡ್ಡಿದರು, ಏನನ್ನು ಒಡ್ಡಿದರು ಎಂಬಂತಹ ಸಾಮಾನ್ಯ ಸಾಕ್ಷ್ಯಾಧಾರಗಳನ್ನೇ ನಮೂದಿಸದೆ ಸುಳ್ಳು ಆರೋಪ ಹೊರಿಸಿ ಅವರ ಅನರ್ಹತೆಗೆ ಕೋರಿರುವ ಈ ಅರ್ಜಿಯಲ್ಲಿ ಯಾವುದೇ ಹುರುಳಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

‘ವರುಣ ಕ್ಷೇತ್ರದ ಶಾಸಕರೂ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣೆಗೂ ಮುನ್ನ ಮತದಾರರಿಗೆ ಗ್ಯಾರಂಟಿ ಆಮಿಷಗಳನ್ನು ಒಡ್ಡಿ ಗೆದ್ದಿದ್ದಾರೆ’ ಎಂದು ಆರೋಪಿಸಿ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಎಂದು ಕೋರಿ ಮೈಸೂರಿನ ವರುಣ ಹೋಬಳಿಯ ಕೂಡನಹಳ್ಳಿ ನಿವಾಸಿ ಕೆ.ಎಂ.ಶಂಕರ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರಕರಣದ ಪ್ರಾಥಮಿಕ ವಿಚಾರಣೆ ಹಂತದಲ್ಲಿ ಸಿದ್ದರಾಮಯ್ಯ ಪರ ವಾದ ಮಂಡಿಸಿದ ಹಿರಿಯ ವಕೀಲ ಕೆ.ರವಿವರ್ಮಕುಮಾರ್, ದಾವೆಯ ಪ್ರಮುಖ ಖಂಡಿಕೆಗಳನ್ನು ಸವಿಸ್ತಾರವಾಗಿ ಓದುವ ಮೂಲಕ ಅದರಲ್ಲಿನ ಅಂಶಗಳು ‘ಆಧಾರರಹಿತ ಆರೋಪಗಳಿಂದ ಕೂಡಿವೆ’ ಎಂದು ಆಕ್ಷೇಪಿಸಿದರು.

ಒಂದು ಹಂತದಲ್ಲಿ ರವಿವರ್ಮ ಕುಮಾರ್, ‘ದಾವೆಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹೆಸರನ್ನು ಗೀತಾ ಶರ್ಮಾ ಎಂದು ಬರೆಯಲಾಗಿದೆ. ನೀವೂ ಒಬ್ಬ ಹೆಣ್ಣಾಗಿ ಈ ರೀತಿ ಮುಖ್ಯ ಕಾರ್ಯದರ್ಶಿ ಹುದ್ದೆಯಲ್ಲಿರುವಂತಹ ಉನ್ನತ ಅಧಿಕಾರಸ್ಥ ಮಹಿಳೆಯೊಬ್ಬರ ಹೆಸರನ್ನು ತಪ್ಪಾಗಿ ಬರೆಯುವುದು ಎಷ್ಟು ಸರಿ’ ಎಂದು ಅರ್ಜಿದಾರರ ಪರ ಹಾಜರಿದ್ದ ಹಿರಿಯ ವಕೀಲರಾದ ಪ್ರಮೀಳಾ ನೇಸರ್ಗಿ ಅವರನ್ನು ಪ್ರಶ್ನಿಸಿದರು.

ಇದಕ್ಕೆ ಕೆರಳಿದ ಪ್ರಮೀಳಾ ನೇಸರ್ಗಿ, ‘ಮೊದಲನೆಯದಾಗಿ ತಾವು ದಾವೆಯನ್ನು ಇಷ್ಟೊಂದು ವಿಶದವಾಗಿ ನ್ಯಾಯಪೀಠದ ಮುಂದೆ ಓದುವ ಅವಶ್ಯಕತೆಯೇ ಇಲ್ಲ. ಆದಾಗ್ಯೂ, ಏನೋ ಬೆರಳಚ್ಚು ದೋಷವಾಗಿದೆ. ಶರ್ಮಾ ಎಂದಿದೆಯಲ್ಲಾ ಸಾಕು ಬಿಡಿ ಅರ್ಥವಾಗುತ್ತೆ, ನಿಮ್ಮ ವಾದ ಮುಂದುವರಿಸಿ’ ಎಂದು ಖಾರವಾಗಿ ಸಮಜಾಯಿಷಿ ನೀಡಿದರು.

ಆದರೆ, ಇದಕ್ಕೆ ಸುಮ್ಮನಾಗದ ರವಿವರ್ಮ ಕುಮಾರ್, ‘ನೀವು ದಾವೆಯಲ್ಲಿ ಹೆಸರನ್ನೇ ಸರಿಯಾಗಿ ಬರೆದಿಲ್ಲ ಎಂದರೆ ನನಗೆ ಹೇಗೆ ಗೊತ್ತಾಗಬೇಕು. ಇಡೀ ದಾವೆಯ ತುಂಬಾ ಇಂತಹುದೇ ಹತ್ತಾರು ದೋಷಗಳು, ತಪ್ಪು ತಪ್ಪಾದ ಆಧಾರರಹಿತ ಆರೋಪಗಳು ತುಂಬಿಕೊಂಡಿವೆ’ ಎಂದು ಆಕ್ಷೇಪಿಸಿದರು. ಕಲಾಪದ ದಿನದ ಸಮಯ ಮುಗಿದ ಕಾರಣ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಲಾಯಿತು. ಸಿದ್ದರಾಮಯ್ಯ ಪರ ವಕೀಲರಾದ ಲೀಲಾ ಪಿ.ದೇವಾಡಿಗ ವಕಾಲತ್ತು ವಹಿಸಿದ್ದಾರೆ.

ಕೋರಿಕೆ ಏನು?: ‘ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷವು ಮತದಾರರಿಗೆ ಗ್ಯಾರಂಟಿ ಕಾರ್ಡ್ ಯೋಜನೆಗಳ ಮೂಲಕ ಆಮಿಷ ಒಡ್ಡಿದೆ. ಈ ಗ್ಯಾರಂಟಿ ಯೋಜನೆಗಳನ್ನು ಸಿದ್ದರಾಮಯ್ಯ ಅವರ ಸಮ್ಮತಿಯೊಂದಿಗೇ ಪ್ರಕಟಿಸಲಾಗಿದೆ. ಇವು ವರುಣ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತಹಾಕಲು ಮತದಾರರನ್ನು ಪ್ರೇರೇಪಿಸಿವೆ. ಇದು ಲಂಚಕ್ಕೆ ಸಮವಾದುದು. ಪ್ರಜಾಪ್ರತಿನಿಧಿ ಕಾಯ್ದೆ ಪ್ರಕಾರ ಆಮಿಷವೊಡ್ಡಿ ಪ್ರಚಾರ ಮಾಡುವುದೂ ಅಪರಾಧ. ಆದ್ದರಿಂದ, ಅಕ್ರಮಗಳನ್ನು ಎಸಗುವ ಮೂಲಕ ಶಾಸಕರಾಗಿ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ. ಅರ್ಜಿಯಲ್ಲಿ ಸಿದ್ದರಾಮಯ್ಯ ಅವರನ್ನು ಪ್ರತಿವಾದಿಯನ್ನಾಗಿ ಮಾಡಲಾಗಿದೆ.

‘ಪಿಂಚಣಿದಾರರ ಬಗ್ಗೆ ಮೃದು ಹೃದಯವಿರಲಿ’

ಬೆಂಗಳೂರು: ‘ಕೈಯಲ್ಲಿ ಬಲವಿದ್ದಾಗ ವರ್ಷಗಟ್ಟಲೆ ಸೇವೆ ಸಲ್ಲಿಸಿ, ನಿವೃತ್ತರಾಗುವ ನೌಕರರು ತಮ್ಮ ಜೀವನದ ಸಂಧ್ಯಾಕಾಲದಲ್ಲಿ ಕೇಳುವ ಸಣ್ಣ ಪ್ರಮಾಣದ ವೇತನ ಬಡ್ತಿಯನ್ನು ನೀಡಿದರೆ ಅದರಿಂದ ಆಕಾಶವೇನೂ ಕಳಚಿ ಬೀಳುವುದಿಲ್ಲ. ಹಾಗಾಗಿ, ಪಿಂಚಣಿದಾರರನ್ನು ಮೃದು ಹೃದಯದಿಂದ ನೋಡಬೇಕು’ ಎಂದು ಹೈಕೋರ್ಟ್, ಕರ್ನಾಟಕ ರಾಜ್ಯ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ (ಕೆಪಿಟಿಸಿಎಲ್) ಕಿವಿಮಾತು ಹೇಳಿದೆ.

ಹಲವು ವರ್ಷಗಳ ಕಾಲ ಕೆಪಿಟಿಸಿಎಲ್‌ನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಉದ್ಯೋಗಿಗಳ ವೇತನ ಹಾಗೂ ಪಿಂಚಣಿ ಮರು ನಿಗದಿಗೆ ಸಂಬಂಧಿಸಿದಂತೆ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶವನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಎತ್ತಿಹಿಡಿದಿದೆ.

ಕೆಪಿಟಿಸಿಎಲ್ ಸಲ್ಲಿಸಿದ್ದ ಮೇಲ್ಮನವಿ ತಳ್ಳಿ ಹಾಕಿರುವ ನ್ಯಾಯಪೀಠ, ‘ಉದ್ಯೋಗಿಗಳಿಗೆ ಸಣ್ಣ ಪ್ರಮಾಣದ ವೇತನ ಬಡ್ತಿ ನೀಡಬೇಕಾಗುತ್ತದೆ. ಇದರಿಂದ ನಿಗಮದ ಬಜೆಟ್ ಮೇಲೆ ಅಂತಹ ಹೊರೆಯೇನೂ ಬೀಳುವುದಿಲ್ಲ. ಇಂತಹ ಮೊತ್ತದ ಪಾವತಿಯಿಂದ ನೀವು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’ ಎಂದು ನಿಗಮಕ್ಕೆ ಆದೇಶಿಸಿದೆ.

ಪ್ರಕರಣವೇನು?: ‘ನಮಗೆ ಕೆಪಿಟಿಸಿಎಲ್ ಸರಿಯಾದ ವೇತನ ಬಡ್ತಿ ಹಾಗೂ ಪಿಂಚಣಿ ನಿಗದಿ ಮಾಡಿಲ್ಲ’ ಎಂದು ಆಕ್ಷೇಪಿಸಿ ತುಮಕೂರಿನ ಎಲ್.ಮಲ್ಲಿಕಾರ್ಜುನಪ್ಪ ಸೇರಿದಂತೆ 30ಕ್ಕೂ ಹೆಚ್ಚು ನಿವೃತ್ತ ಉದ್ಯೋಗಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಪೀಠ, ‘ವಾರ್ಷಿಕ ವೇತನ ಬಡ್ತಿ ನೀಡುವ ಜತೆಗೆ ಅವರ ಪಿಂಚಣಿಯನ್ನು ಮರು ನಿಗದಿ ಮಾಡಿ ಬಾಕಿ ಸಹಿತ ಪಾವತಿಸಬೇಕು’ ಎಂದು 2023ರ ಡಿ. 15ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಕೆಪಿಟಿಸಿಎಲ್ ಮೇಲ್ಮನವಿ ಸಲ್ಲಿಸಿತ್ತು.

ವಿದೇಶಾಂಗ ಸಚಿವಾಲಯದ ಕ್ರಮಕ್ಕೆ ಹೈಕೋರ್ಟ್ ಮೆಚ್ಚುಗೆ

ಬೆಂಗಳೂರು: ರಣಜಿ ಕ್ರಿಕೆಟ್ ಆಟಗಾರ ಕೆ.ಸಿ.ಕಾರಿಯಪ್ಪ ಅವರ ವೀಸಾಗೆ ಅಡ್ಡಿಯಾಗಿದ್ದ ಪೊಲೀಸ್ ಕ್ಲಿಯರೆನ್ಸ್ ಪ್ರಮಾಣ ಪತ್ರವನ್ನು ವಿತರಿಸಿದ 60 ನಿಮಿಷಗಳಲ್ಲೇ ಅವರ ವೀಸಾ ಒದಗಿಸಲು ಮುಂದಾದ ಕೇಂದ್ರ ವಿದೇಶಾಂಗ ಸಚಿವಾಲಯ ಹಾಗೂ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿಯ ಕಾರ್ಯವೈಖರಿಗೆ ಹೈಕೋರ್ಟ್ ಮೆಚ್ಚುಗೆ ವ್ಯಕ್ತಪಡಿಸಿದೆ.

ಈ ಸಂಬಂಧ ಕೆ.ಸಿ.ಕಾರಿಯಪ್ಪ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತ್ತು. ವಿಚಾರಣೆ ವೇಳೆ ವಿದೇಶಾಂಗ ಸಚಿವಾಲಯದ ಪರ ಹಾಜರಾಗಿದ್ದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್.ಶಾಂತಿಭೂಷಣ್, ‘ಪೊಲೀಸ್ ಕ್ಲಿಯರೆನ್ಸ್ ವಿತರಿಸಿದರೆ 60 ನಿಮಿಷಗಳಲ್ಲೇ ವೀಸಾ ಒದಗಿಸಲಾಗುವುದು’ ಎಂದು ನ್ಯಾಯಪೀಠಕ್ಕೆ ಭರವಸೆ ನೀಡಿದ್ದರು. ಇದರನ್ವಯ ಬೆಂಗಳೂರು ನಗರ ಪೊಲೀಸ್ ಆಯುಕ್ತರು ಕ್ಲಿಯರೆನ್ಸ್ ನೀಡಿದ್ದರು.

ಕ್ಲಿಯರೆನ್ಸ್ ದೊರೆತ 60 ನಿಮಿಷಗಳ ಅವಧಿಯಲ್ಲೇ ತಾವು ಕೊಟ್ಟ ಮಾತಿನಂತೆ ಶಾಂತಿಭೂಷಣ್, ಕಾರಿಯಪ್ಪ ಅವರಿಗೆ ವೀಸಾ ದೊರೆಯಲು ತಕ್ಷಣದ ಕ್ರಮ ಕೈಗೊಂಡಿದ್ದರು. ಇದಕ್ಕೆ ನ್ಯಾಯಪೀಠ ಆದೇಶದಲ್ಲೇ ಮೆಚ್ಚುಗೆ ವ್ಯಕ್ತಪಡಿಸಿ ಅರ್ಜಿ ವಿಲೇವಾರಿ ಮಾಡಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ರಾಘವನ್ ವಾದ ಮಂಡಿಸಿದ್ದರು.

ಪ್ರಕರಣವೇನು?: ‘ನನ್ನನ್ನು ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿ ಲೈಂಗಿಕವಾಗಿ ಬಳಸಿಕೊಂಡು ಮೋಸ ಮಾಡಿದ್ದಾರೆ’ ಎಂದು ಆರೋಪಿಸಿ ಯುವತಿಯೊಬ್ಬರು ಕೆ.ಸಿ.ಕಾರಿಯಪ್ಪ ವಿರುದ್ಧ ಆರ್.ಟಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಹೀಗಾಗಿ, ಕಾರಿಯಪ್ಪ ಅವರ ವಿದೇಶ ಪ್ರಯಾಣಕ್ಕೆ ನಿರ್ಬಂಧ ಹೇರಲಾಗಿತ್ತು.

‘ನಾನು ಕ್ರಿಕೆಟ್ ಆಡಲು ಇಂಗ್ಲೆಂಡ್‌ಗೆ ಪ್ರಯಾಣಿಸಬೇಕಿದೆ. ಆದರೆ, ಪೊಲೀಸ್ ಕ್ಲಿಯರೆನ್ಸ್ ಸಿಗದೇ ಅಡ್ಡಿಯಾಗುತ್ತಿದೆ. ಆದ್ದರಿಂದ, ಕ್ಲಿಯರೆನ್ಸ್‌ಗೆ ನಿರ್ದೇಶಿಸಬೇಕು’ ಎಂದು ಕೋರಿ ಕಾರಿಯಪ್ಪ ಹೈಕೋರ್ಟ್ ಮೆಟ್ಟಿಲೇರಿದ್ದರು.

ಕರ್ತವ್ಯ ಲೋಪ: ವೈದ್ಯೆ ಅಮಾನತು

ಬೆಂಗಳೂರು: ಕರ್ತವ್ಯ ಲೋಪ ಮತ್ತು ದುರ್ನಡತೆಯ ಆರೋಪ ಎದುರಿಸುತ್ತಿದ್ದ ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಲೀಲಾ ಸಂಪತ್ ಕುಮಾರ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಈ ಬಗ್ಗೆ ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಆದೇಶ ಹೊರಡಿಸಿದ್ದಾರೆ. ಡಾ.ಲೀಲಾ ಸಂಪತ್ ಕುಮಾರ್ ಅವರು ಕರ್ತವ್ಯದ ಅವಧಿಯಲ್ಲಿ ರೇಗಾಡುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವುದು ಹಾಗೂ ಅಸಾಂವಿಧಾನಿಕ ಪದಗಳಿಂದ ನಿಂದಿಸಿ, ಮಾನಸಿಕ ಕಿರುಕುಳ ನೀಡುತ್ತಾರೆ ಎಂದು ಕೆ.ಆರ್.ಪುರ ಸಾರ್ವಜನಿಕ ಆಸ್ಪತ್ರೆಗೆ ನಿಯೋಜನೆಗೊಂಡಿದ್ದ ಸ್ನಾತಕೋತ್ತರ ವಿದ್ಯಾರ್ಥಿಗಳು ದೂರು ನೀಡಿದ್ದರು. ಆಸ್ಪತ್ರೆಯ ವೈದ್ಯರು, ಶುಶ್ರೂಷಕರು, ಅಧಿಕಾರಿಗಳು ಹಾಗೂ ಆಂಬುಲೆನ್ಸ್ ಸಿಬ್ಬಂದಿಯೂ ಅವರ ವಿರುದ್ಧ ದೂರು ನೀಡಿದ್ದರು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ದೂರುಗಳನ್ನು ಆಧರಿಸಿ ಆಡಳಿತ ವೈದ್ಯಾಧಿಕಾರಿ ವರದಿ ಸಲ್ಲಿಸಿದ್ದರು. ಲೀಲಾ ಸಂಪತ್ ಅವರ ವರ್ತನೆಯಿಂದ ಚಿಕಿತ್ಸೆಗೆ ಬರುವ ರೋಗಿಗಳಿಗೆ ಸಮಸ್ಯೆಯಾಗುತ್ತಿದೆ. ಆಸ್ಪತ್ರೆಯ ವಾತಾವರಣವೂ ಕೆಡುತ್ತಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ರವೀಂದ್ರನಾಥ ಮೇಟಿ, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ನದೀಮ್ ಅಹಮದ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ. ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ವಿಚಾರಿಸಿ ವರದಿ ಸಲ್ಲಿಸಿದ್ದಾರೆ. ಈ ವರದಿ ಆಧರಿಸಿ ಅವರನ್ನು ಅಮಾನತು ಮಾಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೋಲ್ಕತ್ತ ರೇಸ್

ಸ್ನೋ ಲಿಯೋಪಾರ್ಡ್ ಗೆಲ್ಲುವ ನಿರೀಕ್ಷೆ

ಅಜೀಶ್ ಕಪ್ ಬುಧವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ನೋ ಲಿಯೋಪಾರ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:45ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಫುಲ್‌ಕ್ರಮ್ 3, ಹಿಸ್ಟಾರಿಕ್ 7, ಎಲೈಟ್ 4
2ನೇ ರೇಸ್: ಹೆಲ್‌ಬ್ಲೇಝರ್ 4, ಆಸ್ಟೆರಿಕ್ಸ್ 2, ಟಮಾರ್ 6
3ನೇ ರೇಸ್: ರೆಮಿ ರೆಡ್ 8, ಫ್ಯಾನ್ಸಿ ನ್ಯಾನ್ಸಿ 9, ಮೈ ಪ್ರಿನ್ಸೆಸ್ 11
4ನೇ ರೇಸ್: ಸ್ನೋ ಲಿಯೋಪಾರ್ಡ್ 1, ಮಾಥಾಂಗಿ 8, ಹ್ಯಾಂಡ್ ಆಫ್ ಗೋಲ್ಡ್ 2
5ನೇ ರೇಸ್: ಸ್ವಾರ್ಮಿ ಓಷನ್ 2, ಲೈಫ್ ಈಸ್ ಗುಡ್ 1, ಸ್ಟಾರ್ ಜಸ್ಟೀಸ್ 4
6ನೇ ರೇಸ್: ಲಕ್ಕಿ ನೈನ್ 1, ಕ್ರಿಸ್ಟಾಲ್ಡೊ 4, ಸಿಕ್ಸ್ಟಿ ಸೆವೆನ್ 6

ಉತ್ತಮ ಬೆಟ್: ಫುಲ್‌ಕ್ರಮ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	4,5,6	4,5,6

ಸಂಸ್ಕರಿಸಿದ ನೀರಿನ ಬಳಕೆ ಜಲಮಂಡಳಿಗೆ ಪ್ರಶಂಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸ್ಕರಿಸಿದ ನೀರಿನ ಬಳಕೆಯಲ್ಲಿ ಬೆಂಗಳೂರು ಜಲಮಂಡಳಿ ದೇಶಕ್ಕೆ ಉತ್ತಮ ಮಾದರಿಯಾಗಿದೆ ಎಂದು ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯ ಪ್ರಶಂಸಿಸಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ನಗರದಲ್ಲಿ ಸಂಸ್ಕರಿಸಿದ ನೀರಿನ ಬಳಕೆ ಹಾಗೂ ಅದರಿಂದ ಆಗಿರುವ ಪರಿಣಾಮಗಳ ಬಗ್ಗೆ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಾಲಯದ ಹೆಚ್ಚುವರಿ ಕಾರ್ಯದರ್ಶಿ ಡಿ. ತಾರಾ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿದಾಗ ಪ್ರಶಂಸೆ ವ್ಯಕ್ತವಾಗಿದೆ.

‘ನಗರದಲ್ಲಿ 1,480 ಎಂಎಲ್‌ಡಿ ತ್ಯಾಜ್ಯ ನೀರು ಉತ್ಪಾದನೆ ಆಗುತ್ತದೆ. 1,212 ಎಂಎಲ್‌ಡಿ ನೀರನ್ನು ಸಂಸ್ಕರಿಸಲಾಗುತ್ತಿದೆ. 850 ಎಂಎಲ್‌ಡಿ ಬಳಸಲಾಗುತ್ತಿದೆ. ಇನ್ನೂ 271 ಎಂಎಲ್‌ಡಿ ಸಂಸ್ಕರಿಸಿದ ನೀರನ್ನು ಬಳಸಲು ಯೋಜನೆಗಳನ್ನು ರೂಪಿಸಲಾಗಿದೆ’ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಮಾಹಿತಿ ಒದಗಿಸಿದರು.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಮಾನದಂಡಗಳ ಆಧಾರದ ಮೇಲೆ ತ್ಯಾಜ್ಯ ನೀರನ್ನು ಸಂಸ್ಕರಿಸಿ 20 ಕೆರೆಗಳಿಗೆ ತುಂಬಿಸಲಾಗುತ್ತಿದೆ. ಇದರಿಂದ ಆಯಾ ಪ್ರದೇಶದ ಸುತ್ತಮುತ್ತ ಅಂತರ್ಜಲ ಮಟ್ಟದಲ್ಲಿ ಏರಿಕೆ ಕಂಡುಬಂದಿದೆ ಎಂದು ತಿಳಿಸಿದರು.

ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಸಂಸ್ಕರಿಸಿದ ನೀರು ಕಡ್ಡಾಯ, ಸಂಸ್ಕರಿಸಿದ ನೀರನ್ನು ಗೃಹ ಬಳಕೆಗೆ ಹೊರತುಪಡಿಸಿ ಸ್ವಚ್ಛತೆ ಕಾರ್ಯಗಳಿಗೆ, ಉದ್ಯಾನಗಳಲ್ಲಿ ಬಳಕೆಗೆ ಉತ್ತೇಜನ ನೀಡುತ್ತಿರುವುದು ಹಾಗೂ ಪಂಚಸೂತ್ರಗಳನ್ನು ಅಳವಡಿಸಿಕೊಂಡರೆ ‘ಗ್ರೀನ್ ಸ್ಟಾರ್’ ನೀಡುವುದು, ಕೈಗಾರಿಕೆ, ವಾಣಿಜ್ಯ ಸಂಸ್ಥೆಗಳಲ್ಲಿ ಸಂಸ್ಕರಿಸಿದ ನೀರು ಬಳಸಲು ಸೂಚಿಸಿರುವುದರ ಬಗ್ಗೆ ಕೇಂದ್ರ ಜಲಸಂಪನ್ಮೂಲ ಸಚಿವಾಲಯದ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ಕೊಳವೆಬಾವಿ ದುರಸ್ತಿಗೆ ಸೂಚನೆ

ಅಧಿಕಾರಿಗಳೊಂದಿಗೆ ಬಿಬಿಎಂಪಿ ಮುಖ್ಯ ಆಯುಕ್ತರ ಸಭೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ‘ರಾಜರಾಜೇಶ್ವರಿ ನಗರ ಹಾಗೂ ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಕೊಳವೆಬಾವಿಗಳನ್ನು ದುರಸ್ತಿಗೊಳಿಸಿ, ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆಗಾಗಿ ಕೊಳವೆಬಾವಿ ಕೊರೆಯುವ (ರಿಗ್ಸ್) ವಾಹನಗಳನ್ನು ಬಳಸಿಕೊಂಡು ದುರಸ್ತಿ ಕೈಗೊಳ್ಳಬೇಕು ಎಂದರು.

ರಾಜರಾಜೇಶ್ವರಿ ನಗರ ವಲಯದ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಲ್ಲಿ ಎಲ್ಲಿಯೂ ನೀರಿನ ಅಭಾವವಾಗದಂತೆ ನೋಡಿಕೊಳ್ಳಬೇಕು. ಈ ವಲಯದಲ್ಲಿ 146 ಶುದ್ಧ ಕುಡಿಯುವ ನೀರಿನ ಘಟಕಗಳಿದ್ದು, 93 ಘಟಕಗಳಿಗೆ ಕೊಳವೆಬಾವಿಗಳಿಂದ, 36 ಘಟಕಗಳಿಗೆ ಜಲಮಂಡಳಿಯಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ಸ್ಥಗಿತಗೊಂಡಿರುವ 17 ಘಟಕಗಳೂ ಕಾರ್ಯನಿರ್ವಹಿಸುವಂತೆ ಮಾಡಬೇಕು ಎಂದು ಸೂಚಿಸಿದರು.

91 ಸ್ಥಳಗಳಲ್ಲಿ ಟ್ಯಾಂಕ್‌ಗಳನ್ನು ಸ್ಥಾಪಿಸಿ, ಜಲಮಂಡಳಿಯಿಂದ ನೀರಿನ ವ್ಯವಸ್ಥೆ ಮಾಡಬೇಕು ಎಂದರು.

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿ ಗುರುತಿಸಿರುವ ಸ್ಥಳಗಳಲ್ಲಿ ಹೊಸದಾಗಿ ಕೊಳವೆಬಾವಿಗಳನ್ನು ಕೊರೆಸಬೇಕು. ಪಾಲಿಕೆಯ 38 ಹಾಗೂ ಜಲಮಂಡಳಿಯ 18 ನೀರಿನ ಟ್ಯಾಂಕರ್‌ಗಳ ಮೂಲಕ ನೀರಿನ ಪೂರೈಕೆ ಮಾಡಲಾಗುತ್ತಿದೆ. 113 ಸ್ಥಳಗಳಲ್ಲಿ ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಇರಿಸಲಾಗಿದ್ದು, ಜಲಮಂಡಳಿಯಿಂದ ನೀರಿನ ವ್ಯವಸ್ಥೆ ಮಾಡಲಾಗುತ್ತಿದೆ. ನೀರಿನ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

80 ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ 24 ಘಟಕಗಳು ಸ್ಥಗಿತಗೊಂಡಿವೆ ಎಂದು ಅಧಿಕಾರಿಗಳು ತಿಳಿಸಿದರು.

ವಲಯ ಆಯುಕ್ತರಾದ ಶಿವಾನಂದ ಕಾಪಸಿ, ರಮ್ಯಾ, ವಿಪತ್ತು ನಿರ್ವಹಣೆಯ ನೋಡಲ್ ಅಧಿಕಾರಿ ಸುರೋಳ್ಕರ್ ವಿಕಾಸ್ ಕಿಶೋರ್, ಮುಖ್ಯ ಎಂಜಿನಿಯರ್‌ಗಳಾದ ರಾಘವೇಂದ್ರ ಪ್ರಸಾದ್, ಶಶಿಕುಮಾರ್ ಉಪಸ್ಥಿತರಿದ್ದರು.

KAS
ಅಧಿಸೂಚನೆ ಪ್ರಕಟಣೆ!
384 ಗೆಜೆಟೆಡ್ ಪ್ರೊಬೆಷನರ್ಸ (KAS) ಹುದ್ದೆಗಳ ನೇಮಕಾತಿಗೆ ಇದೀಗ ಅಧಿಸೂಚನೆ ಪ್ರಕಟಿಸಿ ಅರ್ಜಿ ಆಹ್ವಾನಿಸಲಾಗಿದೆ!!
ಪೂರ್ವಭಾವಿ ಪರೀಕ್ಷಾ (Prelims) ದಿನಾಂಕವನ್ನು 07-07-2024ಕ್ಕೆ ಪರಿಷ್ಕರಿಸಲಾಗಿದೆ
ವಿದ್ಯಾರ್ಹತೆ: ಯಾವುದೇ ಪದವಿ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 15 ಏಪ್ರಿಲ್ 2024
ನಿಮ್ಮ ತಯಾರಿಯನ್ನು ಪೂರ್ಣಗೊಳಿಸಿ
EXAM MASTERMIND DH ಪ್ರಜಾವಾಣಿ
ಇಂದೇ KAS ಮಾಕ್ ಟೆಸ್ಟ್ ಸರಣಿಗೆ ಚಂದಾದಾರರಾಗಿ!
ಪ್ರಯೋಜನಗಳು:
- ಮಾಸ್ಟರ್‌ಮೈಂಡ್‌ನ 12 KAS ಮಾಕ್ ಪ್ರಿಲಿಮ್ಸ್ ಪರೀಕ್ಷೆಗಳ ಸರಣಿಗೆ ಚಂದಾದಾರರಾಗಿ
- 24 ಗಂಟೆಗಳ ಒಳಗೆ ಸಮಗ್ರ ಪರಿಹಾರಗಳು ಮತ್ತು ಶ್ರೇಯಾಂಕಗಳನ್ನು ಪಡೆಯಿರಿ
- ಪ್ರತಿ ಪರೀಕ್ಷೆಯನ್ನು 3 ಬಾರಿ ಪ್ರಯತ್ನಿಸಿ
ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ exammastermind.com ಗೆ ಭೇಟಿ ನೀಡಿ
ಹೆಚ್ಚಿನ ಮಾಹಿತಿಗಾಗಿ WhatsApp ಮಾಡಿ 96069 66128

ನಕಲಿ ಜಾತಿ ಪ್ರಮಾಣ ಪತ್ರ: ನೋಟಿಸ್

ಬೆಂಗಳೂರು: ‘ಕಬ್ಬಲಿಗ ಜಾತಿಯ ಹೆಸರಿನಲ್ಲಿ ಜಾತಿ ಪ್ರಮಾಣ ಪತ್ರ ಪಡೆದು ನಂತರ ಪರಿವಾರ ನಾಯಕ ಜಾತಿ ಪ್ರಮಾಣ ಪಡೆದುಕೊಂಡಿರುವ ಕಲಬುರಗಿ, ಯಾದಗಿರಿ ಹಾಗೂ ವಿಜಯಪುರ ಜಿಲ್ಲೆಗಳ 30 ಮಂದಿಗೆ ಆಯಾ ಜಿಲ್ಲಾಧಿಕಾರಿಗಳ ಮುಖಾಂತರ ನೋಟಿಸ್ ಜಾರಿಗೊಳಿಸಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಯಾದಗಿರಿ ಜಿಲ್ಲೆಯ ‘ರಾಜ್ಯ ಎಸ್‌ಸಿ–ಎಸ್‌ಟಿ ನಕಲಿ ಜಾತಿ ಪ್ರಮಾಣ ಪತ್ರಗಳ ತಡೆ ಸಮಿತಿ’ ಪ್ರಧಾನ ಕಾರ್ಯದರ್ಶಿ ಮಾರಪ್ಪ ನಾಯಕ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ICAR - National Institute of Animal Nutrition and Physiology
Adugodi, Bengaluru - 560 030
Department of Agricultural Research and Education, Government of India
NIANP/ADV-10-CDN/2023-24
Applications are invited for engaging of One (01) Young Professional - I at ICAR - NIANP, Bengaluru under CLAR with a consolidated remuneration of Rs. 30,000/- per month. Walk in Interview is on 18-04-2024, 10-30 a.m. For detailed advertisement please visit the Institute website www.nianp.res.in.
Sd/- Administrative Officer

ಇನ್ಸುಲೇಟೆಡ್ ಏರಿಯಲ್ ವರ್ಕ್ ಪ್ಲಾಟ್‌ಫಾರ್ಮ್ ವಾಹನ

‘ನಿರ್ವಹಣೆ ವೇಳೆ ತಡೆರಹಿತ ವಿದ್ಯುತ್ ಪೂರೈಕೆಗೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಮಾರ್ಗಗಳ ದುರಸ್ತಿ ಮತ್ತು ನಿರ್ವಹಣೆ ಸಮಯದಲ್ಲೂ ತಡೆ ರಹಿತ ವಿದ್ಯುತ್ ಪೂರೈಸುವುದಕ್ಕಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು(ಕೆಪಿಟಿಸಿಎಲ್), 400 ಕೆ.ವಿವರೆಗಿನ ಪ್ರಸರಣ ಮಾರ್ಗಗಳು ಮತ್ತು ಸಬ್‌ಸ್ಟೇಷನ್‌ಗಳ ನಿರ್ವಹಣೆಗೆ ಇನ್ಸುಲೇಟೆಡ್ ಏರಿಯಲ್ ವರ್ಕ್ ಪ್ಲಾಟ್‌ಫಾರ್ಮ್ ವಾಹನಗಳನ್ನು ನಿಯೋಜಿಸುತ್ತಿದೆ.

ಈಗಾಗಲೇ ಬೆಂಗಳೂರು, ಚಿತ್ರದುರ್ಗ ಮತ್ತು ಹುಬ್ಬಳ್ಳಿ ವ್ಯಾಪ್ತಿಯ 400 ಕೆ.ವಿವರೆಗಿನ ಪ್ರಸರಣ ಮಾರ್ಗಗಳು ಮತ್ತು ಸಬ್‌ಸ್ಟೇಷನ್‌ಗಳಲ್ಲಿ ಇಂಥ ಮೂರು ವಾಹನಗಳು ಕಾರ್ಯ ನಿರ್ವಹಿಸುತ್ತಿವೆ. ಈಗ ಮೈಸೂರು ಮತ್ತು ಕಲಬುರಗಿ ಪ್ರದೇಶಗಳಿಗೆ ಎರಡು ವಾಹನಗಳನ್ನು ನಿಯೋಜಿಸಲಾಗುತ್ತಿದೆ.

‘ವಿದ್ಯುತ್ ಮಾರ್ಗಗಳ ನಿರ್ವಹಣೆ ವೇಳೆ ಸ್ಥಗಿತಗೊಳಿಸಿದ ವಿದ್ಯುತ್ ಮರುಸ್ಥಾಪಿಸಲು ಕನಿಷ್ಠ ಐದು ಗಂಟೆ ಬೇಕಾಗುತ್ತದೆ. ಆದರೆ, ಹಾಟ್ (ಲೈವ್) ಲೈನ್ ನಿರ್ವಹಣೆ ತಂತ್ರಜ್ಞಾನದ ಅತ್ಯಾಧುನಿಕ ಇನ್ಸುಲೇಟೆಡ್ ಬಕೆಟ್ ವ್ಯಾನ್, ಇನ್ಸುಲೇಟೆಡ್ ಬಕೆಟ್ ಮತ್ತು ಇನ್ಸುಲೇಟೆಡ್ ಸ್ಕ್ಯಾಫೋಲ್ಡಿಂಗ್ ಬಳಕೆಯಿಂದ ವಿದ್ಯುತ್ ಸ್ಥಗಿತಗೊಳಿಸದೆ ನಿರ್ವಹಣಾ ಚಟುವಟಿಕೆ ಕೈಗೊಳ್ಳಬಹುದು. ಇದರಿಂದ ಗ್ರಾಹಕರಿಗೆ ತಡೆರಹಿತ ವಿದ್ಯುತ್ ಪೂರೈಕೆ ಜತೆಗೆ ವಿದ್ಯುತ್ ಕಂಪನಿಗಳ ನಿರ್ವಹಣಾ ವೆಚ್ಚವನ್ನೂ ಕಡಿತಗೊಳಿಸಬಹುದು’ ಎಂದು ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್‌ಕುಮಾರ್ ಪಾಂಡೆ ವಿವರಿಸಿದ್ದಾರೆ.

ವರ್ಲ್ಡ್ ಸೈನ್ಸ್ ಸ್ಕಾಲರ್‌ಗೆ ಉಳ್ಳಾಲದ ಸಿಂಧೂರ



ಸಿಂಧೂರ

ಉಳ್ಳಾಲ (ದಕ್ಷಿಣ ಕನ್ನಡ): ‘ಮೇ ತಿಂಗಳಲ್ಲಿ ಅಮೆರಿಕದ ನ್ಯೂಯಾರ್ಕ್‌ನಲ್ಲಿ ನಡೆಯುವ ವರ್ಲ್ಡ್ ಸೈನ್ಸ್ ಸ್ಕಾಲರ್ ಕಾರ್ಯಕ್ರಮಕ್ಕೆ ಉಳ್ಳಾಲ ಮೂಲದ ವಿದ್ಯಾರ್ಥಿನಿ ಸಿಂಧೂರಗೆ (15) ಆಹ್ವಾನ ಬಂದಿದ್ದು, ಆಕೆ ಜತೆ ನಾನೂ ತೆರಳುತ್ತಿದ್ದೇನೆ’ ಎಂದು ಬಾಲಕಿಯ ತಾಯಿ ಶಿಬಾನಿ ರಾಜಾ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ಕಾರ್ಯಕ್ರಮಕ್ಕೆ 22 ದೇಶಗಳಿಂದ 55 ವಿದ್ಯಾರ್ಥಿಗಳನ್ನು ಆಯ್ಕೆಮಾಡಿದ್ದು, ಅದರಲ್ಲಿ ಸಿಂಧೂರ ಒಬ್ಬಳು’ ಎಂದರು.

ಸಿಂಧೂರ ಅವರು ಬೆಂಗಳೂರಿನ ನ್ಯೂ ಅರೈಸಿಂಗ್ ಪಬ್ಲಿಕ್ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ.

Kaleesuwari Refinery Private Limited,
Manufacturers & Marketers of several leading brands like Gold Winner, Dheepam & Cardia range.
LOOKING FOR TOP NOTCH SALES PROFESSIONALS
ACROSS MULTIPLE CITIES OF KARNATAKA
SALES OFFICER
Qualification: Any Degree, 2 to 6 years exp. (Experience in FMCG industry is essential)
Location: Bangalore, Belgaum, Bidar, Gadag, Hubli, Hospet, Kodagu, Karwar & Udupi.
AREA SALES MANAGER
GT & HoReCa
Qualification: MBA or any PG, 6 to 10 years exp. (Experience in FMCG industry is essential)
Location: Bangalore
Walk-in-Interview : 6th April 2024 | Time : 10 am to 5 pm
Kaleesuwari Refinery Pvt Ltd
#3503, 1st floor, Pinnacle, 14th Main Road, HAL IInd Stage, Indranagar, Bangalore - 560038
For details, Call : 96200 94615, 85534 57521
Email: jobs@kaleesuwari.com
Send Résumé through WhatsApp +91 7397481722

ಭೂಮಿ ಮಾರಾಟಕ್ಕಿದೆ
ತುಮಕೂರಿನ ಕೋರ ಹೋಬಳಿಯ ಹೊಸಹಳ್ಳಿ ಗ್ರಾಮದಲ್ಲಿರುವ 4-21 ಅಳತೆಯ (ನಾಲ್ಕು ಎಕರೆ ಇಪ್ಪತ್ತೊಂದು ಗುಂಟೆ)
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ತುಮಕೂರಿನ ಉರಡಿಗೆರೆ ಹೋಬಳಿಯ ತಿಮ್ಮಲಾಪುರ ಗ್ರಾಮದಲ್ಲಿರುವ 2-16 ಅಳತೆಯ (ಎರಡು ಎಕರೆ ಹದಿನಾರು ಗುಂಟೆ)
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
ಸಂಪರ್ಕ ವ್ಯಕ್ತಿ : +9195001 46888
ಇಮೇಲ್: krproperty24@gmail.com

ಚುನಾವಣಾ ಪರ್ವ ದೇಶದ ಗರ್ವ ಲೋಕಸಭಾ ಚುನಾವಣೆ–2024
ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಜಿಲ್ಲೆ ಮತ್ತು ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ
ಎನ್.ಆರ್.ಚೌಕ, ಬೆಂಗಳೂರು-560 002.
ಭಾರತ ನಿರ್ವಾಚನ ಆಯೋಗ Election Commission of India
ಲೋಕಸಭಾ ಸಾರ್ವತ್ರಿಕ ಚುನಾವಣೆ - 2024
ವಿಷಯ: ಚುನಾವಣಾ ಕೆಲಸ ಕಾರ್ಯಕ್ಕೆ ನಿಯೋಜಿಸಲಾದ ಅಧಿಕಾರಿಗಳು/ಸಿಬ್ಬಂದಿಯು ಗೈರುಹಾಜರಾದಲ್ಲಿ ಅವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದೆಂದು ಎಚ್ಚರಿಕೆ.
ಚುನಾವಣಾ ಮತಗಟ್ಟೆ ಅಧಿಕಾರಿಗಳ ನಿಯೋಜನೆ:

ಮೊದಲನೇ ಹಂತದ ಚುನಾವಣೆ ತರಬೇತಿ ದಿನಾಂಕ	07.04.2024 ಬೆಳಿಗ್ಗೆ 9.30 ಗಂಟೆಗೆ
ಎರಡನೇ ಹಂತದ ಚುನಾವಣೆ ತರಬೇತಿ	ದಿನಾಂಕ ಮತ್ತು ಸಮಯವನ್ನು ನಂತರ ತಿಳಿಸಲಾಗುವುದು.
ಮಸ್ಟರಿಂಗ್ ದಿನಾಂಕ	25.04.2024 ಬೆಳಿಗ್ಗೆ 9.30 ಗಂಟೆಗೆ
ಮತದಾನ ದಿನಾಂಕ	26.04.2024

ಎಚ್ಚರಿಕೆ
ಚುನಾವಣಾ ಕೆಲಸಕ್ಕೆ ನಿಯೋಜಿಸಲಾದ ಸಿಬ್ಬಂದಿಗಳು ನಿಗದಿಪಡಿಸಿದ ದಿನಾಂಕ, ಸಮಯ ಮತ್ತು ಕೇಂದ್ರಗಳಲ್ಲಿ ತರಬೇತಿ, ಮಸ್ಟರಿಂಗ್ ಮತ್ತು ಮತದಾನ ಕಾರ್ಯಕ್ಕೆ ಕಡ್ಡಾಯವಾಗಿ ಹಾಜರಾಗುವುದು.
ಮುಂದುವರೆದು ಸಿಬ್ಬಂದಿಯು ಯಾರಾದರೂ ಗೈರುಹಾಜರಾದಲ್ಲಿ, ಅಂತಹವರ ವಿರುದ್ಧ ಪ್ರಜಾಪ್ರತಿನಿಧಿ ಕಾಯ್ದೆ 1951ರ ಕಲಂ 134ರಂತೆ ಕೂಡಲೇ ಎಫ್.ಐ.ಆರ್ (FIR) ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಮತ್ತು ಸೇವಾ ನಿಯಮಾವಳಿಗಳಂತೆ ಮತ್ತು ಅಪರಾಧ ಕಾಯ್ದೆಯಂತೆ ಶಿಸ್ತುಕ್ರಮ ಕೈಗೊಳ್ಳಲಾಗುವುದು.
ಚುನಾವಣೆಗೆ ಸಿಬ್ಬಂದಿಯನ್ನು ನಿಯೋಜಿಸಲು ಪ್ರತಿ ಕಛೇರಿಯಿಂದ ನೋಡಲ್ ಅಧಿಕಾರಿಗಳನ್ನು ನೇಮಿಸಿ ಆದೇಶಿಸಲಾಗಿದೆ. ಸದರಿ ನೋಡಲ್ ಅಧಿಕಾರಿಯು ತಮ್ಮ ಕಛೇರಿಯ ಸಿಬ್ಬಂದಿಗೆ ಚುನಾವಣೆ ಕರ್ತವ್ಯದ ಆದೇಶಗಳನ್ನು ಜಾರಿ ಮಾಡಿ, ಚುನಾವಣಾ ತರಬೇತಿಗೆ ಹಾಗೂ ಚುನಾವಣಾ ಕರ್ತವ್ಯಕ್ಕೆ ಹಾಜರುಪಡಿಸುವ ಜವಾಬ್ದಾರಿ ನಿರ್ವಹಿಸುವುದು. ಈ ಮೇಲಿನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷ್ಯತನ ತೋರಿದ್ದಲ್ಲಿ, ನೋಡಲ್ ಅಧಿಕಾರಿ ವಿರುದ್ಧ ಪ್ರಜಾ ಪ್ರತಿನಿಧಿ ಕಾಯ್ದೆ 1951ರ ಕಲಂ 134ರಂತೆ ಕಠಿಣ ಕ್ರಮ ಕೈಗೊಳ್ಳಲಾಗುವುದು.
ಚುನಾವಣಾ ಕರ್ತವ್ಯದ ಆದೇಶಗಳನ್ನು ಬಿ.ಬಿ.ಎಂ.ಪಿ ವೆಬ್‌ಸೈಟ್ https://webapps.bbmpgov.in/election2024 ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
ಮತಗಟ್ಟೆ ಸಿಬ್ಬಂದಿಯು ಪ್ರಿಸೈಡಿಂಗ್ ಆಫೀಸರ್ ಕೈಪಿಡಿಯನ್ನು https://eci.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.
ಜಿಲ್ಲಾ ಚುನಾವಣಾಧಿಕಾರಿಗಳು, ಬೆಂಗಳೂರು ಜಿಲ್ಲೆ ಹಾಗೂ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ, ಬೆಂಗಳೂರು

ವ್ಯಾಟಿಕನ್ ನ್ಯೂಸ್‌ನಲ್ಲಿ ಕನ್ನಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಾಟಿಕನ್ ನ್ಯೂಸ್ ವೆಬ್ ಪೋರ್ಟಲ್‌ನಲ್ಲಿ 53ನೇ ಭಾಷೆಯಾಗಿ ಕನ್ನಡ ಸೇರ್ಪಡೆಯಾಗಿದೆ.

ಈ ವೆಬ್ ಪೋರ್ಟಲ್ ವ್ಯಾಟಿಕನ್ ಸಿಟಿಯಲ್ಲಿ ಕೇಂದ್ರ ಕಚೇರಿ ಹೊಂದಿದೆ. ಕ್ರೈಸ್ತರ ಧರ್ಮ ಗುರು ಪೋಪ್ ಫ್ರಾನ್ಸಿಸ್ ಅವರ ಕಾರ್ಯ ಚಟುವಟಿಕೆ ಹಾಗೂ ಸಂದೇಶಗಳು, ಕ್ಯಾಥೋಲಿಕ್ ಚರ್ಚ್ ಕಾರ್ಯಕ್ರಮಗಳು ಹಾಗೂ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಈ ವೆಬ್‌ಸೈಟ್ ಪ್ರಕಟಿಸಲಿದೆ. ವಿಶ್ವದ ವಿವಿಧ ಭಾಷೆಗಳಲ್ಲಿ ಈ ವೆಬ್‌ಸೈಟ್ ಮೂಲಕ ಮಾಹಿತಿ ಒದಗಿಸಲಾಗುತ್ತಿದೆ. ಭಾರತೀಯ ಭಾಷೆಗಳಾದ ಹಿಂದಿ, ತಮಿಳು, ಮಲಯಾಳಂನಲ್ಲಿಯೂ ಮಾಹಿತಿ ಕೊಡಲಾಗುತ್ತಿದೆ. ಈಗ ಆ ಸಾಲಿಗೆ ಕನ್ನಡವೂ ಸೇರಿದೆ.

'ವ್ಯಾಟಿಕನ್ ಸುದ್ದಿ ತಾಣ ಕನ್ನಡ ಭಾಷೆಗೂ ಮಂಗಳವಾರದಿಂದ ತೆರೆದುಕೊಂಡಿದೆ. ವ್ಯಾಟಿಕನ್ ನ್ಯೂಸ್ ವೆಬ್ ಪೋರ್ಟಲ್‌ನಲ್ಲಿ ಸುದ್ದಿಗಳು ಕನ್ನಡದಲ್ಲಿ ದೊರೆಯುತ್ತಿರುವುದು ಅತೀವ ಸಂತಸ ತಂದಿದೆ' ಎಂದು ಬೆಂಗಳೂರು ಧರ್ಮ ಪ್ರಾಂತ್ಯದ ಧರ್ಮಾಧ್ಯಕ್ಷ (ಆರ್ಚ್ ಬಿಷಪ್) ಪೀಟರ್ ಮಚಾದೊ ತಿಳಿಸಿದ್ದಾರೆ.

'ಬಹುರೂಪಿ'ಗೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಸ್ತಕ ಪ್ರಕಾಶನಕ್ಕೆ ಸಂಬಂಧಿಸಿದಂತೆ ಪಬ್ಲಿಷಿಂಗ್ ನೆಕ್ಸ್ಟ್ ಹಮ್ಮಿಕೊಂಡಿದ್ದ ಸ್ಪರ್ಧೆಯಲ್ಲಿ 'ಬಹುರೂಪಿ' ಪ್ರಕಾಶನವು ಮುಖಪುಟ ವಿನ್ಯಾಸ ವಿಭಾಗದಲ್ಲಿ ರಾಷ್ಟ್ರೀಯ ಪ್ರಶಸ್ತಿಗೆ ಭಾಜನವಾಗಿದೆ.

ಕಲಾವಿದ ಸುಧಾಕರ ದರ್ಬೆ ಅವರು ಮುಖಪುಟ ವಿನ್ಯಾಸ ಮಾಡಿದ 'ಕೆರೆ-ದಡ' ಕೃತಿ ಮೊದಲ ಸ್ಥಾನ ಪಡೆದಿದೆ. ಪತ್ರಿಕಾ ವಿನ್ಯಾಸಕಾರರಾದ ಸುಧಾಕರ ದರ್ಬೆ, ಪುತ್ತೂರಿನ ದರ್ಬೆ ಗ್ರಾಮದವರು.

ಭಾರತದ ಎಲ್ಲ ಭಾಷೆಗಳನ್ನು ಒಳಗೊಂಡು ಜರುಗಿದ ಈ ಮುಖಪುಟ ಸ್ಪರ್ಧೆಯಲ್ಲಿ ವಿವಿಧ ಪ್ರಕಾಶನ ಸಂಸ್ಥೆಗಳು ಭಾಗವಹಿಸಿದ್ದವು.



'ಕೆರೆ–ದಡ' ಕೃತಿ ಮುಖಪುಟ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED ENGLISH, Kannada, social, Mathematics teachers for VVR School Doddakannalli on Sarjapura rd min 2yr experience/freshers vvrschool2003@gmail.com / 9480181149

POORNAPRAJNA EDUCATION CENTRE®
(Promoted and Managed by Udupi Shree Admaru Matha Education Council)
Bengaluru-64

Invites Applications for the proposed Poornaprajna Pre University College in the Poornaprajna High School Campus, CA-11, Yelahanka New Town, Bengaluru

1. Principal:
Candidate should have MA/ M.Com/ M.Sc with B.Ed. with minimum 10 years of teaching and administrative experience at the Pre-University College level.

2. Teaching Positions in the following subjects :
a) Physics, Chemistry, Mathematics and Biology
b) Accountancy, Business Studies, Economics and Mathematics
c) Computer Science
d) Kannada, Sanskrit, English
e) Physical Education

Candidates for the above positions should have Masters Degree in the relevant subject with B.Ed. Experienced candidates will be given preference, but freshers are welcome to apply.

3. Laboratory Assistant:
Physics or Chemistry or Biology :
Science graduates in any one of the Science subjects mentioned above

4. Librarian:
M.Lib. with 3 years of experience. Experienced candidates are preferred.

5. Office Staff:
a) Office Superintendent
B.Com with knowledge of Tally & Computers with 5 years of experience
b) Office Assistant
Graduate with Computer knowledge.

Apply to Hon. Secretary, with copies of certificates on or before 18-04-2024
Send to E-mail : ppechs2024@gmail.com
Ph : 080 – 42033485

BISHOP COTTON WOMEN'S CHRISTIAN LAW COLLEGE
#19, 3rd Cross, C.S.I Compound, Mission Road, Bengaluru-560027
Ph no. 080 2212 1898 / 2248 5542
mail id principal@bcwclc.edu.in/ bcwclc2002@gmail.com
website: www.bcwclc.edu.in
Invites Applications For the post of
Assistant Professor
(LAW, POLITICAL SCIENCE)
Only Lady Candidates need to apply for the above mentioned posts. Eligible candidates are to send their resume with their testimonials and a passport size photograph to the above mail id on or before 18th April 2024.

THIRUMALA VIDYA NIKETHAN SCHOOL
#29, G.D Park Extn, Vyalikaval, Bangalore-560003
Ph: 080-23447560/23447570 Email:-tvns1984@gmail.com
The above mentioned English Medium School
REQUIRES
Trained Science & Arts Graduates/ Post Graduates with B.Ed teachers to teach the following subjects:-
Sanskrit, English (FL), Maths, Science, Social Science & Computer
for Primary & High School
Physical Education Instructor for
High School with B.PEd (Males only)
Nursery Trained Teachers
(Nursery School)
Accountant with B.Com qualification, computer and tally knowledge Preferred
The applications with relevant qualification and good communication skills are required. Please mail/submit the resume with recent photograph to the principal within 15 days from the date of advertisement.

Sri Hanuman Group of Institutions(R)
NATIONAL PUBLIC School & College
Bandappa Garden, Near Matikere, Gokul, Bengaluru– 560054
Qualified & Experienced
TEACHERS REQUIRED
Nursery, Primary, High School & College (Science & Commerce)
All Subjects, PT Teacher, Librarian & Office Assistant
9845054168/ 9900343399
9845260346/ 080- 23374802
Email: nps.principal@gmail.com
Website: www.npsblr.in

WANTED QUALIFIED Experienced Nursery Primary and High School Teachers For All Subjects Royal English School Rajajinagar: 9611878492/ 8861406060/ 9945276973

Om Sai Ram
NEW BALDWIN GROUP OF INSTITUTIONS
* BANASWADI * MANDUR * T.C PALYA * ANEKAL * ANEKAL TOWN * CHANDAPUR * ATTIBELE
NEW BRANCHES AT: *HSR & *(KODATIGATE) SARJAPURA
About us: NBGI having 9 Schools, 4 PU College, 2 Degree College & Upcoming University are the Pioneers in providing quality education Since 1990, Our campuses are well facilitated in providing education of international standards. We are collaborated with ICSE, CBSE, & Cambridge (IGCSE) Boards. We cater to Day Schooling and on campus Boarding Facilities.
INCHARGE TEACHERS-RESIDENTIAL
Graduate candidates having experience in relevant fields will be recruited immediately and trained for respective postings.
On Campus Accommodation available @ Mandur, Budigere Cross and Anekal, Bengaluru.
ADMINISTRATION: RECORDS/ LIAISON OFFICER
Graduate candidates having experience in records maintaining & co ordinating for Board work will be recruited immediately & trained for respective postings.
Walk In Interview on April 6th between 11 AM - 1 PM
Remuneration: at par with the institutional standard. With additional facilities like food & transport in the gross package.
APPLY IMMEDIATELY
Applying candidates should clearly specify the Position Applied for, branch Opted with updated resume
Contact: 98860 84799 / 78990 83463
hrcentral.nbgi@gmail.com www.newbaldwininstitutions.org

POORNAPRAJNA EDUCATION CENTRE®
No.1, 9th 'B' Cross, Yelahanka New Town, Bengaluru -560064.
We invite applications for the following positions:
I High School section
1. Office Executive
Applicants should be graduates in any stream, fluent in English and familiar in computer applications, Tally etc. Candidates should have at least 5 years experience in office independently managing day-to-day affairs of office.
II Primary School section: Lady candidates
1. Maths & Science Teacher
Applicants should have B.Sc and B.Ed degrees with fluency in English language. Candidates with three to five years' experience will get preference
2 Art/Craft Teacher
Applicants should have Bachelor's degree in Fine Arts (BFA) or a Diploma in Fine Arts with three to five years of teaching experience at primary/High school level.
3 .Laboratory Assistant
Applicants should be Science graduates with fluency in English language. Candidates with three to five years of experience are preferred
III Pre-Primary section
1) Assistant Teacher
Applicants should have a degree in any stream or NTT with fluency in English language . Lady candidates with two to three years experience will get preference
Apply to Honorary Secretary within 2 weeks
Telephone : 080-42033482
E Mail: ppecps@yahoo.com
Website: www.ppecynk.org

Wanted Teachers
MMET English Primary & High School
8 Patel Kulappa Road, R.S. Palya, MS Nagar Post, Bangalore - 560 033
Ph. 080 – 25450522, 7259648179, 8618478308
Please send the CV to mmetschool@gmail.com.
Pre-Primary: PUC, NTT/Montessori
Primary Teacher: PUC, D.Ed/B.Ed
TGT : Maths, Science, BSc, B.Ed (PCM/CBZ) English & Social Science BA, B.Ed
PET: D.P.Ed / B. Ped
Technical Assistant: ITI/ Diploma in Engineering
KNSS Vidyamandir English Primary and High School
Anandapura, T.C Palya Main Road, Bangalore – 560036
Ph. No. 080 – 25450522, 7022477196, 8618478308
Please send the CV to knssvidyamandirephs@gmail.com
Pre-Primary: PUC, NTT/Montessori
TGT : English & Social Science BA, B.Ed
Attractive salary with benefits offered.
Walk-in-Interview on 13.04.23, 10.00 AM onwards at MMET School.

HERITAGE PUBLIC School, Srinidhi Layout, JP.Nagar 7th Phase, Konanakunte. REQUIRES:KG CO-ORDINATOR, PRIMARY ENGLISH TEACHERS, PE TEACHERS KG TEACHERS. Freshers can also apply. Attractive Salary Contact:9901733776 080-26322111.

WANTED EXPERIENCED Montessori teacher and DTP with computer designer for Panchasheela welfare association No-10, 21st Cross BHEL layout Rajarajeshwarinagar Bengalore-98. Contact: 9448669359 9448091814

WANTED QUALIFIED TEACHERS For Primary and High School, PMS Public School, Bettahalasur, Bangalore 9632329017/ 9880113895.

NIRMAN INTERNATIONAL PUBLIC SCHOOL- CBSE,7th Block, Vishweshwaraiah Layout, Bangalore-91 Requires qualified TEACHERS for all subjects from Nursery to Grade-X. Contact: 8123030731/ 9986055970.

DODDANNA VIDYA SAMSTHE, Magadi Main Road, Sunkadakkate, requires High-school kannada, English, PE Teachers and primary (all subjects) Nursery Teachers. Contact 9535305299

HOLY ANGEL'S High School Hampinagar, Vijayanagar, Bengaluru-560104 Phone: 23404465/23202042 holyangels.highschool rpclayout@gmail.com Requires Experienced Trained Teachers for the Academic year 2024-2025 for Nursery, Primary, High-School, MusicTeacher & PE Teacher STATE & ICSE. Qualification:B.A./B.Sc., B.Ed, M.A./ M.Sc.,M.Ed, N.T.T, CP.Ed. Only English Medium Candidates need to apply

"WANTED PREP & Primary Teachers for a School near K.R.Puram & Whitefield. Call or WhatsApp Resume: 70222 55677"

WANTED EXPERIENCED Lecturers in English, Computer Science, Economics, Chemistry, Biology, Kannada, History, Librarian and Physical Education director for VIDYAVANA PU College Thirumalashettyhalli Whitefield, Bengaluru. Walk-in for interview. Contact: 9663389388

WALK-IN INTERVIEW
HIRING FOR MULTIPLE POSITIONS
A Bangalore-based legacy business group in Technical Textile, Packaging, and Venture Capital is looking for dynamic individuals with a strong academic background for multiple roles.
Fresh graduates with 60% or above are also welcome. Manufacturing units are based in Bidadi, Bommasandra and the Corporate Office is on M.G. Road.
FINANCE & ACCOUNTS: GM, AGM, Senior Manager/ Officer
PROJECT MANAGER: For Raichur Industrial Property Development
SALES & MARKETING: For Domestic and Exports, Senior, Mid-level & Freshers (Both Males & Females)
FACILITY OFFICER: To Manage Residential Houses
HUMAN RESOURCE: Mid-level & Executives
EXECUTIVE ASSISTANT: Mid-level & Officers
Interested candidates can send their CV to hirejobs2023@gmail.com by 11th April 2024.
Shortlisted candidates will be called for interviews on 13th and 14th April, 2024 or they can directly walk-in. Details will be shared on mail.

ST.CHARLES HIGH SCHOOL#1086 1st Block,3rd Stage Adarsha Layout, Basaveshwaranagar Bangalore-79. Phone:080-23235220/ 9449150749. Invites the Applications from Trained and Experienced English Medium Teachers for Nursery, Primary,and High School to teach all the Subjects including Computer,CP.Ed and Drawing. Qualification required: NTT,TCH, D.Ed,B.Sc B.Ed,BA B.Ed.

**"WANTED OFFICE`EXECUTIVE/** Marketing & Sales Executive/ HR Executive/ Accounts Executive with min.3yrs relevant experience,good communication skills and computer knowledge for`a manufacturing company located`in Bommanahalli, Bangalore-68. Salary:₹25K-30K based`on experience.Send CV-to: admin@uppblr.com/ Contact: 9449817703"

SRI.RAMAKRISHNA EDUCATION Society, Halasuru Requires Experienced TEACHERS BSc/MSc, BEd Science, Maths & BA/MA,BEd for English, Kannada, NTT, Crafts Teacher & PE Teacher. 8861248642/ 9845048824 Mail: srkes1963@gmail.com

WANTEDE XPERIENCED Office Assistant Known Computer Typing, GST. 18000/- E-Mail: mundhralighting@gmail.com

Architects

WANTED ARCHITECTS and Civil Draughtsmen with Minimum 3 years Autocad Experience Contact: Vasant Kumar Associates, Wilson Garden. 22219910, 9845045219.

Hospital & Medical Jobs

WANTED WARD, OT, ICU Pediatric Ward Nursing Staff Accommodation Given Chaitanya Hospital No80/117, P&T Colony R.T.Nagar Bangalore Contact:9900520357

Manager

A FIRM of chartered accountants needs an ex-banker who retired in scale 3 or above to handle the assignment of SARFAESI Resolution of banks in Bangalore, contact- 9848186071/ 9739632594

Engg/ Production Technical

REQUIRE: 1. DIPLOMA Mechanical Engineers, 2. BE Mechanical Engineers, 3. ITI Fitters/ Welders/ Turners/ Drillers for our Motor and special Pumps Manufacturing-Unit at Devarachikkanahalli, Bannergatta Road, Bangalore. Email: flowoilpumps@hotmail.com, Ph: 080-26484068/ 26482095

Marketing & Sales

WANTED: AGM / GM for marketing of reputed Welding Electrodes Brand. Email:jobs.nwipl@yahoo.com

General

A REPUTED property development company requires BUSINESS DEVELOPMENT MANAGERS & SENIOR MANAGERS, Age above 30 years. Retired persons also can apply. Freshers/ Experienced. Earning Rs. 50,000/- per month. Contact:- 8884456860.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Multiple Vacancy

CHRIST ACADEMY INSTITUTE OF LAW
Invites Application for Qualified & Experience Teaching and Non-Teaching Staff
Teaching Position: LAW FACULTY
Eligibility: NET / Ph.D with Exp
Non-Teaching Position: PLACEMENT OFFICER
Eligible candidates can apply through E-mail to: career@calaw.in
Note: SC/ST candidates can apply for reserved vacancies
Admissions open for the AY 2024-25 for 5 year B.A LL.B, B.B.A LL.B B.Com LL.B courses
CHRIST ACADEMY INSTITUTE OF LAW
Christ Nagar, Begur - Koppa Road, Hullahalli, Sakkalawara Post, Bangalore – 560083
Contact: 080 35215156
www.calaw.in

ಬೆಂಗಳೂರು ನಗರದ ಹೃದಯಭಾಗದಲ್ಲಿರುವ ಅನಾಥಾಶ್ರಮದಲ್ಲಿ (ಎನ್.ಜಿ.ಒ.)
ಈ ಕೆಳಗಿನ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
- ಪುರುಷ ಅಡುಗೆಯವರು – 1
- ಪರಿಚಾರಕ – 1
- ಮಹಿಳಾ ಪಾಲಕರು – 3
- ಪುರುಷ ಪಾಲಕರು – 2
- ಪುರುಷ ಸಾಮಾಜಿಕ ಕಾರ್ಯಕರ್ತರು – 1
- ಮಹಿಳಾ ಸಾಮಾಜಿಕ ಕಾರ್ಯಕರ್ತರು – 2
- ಮಹಿಳಾ ವಾರ್ಡನ್ – 1
- ಪುರುಷ ವಾರ್ಡನ್ – 1
- ಚಾಲಕ – 1

ನಮ್ಮ ಅಗತ್ಯಕ್ಕೆ ತಕ್ಕಂತೆ ವಿದ್ಯಾರ್ಹತೆ. ಅನುಭವಕ್ಕನುಗುಣವಾಗಿ ವೇತನ. ಅಭ್ಯರ್ಥಿಗಳು ಈ ಕೆಳಗಿನ ಇಮೇಲ್ ಗೆ ಅರ್ಜಿ ಸಲ್ಲಿಸಬಹುದು.
hr.president2024@gmail.com

Placement Bureaus/Consultants

CONTACT FOR All Placements ANZ Consultants, #74, First Floor, 17th Cross, Malleshwaram, Bengaluru. 23443555, 8183046799.

Wanted

WANTED MALE/ Female Office Assistant Known Accounts with Tally Having Fluency English & Hindi In and Around Rajajinagar Contact: 9108458798/ 080-23384085

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business to Business

Business

PROPERTY DEALS/ Project Finance/ Takeovers, New Ideas/ Skills, Representation. Dr. Swamy- Vamshadhara Project Services: 9342247637.

EDUCATIONAL

Coaching Classes

"SET UP IIT/JEE & NEET Coaching Center. Low Investment/ High returns. Call/ WhatsApp: 9740577844"

School

"ATTN SCHOOL-OWNERS". Improve ADMISSIONS. Set up IIT/JEE & NEET Coaching from Grade-6. Low Investment. Call/WhatsAPP: 7022255677

PERSONAL

Announcements

ANNOUNCEMENT
I, Abhishek S/o S.Mahadevaswamy, aged about 20 years R/at #17/1, 3rd Cross, New Guddadahalli, Mysore Road, Bangalore-560026. declare that my name in Vijaya Bank (A/c No 150301011000511, B.G.Pura Branch) & in Mandya District Co-Operative Central Bank Ltd both document records (A/c No 8016101006724, Belakavadi Branch) Abhishek & Abhisheka as nominee respectively, have to changed my name from Abhishek & Abhisheka to Chidananda. M. vide affidavit dated 01/04/2024 before notary M K Devaki, Bangalore

Change of Name

CHANGE OF NAME
I, NAGARAJA K G, Residing at # 486, 1st Stage, 11th Cross, RHCS Layout, Annapoorneshwarinagara, Bangalore-560091, have changed my minor son's name from CHIRANTH ISHTARTH N to K N CHIRANTH AVIRAJ vide affidavit dated 28.03.2024, before notary Devaraja E, Bengaluru. Henceforth he shall be called K N CHIRANTH AVIRAJ only.

WE, SATHYA PRASAD C and PRIYA KOTLI residing at 88/3, 1st floor, behind Saibaba Mandir, Thyagarajnagar, Bangalore-560028, have changed our minor daughter name from SUHANI BEKNAL to SUHANI SATHYA PRASAD vide affidavit dated 27.03.2024 sworn before notary Meera.H Bangalore.

CHANGE OF NAME
I, SUMA NIDAGATTA GOVINDA SETTY, W/o J. Gangadhar, Residing at # 17, 8th Cross, Sanjeevininagara, Moodalapalya, Bangalore-560072 have changed my name to SUMA GANGADHAR vide affidavit dated 29.03.2024, before notary Deepa M, Bengaluru. Henceforth I shall be called SUMA GANGADHAR only.

WE, SATHYA PRASAD C and PRIYA KOTLI residing at 88/3, 1st floor, behind Saibaba Mandir, Thyagarajnagar, Bangalore-560028 have changed our minor daughter name from SAMEEKSHA to SAMEEKSHA SATHYA PRASAD vide affidavit dated 27.03.2024 sworn before notary Meera.H Bangalore.

I, BHAVANA. H.R., Residing at Chikkamagaluru-577111 have changed my name as BHAVAN. H.R. vide affidavit dated 2/4/2024 before Notary K.S.Bammappanavar, Bengaluru

CHANGE OF NAME
I, NAGARAJA K G, Residing at # 486, 1st Stage, 11th Cross, RHCS Layout, Annapoorneshwarinagara, Bangalore-560091, have changed my minor son's name from DAIVIK VISHNU N to K N DAIVIK VISHNU vide affidavit dated 28.03.2024, before notary Devaraja E, Bengaluru. Henceforth he shall be called K N DAIVIK VISHNU only.

I, UJJWAL JAIN P, Residing at Bengaluru-10 have changed my name as UJJAWAL JAIN, vide affidavit dated 2/4/2024 before Notary K.S. Bammappanavar, Bengaluru

TRAVEL CORNER

HITESH HOLIDAYS : BENGALURU
SINGAPORE AND MALAYSIA- 07 DAYS
Date: 29th April 2024 & Rs. 99990/-* P.P.
BALI - 06 DAYS
Date : 12th May 2024 & Rs. 79990/-*P.P.
Contact for other travel packages & GST 5% Extra on all the package
Contact: 9739326102 / 9036568598

CONNECT

ರಾಷ್ಟ್ರೀಯ ಗ್ರಾಹಕರ ಮೇಳ
NATIONAL CONSUMER FAIR
Binny Mill Ground, Near ETA Mall, Tank Bund Road, Bengaluru
DUBAI THEME EXHIBITION

Complete Family Shopping & Amusement Exhibition
VISIT TODAY | Daily : 4pm - 9pm | Call : 8904727123

DH Classifieds
More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036 |
+91 9731810277 | +91 9886213331 | 080- 45557163/164

₹40 ಕೋಟಿ ವಂಚನೆ • ತಿಂಗಳಿಗೆ ಶೇಕಡ 25ರಷ್ಟು ಲಾಭದ ಆಮಿಷ

ಎ.ಎಫ್ ಡೆವಲಪರ್ಸ್ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಹೂಡಿಕೆ ಹೆಸರಿನಲ್ಲಿ ವಂಚಿಸುತ್ತಿದ್ದ ಆರೋಪದಡಿ 'ಅಕ್ಷಯ್ ಫಾರ್ಚ್ಯೂನ್ (ಎ.ಎಫ್) ಡೆವಲಪರ್ಸ್' ಕಂಪನಿ ವಿರುದ್ಧ ಗೋವಿಂದರಾಜನಗರ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು, ಪ್ರಕರಣದ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿದೆ.

'ವಿಜಯನಗರದ ಎಂ.ಸಿ. ಲೇಔಟ್‌ನಲ್ಲಿ ಕಂಪನಿ ಕಚೇರಿ ತೆರೆಯಲಾಗಿತ್ತು. ಹೂಡಿಕೆ ಹೆಸರಿನಲ್ಲಿ 150ಕ್ಕೂ ಹೆಚ್ಚು ಜನರಿಂದ ಸುಮಾರು ₹ 40 ಕೋಟಿ ಹಣ ಕಟ್ಟಿಸಿಕೊಂಡು ವಂಚಿಸಿರುವ ಮಾಹಿತಿ ಇದೆ. ಪ್ರಮುಖ ಆರೋಪಿಗಳಾದ ಮಂಜು ಹಾಗೂ ಮುನಿರಾಜು ಜಿ.ವಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಅವರಿಬ್ಬರು ಸದ್ಯ ತಲೆಮರೆಸಿಕೊಂಡಿದ್ದಾರೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಹೂಡಿಕೆ ಮಾಡಿದ ಹಣದ ಮೇಲೆ ತಿಂಗಳಿಗೆ ಶೇಕಡ 25ರಷ್ಟು ಲಾಭ ನೀಡುವುದಾಗಿ ಆರೋಪಿಗಳು ಹೇಳುತ್ತಿದ್ದರು. ಯಾರಾದರೂ ಹೂಡಿಕೆದಾರರು, ತಮ್ಮ ಪರಿಚಯಸ್ಥರು ಹಾಗೂ ಇತರರಿಂದ ಹಣ ಹೂಡಿಕೆ ಮಾಡಿದರೆ ಕಮಿಷನ್ ನೀಡುವುದಾಗಿಯೂ ಆಮಿಷವೊಡ್ಡುತ್ತಿದ್ದರು' ಎಂದು ತಿಳಿಸಿದರು.

'₹ 1 ಲಕ್ಷ ಹೂಡಿಕೆ ಮಾಡಿದರೆ ಪ್ರತಿ ತಿಂಗಳು ₹ 5 ಸಾವಿರ ಲಾಭ ನೀಡುವುದಾಗಿಯೂ ಆರೋಪಿಗಳು ಜಾಹೀರಾತು ನೀಡುತ್ತಿದ್ದರು. ಇವರ ಮಾತು ನಂಬಿದ್ದ ಸಾರ್ವಜನಿಕರು, ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದ್ದ ಬಗ್ಗೆ ಮಾಹಿತಿ ಲಭ್ಯವಾಗಿದೆ.'

'ವಂಚನೆ ಬಗ್ಗೆ ಕೆಲ ಹೂಡಿಕೆದಾರರು ಮಾಹಿತಿ ನೀಡಿದ್ದರು. ಅದರನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕೆಲ ಹೂಡಿಕೆದಾರರು ಈಗಾಗಲೇ ಹೇಳಿಕೆ ಸಹ ನೀಡಿದ್ದಾರೆ. ಎಎಫ್ ಡೆವಲಪರ್ಸ್ ಕಂಪನಿಯಿಂದ ಯಾರಿಗಾದರೂ ವಂಚನೆಯಾಗಿದ್ದರೆ ಚಾಮರಾಜಪೇಟೆಯಲ್ಲಿರುವ ಸಿಸಿಬಿ ಕಚೇರಿಗೆ ದೂರು ನೀಡಬಹುದು' ಎಂದು ಪೊಲೀಸರು ಕೋರಿದ್ದಾರೆ.

ಪತ್ನಿ, ಸಂಬಂಧಿಕರೂ ಭಾಗಿ: 'ಆರೋಪಿ ಮುನಿರಾಜು, ಈತನ ಪತ್ನಿ ಹಾಗೂ ಕುಟುಂಬದ ಸದಸ್ಯರು ಕಂಪನಿಯ ನಿರ್ದೇಶಕ ಮಂಡಳಿಯಲ್ಲಿದ್ದರು. ಪ್ರತಿಯೊಬ್ಬರೂ ವಂಚನೆ ಕೃತ್ಯದಲ್ಲಿ ಭಾಗಿಯಾಗಿರುವ ಶಂಕೆ ಇದೆ. ಎಲ್ಲರನ್ನೂ ವಿಚಾರಣೆ ನಡೆಸಬೇಕಿದೆ' ಎಂದು ಪೊಲೀಸರು ತಿಳಿಸಿದರು.

'ಮುನಿರಾಜುವಿನ ಪತ್ನಿ, ಹಲವರನ್ನು ಸಂಪರ್ಕಿಸಿ ಹಣ ಹೂಡಿಕೆ ಮಾಡಿಸಿದ್ದರೆಂಬ ಮಾಹಿತಿ ಇದೆ. ಕೆಲ ಹೂಡಿಕೆದಾರರಿಗೆ ಆರಂಭದಲ್ಲಿ ಲಾಭಾಂಶ ಸಹ ನೀಡಿದ್ದರು. ಕೆಲ ತಿಂಗಳಿನಿಂದ ಲಾಭಾಂಶ ನೀಡದೇ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಹೇಳಿದರು.

ಮೀಟರ್ ಬಡ್ಡಿ: ತಂದೆ–ಮಗ ಪರಾರಿ

ಬೆಂಗಳೂರು: ಮೀಟರ್ ಬಡ್ಡಿ ದಂಧೆಯಲ್ಲಿ ತೊಡಗಿದ್ದ ಆರೋಪದಡಿ ಶ್ಯಾಮಣ್ಣ ಗಾರ್ಡನ್‌ನ ಶ್ರೀರಾಮ್ ಎಂಬುವವರ ಮನೆ ಮೇಲೆ ಸಿಸಿಬಿ ಪೊಲೀಸರು ಹಾಗೂ ಸಹಕಾರ ಇಲಾಖೆ ಅಧಿಕಾರಿಗಳು ದಾಳಿ ಮಾಡಿದ್ದು, ₹ 3 ಕೋಟಿ ಮೊತ್ತದ ಚೆಕ್‌ಗಳನ್ನು ಜಪ್ತಿ ಮಾಡಿದ್ದಾರೆ.

ಅಕ್ರಮವಾಗಿ ಬಡ್ಡಿ ವ್ಯವಹಾರ ನಡೆಸುತ್ತಿದ್ದ ಆರೋಪದಡಿ ಶ್ರೀರಾಮ್ ಹಾಗೂ ಮಗ ಕಲ್ಯಾಣ್‌ಕುಮಾರ್ ವಿರುದ್ಧ ಪ್ರಕರಣ ದಾಖಲಾಗಿದ್ದು, ಅವರಿಬ್ಬರು ತಲೆಮರೆಸಿಕೊಂಡಿದ್ದಾರೆ.

'ಮೀಟರ್ ಬಡ್ಡಿ ವ್ಯವಹಾರ ಸಂಬಂಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ನ್ಯಾಯಾಲಯದ ಅನುಮತಿ ಪಡೆದು ಶ್ರೀರಾಮ್ ಮನೆ ಮೇಲೆ ದಾಳಿ ಮಾಡಲಾಗಿದೆ. 100ಕ್ಕೂ ಹೆಚ್ಚು ಜನರ ಚೆಕ್‌ಗಳು, ವಾಹನಗಳ ನೋಂದಣಿ ಪ್ರಮಾಣ ಪತ್ರಗಳು, ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಕಮಿಷನರ್ ಬಿ. ದಯಾನಂದ್ ತಿಳಿಸಿದರು.

'ಶ್ಯಾಮಣ್ಣ ಗಾರ್ಡನ್‌ನ ಶ್ರೀರಾಮ್, ಹಲವು ವರ್ಷಗಳಿಂದ ಬಡ್ಡಿ ವ್ಯವಹಾರ ಮಾಡುತ್ತಿದ್ದ. ಕಂಪನಿಯೊಂದರ ಉದ್ಯೋಗಿ ಆಗಿರುವ ಮಗ ಕಲ್ಯಾಣ್‌ಕುಮಾರ್ ಸಹ ವ್ಯವಹಾರಕ್ಕೆ ಸಹಕರಿಸುತ್ತಿದ್ದ. ಜನರಿಗೆ ಸಾಲ ಕೊಡುತ್ತಿದ್ದ ಇವರಿಬ್ಬರು, ಹೆಚ್ಚು ಬಡ್ಡಿ ವಸೂಲಿ ಮಾಡುತ್ತಿದ್ದರು. ಈ ಬಗ್ಗೆ ಕೆಲವರು, ಸಹಕಾರ ಇಲಾಖೆಗೆ ದೂರು ನೀಡಿದ್ದರು' ಎಂದು ಹೇಳಿದರು.

'ಪರಿಶೀಲನೆ ನಡೆಸಿದ್ದ ಸಹಕಾರ ಇಲಾಖೆಯ ಅಧಿಕಾರಿಗಳು ದೂರು ನೀಡಿದ್ದರು. ಅದರನ್ವಯ ತಂದೆ–ಮಗನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಇಬ್ಬರಿಗೂ ನೋಟಿಸ್ ನೀಡಲಾಗಿದ್ದು, ಇದುವರೆಗೂ ವಿಚಾರಣೆಗೆ ಬಂದಿಲ್ಲ. ಬಂಧನ ಭೀತಿಯಲ್ಲಿ ತಲೆಮರೆಸಿಕೊಂಡಿದ್ದಾರೆ. ಇವರ ಪತ್ತೆಗಾಗಿ ಶೋಧ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಸಂಚಾರ ದಟ್ಟಣೆ

ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ 'ರಾಯಲ್ ಚಾಲೆಂಜರ್ಸ್ ಬೆಂಗಳೂರು' ಹಾಗೂ 'ಲಖನೌ ಸೂಪರ್ ಜೈಂಟ್ಸ್' ಕ್ರಿಕೆಟ್ ತಂಡಗಳ ನಡುವಿನ ಪಂದ್ಯ ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಕ್ರಿಕೆಟ್ ಅಭಿಮಾನಿಗಳು ಬಂದಿದ್ದರಿಂದ, ಎಂ.ಜಿ. ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಯಿತು.

ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಅಕ್ರಮ ವಾಸ: 10 ವಿದೇಶಿಯರ ಮನೆ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿರುವ ಮಾಹಿತಿ ಮೇರೆಗೆ 10 ವಿದೇಶಿಯರ ಮನೆಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಕೆಲವರನ್ನು ವಶಕ್ಕೆ ಪಡೆದಿದ್ದಾರೆ.

'ರಾಮಮೂರ್ತಿನಗರ, ಸೋಲದೇವನಹಳ್ಳಿ, ಕೆ.ಆರ್. ಪುರ, ಹೆಣ್ಣೂರು, ಕೆ.ಜಿ.ಹಳ್ಳಿ ಹಾಗೂ ಆರ್.ಟಿ. ನಗರ ಠಾಣೆ ವ್ಯಾಪ್ತಿಯಲ್ಲಿ ವಿದೇಶಿಯವರು ಅಕ್ರಮವಾಗಿ ವಾಸವಿದ್ದ ಮಾಹಿತಿ ಇತ್ತು. ಹೀಗಾಗಿ, ದಾಳಿ ಮಾಡಿ ಪರಿಶೀಲನೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು.

'ನೈಜೀರಿಯಾದ ಕೋವಾಸೆ ಎಂಬಾತನ ಮನೆಯಲ್ಲಿ ₹22 ಲಕ್ಷ ಮೌಲ್ಯದ 105 ಗ್ರಾಂ ಕೊಕೇನ್, 110 ಗ್ರಾಂ ಎಂಡಿಎಂಎ ಮಾತ್ರೆಗಳು ಸಿಕ್ಕಿವೆ. ಕೋವಾಸೆ ಒಂದೂವರೆ ವರ್ಷದಿಂದ ನಗರದಲ್ಲಿ ಅಕ್ರಮವಾಗಿ ವಾಸವಿದ್ದ. ಮಾದಕ ವಸ್ತು ಮಾರಾಟ ಮಾಡಿ ಹಣ ಸಂಪಾದಿಸುತ್ತಿದ್ದ' ಎಂದರು.

'10 ವಿದೇಶಿಯರ ದಾಖಲೆಗಳನ್ನು ಸುಪರ್ದಿಗೆ ಪಡೆದು ಪರಿಶೀಲನೆ ನಡೆಸಲಾಗುತ್ತಿದೆ. ಬಹುತೇಕರು ಅಕ್ರಮವಾಗಿ ವಾಸವಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ತಿಳಿಸಿದರು.

ಹಲ್ಲೆ: ವಿಡಿಯೊ ಆಧರಿಸಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರವರ್ತುಲ ರಸ್ತೆಯಲ್ಲಿ ವ್ಯಕ್ತಿಯೊಬ್ಬರನ್ನು ಅಡ್ಡಗಟ್ಟಿ ಕಬ್ಬಿಣದ ರಾಡ್‌ನಿಂದ ಹಲ್ಲೆ ಮಾಡಲಾಗಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಹೆಣ್ಣೂರು - ಬಾಣಸವಾಡಿ ನಡುವಿನ ಹೊರ ವರ್ತುಲ ರಸ್ತೆಯಲ್ಲಿ ಮಾರ್ಚ್ 31ರಂದು ಹಲ್ಲೆ ನಡೆದಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ಲಭ್ಯವಾಗಿದೆ.

ಹಲ್ಲೆಯ ವಿಡಿಯೊ ಕಾರಿನ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಅದೇ ದೃಶ್ಯವನ್ನು ವ್ಯಕ್ತಿಯೊಬ್ಬರು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ. ಅದನ್ನು ಹಂಚಿಕೊಂಡಿರುವ ಹಲವರು, 'ಬೆಂಗಳೂರಿನ ಜನರಿಗೆ ರಕ್ಷಣೆ ಇಲ್ಲದಂತಾಗಿದೆ. ದೃಶ್ಯ ನೋಡಿ ಆತಂಕ ಶುರುವಾಗಿದೆ' ಎಂದಿದ್ದಾರೆ.

ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಪೂರ್ವ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಜೈನ್, 'ವ್ಯಕ್ತಿಯೊಬ್ಬರ ಮೇಲೆ ಇಬ್ಬರು ಆರೋಪಿಗಳು ಹಲ್ಲೆ ಮಾಡಿರುವ ದೃಶ್ಯ ವಿಡಿಯೊದಲ್ಲಿದೆ. ವಿಡಿಯೊ ಆಧರಿಸಿ ಮಾಹಿತಿ ಕಲೆ ಹಾಕಲಾಗುತ್ತಿದೆ. ಗಾಯಾಳು ಹಾಗೂ ಹಲ್ಲೆ ಮಾಡಿದವರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಗಳನ್ನೂ ಪರಿಶೀಲಿಸಲಾಗುತ್ತಿದೆ' ಎಂದರು.

ಅಪರಾಧ ಸುದ್ದಿ

ಇ–ಕಾಮರ್ಸ್ ಕಂಪನಿ ವಿತರಕ ಸಾವು

ಬೆಂಗಳೂರು: ಬ್ಯಾಟರಾಯನಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿರುವ ಪೈಪ್ ಲೈನ್ ರಸ್ತೆಯಲ್ಲಿ ಸರಕು ಸಾಗಣೆ ವಾಹನ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಸವಾರ ಭೂತರಾಜ್ (34) ಮೃತಪಟ್ಟಿದ್ದಾರೆ. 'ತುಮಕೂರು ಜಿಲ್ಲೆಯ ಭೂತರಾಜ್, ಇ–ಕಾಮರ್ಸ್ ಕಂಪನಿಯೊಂದರ ವಸ್ತುಗಳನ್ನು ಗ್ರಾಹಕರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಹಳೇ ಗುಡ್ಡದಹಳ್ಳಿಯಿಂದ ಮೈಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಪೈಪ್‌ಲೈನ್ ರಸ್ತೆಯಲ್ಲಿ ಭೂತರಾಜ್ ಅವರು ಬೈಕ್‌ನಲ್ಲಿ ಹೊರಟಿದ್ದರು. ಇದೇ ಮಾರ್ಗದಲ್ಲಿ ಸರಕು ಸಾಗಣೆ ವಾಹನ ತೆರಳುತ್ತಿತ್ತು. ಚಾಲಕ, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ವಾಹನ ಚಲಾಯಿಸಿದ್ದ. ಇದರಿಂದಾಗಿ ವಾಹನ, ಬೈಕ್‌ಗೆ ಗುದ್ದಿತ್ತು.'

'ಬೈಕ್ ಸಮೇತ ಉರುಳಿ ಬಿದ್ದಿದ್ದ ಭೂತರಾಜ್ ಅವರ ಹೊಟ್ಟೆ ಹಾಗೂ ದೇಹದ ಇತರ ಭಾಗಗಳಿಗೆ ತೀವ್ರ ಪೆಟ್ಟಾಗಿತ್ತು. ರಸ್ತೆಯಲ್ಲಿ ನರಳುತ್ತಿದ್ದ ಅವರನ್ನು ಸ್ಥಳೀಯರು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದಿದ್ದರು. ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದ್ದರು' ಎಂದು ಪೊಲೀಸರು ಮಾಹಿತಿ ನೀಡಿದರು.

'ಸರಕು ಸಾಗಣೆ ವಾಹನ ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಅಪಘಾತದ ನಂತರ ಚಾಲಕ ವಾಹನ ಬಿಟ್ಟು ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಅಪಘಾತ: ಮಹಿಳಾ ಟೆಕಿ ಸಾವು

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಬೈಕ್ ಟ್ಯಾಕ್ಸಿ ಹಾಗೂ ಲಾರಿ ನಡುವೆ ಸೋಮವಾರ ರಾತ್ರಿ ಅಪಘಾತ ಸಂಭವಿಸಿದ್ದು, ಬೈಕ್‌ನ ಹಿಂಬದಿಯಲ್ಲಿ ಕುಳಿತಿದ್ದ ಸಾಫ್ಟ್‌ವೇರ್ ಎಂಜಿನಿಯರ್ ದೀಪಿಕಾ (27) ಎಂಬುವವರು ಮೃತಪಟ್ಟಿದ್ದಾರೆ.

'ದಾವಣಗೆರೆ ಜಿಲ್ಲೆಯ ದೀಪಿಕಾ, ನಗರದ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಚನ್ನಸಂದ್ರದಲ್ಲಿ ವಾಸವಿದ್ದರು. ಕೋರಮಂಗಲದಲ್ಲಿರುವ ಸ್ನೇಹಿತೆಯ ಮನೆಗೆ ಹೋಗಿದ್ದ ಅವರು, ಸೋಮವಾರ ರಾತ್ರಿ ತಮ್ಮ ಮನೆಗೆ ವಾಪಸು ಬರುತ್ತಿದ್ದಾಗ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ದೀಪಿಕಾ ಅವರು ಉಬರ್ ಆ್ಯಪ್ ಸಹಾಯದಿಂದ ಬೈಕ್ ಟ್ಯಾಕ್ಸಿ ಕಾಯ್ದಿರಿಸಿದ್ದರು. ಕೋರಮಂಗಲಕ್ಕೆ ಬಂದಿದ್ದ ಬೈಕ್ ಟ್ಯಾಕ್ಸಿ ಸವಾರ, ದೀಪಿಕಾ ಅವರನ್ನು ಹಿಂಬದಿಯಲ್ಲಿ ಕೂರಿಸಿಕೊಂಡು ಸ್ಥಳದಿಂದ ಹೊರಟಿದ್ದರು. ವರ್ತೂರು ಮುಖ್ಯರಸ್ತೆಯಲ್ಲಿ ತೆರಳುತ್ತಿದ್ದ ಟಿಪ್ಪರ್ ಲಾರಿ, ಬೈಕ್ ಟ್ಯಾಕ್ಸಿಗೆ ಡಿಕ್ಕಿ ಹೊಡೆದಿತ್ತು.'

'ಬೈಕ್ ಸಮೇತ ಉರುಳಿ ಬಿದ್ದಿದ್ದ ದೀಪಿಕಾ ಅವರಿಗೆ ತೀವ್ರ ಪೆಟ್ಟು ಬಿದ್ದಿತ್ತು. ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ. ಬೈಕ್ ಸವಾರನಿಗೆ ಗಾಯವಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾನೆ' ಎಂದು ತಿಳಿಸಿದರು. 'ಲಾರಿ ಚಾಲಕನ ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಪ್ರಕರಣ ದಾಖಲಿಸಿಕೊಂಡು ಚಾಲಕನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಆ್ಯಪ್ ಮೂಲಕ ಗಾಂಜಾ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿರುವ ಸಿಸಿಬಿ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

'ಕೇರಳದ ಶಿವಕೃಷ್ಣ (32) ಹಾಗೂ ರೋಷನ್ (28) ಬಂಧಿತರು. ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರನ್ನೂ ಬಂಧಿಸಲಾಗಿದ್ದು, ಇವರಿಂದ ₹ 16.50 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಇಬ್ಬರ ವಿರುದ್ಧವೂ ಮೈಕೊ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ಹೇಳಿದರು.

'ವಿದೇಶಿ ಪೆಡ್ಲರ್‌ವೊಬ್ಬನನ್ನು ಆ್ಯಪ್ ಮೂಲಕ ಸಂಪರ್ಕಿಸುತ್ತಿದ್ದ ಶಿವಕೃಷ್ಣ, ಆನ್‌ಲೈನ್ ಮೂಲಕ ಹಣ ನೀಡಿ ಗಾಂಜಾ ಖರೀದಿಸುತ್ತಿದ್ದ. ಅದೇ ಗಾಂಜಾವನ್ನು ನಗರಕ್ಕೆ ತರಿಸಿಕೊಂಡು ಪರಿಚಯಸ್ಥ ಗ್ರಾಹಕರಿಗೆ ಮಾತ್ರ ಮಾರುತ್ತಿದ್ದ. ಈತನಿಂದ 5 ಕೆ.ಜಿ 180 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದರು.

'ಮತ್ತೊಂದು ಪ್ರಕರಣದಲ್ಲಿ ಬಂಧಿಸಲಾಗಿರುವ ರೋಷನ್, ಗಾಂಜಾವನ್ನು ಗುಜರಿ ಮಳಿಗೆಯೊಂದರಲ್ಲಿ ಸಂಗ್ರಹಿಸಿಟ್ಟು ಮಾರುತ್ತಿದ್ದ. ಈತನಿಂದ 200 ಕೆ.ಜಿ ಗಾಂಜಾ, 2 ಮೊಬೈಲ್, ಬೈಕ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಅನ್ಯರ ಹಸ್ತಕ್ಷೇಪಕ್ಕೆ ತಕ್ಕ ಉತ್ತರ: ಸಚಿವ ಜೈಶಂಕರ್

ಅಹಮದಾಬಾದ್(ಪಿಟಿಐ): ಭಾರತದ ಆಂತರಿಕ ವಿಷಯಗಳ ಕುರಿತು ಅನಗತ್ಯ ರಾಜಕೀಯ ಪ್ರೇರಿತ ಹೇಳಿಕೆ ನೀಡುವ ದೇಶಗಳಿಗೆ ಕಠಿಣ ಎಚ್ಚರಿಕೆ ನೀಡಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್, 'ಇಂತಹ ಹಸ್ತಕ್ಷೇಪಗಳಿಗೆ ಬಲವಾದ ಪ್ರತ್ಯುತ್ತರ ನೀಡಲಾಗುವುದು' ಎಂದು ಮಂಗಳವಾರ ಹೇಳಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯ ಬಂಧಿಸಿರುವ ವಿಚಾರವಾಗಿ ಇತ್ತೀಚೆಗೆ ಅಮೆರಿಕ, ಜರ್ಮನಿ ಹಾಗೂ ವಿಶ್ವಸಂಸ್ಥೆಯ ರಾಯಭಾರಿಗಳು ನೀಡಿದ್ದ ಹೇಳಿಕೆಗಳ ಹಿನ್ನೆಲೆಯಲ್ಲಿ ಅವರು ಅಂತರರಾಷ್ಟ್ರೀಯ ಸಮುದಾಯಕ್ಕೆ ಈ ಎಚ್ಚರಿಕೆ ನೀಡಿದ್ದಾರೆ.

ರಾಯಭಾರಿಗಳ ಈ ಹೇಳಿಕೆಗಳಿಗೆ ಸಂಬಂಧಿಸಿ ಭಾರತ ಪ್ರತಿಭಟನೆ ದಾಖಲಿಸಿತ್ತು.

'ಕೇಜ್ರಿವಾಲ್ ಬಂಧನ ಕುರಿತು ವಿಶ್ವಸಂಸ್ಥೆ ಪ್ರತಿನಿಧಿಯೊಬ್ಬರಿಗೆ ಯಾರೋ ಪ್ರಶ್ನಿಸಿದರು. ಅದಕ್ಕೆ ಅವರು ಏನೋ ಉತ್ತರ ನೀಡಿದ್ದರು. ಇತರ ಹಲವು ಪ್ರಕರಣಗಳಿಗೆ ಈ ಹಿಂದೆಯೂ ಪ್ರತಿಕ್ರಿಯೆಗಳನ್ನು ನೀಡಲಾಗಿದೆ. ಆದರೆ, ಈ ರೀತಿ ಹೇಳಿಕೆ ನೀಡುವುದು ಹಳೆಯ ಮತ್ತು ಕೆಟ್ಟ ಚಾಳಿ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಎಸ್.ಜೈಶಂಕರ್

'ಪ್ರತಿಯೊಂದು ದೇಶದ ಸಾರ್ವಭೌಮತ್ವವನ್ನು ಗೌರವಿಸುವುದು ಮುಖ್ಯ' ಎಂದ ಅವರು, 'ದೇಶಗಳು ಪರಸ್ಪರರ ಆಂತರಿಕ ವಿಚಾರಗಳಲ್ಲಿ ಮೂಗು ತೂರಿಸಬಾರದು' ಎಂದೂ ಹೇಳಿದರು.

'ಜಾಗತಿಕ ವಿದ್ಯಮಾನಗಳ ಕುರಿತು ನಿಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಎಂದು ಎಲ್ಲ ದೇಶಗಳಿಗೆ ನಾನು ಒತ್ತಾಯಿಸುತ್ತೇನೆ. ಆದರೆ, ಇತರ ದೇಶಗಳ ರಾಜಕೀಯ ಆಗುಹೋಗುಗಳ ಬಗ್ಗೆ ವಿಶೇಷವಾಗಿ ಇಂತಹ ಸನ್ನಿವೇಶಗಳ ಕುರಿತು ಹೇಳಿಕೆ ನೀಡುವುದಕ್ಕೆ ಯಾವುದೇ ದೇಶಕ್ಕೆ ಹಕ್ಕಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತೇನೆ' ಎಂದರು.

'ಅಂತರರಾಷ್ಟ್ರೀಯ ಸಂಬಂಧಗಳ ವಿಷಯ ಬಂದಾಗ, ಕೆಲ ಶಿಷ್ಟಾಚಾರಗಳು, ಸಂಪ್ರದಾಯಗಳು ಹಾಗೂ ಒಪ್ಪಂದಗಳಿರುತ್ತವೆ. ಅವುಗಳನ್ನು ಎಲ್ಲ ದೇಶಗಳು ಪಾಲನೆ ಮಾಡುವುದು ಮುಖ್ಯ' ಎಂದರು.

ಇಸ್ರೇಲ್‌ಗೆ ತೆರಳಿದ ಕಟ್ಟಡ ಕಾರ್ಮಿಕರ ಮೊದಲ ತಂಡ

ನವದೆಹಲಿ: 60 ಜನರಿರುವ ಕಟ್ಟಡ ಕಾರ್ಮಿಕ ಮೊದಲ ತಂಡ ಇಸ್ರೇಲ್‌ಗೆ ಮಂಗಳವಾರ ಪ್ರಯಾಣ ಬೆಳೆಸಿದೆ. ನೇಮಕಗೊಂಡಿರುವ ಈ 60 ಜನ ಕಟ್ಟಡ ಕಾರ್ಮಿಕರಿಗಾಗಿ ಇಲ್ಲಿನ ಇಸ್ರೇಲ್ ರಾಯಭಾರ ಕಚೇರಿ ಬೀಳ್ಕೊಡುವ ಸಮಾರಂಭ ಹಮ್ಮಿಕೊಂಡಿತ್ತು. ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮವು ಈ ಕಾರ್ಮಿಕರಿಗೆ ತರಬೇತಿ ನೀಡಿದೆ.

'ಉಭಯ ದೇಶಗಳ ಸರ್ಕಾರದ ನಡುವೆ ಆಗಿರುವ ಒಪ್ಪಂದದಂತೆ, ಕಟ್ಟಡ ಕಾರ್ಮಿಕರ ಮೊದಲ ತಂಡವನ್ನು ಬೀಳ್ಕೊಡಲಾಯಿತು. ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮ ಹಾಗೂ ಹಲವು ಸಂಸ್ಥೆಗಳ ಪರಿಶ್ರಮದ ಫಲವಾಗಿ ಈ ನೇಮಕಾತಿ ನಡೆದಿದೆ' ಎಂದು ಭಾರತದಲ್ಲಿನ ಇಸ್ರೇಲ್ ರಾಯಭಾರಿ ನವೋರ್ ಗಿಲನ್ ಹೇಳಿದ್ದಾರೆ.

ಮುಂದಿನ ಕೆಲವು ವಾರಗಳಲ್ಲಿ 1,500 ಕಾರ್ಮಿಕರು ಇಸ್ರೇಲ್‌ಗೆ ತೆರಳಲಿದ್ದಾರೆ ಎಂದು ಮೂಲಗಳು ಹೇಳಿವೆ. ಹಮಾಸ್ ಬಂಡುಕೋರರ ವಿರುದ್ಧ ಯುದ್ಧ ಮುಂದುವರಿದಿರುವ ನಡುವೆಯೇ, ಭಾರತದಿಂದ ಕಾರ್ಮಿಕರು ಇಸ್ರೇಲ್‌ಗೆ ತೆರಳಿದ್ದು ಗಮನಾರ್ಹ. ಯುದ್ಧ ಆರಂಭಗೊಂಡ ನಂತರ, ಪ್ಯಾಲೆಸ್ಟೀನಿಯನ್ನರಿಗೆ ಇಸ್ರೇಲ್‌ನ ಕಟ್ಟಡ ನಿರ್ಮಾಣ ಕ್ಷೇತ್ರದಲ್ಲಿ ಉದ್ಯೋಗ ನೀಡುತ್ತಿಲ್ಲ.

ಒಂದು ವರ್ಷದಿಂದ ಸ್ಥಗಿತಗೊಂಡಿರುವ ಅಭಿವೃದ್ಧಿ ಕಾಮಗಾರಿಗಳು

ಅಧ್ವಾನವಾದ ಜೆ.ಪಿ. ಉದ್ಯಾನ

• ಖಲೀಲಅಹ್ಮದ ಶೇಖ

ಬೆಂಗಳೂರು: ಮುರಿದಿರುವ ಆಟಿಕೆ ಪರಿಕರಗಳು, ಬತ್ತಿದ ಕೆರೆ, ಒಣಗಿದ ಗಿಡಮರಗಳು, ಅಲ್ಲಲ್ಲಿ ಕಿತ್ತುಹೋದ ನಡಿಗೆ ಪಥ, ನೆಪಮಾತ್ರಕ್ಕೆ ಇರುವ ಕಸದ ಬುಟ್ಟಿಗಳು...

ಇದು ಜೀವವೈವಿಧ್ಯದ ತಾಣವಾಗಿದ್ದ ಮತ್ತಿಕೆರೆಯ ಜಯಪ್ರಕಾಶ ನಾರಾಯಣ (ಜೆ.ಪಿ) ಉದ್ಯಾನ ದುಃಸ್ಥಿತಿ. ಸದ್ಯ ಈ ಉದ್ಯಾನ ತನ್ನ ಹಳೆಯ ವೈಭವವನ್ನು ಕಳೆದುಕೊಂಡಿದೆ. ಶುದ್ಧಗಾಳಿಯೊಂದಿಗೆ ವಾಯುವಿಹಾರ ಮಾಡುತ್ತಿದ್ದ ಜನರೀಗ ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ಉದ್ಯಾನದ ತುಂಬೆಲ್ಲ ದೂಳು ತುಂಬಿಕೊಂಡಿದೆ.

ಉದ್ಯಾನದ ಒಳಗೆ ಕಾಲಿಟ್ಟ ಕೂಡಲೇ ಎದುರುಗೊಳ್ಳುತ್ತಿದ್ದ ದಟ್ಟ ಹಸಿರು ಈಗ ಕಣ್ಮರೆಯಾಗಿದೆ. ಪ್ರಾಣಿಗಳು ಮತ್ತು ಜಾನಪದ ಸಂಸ್ಕೃತಿಯನ್ನು ಪ್ರತಿ-ಬಿಂಬಿಸುತ್ತಿದ್ದ ಕಲಾಕೃತಿಗಳಿಗೂ ಮಣ್ಣು ಮೆತ್ತಿಕೊಂಡಿದೆ. ಸಂಗೀತ ಕಾರಂಜಿ ಹಾಳಾಗಿದೆ.

ಜೆ.ಪಿ. ಉದ್ಯಾನದ ಮುಖ್ಯ ದ್ವಾರದ ಮುಂಭಾಗದಲ್ಲಿರುವ ಪುಟಾಣಿ ರೈಲು ಇನ್ನೂ ಹಳಿಗೆ ಇಳಿದಿಲ್ಲ. ಉದ್ಯಾನದಲ್ಲಿ ಹಳಿಗಳನ್ನು ಜೋಡಿಸುವ ಕೆಲಸ ನಡೆಯುತ್ತಿರುವ ಕಾರಣ ಚಿಣ್ಣರಿಗೆ ಇದರ ಸೌಲಭ್ಯ ಸಿಗುತ್ತಿಲ್ಲ.

'ಜೆ.ಪಿ. ಉದ್ಯಾನವು 85 ಎಕರೆ ಪ್ರದೇಶದಲ್ಲಿ ಹರಡಿಕೊಂಡಿದೆ. 2018–19ರಲ್ಲಿ 'ಮುಖ್ಯಮಂತ್ರಿಗಳ ನಗರೋತ್ಥಾನ' ಕ್ರಿಯಾ ಯೋಜನೆಯ ಅಡಿಯಲ್ಲಿ ₹37.50 ಕೋಟಿ ಅನುದಾನದಲ್ಲಿ ಇದರ ಅಭಿವೃದ್ಧಿ ಕಾಮಗಾರಿಯನ್ನು ಪ್ರಾರಂಭಿಸಲಾಗಿತ್ತು. ಇದರಲ್ಲಿ ಪಾದಚಾರಿ ಮಾರ್ಗ, ಕೆರೆ ಅಭಿವೃದ್ಧಿಯ, ಕಲ್ಯಾಣಿ ನಿರ್ಮಾಣ, ಸಾರ್ವಜನಿಕರ ಮನೋರಂಜನೆಗೆ ಪುಟಾಣಿ ರೈಲು ಮಾರ್ಗ, ಸೇರಿದಂತೆ ಉದ್ಯಾನದ ವಿದ್ಯುದೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

ನಾಲ್ಕೈದು ವರ್ಷಗಳ ಹಿಂದೆಯೇ ಕಾಮಗಾರಿಗಳನ್ನು ಪ್ರಾರಂಭಿಸಿದ್ದರೂ, ಇನ್ನೂ ಮುಗಿದಿಲ್ಲ. ಸದ್ಯ ಲೋಕಸಭಾ ಚುನಾವಣೆ ನೀತಿಸಂಹಿತೆ ಜಾರಿಯಲ್ಲಿರುವ ಕಾರಣ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ. ಉದ್ಯಾನದ ವಿವಿಧ ಭಾಗಗಳಲ್ಲಿ ಹಳೆಯ ಉಪಕರಣಗಳು ಬಿದ್ದಿದ್ದು, ಉದ್ಯಾನದ ಸೌಂದರ್ಯಕ್ಕೆ ಕಪ್ಪುಚುಕ್ಕೆ ಆಗಿದೆ. ಶಿಲಾವನ ಭಾಗದಲ್ಲಿ ಒಳಚರಂಡಿ ಕಾಮಗಾರಿ ನಡೆಯುತ್ತಿದ್ದು, ಕೊಳಚೆ ನೀರು ಕಟ್ಟಿಕೊಂಡು ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ.

'ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಈಜುಕೊಳ ಮತ್ತು ಗೋಪುರದಲ್ಲಿರುವ ಗಡಿಯಾರ ಕಾರ್ಯ ನಿರ್ವಹಿಸುತ್ತಿಲ್ಲ. ಶೌಚಾಲಯಗಳು ಗಬ್ಬೆದ್ದಿವೆ. ಮೊದಲು ಜೆ.ಪಿ. ಉದ್ಯಾನವೆಂದರೆ ಮಕ್ಕಳಿಗೆ ಅಚ್ಚು ಮೆಚ್ಚಾಗಿತ್ತು. ಜೋಕಾಲಿ, ಜಾರುಬಂಡೆ, ಆಟಿಕೆಗಳು, ಸಂಗೀತ ಕಾರಂಜಿ ಮಕ್ಕಳನ್ನು ಆಕರ್ಷಿಸುತ್ತಿದ್ದವು. ಈಗ ಉದ್ಯಾನದಲ್ಲಿದ್ದ ಎಲ್ಲ ಆಟಿಕೆಗಳನ್ನು ಕಿತ್ತು ಹಾಕಲಾಗಿದೆ' ಎಂದು ಮತ್ತೀಕೆರೆ ನಿವಾಸಿ ರಾಹುಲ್ ಬೇಸರ ವ್ಯಕ್ತಪಡಿಸಿದರು.

ಜೆ.ಪಿ. ಉದ್ಯಾನದಲ್ಲಿರುವ ಮಕ್ಕಳ ಆಟಿಕೆಗಳನ್ನು ಕಿತ್ತು ಹಾಕಿರುವುದು

ಪ್ರಜಾವಾಣಿ ಚಿತ್ರಗಳು/ರಂಜು ಪಿ.

ಅರ್ಧಕ್ಕೆ ನಿಂತ ರೈಲು ಹಳಿಯ ಕಾಮಗಾರಿ

'ಉದ್ಯಾನದಲ್ಲಿ ಸ್ವಚ್ಛತೆ ಕಣ್ಮರೆ'

ಪಿ.ವಿ. ಕೊಣ್ಣೂರ

ಜೆ.ಪಿ. ಉದ್ಯಾನದ-ಲ್ಲಿದ್ದ ಸ್ವಚ್ಛತಾ ಸಿಬ್ಬಂದಿ ಸಂಖ್ಯೆ ಕಡಿತಗೊಳಿಸಲಾಗಿದೆ. ಇದರಿಂದ, ಉದ್ಯಾನದಲ್ಲಿನ ಸ್ವಚ್ಛತೆಯೂ ಕಣ್ಮರೆ ಆಗಿದೆ' ಎಂದು ಜೆ.ಪಿ. ಪಾರ್ಕ್ ವೆಲ್ಫೇರ್ ಅಸೋಸಿಯೇಷನ್ ಸದಸ್ಯ ಪಿ.ವಿ. ಕೊಣ್ಣೂರು ದೂರಿದರು.

'ಉದ್ಯಾನದಲ್ಲಿದ್ದ ಎಲ್ಲ ಆಟಿಕೆಗಳನ್ನು ಕಿತ್ತು ಹಾಕಲಾಗಿದೆ. ಇದರಿಂದ ಉದ್ಯಾನಕ್ಕೆ ಬರುತ್ತಿದ್ದ ಮಕ್ಕಳ ಸಂಖ್ಯೆ ಕಡಿಮೆ ಆಗಿದೆ. ಕಳೆದ ಒಂದು ವರ್ಷದಿಂದ ಉದ್ಯಾನದಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಸ್ಥಗಿತಗೊಳಿಸ-ಲಾಗಿದೆ' ಎಂದರು.

ಆಸಿಡ್ ದಾಳಿ: ₹5 ಲಕ್ಷ ಪರಿಹಾರಕ್ಕೆ ಸೂಚನೆ

ನವದೆಹಲಿ (ಪಿಟಿಐ): ಆ್ಯಸಿಡ್ ದಾಳಿಯಿಂದ ದೃಷ್ಟಿ ಕಳೆದುಕೊಂಡ ಇಬ್ಬರಿಗೆ ತಲಾ ₹5 ಲಕ್ಷ ಪರಿಹಾರ ನೀಡುವಂತೆ ದೆಹಲಿ ಹೈಕೋರ್ಟ್ ಅಧಿಕಾರಿಗಳಿಗೆ ಸೂಚಿಸಿತು. 2009ರಲ್ಲಿ ಇಬ್ಬರು ಮಹಿಳೆಯರ ಮೇಲೆ ಆ್ಯಸಿಡ್ ಎರಚಿದ್ದ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಖುಲಾಸೆಗೊಳಿಸಿದ ವಿಚಾರಣಾ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸಂತ್ರಸ್ತೆಯರು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಕೋರ್ಟ್ ಮಂಗಳವಾರ ಈ ನಿರ್ದೇಶನ ನೀಡಿತು.

ಆಸ್ತಿ ತೆರಿಗೆ ಸಂಗ್ರಹದಲ್ಲಿ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ 2023-24ನೇ ಸಾಲಿನಲ್ಲಿ ದಾಖಲೆ ಮೊತ್ತದ ಆಸ್ತಿ ತೆರಿಗೆ ಸಂಗ್ರಹಿಸಿದ್ದರೂ, ಹಿಂದಿನ ವರ್ಷಗಳಂತೆಯೇ ಗುರಿ ತಲುಪುವಲ್ಲಿ ವಿಫಲವಾಗಿದೆ.

2022–23ನೇ ಸಾಲಿಗಿಂತ ₹560 ಕೋಟಿ ಹೆಚ್ಚು ಸಂಗ್ರಹವಾಗಿದ್ದರೂ, ₹4,558 ಕೋಟಿಯ ಗುರಿ ತಲುಪುವಲ್ಲಿ ₹658 ಕೋಟಿಯಷ್ಟು ಹಿಂದೆ ಉಳಿದಿದೆ. ಮಹದೇವಪುರ ವಲಯ ₹1,000 ಕೋಟಿಗೂ ಹೆಚ್ಚು ಆಸ್ತಿ ತೆರಿಗೆಯನ್ನು ಪ್ರಥಮ ಬಾರಿಗೆ ಸಂಗ್ರಹಿಸಿದೆ.

ಮುನೀಶ್ ಮೌದ್ಗಿಲ್ ಅವರು ಕಂದಾಯ ವಿಭಾಗದ ವಿಶೇಷ ಆಯುಕ್ತರಾಗಿ ಬಂದಮೇಲೆ ತೆರಿಗೆ ಸಂಗ್ರಹಕ್ಕೆ ಹೆಚ್ಚಿನ ಒತ್ತು ನೀಡಲಾಗಿತ್ತು. ತೆರಿಗೆ ಬಾಕಿದಾರರಿಗೆ ಎಸ್‌ಎಂಎಸ್ ಕಳುಹಿಸುವುದು, ಹೆಚ್ಚಿನ ಪ್ರಮಾಣದಲ್ಲಿ ಬಾಕಿ ಉಳಿಸಿಕೊಂಡ ವಾಣಿಜ್ಯ ಕಟ್ಟಡಗಳಿಗೆ ಬೀಗ, ಜಪ್ತಿಯಂತಹ ಪ್ರಕ್ರಿಯೆಗೆ ಚಾಲನೆ ನೀಡಿದ್ದರು. ಆದರೂ, ಆಸ್ತಿ ತೆರಿಗೆ ಸಂಗ್ರಹ ನಿರೀಕ್ಷಿತ ಮಟ್ಟದಲ್ಲಿ ಹೆಚ್ಚಾಗಿಲ್ಲ.



'ಕಂದಾಯ ವಿಭಾಗದ ಸಿಬ್ಬಂದಿಗೆ ಹೆಚ್ಚಿನ ಒತ್ತಡ ಹಾಕಿ ತೆರಿಗೆ ಸಂಗ್ರಹಿಸಲಾಗುತ್ತಿದೆ. ಚುನಾವಣೆ ಕೆಲಸದ ನಡುವೆಯೂ ಕಟ್ಟಡಗಳಿಗೆ ಬೀಗ ಹಾಕಿ ತೆರಿಗೆ ವಸೂಲಿ ಮಾಡುವಂತೆ ಸೂಚಿಸಲಾಗುತ್ತಿದೆ' ಎಂದು ಬಿಬಿಎಂಪಿ ಕಂದಾಯ ವಿಭಾಗದ ಸಿಬ್ಬಂದಿ ದೂರಿದ್ದರು.

'ಕಂದಾಯ ವಿಭಾಗದ ಸಿಬ್ಬಂದಿಯ ಮೂಲ ಕಾರ್ಯವೇ ತೆರಿಗೆ ಸಂಗ್ರಹ, ಅದನ್ನು ಪಾಲಿಸಲೇಬೇಕು. ಗುರಿ ತಲುಪಲೇಬೇಕು' ಎಂದು ಕಂದಾಯ ವಿಭಾಗದ ಅಧಿಕಾರಿಗಳು ಸೂಚಿಸಿದ್ದರು. ಹೆಚ್ಚಿನ ದಂಡ ಹಾಗೂ ಶುಲ್ಕ ವಿಧಿಸಲೂ ಆದೇಶಿಲಾಗಿತ್ತು. ಇದಕ್ಕೆ ನಾಗರಿಕರಿಂದ ಆಕ್ಷೇಪ ವ್ಯಕ್ತವಾದ ಮೇಲೆ, ಸರ್ಕಾರ ದಂಡವನ್ನು ಕಡಿಮೆ ಮಾಡಿತ್ತು. ಬಡ್ಡಿ ಮೊತ್ತವನ್ನು ಉಳಿಸಿ, ಆಸ್ತಿ ತೆರಿಗೆಯ-ನ್ನಾದರೂ ಪೂರ್ಣ ಪಾವತಿಸಿ ಎಂದೆಲ್ಲ ಅವಕಾಶ ಮಾಡಿಕೊಡಲಾಗಿತ್ತು. ಆದರೂ, ತೆರಿಗೆ ಸಂಗ್ರಹದಲ್ಲಿ ನಿರೀಕ್ಷಿತ ಹೆಚ್ಚಳ ಕಂಡುಬಂದಿಲ್ಲ.

'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ'ಗೆ ಕೃತಿಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾಭಿಮಾನಿ ಕರ್ನಾಟಕ ವೇದಿಕೆಯು 'ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ'ಗೆ ಲೇಖಕರು ಮತ್ತು ಪ್ರಕಾಶಕರಿಂದ ಕೃತಿಗಳನ್ನು ಆಹ್ವಾನಿಸಿದೆ.

2023ರಲ್ಲಿ ಪ್ರಕಟಗೊಂಡ ಕಥೆ, ಕಾದಂಬರಿ, ಕವಿತೆ, ಲೇಖನ, ಮಕ್ಕಳ ಸಾಹಿತ್ಯ, ನಾಟಕ ಸೇರಿ ಸಾಹಿತ್ಯದ ವಿವಿಧ ಪ್ರಕಾರಗಳ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ.

ನಾಲ್ಕು ಪ್ರಕಾರಗಳಲ್ಲಿ ನಾಲ್ಕು ಕೃತಿಗಳನ್ನು ಆಯ್ಕೆ ಮಾಡಿ, ತಲಾ ₹5 ಸಾವಿರ ನಗದು ಮತ್ತು ಪ್ರಶಸ್ತಿಯನ್ನು ನೀಡಲಾಗುತ್ತದೆ.

ಪುಸ್ತಕದ ಮೂರು ಪ್ರತಿಗಳನ್ನು ಮೇ 5ರೊಳಗೆ ದ್ವಾರನಕುಂಟೆ ಪಾತಣ್ಣ, ಅಧ್ಯಕ್ಷರು, ಸ್ವಾಭಿಮಾನಿ ಕರ್ನಾಟಕ ವೇದಿಕೆ, ನಂ.118, ಹೊಂಬೆಳಕು, ಎಚ್.ಎಂ.ಟಿ. ಲೇಔಟ್, ನಾಗಸಂದ್ರ ಅಂಚೆ, ಬೆಂಗಳೂರು–560073 ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9686073837

ಬಿಸಿಲ ಬೇಗೆ

ಬಿಸಿಲ ಝಳದಿಂದ ಪಾರಾಗಲು ಯುವತಿಯರು ತಲೆಯ ಮೇಲೆ ದುಪ್ಪಟ್ಟ ಹೊದ್ದು ಸಾಗಿದ ದೃಶ್ಯ ನಗರದ ಅರಮನೆ ಮೈದಾನದ ಬಳಿ ಮಂಗಳವಾರ ಕಂಡುಬಂತು.

ಪ್ರಜಾವಾಣಿ ಚಿತ್ರ/ ಬಿ.ಕೆ.ಜನಾರ್ದನ್

'ಕಲ್ಯಾಣ ಕರ್ನಾಟಕ: ಜ್ಯೇಷ್ಠತೆ ಪ್ರತ್ಯೇಕವಾಗಿ ಪರಿಗಣಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಯಾಣ ಕರ್ನಾಟಕ ವಲಯಕ್ಕೆ ಸಂಬಂಧಿಸಿದ ಹುದ್ದೆಗಳ ನೇಮಕಾತಿ ಮತ್ತು ಮುಂಬಡ್ತಿ ಸಂದರ್ಭದಲ್ಲಿ, ಆಯಾ ನೌಕರರ ಜ್ಯೇಷ್ಠತೆಯನ್ನು ಪ್ರತ್ಯೇಕವಾಗಿ ಪರಿಗಣಿಸಬೇಕೆಂಬ ನಿಯಮವಿದೆ. ಆದರೆ, ಆ ನಿಯಮ ಪಾಲನೆ ಆಗುತ್ತಿಲ್ಲ' ಎಂದು ಹಸಿರು ಪ್ರತಿಷ್ಠಾನ ದೂರಿದೆ.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಪ್ರತಿಷ್ಠಾನದ ಅಧ್ಯಕ್ಷ ಕೆ.ಜಿ. ಕುಮಾರ್, 'ಸಂವಿಧಾನಕ್ಕೆ 371–ಜೆ ಅಡಿ ತಿದ್ದುಪಡಿ ಮಾಡುವುದರ ಮೂಲಕ ಶಿಕ್ಷಣ, ಉದ್ಯೋಗ ಮತ್ತು ಇತರ ವಿಷಯಗಳಲ್ಲಿ ಕಲ್ಯಾಣ ಕರ್ನಾಟಕ ಭಾಗಕ್ಕೆ ಪ್ರತ್ಯೇಕ ಮೀಸಲಾತಿ ನೀಡಲಾಗಿದೆ. ಇದರಿಂದ ರಾಜ್ಯದ ಇತರೆ ಭಾಗದವರು ಯಾವುದೇ ಆಕ್ಷೇಪ ವ್ಯಕ್ತಪಡಿಸಿಲ್ಲ. ಆದರೆ, ರಾಜ್ಯ ಸರ್ಕಾರವು 371–ಜೆ ಅಡಿ ಅನೇಕ ಸರ್ಕಾರಿ ಆದೇಶಗಳನ್ನು ಹೊರಡಿಸಿ, ರಾಜ್ಯಮಟ್ಟದ ವ್ಯಾಪ್ತಿಯಲ್ಲಿ ಇಲ್ಲದ ಬಿಬಿಎಂಪಿ, ಬಿಡಿಎ ಕಚೇರಿಗಳಲ್ಲಿನ ಹುದ್ದೆಗಳ ನೇಮಕಾತಿ ಸಂದರ್ಭದಲ್ಲಿ ಶೇ 8ರಷ್ಟು ಮೀಸಲಾತಿ ನೀಡುವುದರ ಮೂಲಕ ರಾಜ್ಯದ ಬೇರೆ ವಿಭಾಗದ ಜನರಿಗೆ ಅನ್ಯಾಯ ಮಾಡಲಾಗುತ್ತಿದೆ' ಎಂದು ಆರೋಪಿಸಿದರು.

'ಕಲ್ಯಾಣ ಕರ್ನಾಟಕ ವಲಯದಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಪ್ರತ್ಯೇಕವಾಗಿ (ಇತರೆ ಕರ್ನಾಟಕದ ಭಾಗದ ಖಾಲಿ ಹುದ್ದೆಗಳನ್ನು ಬಿಟ್ಟು) ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಅಲ್ಲದೆ, ಇತರೆ ಕರ್ನಾಟಕ ಭಾಗದ ನೌಕರರನ್ನು ಭರ್ತಿ ಮಾಡದೇ ಕೇವಲ ಕಲ್ಯಾಣ ಕರ್ನಾಟಕದ ಅಭ್ಯರ್ಥಿಗಳನ್ನಷ್ಟೆ ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಇದರಿಂದ, ಎಲ್ಲ ಇಲಾಖೆಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ನೌಕರರು ಜ್ಯೇಷ್ಠತೆಯಲ್ಲಿ ಹಿರಿಯರಾಗಿ ಎಲ್ಲ ಉನ್ನತ ಹುದ್ದೆಗಳಿಗೆ ನೇಮಕಗೊಳ್ಳುತ್ತಿದ್ದಾರೆ' ಎಂದರು.

ಇತಿಹಾಸಕಾರ ತಲಕಾಡು ಚಿಕ್ಕರಂಗೇಗೌಡ, ಪ್ರತಿಷ್ಠಾನದ ಉಪಾಧ್ಯಕ್ಷ ಲಕ್ಷ್ಮೀ ಶ್ರೀನಿವಾಸ್, ಪೋಷಕ ಕೆ.ಸಿ. ಶಿವರಾಂ, ಸಂಚಾಲಕರಾದ ಮಂಜುನಾಥ ರೆಡ್ಡಿ, ಜೆ.ಪಿ. ಕಾಡೇಗೌಡ, ಕೆ. ಪ್ರಕಾಶ್ ಗೌಡ, ಶಾಂತಲಾ ಸುರೇಶ್ ಅವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಮಹಿಳಾ ದಿನಾಚರಣೆ ಮತ್ತು ಪತ್ರಕರ್ತೆಯರು, ಸಾಧಕಿಯರಿಗೆ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಪುರಸ್ಕೃತರು: ಗಾಯತ್ರಿ ಚಂದ್ರಶೇಖರ್, ಅನಿತಾ ಎಚ್., ರೂಪಾ ಎಂ.ವಿ., ಕಾತ್ಯಾಯನಿ ಚಾಮರಾಜ್, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಅತಿಥಿಗಳು: ನಾಗಾಂಬಿಕಾ ದೇವಿ, ಬೃಂದಾ ಅಡಿಗೆ, ಉಪಸ್ಥಿತಿ: ಟಿ. ಜವರೇಗೌಡ, ಆನಂದ್ ಕುಮಾರ್, ವಿಜಯಲಕ್ಷ್ಮಿ, ಎನ್. ನರಸಿಂಹಮೂರ್ತಿ, ಪದ್ಮಾ ಶಿವಮೊಗ್ಗ, ಮಂಜುಶ್ರೀ ಕಡಕೋಳ, ಆಯೋಜನೆ: ಕರ್ನಾಟಕ ಪತ್ರಕರ್ತೆಯರ ಸಂಘ, ಸ್ಥಳ: ಸೆಮಿನಾರ್ ಹಾಲ್, ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಮೈಸೂರು ಬ್ಯಾಂಕ್ ವೃತ್ತ, ಬೆಳಿಗ್ಗೆ 10.30

ಸಾಹಿತ್ಯ ಸಾಂಸ್ಕೃತಿಕ ಹಬ್ಬ: 'ಕನ್ನಡ ನಾಡು–ನುಡಿ' ಕುರಿತು ಕವಿಗೋಷ್ಠಿ: ಮಹೇಶ ಜೋಶಿ, ಟಿ. ತಿಮ್ಮೇಶ್, ಅತಿಥಿಗಳು: ಕೆ. ಸೋಮಶೇಖರ್, ವಿಶಾಲ್ ರಘು ಎಚ್.ಎಲ್., ಅಧ್ಯಕ್ಷತೆ: ಜಗದೀಶ್ ಎಲ್., ಆಯೋಜನೆ: ಬೆಂಗಳೂರು ವಕೀಲ ಸಾಹಿತ್ಯ ಕೂಟ, ಸ್ಥಳ: ವಕೀಲರ ಭವನ, ಸಿಟಿ ಸಿವಿಲ್ ನ್ಯಾಯಾಲಯದ ಸಂಕೀರ್ಣ, ಬೆಳಿಗ್ಗೆ 11

ಎಚ್.ಬಿ. ಪ್ರಭಾಕರ ಶಾಸ್ತ್ರಿ ಅವರಿಗೆ ಬೀಳ್ಕೊಡುಗೆ ಸಮಾರಂಭ: ಅತಿಥಿಗಳು: ಎನ್.ವಿ. ಅಂಜಾರಿಯಾ, ಕುಲೂರು ಅರವಿಂದ್ ಕಾಮತ್, ಕೆ. ಶಶಿಕಿರಣ್ ಶೆಟ್ಟಿ, ಅಧ್ಯಕ್ಷತೆ: ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ಬೆಂಗಳೂರು ವಕೀಲರ ಸಂಘ, ಸ್ಥಳ: ಹಾಲ್ ನಂ. 1, ಹೈಕೋರ್ಟ್ ಯೂನಿಟ್, ಮಧ್ಯಾಹ್ನ 3.15

ಸಂವಿಧಾನ ಜಾಗೃತಿ ಕಾರ್ಯಕ್ರಮ: ಅತಿಥಿಗಳು: ಮಾವಳ್ಳಿ ಶಂಕರ್, ಕೃಷ್ಣಪ್ಪ ಕೆ., ಶ್ರೀನಿವಾಸ, ಅಧ್ಯಕ್ಷತೆ: ಪಾರ್ವತೀಶ ಬಿಳಿದಾಳೆ, ಗವಿಯಯ್ಯ ಎಸ್., ಪ್ರಸ್ತಾವಿಕ ನುಡಿ: ಜಿ. ಕೃಷ್ಣಮೂರ್ತಿ, ಆಯೋಜನೆ: ಸಂವಿಧಾನ ಬಳಗ, ಸ್ಥಳ: ಜಿ.ಕೆ. ಗ್ರ್ಯಾಂಡ್ ಅರೆನಾ, ಬಿ.ಎಸ್.ಎಂ. ಎಕ್ಸ್‌ಟೆನ್ಷನ್, ಮೈಸೂರು ರಸ್ತೆ, ಸಂಜೆ 4

ಪ್ರವಚನ ವಾಹಿನಿ: 'ಷಟ್ ಪ್ರಶ್ನೋಪನಿಷತ್ ಚಿಂತನೆ' ಕುರಿತು ಉಪನ್ಯಾಸ: ಎ. ಗುರುಪ್ರಸಾದ್ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ಈ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ: nagaradalli_indu@prajavani.co.in

'ವಿಜಯಸಂಕಲ್ಪ' ಸಮಾವೇಶದಲ್ಲಿ ಕೇಂದ್ರ ಗೃಹ ಸಚಿವರ ಕರೆ • ವಿರೋಧ ಪಕ್ಷಗಳ ವಿರುದ್ಧ ವಾಗ್ದಾಳಿ

ಭ್ರಷ್ಟ 'ಇಂಡಿ' ಒಕ್ಕೂಟ ತಿರಸ್ಕರಿಸಿ: ಶಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಚ್ಛ, ದಕ್ಷ, ಪ್ರಾಮಾಣಿಕ, ಜನ ಪರವಾದ ನರೇಂದ್ರ ಮೋದಿ ಆಡಳಿತ ಬೇಕೆ ಅಥವಾ ಕಾಂಗ್ರೆಸ್ ನೇತೃತ್ವದ ಪರಿವಾರವಾದಿ, ದುರಹಂಕಾರಿಗಳು ಮತ್ತು ಭ್ರಷ್ಟಾಚಾರಿಗಳ 'ಇಂಡಿ' ಒಕ್ಕೂಟ ಬೇಕೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಶ್ನಿಸಿದರು.

ನಗರದ ಅರಮನೆ ಮೈದಾನದಲ್ಲಿ ಮಂಗಳವಾರ ನಡೆದ 'ವಿಜಯಸಂಕಲ್ಪ ಸಮಾವೇಶ'ದಲ್ಲಿ ಅವರು ಭಾಗವಹಿಸಿ ಮಾತನಾಡಿ, 'ಭ್ರಷ್ಟ 'ಇಂಡಿ' ಒಕ್ಕೂಟವನ್ನು ಮುಲಾಜಿಲ್ಲದೇ ತಿರಸ್ಕರಿಸಿ' ಎಂದರು.

ಕಳೆದ ಹತ್ತು ವರ್ಷಗಳಲ್ಲಿ ಭ್ರಷ್ಟಾಚಾರದ ಕಳಂಕವಿಲ್ಲದೇ, ಸ್ವಚ್ಛ ಆಡಳಿತ ನೀಡಿದ್ದು ಮೋದಿ ಸರ್ಕಾರದ ಹೆಗ್ಗಳಿಕೆ. ದೇಶದ ಜನರಲ್ಲಿ ಮೋದಿ ಅವರ ಬಗ್ಗೆ ಅಪಾರ ವಿಶ್ವಾಸವಿದೆ. ಹೀಗಾಗಿ ಈ ಬಾರಿ ಮೋದಿ ಅಲೆ ಮಾತ್ರ ಅಲ್ಲ ಸುನಾಮಿಯೇ ಎದ್ದಿದೆ ಎಂದು ಶಾ ಹೇಳಿದರು.

ಕರ್ನಾಟಕದಲ್ಲಿ ಮೋದಿ ನೇತೃತ್ವದ ಬಿಜೆಪಿ- ಜೆಡಿಎಸ್ ಮೈತ್ರಿಕೂಟ 28 ಸ್ಥಾನಗಳನ್ನು ಗೆಲ್ಲಿಸಬೇಕು. ಕಾಂಗ್ರೆಸ್ ಖಾತೆಯನ್ನೂ ತೆರೆಯಬಾರದು. ಇದಕ್ಕೆ ಎರಡೂ ಪಕ್ಷಗಳ ಕಾರ್ಯಕರ್ತರು ತಯಾರಾಗಬೇಕು ಎಂದು ಸೂಚನೆ ನೀಡಿದರು.

ಮನಮೋಹನ್ ಸಿಂಗ್ ಸರ್ಕಾರದ ರಿಮೋಟ್ ಕಂಟ್ರೋಲ್ ಸೋನಿಯಾ ಗಾಂಧಿ ಆಗಿದ್ದರು. ಆಗ ನಡೆದ ಹಗರಣಗಳ ಮೊತ್ತ ₹12 ಲಕ್ಷ ಕೋಟಿ. ಭ್ರಷ್ಟಾಚಾರವನ್ನು ಸಹಿಸುವ ಪ್ರಶ್ನೆಯೇ ಇಲ್ಲ. ಭ್ರಷ್ಟಾಚಾರ ಮಾಡಿದವರನ್ನು ಕಂಬಿ ಎಣಿಸುವಂತೆ ಮಾಡುತ್ತೇವೆ ಎಂದು 2014 ರ ಲೋಕಸಭಾ ಚುನಾವಣೆಯಲ್ಲಿ ಹೇಳಿದ್ದೆವು. ₹12 ಲಕ್ಷ ಕೋಟಿ ಮೌಲ್ಯದಷ್ಟು ಹಗರಣ ಮಾಡಿದವರು ತಮ್ಮನ್ನು ಉಳಿಸಿಕೊಳ್ಳಲು 'ಇಂಡಿ' ಒಕ್ಕೂಟ ಕಟ್ಟಿಕೊಂಡು ಮೋದಿ ವಿರುದ್ಧ ನಿಂತಿದ್ದಾರೆ ಎಂದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಮಂಗಳವಾರ ನಡೆದ ಬಿಜೆಪಿ ಸಮಾವೇಶದಲ್ಲಿ ಭಾಗವಹಿಸಿದ್ದ ಕಾರ್ಯಕರ್ತರು ನಾಯಕರ ಭಾಷಣದ ವೇಳೆ ಪಕ್ಷದ ಪರ ಘೋಷಣೆ ಕೂಗಿದರು –ಪ್ರಜಾವಾಣಿ ಚಿತ್ರ

ಕಾಂಗ್ರೆಸ್‌ನ ಪ್ರಧಾನಿ ಅಭ್ಯರ್ಥಿ ಯಾರು ಎಂಬುದನ್ನು ತಾಕತ್ತಿದ್ದರೆ ಹೇಳಲಿ. ಹಣ- ಹೆಂಡ ಹಂಚುವ ಮೂಲಕ ಅಧಿಕಾರ ಹಿಡಿಯಬಹುದು ಎಂಬ ಭ್ರಮೆಯಲ್ಲಿದ್ದಾರೆ
ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಬಿಜೆಪಿ- ಜೆಡಿಎಸ್ ಒಂದಾಗಿರುವುದು, ಎಚ್.ಡಿ. ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ನಮ್ಮ ಜತೆ ಬಂದ ನಂತರ ಕಾಂಗ್ರೆಸ್ ತತ್ತರಿಸಿ ಹೋಗಿದೆ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಮೋದಿ ನೇತೃತ್ವದ ಬಿಜೆಪಿ ಹ್ಯಾಟ್ರಿಕ್ ವಿಜಯ ಸಾಧಿಸಲಿದ್ದು, ನಾವೆಲ್ಲರೂ ಆ ತಂಡದಲ್ಲಿರಬೇಕು. ಟೀಕೆಗಳನ್ನು ಬಿಟ್ಟು ಸಾಧನೆಗಳನ್ನು ಬಿಂಬಿಸೋಣ
ಡಾ.ಸಿ. ಎನ್.ಮಂಜುನಾಥ್, ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿ

'ಪ್ರತಿ ಕಾರ್ಯಕರ್ತನೂ ಮೋದಿ'

'ಪ್ರತಿ ಬಿಜೆಪಿ ಕಾರ್ಯಕರ್ತನೂ ಮೋದಿ. ಮತದಾರರ ಮನೆಗಳಿಗೆ ಮೋದಿಯಾಗಿ ಹೋಗಿ 10 ವರ್ಷಗಳ ಸಾಧನೆಯನ್ನು ಜನರಿಗೆ ಹೇಳಿ' ಎಂದು ಅಮಿತ್ ಶಾ ಹೇಳಿದರು.

'ಇದರ ಜತೆಗೆ ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರ ಭ್ರಷ್ಟಾಚಾರವನ್ನೂ ಅವರಿಗೆ ತಿಳಿಸುವ ಕೆಲಸ ಮಾಡಬೇಕು' ಎಂದರು.

'ನರೇಂದ್ರ ಮೋದಿ ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿ ಮತ್ತು ಪ್ರಧಾನಿ ಆಗಿ 10 ವರ್ಷಗಳಲ್ಲಿ ಅವರ ವಿರುದ್ಧ ಒಂದೇ ಒಂದು ಭ್ರಷ್ಟಾಚಾರದ ಆರೋಪವನ್ನು ಯಾವುದೇ ವಿರೋಧ ಪಕ್ಷ ನಾಯಕರು ಮಾಡಿಲ್ಲ. ಪಾರದರ್ಶಕ ಆಡಳಿತಕ್ಕೆ ಇದು ನಿದರ್ಶನ' ಎಂದು ಅವರು ಹೇಳಿದರು.

'ಚುನಾವಣೆ ಮುಗಿಯುವವರೆಗೆ ಮನೆ ಸೇರಲ್ಲ'

'ನನಗೆ 81 ವರ್ಷ ಆಗಿದೆ. ಚುನಾವಣೆ ಮುಗಿಯುವರೆಗೆ ಮನೆ ಸೇರಲ್ಲ, ನೀವೂ ಬನ್ನಿ ಪಕ್ಷದ ಎಲ್ಲ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರೋಣ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದನ್ನು ತಪ್ಪಿಸಲು ರಾಜ್ಯದ ಉದ್ದಗಲ ಪ್ರವಾಸ ಮಾಡೋಣ' ಎಂದು ಬಿ.ಎಸ್.ಯಡಿಯೂರಪ್ಪ ಹೇಳಿದರು.

'ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರು ಒಂದು ದಿನವೂ ರಜೆ ತೆಗೆದುಕೊಳ್ಳದೇ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಚುನಾವಣೆ ಮುಗಿಯುವವರೆಗೆ ಮನೆ ಸೇರುವುದಿಲ್ಲ.28 ಕ್ಷೇತ್ರಗಳನ್ನೂ ಗೆಲ್ಲುವುದು ನಮ್ಮ ಗುರಿಯಾಗಬೇಕು' ಎಂದರು.

'500 ವರ್ಷಗಳಿಂದ ಟೆಂಟ್‌ನಲ್ಲಿದ್ದ ರಾಮಲಲ್ಲಾನಿಗೆ ಭವ್ಯ ರಾಮಮಂದಿರ ನಿರ್ಮಿಸಿದ್ದೇವೆ. ರಾಮಮಂದಿರ ಉದ್ಘಾಟನೆಗೆ ಸೋನಿಯಾಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರಿಗೂ ಆಹ್ವಾನ ನೀಡಲಾಗಿತ್ತು. ಆದರೆ, ಮತ ಬ್ಯಾಂಕ್ ಕೈ ತಪ್ಪಿ ಹೋಗಬಹುದು ಎಂಬ ಭಯಕ್ಕೆ ರಾಮಮಂದಿರ ಉದ್ಘಾಟನೆಗೆ ಕಾಂಗ್ರೆಸ್ ನಾಯಕರು ಬರಲಿಲ್ಲ. ರಾಮಮಂದಿರ ನಿರ್ಮಾಣ ಸೇರಿದಂತೆ ನಮ್ಮ ಪ್ರಣಾಳಿಕೆಯಲ್ಲಿನ ಎಲ್ಲ ಭರವಸೆಗಳನ್ನು ಈಡೇರಿಸಿದ್ದೇವೆ. ಜಮ್ಮು–ಕಾಶ್ಮೀರದಲ್ಲಿ 370 ನೇ ವಿಧಿ ರದ್ದು, ಸಿಎಎ ಜಾರಿ ಪ್ರಮುಖವಾದವು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿ ಡಾ. ಸಿ.ಎನ್.ಮಂಜುನಾಥ್, ಬೆಂಗಳೂರು ದಕ್ಷಿಣ ಕ್ಷೇತ್ರದ ತೇಜಸ್ವಿ ಸೂರ್ಯ, ಬೆಂಗಳೂರು ಉತ್ತರ ಕ್ಷೇತ್ರದ ಶೋಭಾ ಕರಂದ್ಲಾಜೆ, ಚಿಕ್ಕಬಳ್ಳಾಪುರ ಕ್ಷೇತ್ರದ ಅಭ್ಯರ್ಥಿ ಡಾ.ಕೆ.ಸುಧಾಕರ್ ಅವರಿಗೆ ಚುನಾವಣೆಯಲ್ಲಿ ಅತಿ ಹೆಚ್ಚು ಮತಗಳ ಅಂತರದಿಂದ ಗೆದ್ದುಬರುವಂತೆ ಹಾರೈಸಿದರು.

ಅಮಿತ್ ಶಾ ಭೇಟಿಗೆ ದೆಹಲಿಗೆ ಹೋಗುವೆ: ಕೆ.ಎಸ್. ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಕೇಂದ್ರದ ಗೃಹ ಸಚಿವ ಅಮಿತ್ ಶಾ ಕರೆ ಮಾಡಿ ಬುಧವಾರ ದೆಹಲಿಗೆ ಬರುವಂತೆ ಸೂಚಿಸಿದ್ದಾರೆ. ಭೇಟಿಗೆ ಹೋಗುತ್ತಿದ್ದೇನೆ' ಎಂದು ಮಾಜಿ ಉಪಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೆಳಿಗ್ಗೆ ಅಮಿತ್ ಶಾ ಕರೆ ಮಾಡಿದ್ದರು. ಹಿರಿಯ ನಾಯಕರು ಕರೆದಾಗ ಹೋಗಬೇಕಾಗುತ್ತದೆ. ಹಾಗೆಂದು ಯಾವುದೇ ಕಾರಣಕ್ಕೂ ಚುನಾವಣಾ ಕಣದಿಂದ ಹಿಂದಕ್ಕೆ ಸರಿಯುವುದಿಲ್ಲ' ಎಂದರು.

'ಶಿವಮೊಗ್ಗದಿಂದ ಪಕ್ಷೇತರನಾಗಿ ಸ್ಪರ್ಧಿಸುತ್ತಿರುವುದಕ್ಕೆ ಅಮಿತ್ ಶಾ ಆಶ್ಚರ್ಯ ವ್ಯಕ್ತಪಡಿಸಿದರು. ಚುನಾವಣೆಗೆ ಸ್ಪರ್ಧಿಸುವುದು ಬೇಡ ಎಂದು ಸಲಹೆ ನೀಡಿದರು. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಬಿ.ವೈ. ವಿಜಯೇಂದ್ರ ಅವರನ್ನು ಬದಲಾಯಿಸಿದರೆ ಕಣದಿಂದ ಹಿಂದಕ್ಕೆ ಸರಿಯುವುದಾಗಿ ಸ್ಪಷ್ಟಪಡಿಸಿದ್ದೇನೆ. ನಾನು ದೆಹಲಿಗೆ ಬಂದಾಗ ಚುನಾವಣಾ ಕಣದಿಂದ ಹಿಂದಕ್ಕೆ ಸರಿಯುವಂತೆ ಸೂಚಿಸುವಂತಿಲ್ಲ ಎಂಬುದಾಗಿಯೂ ಅಮಿತ್ ಶಾ ಅವರಿಗೆ ತಿಳಿಸಿದ್ದೇನೆ' ಎಂದರು.

'ಪಕ್ಷವು ರಾಜ್ಯದಲ್ಲಿ ಕುಟುಂಬವೊಂದರ ಕೈಯಲ್ಲಿದೆ. ಅದರಿಂದ ಮುಕ್ತಿಗೊಳಿಸಬೇಕು. ರಾಜ್ಯ ಬಿಜೆಪಿಯಲ್ಲೂ ಕಾಂಗ್ರೆಸ್ ಸಂಸ್ಕೃತಿ ಬೆಳೆಯುತ್ತಿದೆ. ಅಪ್ಪ-ಮಕ್ಕಳ ಹಿಡಿತಕ್ಕೆ ಪಕ್ಷ ಹೋಗಿರುವುದು ಬಹಳ ಅನ್ಯಾಯ. ಇದರಿಂದ ಕಾರ್ಯಕರ್ತರಿಗೆ ನೋವಾಗಿದೆ. ಅವರೆಲ್ಲರ ಧ್ವನಿಯಾಗಿ ಚುನಾವಣೆಗೆ ಸ್ಪರ್ಧಿಸಿರುವೆ ಎಂಬುದನ್ನು ಅಮಿತ್ ಶಾ ಅವರಿಗೆ ಮನವರಿಕೆ ಮಾಡಿದ್ದೇನೆ' ಎಂದರು.

'ಪಕ್ಷದಲ್ಲಿ ಹಿಂದುತ್ವದ ಪರ ಇರುವವರನ್ನು ಈ ಬಾರಿಯ ಚುನಾವಣೆಯಲ್ಲಿ ಬದಿಗೆ ಸರಿಸಲಾಗಿದೆ. ಇದರಿಂದ ಹಿಂದುತ್ವದ ಪರ ಹೋರಾಟವೇ ತಪ್ಪು ಎಂಬ ಕಲ್ಪನೆ ಕಾರ್ಯಕರ್ತರಲ್ಲಿ ಮೂಡಿದೆ. ಹಿಂದುತ್ವಕ್ಕೆ ಸರಿಯಾದ ಬೆಲೆ ಸಿಗಬೇಕು ಎಂಬ ಉದ್ದೇಶವಿದೆ. ಈ ಬಾರಿಯ ಚುನಾವಣೆಯಲ್ಲಿ ಹಿಂದುಳಿದವರಿಗೂ ಟಿಕೆಟ್ ಕೊಟ್ಟಿಲ್ಲ. ಹಿಂದುಳಿದವರಿಗೆ ಹೇಗೆ ಮೋಸ ಮಾಡಲಾಗುತ್ತಿದೆ ಎಂಬುದನ್ನು ಅಮಿತ್ ಶಾ ಅವರ ಗಮನಕ್ಕೆ ತಂದಿದ್ದೇನೆ' ಎಂದು ತಿಳಿಸಿದರು.

ಈಶ್ವರಪ್ಪ ವಿರುದ್ಧ ರಾಘವೇಂದ್ರ ವಾಗ್ದಾಳಿ

ಬೈಂದೂರು (ಉಡುಪಿ ಜಿಲ್ಲೆ): 'ಹಿಂದುತ್ವದ ವಿಚಾರದಲ್ಲಿ ಪೊಳ್ಳು ಹಿಂದುತ್ವವಾದಿಗಳಿಂದ ಪಾಠ ಕಲಿಯಬೇಕಿಲ್ಲ. ಪ್ರಚಾರಕ್ಕಾಗಿ ಹಿಂದುತ್ವ ಪ್ರದರ್ಶನ ಮಾಡುವ ಅವಶ್ಯಕತೆ ನಮಗಿಲ್ಲ' ಎಂದು ಶಿವಮೊಗ್ಗ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ವೈ. ರಾಘವೇಂದ್ರ ಪರೋಕ್ಷವಾಗಿ ಈಶ್ವರಪ್ಪ ವಿರುದ್ಧ ವಾಗ್ದಾಳಿ ನಡೆಸಿದರು.

'ಎರಡು ವಾರಗಳ ಹಿಂದೆ ಈಶ್ವರಪ್ಪ ಶಿಕಾರಿಪುರಕ್ಕೆ ಬಂದಿದ್ದಾಗ ಐದು ಲಕ್ಷಕ್ಕೂ ಅಧಿಕ ಅಂತರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲಬೇಕು ಎಂದು ಹೇಳಿದ್ದರು. ವಿಜಯೇಂದ್ರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಒಳ್ಳೆಯ ಕಾರ್ಯ ಮಾಡುತ್ತಿದ್ದಾರೆ ಎಂದಿದ್ದರು. ಈಗ ಉಲ್ಟಾ ಹೊಡೆದಿದ್ದಾರೆ. ಎಲ್ಲವನ್ನೂ ಮತದಾರರು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ' ಎಂದರು.

ಚನ್ನಪಟ್ಟಣ: ಮೊಳಗಿದ ಚುನಾವಣಾ ರಣಕಹಳೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಚನ್ನಪಟ್ಟಣದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ರೋಡ್ ಶೋ ಮೂಲಕ ಲೋಕಸಭಾ ಚುನಾವಣೆ ಪ್ರಚಾರಕ್ಕೆ ರಣಕಹಳೆ ಊದಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ. ಸುರೇಶ್ ಸಹೋದರರ ತವರು ಜಿಲ್ಲೆಯಲ್ಲಿ ಒಂದು ತಾಸು ನಡೆದ ಶಾ ರೋಡ್ ಶೋ ಮೈತ್ರಿಕೂಟದ ಶಕ್ತಿ ಪ್ರದರ್ಶನಕ್ಕೂ ಸಾಕ್ಷಿಯಾಯಿತು.

ಪ್ರಧಾನಿ ಮೋದಿ ಸಾಧನೆ ಬಣ್ಣಿಸುತ್ತಲೇ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಶಾ, ರಾಜ್ಯದ 28 ಕ್ಷೇತ್ರಗಳಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ಮನವಿ ಮಾಡಿದರು. ಬಿಜೆಪಿ ಮತ್ತು ಜೆಡಿಎಸ್ ನಾಯಕರು ಸಹ ಭಾಷಣದಲ್ಲಿ ರಾಜ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು.

ಪಟ್ಟಣದ ಮಂಗಳವಾರಪೇಟೆ ವೃತ್ತದಿಂದ ಸಂಜೆ 6.45ಕ್ಕೆ ತೆರೆದ ವಾಹನದಲ್ಲಿ ಶುರುವಾದ ರೋಡ್ ಶೋ, ಪೊಲೀಸ್ ವೃತ್ತದಲ್ಲಿ ಸಮಾವೇಶಗೊಂಡಿತು.

ಮಾರ್ಗದುದ್ದಕ್ಕೂ 'ಭಾರತ್ ಮಾತಾ ಕೀ ಜೈ', 'ಜೈ ಶ್ರೀರಾಮ್', 'ವಂದೇ ಮಾತರಂ, 'ಜೈ ಮೋದಿ, ಅಮಿತ್ ಶಾ' ಘೋಷಣೆ ಮೊಳಗಿದವು. ಬಿಜೆಪಿ ಮತ್ತು ಜೆಡಿಎಸ್ ಧ್ವಜಗಳು ರಾರಾಜಿಸಿದವು. ತಮಟೆ, ಡೋಲು ಹಾಗೂ ಜಾನಪದ ಕಲಾತಂಡಗಳು ರೋಡ್ ಶೋಗೆ ಮೆರುಗು ತಂದವು.

ಕಾದ ಶಾ: ಸಂಜೆ 6ಕ್ಕೆ ರೋಡ್ ಶೋ ನಿಗದಿಯಾಗಿದ್ದರಿಂದ ಬೆಂಗಳೂರಿನಿಂದ ಹೆಲಿಕಾಪ್ಟರ್‌ನಲ್ಲಿ ಹೊರಟ ಅಮಿತ್ ಶಾ ಅವರು 5.45ರ ಸುಮಾರಿಗೆ ನಗರದ ಹೊರವಲಯದ ಶೆಟ್ಟಿಹಳ್ಳಿ ಬಳಿಯ ಹೆಲಿಪ್ಯಾಡ್‌ನಲ್ಲಿ ಇಳಿದರು. ಆದರೆ, ಜನ ಸೇರದ ಕಾರಣ ಮುಕ್ಕಾಲು ತಾಸು ವಿಳಂಬವಾಗಿ ರೋಡ್ ಶೋ ಆರಂಭವಾಯಿತು.

ಮೈತ್ರಿಕೂಟದ ಬಿಜೆಪಿ ಅಭ್ಯರ್ಥಿ ಡಾ. ಸಿ.ಎನ್. ಮಂಜುನಾಥ್, ಚನ್ನಪಟ್ಟಣದ ಶಾಸಕರೂ ಆಗಿರುವ ಜೆಡಿಎಸ್ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್, ರಾಜ್ಯ ವಕ್ತಾರ ಅಶ್ವತ್ಥ ನಾರಾಯಣಗೌಡ ಹಾಗೂ ಜೆಡಿಎಸ್ ಜಿಲ್ಲಾ ಅಧ್ಯಕ್ಷ ಎ. ಮಂಜುನಾಥ್ ಅವರು ರೋಡ್ ಶೋ ವೇಳೆ ಅಮಿತ್ ಶಾ ಅವರಿಗೆ ಸಾಥ್ ನೀಡಿದರು.

10 ವರ್ಷಗಳಲ್ಲಿ ಮೋದಿ ಅವರು ಆರ್ಥಿಕತೆಯನ್ನು ವಿಶ್ವದಲ್ಲೇ 5ನೇ ಸ್ಥಾನಕ್ಕೆ ತಂದಿದ್ದಾರೆ. ಮತ್ತೊಮ್ಮೆ ಪ್ರಧಾನಿಯಾದರೆ ನಮ್ಮ ಆರ್ಥಿಕತೆ ಮೂರನೇ ಸ್ಥಾನಕ್ಕೇರಲಿದೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಜೆಡಿಎಸ್ ಸತ್ತು ಹೋಗಿದೆ ಎನ್ನುವವರಿಗೆ ಚನ್ನಪಟ್ಟಣದಲ್ಲಿ ಸೇರಿರುವ ಜನಸಾಗರವೇ ಉತ್ತರ ನೀಡಿದೆ. ಕಾಂಗ್ರೆಸ್ ದುರಾಡಳಿತಕ್ಕೆ ಬಿಜೆಪಿ–ಜೆಡಿಎಸ್ ಪಾಠ ಕಲಿಸಲಿವೆ
ಎಚ್.ಡಿ. ಕುಮಾರಸ್ವಾಮಿ
ಜೆಡಿಎಸ್ ಅಧ್ಯಕ್ಷ

ಎನ್‌ಡಿಎ ವಿರುದ್ಧ ಒಗ್ಗಟ್ಟಿನ ಕಾರ್ಯತಂತ್ರ: ಡಿಕೆಶಿ

'ಇಂಡಿಯಾ' ಒಕ್ಕೂಟದ ರಾಜ್ಯದ ಮಿತ್ರ ಪಕ್ಷಗಳ ಮುಖಂಡರ ಸಭೆ • ಮತ ವಿಭಜನೆಯಾಗದಂತೆ ಮಾಡಲು ತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭೆ ಚುನಾವಣೆಯಲ್ಲಿ 'ಕೋಮುವಾದಿ ಸರ್ವಾಧಿಕಾರದ ವಿರುದ್ಧ ಪ್ರಜಾಪ್ರಭುತ್ವ' ಘೋಷಣೆಯಡಿ ಒಗ್ಗಟ್ಟಿನಿಂದ ಚುನಾವಣೆ ಎದುರಿಸಿ, ಎಲ್ಲ 28 ಕ್ಷೇತ್ರಗಳನ್ನು ಗೆಲ್ಲಲು ಕಾರ್ಯತಂತ್ರ ರೂಪಿಸುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕ್ವೀನ್ಸ್ ರಸ್ತೆಯಲ್ಲಿರುವ 'ಭಾರತ್ ಜೋಡೊ' ಭವನದಲ್ಲಿ ಮಂಗಳವಾರ ನಡೆದ 'ಇಂಡಿಯಾ' ಒಕ್ಕೂಟದಲ್ಲಿರುವ ರಾಜ್ಯದ ಮಿತ್ರ ಪಕ್ಷಗಳ ಮುಖಂಡರ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ಸಮೀಕ್ಷೆ ಪ್ರಕಾರ ಕಾಂಗ್ರೆಸ್ 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುತ್ತದೆ. ಆದರೆ, ಇತರ ಸಮೀಕ್ಷೆಗಳ ಪ್ರಕಾರ 28 ಸ್ಥಾನಗಳನ್ನೂ ಗೆಲ್ಲುತ್ತೇವೆ' ಎಂದರು.

'10 ಪಕ್ಷಗಳು ಒಟ್ಟಿಗೆ ಸೇರಿ ಚುನಾವಣೆ ಎದುರಿಸುವ ಕುರಿತು ಚರ್ಚಿಸಿದ್ದೇವೆ. ಎಲ್ಲ ಮಿತ್ರ ಪಕ್ಷಗಳನ್ನು ಸೇರಿಸಿ ಸಮನ್ವಯ ಸಮಿತಿ ರಚಿಸಲಾಗುವುದು. ಚುನಾವಣೆ ಮುಗಿಯುವವರೆಗೆ ಪ್ರತಿ ಮೂರು ದಿನ ಅಥವಾ ವಾರಕ್ಕೊಮ್ಮೆ ಸಭೆ ಸೇರಲಾಗುವುದು. ಪ್ರತಿ ಕ್ಷೇತ್ರದಲ್ಲೂ ಬೆಂಬಲ ನೀಡುತ್ತೇವೆಂದು ಎಲ್ಲ ಮಿತ್ರ ಪಕ್ಷಗಳು ಲಿಖಿತವಾಗಿ ಬರೆದುಕೊಟ್ಟಿವೆ' ಎಂದರು.

'2019ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್- ಜೆಡಿಎಸ್ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸಿದ್ದೆವು. ತುಮಕೂರಿನಲ್ಲಿ ನಮ್ಮ ಅಭ್ಯರ್ಥಿಯಾಗಿದ್ದ ಎಚ್.ಡಿ. ದೇವೇಗೌಡರು 12 ಸಾವಿರ ಮತಗಳಿಂದ ಸೋಲು ಕಂಡಿದ್ದರು. ಅಲ್ಲಿ ಸಿಪಿಐ ಅಭ್ಯರ್ಥಿ 17 ಸಾವಿರ ಮತಗಳಿಸಿದ್ದರು. ಈ ರೀತಿಯ ಮತ ವಿಂಗಡಣೆ ಆಗಬಾರದು ಎನ್ನುವುದು ನಮ್ಮೆಲ್ಲರ ಉದ್ದೇಶ. ಎಲ್ಲರೂ ಒಟ್ಟಾಗಿ ಎನ್‌ಡಿಎ ಸೋಲಿಸಬೇಕು ಎಂಬುದು ನಮ್ಮ ಏಕೈಕ ಗುರಿ' ಎಂದರು.

'ವಿರೋಧ ಪಕ್ಷಗಳ ನಾಯಕರ ಮೇಲೆ ಕೇಂದ್ರ ಸರ್ಕಾರ ಇಲ್ಲಸಲ್ಲದ ಆರೋಪಗಳನ್ನು ಹೊರಿಸಿ ಹತ್ತಿಕ್ಕುವ ಕೆಲಸ ಮಾಡುತ್ತಿದೆ. ಇದನ್ನು ನಾವೆಲ್ಲರೂ ಬಲವಾಗಿ ಖಂಡಿಸುತ್ತೇವೆ. ಬೂತ್ ಮಟ್ಟದಿಂದ ಒಟ್ಟಿಗೆ ಕೆಲಸ ಮಾಡುತ್ತೇವೆ. ಮಿತ್ರ ಪಕ್ಷಗಳು ಅಧಿಕಾರದಲ್ಲಿ ಇಲ್ಲದೇ ಇರಬಹುದು. ಆದರೆ, ಮಿತ್ರ ಪಕ್ಷಗಳ ತತ್ವ, ಸಿದ್ಧಾಂತ, ಬದ್ಧತೆ ಮುಖ್ಯ. ನಾವೆಲ್ಲ ಈ ಹಿಂದೆ ಅನೇಕ ಚುನಾವಣೆಗಳನ್ನು ಬೇರೆ, ಬೇರೆಯಾಗಿ ಎದುರಿಸಿದ್ದೇವೆ. ಆದರೆ, ಇಂದು ಪ್ರಜಾಪ್ರಭುತ್ವದ ಉಳಿವಿಗೆ ಒಂದಾಗಿದ್ದೇವೆ' ಎಂದರು.

ಒಂದೊಂದು ಮತವೂ ಮುಖ್ಯ: 'ಇಂಡಿಯಾ' ಒಕ್ಕೂಟದಿಂದ ಕಾಂಗ್ರೆಸ್‌ಗೆ ರಾಜ್ಯದಲ್ಲಿ ಲಾಭ ಆಗಲಿದೆಯೇ' ಎಂಬ ಪ್ರಶ್ನೆಗೆ, 'ಎಲ್ಲ 28 ಕ್ಷೇತ್ರಗಳಲ್ಲೂ ಅನುಕೂಲವಾಗಲಿದೆ. ರಾಜಕಾರಣದಲ್ಲಿ 49 ಎಂದರೆ ಸೊನ್ನೆ, 51 ಎಂದರೆ ನೂರು ಎಂದರ್ಥ. ಹಿಂದೆ ವಿಧಾನಸಭೆ ಚುನಾವಣೆಯಲ್ಲಿ ಧ್ರುವನಾರಾಯಣ್ 1 ಮತದಿಂದ ಗೆದ್ದಿದ್ದರು. ದಿನೇಶ್ ಗುಂಡೂರಾವ್ ಅಲ್ಪ ಮತಗಳ ಅಂತರದಲ್ಲೇ ಗೆದ್ದರು. ಸೌಮ್ಯಾ ರೆಡ್ಡಿ 16 ಮತಗಳಿಂದ ಸೋತರು. ಹೀಗಾಗಿ ಒಂದೊಂದು ಮತವೂ ಮುಖ್ಯ' ಎಂದರು.

ಸಭೆಯಲ್ಲಿ ಸಚಿವ ಡಾ ಎಂ.ಸಿ. ಸುಧಾಕರ್, ಕೆಪಿಸಿಸಿ ಮಾಧ್ಯಮ ಘಟಕದ ಅಧ್ಯಕ್ಷ ರಮೇಶ್ ಬಾಬು, ಸಹ ಅಧ್ಯಕ್ಷೆ ಐಶ್ವರ್ಯ ಮಹದೇವ್ ಭಾಗವಹಿಸಿದ್ದರು.

'ಇಂಡಿಯಾ' ಒಕ್ಕೂಟದ ಸಭೆಯ ಬಳಿಕ ಮಿತ್ರಪಕ್ಷಗಳ ಮುಖಂಡರಾದ ಎನ್‌ಸಿಪಿ (ಶರದ್ ಪವಾರ್) ಅಧ್ಯಕ್ಷ ಸಿ.ಎಸ್. ಇನಾಂದಾರ್, ಡಿಎಂಕೆ ಕಾರ್ಯದರ್ಶಿ ರಾಮಸ್ವಾಮಿ ನಟೇಶನ್, ಫಾರ್ವರ್ಡ್ ಬ್ಲಾಕ್ ಕಾರ್ಯದರ್ಶಿ ಜಿ.ಆರ್.ಶಿವಶಂಕರ್, ಸಿಪಿಎಂ ಪ್ರಧಾನ ಕಾರ್ಯದರ್ಶಿ ಬಸವರಾಜು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಆಮ್ ಆದ್ಮಿ ಪಕ್ಷದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು, ಸಿಪಿಐ ಕಾರ್ಯದರ್ಶಿ ಸಾತಿ ಸುಂದರೇಶ್, ಕೆಪಿಸಿಸಿ ಮಾಧ್ಯಮ ಘಟಕದ ಅಧ್ಯಕ್ಷ ರಮೇಶ್ ಬಾಬು, ರಾಷ್ಟ್ರೀಯ ಜನತಾ ದಳ ಅಧ್ಯಕ್ಷ ಯಾಕುಬ್ ಗುಲ್ವಾಡಿ, ಸಿಪಿಐ (ಎಂಎಲ್) ಕಾರ್ಯದರ್ಶಿ ಕ್ಲಿಫ್ಟನ್ ಡಿ ರೊಜೆರಿಯೊ, ಸಮಾಜವಾದಿ ಪಕ್ಷದ ಅಧ್ಯಕ್ಷ ಮಂಜಯ್ಯ ಯಾದವ್ ಅವರು ಕೈ ಮೇಲಕ್ಕೆ ಎತ್ತಿ ಒಗ್ಗಟ್ಟು ಪ್ರದರ್ಶಿಸಿದರು

ಒಗ್ಗಟ್ಟಿನ ಹೋರಾಟ: ಮುಖ್ಯಮಂತ್ರಿ ಚಂದ್ರು

ಮಿತ್ರ ಪಕ್ಷಗಳ ಪರವಾಗಿ ಮಾತನಾಡಿದ ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, 'ದೇಶ ಇಕ್ಕಟ್ಟು ಮತ್ತು ಬಿಕ್ಕಟ್ಟಿನಲ್ಲಿ ಸಿಲುಕಿದೆ. ಬಿಜೆಪಿ ಆಡಳಿತ ವೈಖರಿ ನೋಡಿದರೆ ಭಯದ ವಾತಾವರಣವಿದೆ. ಹೀಗಾಗಿ, ಈ ಬಾರಿ ಒಗ್ಗಟ್ಟಿನಿಂದ ಹೋರಾಟ ಮಾಡುತ್ತೇವೆ' ಎಂದರು.

'ದೇಶದ ವಿವಿಧತೆ ಸರ್ವನಾಶ ಮಾಡಲು ಬಿಜೆಪಿಯವರು ಹೊರಟಿದ್ದಾರೆ. ಎಲ್ಲರಿಗೂ ಬೆದರಿಕೆ ಹಾಕುತ್ತಿದ್ದಾರೆ. ಮೋದಿ ವಿನಾಶ ಕಾಲದ ಕುರುಹು ಆಗಿದ್ದಾರೆ. ನಾವು ಸರ್ವಾಧಿಕಾರ ತೊಲಗಿಸಿ, ಪ್ರಜಾಪ್ರಭುತ್ವ ಉಳಿಸುವ ಕೆಲಸ ಮಾಡುತ್ತೇವೆ. ಬಿಜೆಪಿಯವರೇ ಅಧಿಕಾರ ಬಿಟ್ಟು ತೊಲಗಿ ಎಂದು ಹೇಳಬೇಕಾಗಿದೆ' ಎಂದು ವಾಗ್ದಾಳಿ ನಡೆಸಿದರು.

ದೇಶದಾದ್ಯಂತ ಪರಿಶಿಷ್ಟರಿಗೆ ಶೇ 24 ಮೀಸಲು: ಸಿದ್ದರಾಮಯ್ಯ ಭರವಸೆ

ಮೈಸೂರು: 'ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕರ್ನಾಟಕ ಮಾದರಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಸಮುದಾಯಗಳಿಗೆ ಶೇ 24.1ರಷ್ಟು ಮೀಸಲನ್ನು ದೇಶದಾದ್ಯಂತ ಜಾರಿಗೊಳಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಸಂಜೆ ವಿವಿಧ ಪಕ್ಷಗಳ ಮುಖಂಡರನ್ನು ಕಾಂಗ್ರೆಸ್‌ಗೆ ಬರಮಾಡಿಕೊಂಡು ಅವರು ಮಾತನಾಡಿದರು. 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ನಾವು ರಾಜ್ಯದಲ್ಲಿ ತಂದಿರುವ ದಲಿತ ಮತ್ತು ಹಿಂದುಳಿದ ವರ್ಗಗಳ ಪರವಾದ ಕಾನೂನುಗಳನ್ನು ರಾಷ್ಟ್ರ ಮಟ್ಟದಲ್ಲೂ ಜಾರಿಗೆ ತರಲಾಗುವುದು. ಈ ಬಗ್ಗೆ ರಾಹುಲ್ ಗಾಂಧಿ ಜತೆಗೂ ಮಾತನಾಡಿ ಪ್ರಣಾಳಿಕೆಯಲ್ಲಿ ಸೇರಿಸಲು ಹೇಳಿದ್ದೇನೆ. ಕರ್ನಾಟಕದಲ್ಲಿ ಎಸ್‌ಸಿಪಿ, ಟಿಎಸ್‌ಪಿ ಕಾಯ್ದೆ ಜಾರಿಗೆ ತಂದಿದ್ದು ನಮ್ಮ ಸರ್ಕಾರ. ಜನಸಂಖ್ಯೆಗೆ ಅನುಗುಣವಾಗಿ ಆಯಾ ಸಮುದಾಯಗಳಿಗೆ ಅನುದಾನ ಖರ್ಚಾಗಬೇಕು ಎಂಬುದು ಇದರ ಉದ್ದೇಶ. ಆದರೆ, ಬಿಜೆಪಿ ಅಧಿಕಾರಕ್ಕೆ ಬರುತ್ತಲೇ ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಹಾಗೂ ಸಮುದಾಯಗಳಿಗೆ ಬರುತ್ತಿದ್ದ ವಿದ್ಯಾರ್ಥಿವೇತನವನ್ನೇ ನಿಲ್ಲಿಸಿತು' ಎಂದರು.

6 ದಿನಕ್ಕೆ 152 ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ಮೊದಲ ಹಂತದ ಚುನಾವಣೆಗೆ ಉಮೇದುವಾರಿಕೆ ಬಯಸಿ 14 ಕ್ಷೇತ್ರಗಳಿಂದ ಮಂಗಳವಾರ 35 ಅಭ್ಯರ್ಥಿಗಳು 38 ನಾಮಪತ್ರ ಸಲ್ಲಿಸಿದ್ದಾರೆ.

ನಾಮಪತ್ರ ಸಲ್ಲಿಕೆ ಆರಂಭವಾದ ಮಾರ್ಚ್ 28ರಿಂದ ಇಲ್ಲಿಯವರೆಗೆ ವಿವಿಧ ರಾಜಕೀಯ ಪಕ್ಷಗಳ 116 ಪುರುಷರು, 11 ಮಹಿಳೆಯರು ಸೇರಿದಂತೆ 127 ಅಭ್ಯರ್ಥಿಗಳು 152 ನಾಮಪತ್ರ ಸಲ್ಲಿಸಿದ್ದಾರೆ.

'ಕಾಂಗ್ರೆಸ್‌ನಿಂದ ಭೋವಿ ಸಮಾಜಕ್ಕೆ ಅನ್ಯಾಯ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಒಂದು ಕ್ಷೇತ್ರದಲ್ಲಿಯೂ ಟಿಕೆಟ್ ನೀಡದೇ ಕಾಂಗ್ರೆಸ್ ಪಕ್ಷವು ಭೋವಿ ಸಮುದಾಯಕ್ಕೆ ಅನ್ಯಾಯ ಮಾಡಿದೆ. ಬೆಂಗಳೂರಿನಲ್ಲಿ ಶೀಘ್ರ ಸಮಾಜದ ಸಭೆ ಕರೆದು ಮುಂದಿನ ನಡೆಯ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಮಾಜಿ ಸಚಿವ, ಕಾಂಗ್ರೆಸ್‌ನ ವೆಂಕಟರಮಣಪ್ಪ ಅಸಮಾಧಾನ ವ್ಯಕ್ತಪಡಿಸಿದರು.

'ಕಾಂಗ್ರೆಸ್ 1984ರಿಂದ ಸಮುದಾಯದ ಒಬ್ಬರಿಗೂ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಿಲ್ಲ. ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಕಾಂಗ್ರೆಸ್ ಅಪಚಾರ ಮಾಡುತ್ತಿದೆ. ರಾಜಕೀಯವಾಗಿ ಕಡೆಗಣಿಸುತ್ತಿರುವ ಬಗ್ಗೆ ಸಮುದಾಯದಲ್ಲಿ ಅಸಮಾಧಾನ ಹೆಚ್ಚಾಗಿದೆ' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ಭೋವಿ ಸಮುದಾಯವು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ 3ನೇ ಸ್ಥಾನದಲ್ಲಿದೆ. ಎಡಗೈ ಹಾಗೂ ಬಲಗೈ ಸಮುದಾಯ ಪರಿಗಣಿಸಿ ಭೋವಿ ಸಮಾಜವನ್ನು ನಿರ್ಲಕ್ಷಿಸಲಾಗುತ್ತಿದೆ. ನಿಗಮ, ಮಂಡಳಿ ನೇಮಕ, ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆ ಸಂದರ್ಭದಲ್ಲಿಯೂ ಸಮಾಜದ ಪ್ರಮುಖರನ್ನು ಪರಿಗಣಿಸುತ್ತಿಲ್ಲ. ಇದರ ವಿರುದ್ಧ ಸಮುದಾಯವನ್ನು ಒಗ್ಗೂಡಿಸಿ ಹೋರಾಟ ಮಾಡುವ ಅನಿವಾರ್ಯತೆ ಎದುರಾಗಿದೆ' ಎಂದರು.

'ರಾಜ್ಯದ ಒಂದು ಕ್ಷೇತ್ರದಲ್ಲಾದರೂ ಸಮುದಾಯಕ್ಕೆ ಟಿಕೆಟ್ ನೀಡುವಂತೆ ಪಕ್ಷದ ವರಿಷ್ಠರಿಗೆ ಮನವಿ ಮಾಡಲಾಗಿತ್ತು. ಬಿಜೆಪಿ- ಜೆಡಿಎಸ್ ಮೈತ್ರಿ ಪಕ್ಷಗಳು ಕೋಲಾರದಲ್ಲಿ ಅವಕಾಶ ಮಾಡಿಕೊಟ್ಟಿವೆ. ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವ ಕಾಂಗ್ರೆಸ್ ಟಿಕೆಟ್ ನೀಡದೇ ನಿರಾಸೆ ಮೂಡಿಸಿದೆ. ಕಾಂಗ್ರೆಸ್ ವರಿಷ್ಠರ ನಡೆಯಿಂದ ಸಮಾಜಕ್ಕೆ ಬೇಸರ ಮೂಡಿದೆ. ಭೋವಿ ಸಮಾಜದ ಅಸ್ತಿತ್ವಕ್ಕಾಗಿ ಪಕ್ಷದ ನಿರ್ಧಾರವನ್ನು ಪ್ರಶ್ನಿಸುತ್ತಿದ್ದೇವೆ' ಎಂದರು.

ಕ್ಷೇತ್ರದಲ್ಲಿ ಅಭ್ಯರ್ಥಿ ಬದಲಾವಣೆಗೆ ಇನ್ನೂ ಕಾಲಮಿಂಚಿಲ್ಲ. ವರಿಷ್ಠರು ಮನಸು ಮಾಡಬೇಕು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನೇರಲಗುಂಟೆ ಎಂ.ರಾಮಪ್ಪ ತಿಳಿಸಿದರು.

ಲೋಕಸಭಾ ಚುನಾವಣೆ: ವಸತಿಶಾಲೆಗಳ ಮಕ್ಕಳಿಂದ ಜಾಗೃತಿ

ಮತದಾನ ಮಾಡುವಂತೆ ಪೋಷಕರಿಗೆ ಪತ್ರ

• ಕೆ.ಎಸ್.ಗಿರೀಶ

ಮಡಿಕೇರಿ: 'ತೀರ್ಥರೂಪು ತಂದೆಯವರಿಗೆ, ಮಾತೃಶ್ರೀಯವರಿಗೆ, ನಮ್ಮ ಭವಿಷ್ಯಕ್ಕಾಗಿ ದಯವಿಟ್ಟು ಈ ಬಾರಿ ಮರೆಯದೇ ಮತದಾನ ಮಾಡಿ...'

–ಮೊಬೈಲ್‌ಫೋನ್ ಬಳಕೆಗೆ ಬರುವುದಕ್ಕೆ ಮುನ್ನ, ದೂರದ ಊರುಗಳಿಂದ ಮಕ್ಕಳು ತಮ್ಮ ತಂದೆ, ತಾಯಿಗೆ ಬರೆಯುತ್ತಿದ್ದ ಅಂಚೆ ಪತ್ರಗಳ ಒಕ್ಕಣೆ ಲೋಕಸಭೆ ಚುನಾವಣೆಯ ವೇಳೆ ಮುನ್ನೆಲೆಗೆ ಬಂದಿವೆ. ಕೊಡಗು ಜಿಲ್ಲೆಯ ವಸತಿ ಶಾಲೆಗಳ ವಿದ್ಯಾರ್ಥಿಗಳು ಹೀಗೆ ಪತ್ರ ಬರೆದು ಮತದಾನ ಮಾಡುವಂತೆ ಪ್ರೇರೇಪಣೆ ನೀಡುತ್ತಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಗೆ ಸೇರಿದ, ಜಿಲ್ಲೆಯ 9 ವಸತಿ ಶಾಲೆ ಮತ್ತು ನೂರಕ್ಕೂ ಅಧಿಕ ವಿದ್ಯಾರ್ಥಿ-ನಿಲಯಗಳಲ್ಲಿ ಸುಮಾರು 12,500 ವಿದ್ಯಾರ್ಥಿಗಳು 6ನೇ ತರಗತಿಯಿಂದ ಪಿಯುಸಿವರೆಗೆ ಓದುತ್ತಿದ್ದು, ಜಿಲ್ಲಾ ಮತದಾರರ ಶಿಕ್ಷಣ ಮತ್ತು ಸಹಭಾಗಿತ್ವ ಸಮಿತಿಯು (ಸ್ವೀಪ್) ನೇತೃತ್ವದಲ್ಲಿ ಈಗಾಗಲೇ ಪತ್ರಗಳನ್ನು ಬರೆದಿದ್ದಾರೆ. ಬೀದರ್‌ನಿಂದ ಚಾಮರಾಜನಗರವರೆಗೆ ರಾಜ್ಯದ ಎಲ್ಲ ಜಿಲ್ಲೆಗಳ ವಿದ್ಯಾರ್ಥಿಗಳೂ ಇಲ್ಲಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಸ್ವೀಪ್ ಸಮಿತಿ ಅಧ್ಯಕ್ಷ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವರ್ಣಿತ್ ನೇಗಿ, 'ಮಕ್ಕಳ ಪತ್ರವನ್ನು ಓದಿಯಾದರೂ ಪೋಷಕರು ಮತದಾನ ಮಾಡುತ್ತಾರೆಂಬ ನಿರೀಕ್ಷೆ ಇದೆ' ಎಂದರು.

ಸಮಿತಿಯ ನೋಡಲ್ ಅಧಿಕಾರಿ ಶೇಖರ್ ಪ್ರತಿಕ್ರಿಯಿಸಿ, 'ಪತ್ರ ಎಂಬುದು ಭಾವನಾತ್ಮಕ ಸೆಲೆ. ಪತ್ರಗಳೇ ಅಪರೂಪವೆನಿಸಿರುವ ಹೊತ್ತಿನಲ್ಲಿ ಮಕ್ಕಳಿಂದ ಪತ್ರ ಬಂದರೆ ಪೋಷಕರು ಖುಷಿಯಾಗುತ್ತಾರೆ. ಮಕ್ಕಳ ಕೈಬರಹ ನೋಡಿ ಆನಂದಪಡುತ್ತಾರೆ. ತಮ್ಮ ಭವಿಷ್ಯಕ್ಕಾಗಿ ಮತದಾನ ಮಾಡಿ ಎಂದು ಬರೆದಿರುವುದನ್ನು ಕಂಡು ಖಂಡಿತ ಮತದಾನ ಮಾಡುತ್ತಾರೆ' ಎಂದ ವಿಶ್ವಾಸ ವ್ಯಕ್ತಪಡಿಸಿದರು.



ವಿದ್ಯಾರ್ಥಿಗಳು ಬರೆದ ಪತ್ರ

ಕೊಡಗು ಜಿಲ್ಲೆಯ ವಸತಿಶಾಲೆಗಳು ಹಾಗೂ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳು, ತಪ್ಪದೇ ಮತದಾನ ಮಾಡುವಂತೆ ಕೋರಿ ತಮ್ಮ ತಂದೆ, ತಾಯಿಗೆ ಪತ್ರ ಬರೆದರು

'ಮಹಿಳೆ ಕುರಿತ ಹೇಳಿಕೆ ತಿರುಚಲಾಗಿದೆ'

ದಾವಣಗೆರೆ: 'ಮಹಿಳೆ ಅಡುಗೆ ಮಾಡಲು ಮಾತ್ರ ಲಾಯಕ್ಕು ಎಂದು ನಾನು ಹೇಳಿಕೆ ನೀಡಿಲ್ಲ. ನನ್ನ ಹೇಳಿಕೆಯನ್ನು ತಿರುಚಲಾಗಿದೆ' ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಸ್ಪಷ್ಟನೆ ನೀಡಿದ್ದಾರೆ.

ಬ್ಯಾಡ್ಮಿಂಟನ್ ಮಾಜಿ ಆಟಗಾರ್ತಿ, ಬಿಜೆಪಿ ನಾಯಕಿ ಸೈನಾ ನೆಹ್ವಾಲ್ ಅವರು 'ಎಕ್ಸ್' ಖಾತೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಸಹಾಯಕ ಚುನಾವಣಾಧಿಕಾರಿ ನೋಟಿಸ್ ನೀಡಿರುವುದರಿಂದ ಈ ಬಗ್ಗೆ ಸ್ಪಷ್ಟಪಡಿಸಿದ್ದಾರೆ.

'ಮಹಿಳೆಯರು ಅಡುಗೆ ಮನೆಗೆ ಸೀಮಿತವಲ್ಲ ಎಂಬುದನ್ನು ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಸಾಬೀತುಪಡಿಸಿದ್ದಾರೆ. ಅದೇರೀತಿ, ದಾವಣಗೆರೆ ಕ್ಷೇತ್ರದಲ್ಲೂ ಮಹಿಳೆಯರೇ ಸ್ಪರ್ಧಿಸಿದ್ದಾರೆ. ನಿಮ್ಮ ಸಮಸ್ಯೆಯನ್ನು ದೆಹಲಿಯವರೆಗೆ ತಲುಪಿಸುವಂಥವರಿಗೆ ಮತ ನೀಡಿ ಎಂದು ಹೇಳಿದ್ದೇನೆ. ನನ್ನ ವಿರೋಧಿಗಳು ತಪ್ಪು ಅರ್ಥ ಕಲ್ಪಿಸಿ ಮಾಧ್ಯಮಗಳಲ್ಲಿ ಹರಿಯಬಿಟ್ಟಿದ್ದಾರೆ' ಎಂದು ಹೇಳಿದ್ದಾರೆ.

ಉದ್ಯೋಗ ವಾಣಿ

VARIN INTERNATIONAL RESIDENTIAL SCHOOL AND PU COLLEGE
WANTED
HOSTEL WARDENS: Gender: Male & Female, Experience or Fresher. Qualification: PUC & Above, Attractive Salary, Food and Accommodation Available.
IN HOUSE NURSE: Gender: Female, Experience or Fresher. Qualification: As per norms, Attractive Salary, Food and Accommodation Available.
DRIVERS: Experience with heavy duty badge.
Send your CV to: admissions@virstumkur.in
Drop your CV before 10th April 2024
Call us: 9900042019, 9900042036

ವಿಕಾಸ ಬ್ಯಾಂಕ್
ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ಲಿ.,
ಪ್ರಧಾನ ಕಛೇರಿ : ಸ್ಟೇಷನ್ ರಸ್ತೆ, ಹೊಸಪೇಟೆ

ನೇಮಕಾತಿಗೆ ಅರ್ಜಿ ಆಹ್ವಾನ

ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಲಿ., ಹೊಸಪೇಟೆ ಇವರು ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು, ಆಸಕ್ತ ಅಭ್ಯರ್ಥಿಗಳು ದಿನಾಂಕ 19.04.2024 ರೊಳಗೆ ಬ್ಯಾಂಕಿನ ನಿಗದಿತ ನಮೂನೆಯಲ್ಲಿ ಅಗತ್ಯವಿರುವ ಶುಲ್ಕದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.
ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆಯನ್ನು ದಿನಾಂಕ 21 ಏಪ್ರೀಲ್ 2024ರಂದು ಹೊಸಪೇಟೆಯಲ್ಲಿ ಜರುಗಿಸಲಾಗುವುದು.

ಕ್ರ ಸಂ	ಹುದ್ದೆಗಳು	ದರ್ಜೆ	ಹುದ್ದೆಗಳ ಸಂಖ್ಯೆ
1	ವಿಭಾಗೀಯ ವ್ಯವಸ್ಥಾಪಕರು	ಹಿರಿಯ ಆಡಳಿತ ಅಧಿಕಾರಿ	1
2	ಲೆಕ್ಕ ಪರಿಶೋಧನಾಕಾರರು (CA)	ಹಿರಿಯ ವ್ಯವಸ್ಥಾಪಕರು	2
3	ಶಾಖಾ ವ್ಯವಸ್ಥಾಪಕರು	ವ್ಯವಸ್ಥಾಪಕರು	5
4	ವಸೂಲಾತಿ ಹಿರಿಯ ಅಧಿಕಾರಿ	ಹಿರಿಯ ಅಧಿಕಾರಿ	1
5	ಪರಿಶೀಲನೆ ಮತ್ತು ಪರೀವಿಕ್ಷಣ ಅಧಿಕಾರಿ	ಹಿರಿಯ ಅಧಿಕಾರಿ	1
6	ಹಿರಿಯ ಲೆಕ್ಕ ಪರಿಶೋಧಕರು	ಹಿರಿಯ ಅಧಿಕಾರಿ	1
7	ಹೂಡಿಕೆ ಅಧಿಕಾರಿ	ಅಧಿಕಾರಿ	1
8	ಕಾನೂನು ಅಧಿಕಾರಿ	ಅಧಿಕಾರಿ	1
9	ತಂತ್ರಜ್ಞಾನ ಅಧಿಕಾರಿ	ಅಧಿಕಾರಿ	2
10	ಕೇಂದ್ರಿಯ ವೀಕ್ಷಣಾಧಿಕಾರಿ	ಅಧಿಕಾರಿ	2
11	ಪರಿಕ್ಷಾರ್ತ ಅಧಿಕಾರಿ	ಅಧಿಕಾರಿ	30

ಮೇಲೆ ತಿಳಿಸಿದ ಹುದ್ದೆಗಳಿಗೆ ಅಗತ್ಯ ವಿದ್ಯಾರ್ಹತೆ, ವಯೋಮಿತಿ, ಅನುಭವ ಮತ್ತು ಪರಿಣಿತಿ ಇತ್ಯಾದಿ ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ www.vikasbank.com ನಲ್ಲಿ ಪ್ರಕಟಿಸಲಾಗಿದೆ.
ಸ್ಥಳ : ಹೊಸಪೇಟೆ
ದಿನಾಂಕ : 03–04–2024
ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ತಂತ್ರಜ್ಞಾನ



ವಿಮಾನವನ್ನು ಅದೃಶ್ಯ ಮಾಡಬಲ್ಲ ಮಿಡತೆಯ ಬೆವರು!

ನೇಸರ ಕಾಡನಕುಪ್ಪೆ

ರೇಡಾರ್ ಕಣ್ಣಿಗೆ ಬೀಳದೆ ರಹಸ್ಯ ಕಾರ್ಯಾಚರಣೆ ಮಾಡುವ ಯುದ್ಧವಿಮಾನಗಳ ಬಗ್ಗೆ ನಮಗೆ ತಿಳಿದೇ ಇದೆ. ವಿಮಾನವೊಂದನ್ನು ಅದೃಶ್ಯ ಮಾಡಬಹುದಾದ ವಿಶೇಷ ಗುಣವನ್ನು ನೀಡಬೇಕಾದರೆ ಹಲವು ಸಿದ್ಧತೆಗಳು ಬೇಕಾಗುತ್ತದೆ. ಈ ವಿಮಾನಗಳಿಗಾಗಿಯೇ ವಿಶೇಷವಾದ ಲೋಹದ ಬಳಕೆ, ವಿಶೇಷ ಬಣ್ಣದ ಲೇಪನ ಇತ್ಯಾದಿ ಮಾಡಬೇಕಾಗುತ್ತದೆ. ಇವೆಲ್ಲವೂ ಅತಿ ದುಬಾರಿ. ಬಣ್ಣ ಬದಲಿಸುವ ಗೋಸುಂಬೆ, ನಡೆದಾಡುವ ಕಡ್ಡಿಯ ರೀತಿಯೇ ಇರುವ ಮಿಡತೆ ಇತ್ಯಾದಿ ಕೀಟಗಳು ನಮಗೆ ತಿಳಿದೇ ಇವೆ. ಇದೇ ರೀತಿ 'ಲೀಫ್‌ಹಾಪರ್' ಎಂಬ ಮಿಡತೆ ಜಾತಿಯ ಕೀಟವು ಕಣ್ಣಿಗೆ ಕಾಣದಂತೆ ಅದೃಶ್ಯವಾಗುವ ಗುಣವನ್ನು ಹೊಂದಿದೆ ಎಂಬ ವಿಚಾರವನ್ನು ವಿಜ್ಞಾನಿಗಳು ಸಂಶೋಧಿಸಿದ್ದಾರೆ.

ಅಷ್ಟೇ ಅಲ್ಲ, 'ಲೀಫ್‌ಹಾಪರ್' ಜಾತಿಯ ಈ ಮಿಡತೆಯು ತನ್ನನ್ನು ತಾನು ಅದೃಶ್ಯಗೊಳಿಸಿಕೊಳ್ಳಲು ಅನುಸರಿಸುವ ವಿಧಾನವನ್ನು ನಕಲು ಮಾಡಿ ಅದನ್ನು ವಿಮಾನಗಳಲ್ಲಿ ಬಳಕೆ ಮಾಡಬಹುದಾದ ಸಾಧ್ಯತೆಯನ್ನೂ ವಿಜ್ಞಾನಿಗಳು ಶೋಧಿಸಿದ್ದಾರೆ. ಅಮೆರಿಕದ ಪೆನ್ಸಿಲ್ವೇನಿಯಾ ಸ್ಟೇಟ್ ವಿಶ್ವವಿದ್ಯಾಲಯದ ಮೆಕಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿಜ್ಞಾನಿ ಲಿನ್ ವ್ಯಾಂಗ್ ಹಾಗೂ ಅವರ ತಂಡವು ಈ ಸಂಶೋಧನೆಯನ್ನು ನಡೆಸಿದೆ.

ಲೀಫ್‌ಹಾಪರ್ ಜಾತಿಯ ಮಿಡತೆಯು ತನ್ನ ಮೈಯ ಮೇಲೆ ವಿಶೇಷವಾದ ಬೆವರನ್ನು ಹೊರ ಸೂಸುತ್ತದೆ. ಈ ಬೆವರನ್ನು 'ಬ್ರೋಕೋಸೋಮ್ಸ್' ಎಂದು ಕರೆಯಲಾಗುತ್ತದೆ. ಈ ಬ್ರೋಕೋಸೋಮ್ಸ್ ಅನ್ನು ಸೂಕ್ಷ್ಮದರ್ಶಕದಲ್ಲಿ ವೀಕ್ಷಿಸಿದರೆ ಅದು ಜೇನಿನ ಗೂಡಿನಂತಹ ರಚನೆಯನ್ನು ಹೊಂದಿರುವ ಉದ್ದನೆಯ ಕಡ್ಡಿಗಳಂತೆ ಅಥವಾ ಫುಟ್‌ಬಾಲ್ ಆಕೃತಿಯನ್ನು ಹೊಂದಿರುವಂತೆ ಗೋಚರಿಸುತ್ತದೆ. ಈ ಬ್ರೋಕೋಸೋಮ್ಸ್ ಅನ್ನು ಅಧ್ಯಯನ ಮಾಡಿರುವ ವಿಜ್ಞಾನಿಗಳು, ಇವು ಸಾಮಾನ್ಯ ಬೆಳಕು ಹಾಗೂ ನೇರಳಾತೀತ ಬಣ್ಣಗಳನ್ನು ಹೀರಿಕೊಳ್ಳುವ ವಿಶೇಷ ಗುಣವನ್ನು ಹೊಂದಿವೆ ಎಂದು ಕಂಡುಹಿಡಿದಿದ್ದಾರೆ.

ಈ ಬೆವರನ್ನು ತಮ್ಮ ಪ್ರಯೋಗಾಲಯದಲ್ಲಿ ಅಧ್ಯಯನ ಮಾಡಿರುವ ವಿಜ್ಞಾನಿಗಳು ಬೆವರಿನ ರಚನೆ, ಅದಲ್ಲಿರುವ ರಾಸಾಯನಿಕ ಸಂಯೋಜನೆ ಇತ್ಯಾದಿ ಅಂಶಗಳನ್ನು ದಾಖಲಿಸಿದ್ದಾರೆ. ಬಳಿಕ ರಾಸಾಯನಿಕವಾಗಿ ಬೆವರನ್ನು ನಕಲು ಮಾಡಿ ಕೃತಕವಾದ ಬೆವರನ್ನು ಸೃಷ್ಟಿಸಿದ್ದಾರೆ. ಈ ದ್ರಾವಣವನ್ನು ಬಳಿಕ ಸಾಂಪ್ರದಾಯಿಕವಾಗಿ ಬಳಸುವ ಬಣ್ಣಗಳಿಗೆ ಬೆರಸಿ ವಾಹನಗಳಿಗೆ ಸಿಂಪಡಿಸಿ ಗಮನಿಸಿದ್ದಾರೆ. ಅಚ್ಚರಿ ಎಂಬಂತೆ, ರೇಡಾರ್ ಹೊರಸೂಸುವ ಮೈಕ್ರೋವೇವ್ ಅಲೆಗಳು ಈ ದ್ರಾವಣಲೇಪಿತ ವಾಹನಗಳ ಮೇಲ್ಮೈಯನ್ನು ತೂರಿಕೊಂಡುಹೋಗಿದೆ. ಅಂದರೆ, ರೇಡಾರ್ ಕಣ್ಣಿಗೆ ವಾಹನವು ಕಂಡಿಲ್ಲ. ಬಳಿಕ ಈ ದ್ರಾವಣಮಿಶ್ರಿತ ಬಣ್ಣವನ್ನು ಸಣ್ಣ ಗಾತ್ರದ ವಿಮಾನಗಳಿಗೂ ಲೇಪಿಸಿ ಪ್ರಯೋಗಿಸಿದ್ದು ಪ್ರಯೋಗ ಯಶಸ್ವಿಯಾಗಿದೆ.

'ಈ ದ್ರಾವಣವನ್ನು ಎಷ್ಟು ಪ್ರಮಾಣದಲ್ಲಿ ಬೇಕೋ ಅಷ್ಟು ಪ್ರಮಾಣದಲ್ಲಿ ತಯಾರಿಸಬಹುದಾಗಿದ್ದು, ತಯಾರಿಯ ಬೆಲೆ ಅತಿ ಕಡಿಮೆ ಎನ್ನುವುದು ಹೆಗ್ಗಳಿಕೆಯಾಗಿದೆ' ಎಂದು ವಿಜ್ಞಾನಿ ಲಿನ್ ವ್ಯಾಂಗ್ ಹೇಳಿದ್ದಾರೆ. ಹಾಲಿ ಬಳಕೆಯಲ್ಲಿ 'ಸ್ಟೆಲ್ತ್' ತಂತ್ರಜ್ಞಾನದಲ್ಲಿ ಅತಿ ದುಬಾರಿ ವೆಚ್ಚದ ಲೋಹಗಳು, ಬಣ್ಣಗಳನ್ನು ಲೇಪಿಸಬೇಕಾಗುತ್ತದೆ. ಅಲ್ಲದೇ, ವಿಮಾನದ ದೇಹದ ರಚನೆಯು ವಿಶೇಷವಾದ ಆಕೃತಿಯನ್ನು ಹೊಂದಿರುವಂತೆಯೇ ರಚಿಸಬೇಕಾಗುತ್ತದೆ. ಈ ಕಾರಣಗಳಿಂದಾಗಿ ಸ್ಟೆಲ್ತ್ ಗುಣವನ್ನು ಹೊಂದಿರುವ ವಿಮಾನಗಳನ್ನು ಮುಂದುವರೆದಿರುವ ರಾಷ್ಟ್ರಗಳಲ್ಲಿ ಉತ್ಪಾದಿಸುವುದೇ ಕಷ್ಟಕರವಾಗಿದೆ. ಹೀಗಿರುವಾಗ ಮುಂದುವರೆಯುತ್ತಿರುವ ರಾಷ್ಟ್ರಗಳಿಗೆ ಈ ಬಗೆಯ ವಿಮಾನಗಳನ್ನು ತಯಾರಿಸುವುದು ಅಥವಾ ಕೊಳ್ಳುವುದು ತೀರಾ ಕಷ್ಟಕರ.

> ಲೀಫ್‌ಹಾಪರ್ ಜಾತಿಯ ಮಿಡತೆ ವಿಶೇಷವಾದ ಬೆವರನ್ನು ಹೊರಸೂಸುತ್ತದೆ.

'ಇವೆಲ್ಲಕ್ಕೂ ನಮ್ಮ ಸಂಶೋಧನೆಯಿಂದ ಪರಿಹಾರ ಸಿಗಬಹುದು ಎಂಬ ಆಶಾಭಾವನೆ ನಮಗಿದೆ. ಪರಿಸರದಲ್ಲಿ ಲಭ್ಯವಿರುವ ರಾಸಾಯನಿಕಗಳನ್ನೇ ಬಳಸಿಕೊಂಡು ನಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುವುದು ಅತಿ ಜಾಣ್ಮೆಯ ಹೆಜ್ಜೆ. ಲೀಫ್‌ಹಾಪರ್ ನಮ್ಮ ಪರಿಸರದಲ್ಲಿ ಅತಿ ಸಾಮಾನ್ಯವಾಗಿ ಕಂಡುಬರುವ ಕೀಟ. ಕೆಲವು ಸಾಮಾನ್ಯ ಮಿಡತೆಗಳಲ್ಲೂ ಈ ಗುಣವನ್ನು ನಾವು ಕಂಡಿದ್ದೇವೆ. ನಾವು ಕಂಡು ಹಿಡಿದಿರುವ ಸೂತ್ರವನ್ನು ಬಳಸಿ ಅತಿ ಕಡಿಮೆ ವೆಚ್ಚದಲ್ಲಿ ಅದೃಶ್ಯ ಗುಣವುಳ್ಳ ಸಾಧನಗಳನ್ನು ತಯಾರಿಸಬಹುದು' ಎಂದು ಲಿನ್ ಹೇಳಿದ್ದಾರೆ.

ಎಲ್ಲೆಲ್ಲಿ ಬಳಕೆ: ಅತಿ ಮುಖ್ಯವಾಗಿ ವಾಯುಪಡೆ ಹಾಗೂ ನೌಕಾಪಡೆಗಳಲ್ಲಿ ಈ ತಂತ್ರಜ್ಞಾನವನ್ನು ಬಳಸಬಹುದಾಗಿದೆ. ಸಾಮಾನ್ಯವಾಗಿ ಎಲ್ಲ ದೇಶಗಳಲ್ಲಿ ಸೈನ್ಯದ ಮೇಲೆ ಹೂಡುವ ಬಂಡವಾಳವು ಅತಿ ದೊಡ್ಡ ಮೊತ್ತವನ್ನು ಹೊಂದಿರುತ್ತದೆ. ಈ ವೆಚ್ಚವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ನಮ್ಮ ಸಂಶೋಧನೆಯು ಮಹತ್ತರವಾದ ಕೊಡುಗೆಯನ್ನು ನೀಡಲಿದೆ – ಎಂದು ಲಿನ್ ವಿಶ್ವಾಸ ವಕ್ತಪಡಿಸಿದ್ದಾರೆ. ಅಲ್ಲದೇ, ಈ ಸಂಶೋಧನಸೂತ್ರವು ಪರಿಸರಪ್ರಿಯವೂ ಆಗಿರಲಿದೆ. ಯಾವುದೇ ಬಗೆಯ ಹಾನಿಕಾರಕ ರಾಸಾಯನಿಕಗಳ ಬಳಕೆ ಆಗದ ಕಾರಣ ತಯಾರಿಯ ಸಮಯ ಅಥವಾ ಬಳಕೆಯ ಸಮಯದಲ್ಲಿ ಪರಿಸರ ಮಾಲಿನ್ಯ ಆಗುವುದಿಲ್ಲ ಎಂದೂ ವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ.



ಕೃತಕ ಬುದ್ಧಿಮತ್ತೆಯಿಂದ ಸಿದ್ಧವಾಯಿತು ಔಷಧ!

ಅಮೃತೇಶ್ವರಿ ಬಿ.

ಕೃತಕ ಬುದ್ಧಿಮತ್ತೆಯಲ್ಲಿ ಈಗ ನ್ಯಾರೋ, ಜನರಲ್, ಸೂಪರ್ ಎಐ ಎಂದು ಅನೇಕ ವಿಧಗಳಿವೆ. ಜನರೇಟಿವ್ ಎಐ ಕೂಡ ಒಂದು ವಿಧ. 'ಜನರೇಟಿವ್ ಎಐ' ಎಂದರೆ ಹಲವಾರು ವಿಧದ ಮಾಹಿತಿಗಳನ್ನು, ಅರ್ಥಾತ್ ಪಠ್ಯ, ಪ್ರತಿಮೆಗಳು, ಚಿತ್ರಣಗಳು, ಆಡಿಯೊಗಳು ಹಾಗೂ ಕೃತಕ ದತ್ತಾಂಶಗಳನ್ನು ಸಂಯೋಜಿಸಿ ಉತ್ಪಾದಿಸುವ ಒಂದು ತಂತ್ರಜ್ಞಾನ. ಇವು ನೀವು ಯಾವುದೇ ವಿಷಯವನ್ನು ನೀಡಿದರೂ ಕ್ಷಣಮಾತ್ರದಲ್ಲಿ ನಿಮ್ಮ ಮುಂದೆ ಉತ್ತರವನ್ನು ಪ್ರಸ್ತುತಪಡಿಸಿಬಿಡುತ್ತವೆ! ಕೆಲವೇ ದಿನಗಳಲ್ಲಿ ಜನಪ್ರಿಯವಾಗಿರುವ ಚಾಟ್ ಜಿಪಿಟಿ, ಚಾಟ್ ಬಾಟುಗಳೇ ಜನರೇಟಿವ್ ಎಐನ ಉತ್ತಮ ಉದಾಹರಣೆ. ನಾವು ಕಷ್ಟಪಟ್ಟೋ ಇಷ್ಟಪಟ್ಟೋ ನಮ್ಮ ಕ್ರಿಯಾಶೀಲತೆಯನ್ನು ಉಪಯೋಗಿಸಿ ಮಾಡಬಹುದಾದ ಕೆಲಸಗಳಿಗೆ ಇವು ಬ್ರೇಕ್ ಹಾಕಿಬಿಡುತ್ತವೆ ಎನ್ನುವ ಆರೋಪವೂ ಇವುಗಳ ಮೇಲಿದೆಯೆನ್ನಿ. ಇವು ಇದುವರೆಗೂ ನಮಗೆ ಮಾಹಿತಿಗಳನ್ನಷ್ಟೇ ನೀಡುತ್ತಿದ್ದವು. ಆದರೆ ಈಗ ಕೃತಕ ಬುದ್ಧಿಮತ್ತೆಯ ಯಂತ್ರಗಳು ಔಷಧಗಳನ್ನೂ ತಯಾರಿಸಬಲ್ಲವಂತೆ! ಹಾಗೆಂದು ಸ್ಟ್ಯಾಂಡ್ ಫರ್ಡ್ ಮೆಡಿಸಿನ್ ಮತ್ತು ಮೆಕ್ಮಾಸ್ಟರ್ ವಿಶ್ವವಿದ್ಯಾಲಯದ ಸಂಶೋಧಕರಾದ ಜೇಮ್ಸ್ ಜೌ ಮತ್ತು ಸಂಗಡಿಗರು ಮೊನ್ನೆ 'ನೇಚರ್ ಮಷೀನ್ ಇಂಟೆಲಿಜೆನ್ಸ್' ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಹೌದು, ಆ್ಯಂಟಿಬಯಾಟಿಕ್ಕುಗಳಿಗೇ ನಿರೋಧವೊಡ್ಡಿ ಬೆಳೆಯುವ ಬ್ಯಾಕ್ಟೀರಿಯಾಗಳನ್ನು ಕೊಲ್ಲುವ ಔಷಧವೊಂದನ್ನು ಎಐ ತಯಾರಿಸಿದೆಯಂತೆ!

ನಮಗೆ ಬ್ಯಾಕ್ಟೀರಿಯಾಗಳಿಂದ ಸೋಂಕು ತಗುಲಿದಾಗ, ಅವನ್ನು ಕೊಲ್ಲಲು ಅಥವಾ ಅವುಗಳ ಬೆಳವಣಿಗೆಯನ್ನು ಕುಂಠಿತಗೊಳಿಸಲು ನೀಡುವ ಔಷಧಗಳೇ ಆ್ಯಂಟಿಬಯಾಟಿಕ್ಕುಗಳು. ಆದರೆ ಇವುಗಳಿಗೂ ನಿರೋಧವೊಡ್ಡಿ ನಮ್ಮ ದೇಹದೊಳಗೆ ತಮ್ಮ ಸಂತತಿಯನ್ನು ಮುಂದುವರೆಸಬಲ್ಲ ಬ್ಯಾಕ್ಟೀರಿಯಾಗಳೂ ಇವೆ. ಅಂಥ ಬ್ಯಾಕ್ಟೀರಿಯಾಗಳಿದ್ದಾಗ ನಮಗೆ ನೀಡುವ ಔಷಧವೆಲ್ಲವೂ ವ್ಯರ್ಥ. ಜೊತೆಗೇ ಅನವಶ್ಯಕವಾದ ರಾಸಾಯನಿಕಗಳನ್ನೂ ನಾವು ಸೇವಿಸಬೇಕಾಗುತ್ತದೆ; ಕಾಯಿಲೆಯೂ ಗುಣವಾಗುವುದಿಲ್ಲ. ಇದರಿಂದಾಗಿಯೇ ಜಾಗತಿಕವಾಗಿ ವರ್ಷದಲ್ಲಿ ಸುಮಾರು ಐವತ್ತುಲಕ್ಷ ಜನರು ಸಾಯುತ್ತಿದ್ದಾರಂತೆ. ಹಾಗಾಗಿ ಇದನ್ನು ಬಗೆಹರಿಸುವ ಹೊಸ ಮಾರ್ಗಗಳ ಅವಶ್ಯಕತೆಯಿದೆ ಎನ್ನುತ್ತಾರೆ, ವಿಜ್ಞಾನಿಗಳು. ಅದಕ್ಕಾಗಿ ಸ್ಟ್ಯಾಂಡ್ ಫರ್ಡ್ ಮೆಡಿಸಿನ್ ಮತ್ತು ಮೆಕ್ ಮಾಸ್ಟರ್ ವಿಶ್ವವಿದ್ಯಾನಿಲಯದ ಸಂಶೋಧಕರು ಜನರೇಟಿವ್ ಎಐ ತಂತ್ರಜ್ಞಾನವನ್ನು ಬಳಸಿಕೊಂಡಿದ್ದಾರೆ. ಇವರು ಸಿಂಥೇಮೋಲ್ ಎನ್ನುವ, ಔಷಧಗಳನ್ನು ತಯಾರಿಸುವ ಯಂತ್ರವೊಂದನ್ನು ರೂಪಿಸಿದ್ದಾರಂತೆ. ಇದು ಆಂಟಿಬಯಾಟಿಕ್ಕುಗಳಿಗೇ ನಿರೋಧವೊಡ್ಡಿ ಸೋಂಕಿತರನ್ನು ಕೊಲ್ಲುತ್ತಿದ್ದ 'ಅಸಿನೆಟೋಬ್ಯಾಕ್ಟರ್ ಬೌಮನ್ನಿ' (Acinetobacter baumanni) ಎನ್ನುವ ಮಾರಕ ಬ್ಯಾಕ್ಟೀರಿಯಾವನ್ನು ಹತ್ತಿಕ್ಕಲು ಸುಮಾರು ಆರು ಹೊಸ ಔಷಧಗಳನ್ನು ತಯಾರಿಸಿದೆಯಂತೆ. ಹೊಸ ಔಷಧಗಳನ್ನು ತಯಾರಿಸಬಹುದಾದಂತಹ ಲಕ್ಷಾಂತರ ರಾಸಾಯನಿಕ ಅಣುಗಳು ಲಭ್ಯವಿದ್ದರೂ ಇದುವರೆಗೂ ಅವೆಲ್ಲವನ್ನೂ ಬಳಸಿ, ಪರೀಕ್ಷಿಸಲಾಗಿರಲಿಲ್ಲ. ಅವೆಲ್ಲವೂ ಬಹಳಷ್ಟು ಸಮಯ ಹಾಗೂ ಶ್ರಮವನ್ನು ತೆಗೆದುಕೊಳ್ಳಬಹುದು. ಆದ್ದರಿಂದ ತುರ್ತಾಗಿ ಬೇಕಾಗಿದ್ದ ನಿಸರ್ಗದಲ್ಲಿ ನಮಗೆ ಕಾಣಿಸಿರದ ಹೊಸತಾದ ಔಷಧಕ್ಕಾಗಿ ನಾವು ಎಐ ಅನ್ನು ಬಳಸಿಕೊಂಡಿದ್ದೇವೆ ಎನ್ನುತ್ತಾರೆ, ಜೇಮ್ಸ್. 'ಜನರೇಟಿವ್ ಎಐ' ಬರುವ ಮೊದಲೇ ಸಂಶೋಧಕರು ಅದೇ ರೀತಿಯ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಆ್ಯಂಟಿಬಯಾಟಿಕ್ಕುಗಳನ್ನು ತಯಾರಿಸಲು ಪ್ರಯತ್ನಿಸಿದ್ದರಂತೆ. ಅರ್ಥಾತ್, ಈಗಾಗಲೇ ಲಭ್ಯವಿರುವ ಔಷಧಗಳ ಪಟ್ಟಿಯನ್ನು ಜಾಲಾಡಿ, ಯಾವ ಸಂಯುಕ್ತಗಳು ಅವರ ಉದ್ದೇಶಿತ ರೋಗಕಾರಕವನ್ನು ಕೊಲ್ಲಬಹುದು ಎಂದು ಅಂದಾಜಿಸಲು ಪ್ರಯತ್ನಿಸಿದ್ದರಂತೆ. ಆ ತಂತ್ರಜ್ಞಾನವು ಈಗಾಗಲೇ ತಿಳಿದಿರುವ ಸುಮಾರು ಹತ್ತು ಕೋಟಿ ಸಂಯುಕ್ತಗಳನ್ನು ಸೋಸಿಬಿಟ್ಟಿತ್ತಂತೆ! ಆದರೆ 'ರಾಸಾಯನಿಕಗಳ ವ್ಯಾಪ್ತಿ ದೈತ್ಯವಾದದ್ದು' ಎನ್ನುತ್ತಾರೆ, ಮತ್ತೊಬ್ಬ ಸಂಶೋಧಕರಾದ ಸ್ವಾನ್ ಸನ್. ಆ್ಯಂಟಿಬ್ಯಾಕ್ಟೀರಿಯಲ್ ಗುಣಗಳಿರುವ ಸುಮಾರು 1060 ರಾಸಾಯನಿಕ ಸಂಯುಕ್ತಗಳನ್ನು ಇದರಿಂದ ಅಂದಾಜಿಸಲಾಗಿದೆಯಂತೆ. ಉತ್ತಮ ಔಷಧವನ್ನು ರೂಪಿಸಲು ಇನ್ನೂ ಎಷ್ಟು ಸಂಯುಕ್ತಗಳನ್ನು ಸಂಶೋಧಕರು ಪರೀಕ್ಷಿಸುವುದು ಬಾಕಿ ಇದೆ ಹಾಗೂ ಅದಕ್ಕೆ ಎಷ್ಟು ಸಮಯ ಬೇಕಾಗಬಹುದು ಊಹಿಸಿನೋಡಿ!

ಆದ್ದರಿಂದ ಜನರೇಟಿವ್ ಎಐನ ಕಲ್ಪಿಸಿಕೊಳ್ಳುವ ಪ್ರವೃತ್ತಿಯು ಔಷಧ ಪತ್ತೆಗೆ ಒಂದು ವರಪ್ರಸಾದವಾಗಬಹುದು ಎಂದು ಈ ತಂತ್ರಜ್ಞಾನವನ್ನು ಸಂಶೋಧಕರು ಆಯ್ಕೆ ಮಾಡಿಕೊಂಡಿದ್ದಾರೆ. ಆದರೆ ಹಿಂದಿನ ಪ್ರಯತ್ನಗಳಲ್ಲಿ ಎಐನ ಕಲ್ಪನಾಸಾಮರ್ಥ್ಯ ಅಪರಿಮಿತವಾದ್ದರಿಂದ, ಅವು ಕಲ್ಪಿಸಿದ ಔಷಧಗಳು ಪ್ರಯೋಗಶಾಲೆಗಳಲ್ಲಿ ಪ್ರಾಯೋಗಿಕವಾಗಿ ತಯಾರಿಸಲು ಅಸಾಧ್ಯವಾಗಿರುತ್ತಿದ್ದುವಂತೆ. ಹಾಗಾಗಿ ಅವುಗಳ ಕಲ್ಪನೆಗೆ ಕಾಪುಗಂಬಿಗಳನ್ನು ಹಾಕುವುದು ಅವಶ್ಯವಾಗಿತ್ತು. ಇವೆಲ್ಲವನ್ನೂ ಖಾತರಿಪಡಿಸಿಕೊಂಡು ಸಿಂಥೆಮೋಲ್ ಯಂತ್ರವನ್ನು ಹೊಸದಾಗಿ ರೂಪಿಸಲಾಗಿದೆಯಂತೆ. ಅದು ಎಂತಹುದೇ ಔಷಧವನ್ನು ಅಂದಾಜಿಸಿದರೂ ನಾವು ಅದನ್ನು ಪ್ರಯೋಗಶಾಲೆಗಳಲ್ಲಿ ತಯಾರಿಸಲು ಸಾಧ್ಯವಾಗುವಂತೆ ಮಾಡಬೇಕಿತ್ತು. ಇದಕ್ಕಾಗಿ ಸ್ವಾನ್ ಸನ್, ಗಣಕೀಕೃತ ಕೆಲಸ ಹಾಗೂ ಪ್ರಯೋಗಶಾಲೆಗಳ ಸಂಯೋಗವನ್ನು ಖಾತರಿಪಡಿಸಿಕೊಂಡಿದ್ದಾರೆ. ಸಿಂಥೆ ಮೋಲ್ ಮಾದರಿ ಯಂತ್ರಕ್ಕೆ 1,30,000ಕ್ಕೂ ಹೆಚ್ಚಿನ ಮಾಲಿಕ್ಯುಲಾರ್ ಬಿಲ್ಡಿಂಗ್ ಬ್ಲಾಕ್ ಹಾಗೂ ಪೂರ್ವದೃಢೀಕೃತ ರಾಸಾಯನಿಕ ಕ್ರಿಯೆಗಳನ್ನು ಬಳಸಿಕೊಂಡು ಔಷಧಗಳನ್ನು ರೂಪಿಸಲು ತರಬೇತಿ ನೀಡಲಾಗಿತ್ತಂತೆ. ಜೊತೆಗೆ, ಅಸಿನೆಟೋಬ್ಯಾಕ್ಟರ್ ಬೌಮನ್ನಿ ಬ್ಯಾಕ್ಟೀರಿಯಾ ನಿರೋಧಕತೆಗೆ ಲಭ್ಯವಿರುವ ಎಲ್ಲ ರಾಸಾಯನಿಕಗಳ ಚಟುವಟಿಕೆಗಳ ಬಗ್ಗೆಯೂ ತರಬೇತಿ ನೀಡಿದ್ದರಂತೆ. ಈ ಎಲ್ಲಾ ಮಾಹಿತಿ ಹಾಗೂ ಮಾರ್ಗಸೂಚಿಗಳನ್ನು ಪರಿಗಣಿಸಿ, ಸಿಂಥೇಮೋಲ್ ಸುಮಾರು 25000 ಆ್ಯಂಟಿಬಯಾಟಿಕ್ಕುಗಳು ಮತ್ತು ಅವನ್ನು ಒಂಬತ್ತು ಗಂಟೆಗಳೊಳಗೇ ತಯಾರಿಸುವ ವಿಧಾನಗಳನ್ನೂ ನೀಡಿಬಿಟ್ಟಿತ್ತಂತೆ! ಇವುಗಳಿಂದ ಈಗಾಗಲೇ ಲಭ್ಯವಿರುವ ಔಷಧಗಳಿಗೆ ಹೋಲುವಂಥವನ್ನು ತೆಗೆದು, ಭಿನ್ನವಾದವುಗಳನ್ನು ಮಾತ್ರ ಹೆಕ್ಕಿದ್ದಾರೆ. ಈಗ ವಿಜ್ಞಾನಿಗಳ ಕೈಯಲ್ಲಿ ಹೊಸ ಔಷಧ ಮಾತ್ರವಲ್ಲದೇ, ಅವನ್ನು ತಯಾರಿಸುವ ಪ್ರತ್ಯೇಕ ಮಾರ್ಗಸೂಚಿಗಳೂ ಇವೆ ಎನ್ನುತ್ತಾರೆ, ಜೌ.

ಸಿಂಥೇಮೋಲ್ ನೀಡಿದ ಪಟ್ಟಿಯಿಂದ ಸಂಶೋಧಕರು ಉತ್ತಮವಾದ ರಾಸಾಯನಿಕಗಳನ್ನಷ್ಟೆ ಆಯ್ದುಕೊಂಡು ಅವು ಹೇಗೆ ಅಸಿನೆಟೋಬ್ಯಾಕ್ಟರ್ ಬೌಮನ್ನಿ ಅನ್ನು ಕೊಲ್ಲುತ್ತವೆ ಎಂದು ಪರೀಕ್ಷಿಸಿದ್ದಾರೆ. ಅವುಗಳಲ್ಲಿ ಆರು ರಾಸಾಯನಿಕಗಳು ಅತ್ಯುತ್ತಮವಾಗಿ ಕೆಲಸ ಮಾಡಬಲ್ಲವಂತೆ. ಇವು ಅಸಿನೆಟೋಬ್ಯಾಕ್ಟರ್ ಬೌಮನ್ನಿ ಅಲ್ಲದೇ ಆ್ಯಂಟಿಬಯಾಟಿಕ್ಕುಗಳಿಗೇ ನಿರೋಧಕತೆ ಬೆಳೆಸಿಕೊಳ್ಳಬಲ್ಲ 'ಈ.ಕೋಲೈ', ನ್ಯುಮೋನಿಯಾದಂತಹ ಇತರೆ ಬ್ಯಾಕ್ಟೀರಿಯಾಗಳ ವಿರುದ್ಧವೂ ಆ್ಯಂಟಿಬ್ಯಾಕ್ಟೀರಿಯಲ್ ಆಗಿ ಕೆಲಸ ಮಾಡಬಲ್ಲವಂತೆ. ಇವು ಒಂದಕ್ಕೊಂದು ಬಹಳ ಭಿನ್ನವಾಗಿವೆಯಂತೆ. ಮುಂದಿನ ಸಂಶೋಧನೆಗಳಲ್ಲಿ ಈ ಔಷಧಗಳು ರಾಚನಿಕ ಹಂತದಲ್ಲಿ ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದನ್ನು ಪರೀಕ್ಷಿಸಲಿದ್ದಾರೆ. ಒಟ್ಟಾರೆ ಮನುಷ್ಯರು ಔಷಧಗಳ ವಿಷಯದಲ್ಲಿ ಇದುವರೆಗೂ ಕಂಡಿರದ ಹೊಸ ಸಾಧ್ಯತೆಗಳನ್ನು ಎಐ ತಂತ್ರಜ್ಞಾನವು ತೆರೆದಿಟ್ಟಿದೆ ಎನ್ನುತ್ತಾರೆ, ಜೌ.

ನೀಟ್- ಪಿಯುಸಿ ಸಿಇಟಿ ಪರೀಕ್ಷೆ ದಿಕ್ಸೂಚಿ

NEET BIOLOGY

1) The periplaneta belongs to which of this phyla
(a) Echinodermata (b) Annelida
(c) Mollusca (d) Arthropoda
Ans: (d)

2) Match the animals given in column A with their location in Column B.

	Column A		Column B
i	Dodo	a	Africa
ii	Quagga	b	Russia
iii	Thylacine	c	Mauritius
iv	Stellar's sea cow	d	Australia

Choose the correct match-
a) i – a, ii – c, iii – b, iv – d
b) i – d, ii – c, iii – a, iv – b
c) i – c, ii – a, iii – b, iv – d
d) i – c, ii – a, iii – d, iv – b`
Ans:- d

3) Given below are two statements: One is labelled as **Assertion-A** and the other is labelled as **Reason-R:**
Assertion- A: The first stage of gametophyte in the life cycle of moss is protonema stage.
Reason-R: Protonema develops directly from spores produced in capsule.
In the light of the above statements, choose the most appropriate answer from the options given below:
a) A is not correct but R is correct.
b) Both A and R are correct and R is the correct explanation of A.
c) Both A and R are correct but R is NOT the correct explanation of A.
d) A is correct but R is not correct.
Ans:-b
Expl^n:- Mosses spores released from the capsule germinate to form the filamentous structure called protonema. It is the first stage of gametophyte.

4) Identify the pair of heterosporous pteridophytes among the following:
a) Equisetum and Salvinia
b) Lycopodium and Selaginella
c) Selaginella and Salvinia
d) Psilolum and Salvinia
Ans:- C
Expl^n:- Genera like Selaginella and Salvinia which produce two kinds of spores, macro (large) and micro (small) spores, are known as heterosporous

5) Which of the following is used as an atmospheric pollution indicator?
a) Lepidoptera b) Lichems
c) Lycopersicon d) Lycopodium
Ans:- b

6) The theory of spontaneous generation stated that –
a) life arose from living forms only
b) life can arise from both living and non-living
c) life can arise from non-living things only.
d) life arises spontaneously, neither from living nor from the non-living.
Ans:- c

7) Animal husbandry and plant breeding programmes are the examples of –
a) reverse evolution b) artificial selection
c) mutation d) natural selection
Ans:- b

8) Paleantological evidences for evolution refer to the –
a) development of embryo
b) homologous organs c) fossils
d) analogous organs
Ans:- c

9) The bones of forelimbs of whale, bat, cheetah and man are similar in structure, because –
a) one organism has given rise to another
b) they share a common ancestor
c) they perform the same function
d) they have biological similarities
Ans:- b

10) Analogous organs arise due to -
a) divergent evolution b) artificial selection
c) genetic drift d) convergent evolution
Ans:- d

11) Appearance of antibiotic bacteria is an example of
a) adaptive radiation b) transduction
c) pre-existing variation in the population
d) divergent evolution
Ans:- c

12). The labrum in cockroach is attached to the head capsule through the means of
(a) Clypeus (b) Genas
(c) Frons (d) All the above
Ans: (a)

13) Family Fabaceae differs from Solanaceae and Liliaceae. With respect to the stamens, pick out the characteristics specific to family Fabaceae but not found in Solanaceae or Liliaceae.
a) Epiphyllous and Dithecous anthers
b) Diadelphous and Dithecous anthers
c) Polyadelphous and epipetalous stamens
d) Monoadelphous and Monothecous anthers
Ans:- (b)
Expl^n:- In fabaceae family the filaments of nine stamen are united into one bundle and tenth posterior stamen stand apart (diadelphous condition). Anther in fabaceae is of two lobes or two theca thus called dithecous anther. These two characteristics are present in the members of fabaceae family but not found in members of solanacea or liliaceae family. Androecium: ten, diadelphous, anther dithecous

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET CHEMISTRY

42) Incorrectly matched pair is:……………
a) XeF_6 – distorted octahedral
b) $XeOF_4$ – square pyramidal
c) XeO_3 – pyramidal
d). XeF_4 – tetrahedral
Ans: (d)
Expln:- In XeF_6 there are 6 bond pairs and one lone pair. Thus the shape of XeF_6 is distorted octahedral.
In $XeOF_4$, Xe is sp^3d hybridized and the shape is square pyramidal.
In XeO_3, Xe is sp^3 hybridized and the shape is trigonal pyramidal.
In XeF_4, Xe is sp^3d^2 hybridized. It has 4 bond pairs and two lone pairs. Thus, the shape issquare planar.

43. Which of the following is a network solid?
a) SO_2 (solid) b) I_2
c) Diamond d) H_2O (Ice)
Ans:-C

44. Which of the following solids is not an electrical conductor?
i) Mg (s) ii) TiO (s)
iii) I_2 (s) iv) H_2O (s)
a) (i) only b) (ii) only
c) (iii) and (iv) only d) (ii), (iii) and (iv)
Ans:-c

45) Bond angle in PH_4^+ is more than that of PH_3. This is because:
a) PH_3 has a planar trigonal structure
b) Hybridisation of P changes when PH_3 is converted to PH_4^+
c) Lone pair-bond pair repulsion exists in PH_3
d) PH_4^+ has a square planar structure
Ans: (c)
Expln:- The hydrides of group 15, 16 below the 3rd period, follows Drago's rule. The rule states that due to a large energy difference between the atomic orbitals, these compounds do not exhibit hybridization. Thus, PH_3 will not exhibit hybridization and here the bond formation takes place due to the overlap of pure p-orbitals and s-orbitals. PH_3 has a lone pair on the central P atom, which is absent in PH_4^+. Thus in PH_3, there will be bond pair – lone pair repulsion and this is the reason why the bond angle in PH_3 is less than that of PH_4^+.

46)



Soln: (a)



47) $A_{(g)} \xrightarrow{\Delta} P_{(g)} + Q_{(g)} + R_{(g)}$, Follows first order kinetics with **a half-life of 69.3s at 500°C. Starting from the gas 'A' enclosed in a container at 500°C and at a pressure of 0.4 atm, the total pressure of the system after 230 s will be…….**
(a) 1.15 atm (b) 1.32 atm
(c) 1.22 atm (d) 1.12 atm
Soln: d:
$t_{1/2} = 69.3s$, $t = 230$ s, $a = 0.4$ atm
For first order reaction,

$$k = \frac{0.693}{t_{1/2}} = \frac{0.693}{69.3} = 0.01 s^{-1}$$

$$k = \frac{2.303}{t} \log \frac{a}{a-x} = \frac{2.303}{230} \log \frac{0.4}{0.4-x}$$

$$0.01 = \frac{2.303}{230} \log \frac{.4}{0.4-x} = 0.01 \log \frac{0.4}{0.4-x}$$

$$\frac{0.01}{0.01} = \log \frac{0.4}{0.4-x} \Rightarrow 1 = \text{loog} \frac{.4}{0.4-x}$$

$$\text{Anti}\log \text{ of } 1 = \frac{0.4}{0.4-x} \Rightarrow 10 = \frac{0.4}{0.4-x}$$

$$x = 0.36$$

for the given reaction,

	$A_{(g)} \xrightarrow{\Delta}$	$P_{(g)}$ +	$Q_{(g)}$ +	$R_{(g)}$
Initial	0.4	0	0	0
Final	0.4 – 0.36	0.36	0.36	0.36

Total pressure
$= (0.4 - 0.36) + (3 \times 0.36) = 1.12$ atm

48) Graphite is a good conductor of electricity due to the presence of ……………
a) long pair of electrons b) cations
c) free valence electrons
d) anions
Ans:-b

49) Which of the following oxides behave as conductor or insulator depending upon temperature?
a) TiO b) SiO_2
c) TiO_3 d) MgO
Ans:- C

50) Which of the following oxides show electrical properties like metals?
a) SiO_2 b) MgO
c) SO_2 (s) d) CrO_2
Ans:-d

ಬಿಸಿಗಾಳಿಗೆ ತತ್ತರಿಸಲಿದೆ ಕರ್ನಾಟಕ

ಭಾರತೀಯ ಹವಾಮಾನ ಇಲಾಖೆಯು ಕರ್ನಾಟಕದಲ್ಲಿ ಬಿಸಿಗಾಳಿಯ ಮುನ್ನೆಚ್ಚರಿಕೆಯನ್ನು ನೀಡಿದೆ. ಈ ಪ್ರಕಾರ ಬಿಸಿಗಾಳಿ ತಾಪಕ್ಕೆ ಉತ್ತರ ಕರ್ನಾಟಕ ಭಾಗದ ಹಲವು ಜಿಲ್ಲೆಗಳು ಏಪ್ರಿಲ್ 6ರವರೆಗೆ ತತ್ತರಿಸಲಿವೆ. ಉಳಿದಂತೆ ಕರ್ನಾಟಕದ ಇತರೆ ಭಾಗಗಳು ಬಿಸಿಗಾಳಿಯ ಶಾಖದಿಂದ ದೂರ ಉಳಿಯಲಿವೆ. ಬಿಸಿಗಾಳಿಯ ಬಿರುಸು ಒಂದೆಡೆಯಾದರೆ, ಕೆಲವು ಜಿಲ್ಲೆಗಳಲ್ಲಿನ ಉಷ್ಣತೆಯು ತುಸು ಏರಿಕೆಯಾಗಲಿದೆ. ಉತ್ತರ ಕರ್ನಾಟಕದ ಭಾಗದ ಕೆಲವು ಬಿಸಿಗಾಳಿಯ ಜೊತೆಗೆ ಅಲ್ಲಿನ ಉಷ್ಣಾಂಶವೂ ಏರಲಿದೆ ಎಂದೂ ಇಲಾಖೆ ಹೇಳಿದೆ. ಮಂಗಳವಾರ ಕಲಬುರಗಿಯಲ್ಲಿಯೇ ಅತಿ ಹೆಚ್ಚು ಅಂದರೆ, 41.6 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು

ಇರಲಿ ಎಚ್ಚರ

ಬಿಸಿಗಾಳಿಯ ಸಂದರ್ಭದಲ್ಲಿ, ಉಷ್ಣಾಂಶ ಹೆಚ್ಚಿರುವ ವಾತಾವರಣವು ಮನುಷ್ಯನ ಆರೋಗ್ಯಕ್ಕೆ ಹೆಚ್ಚು ಹಾನಿಕರ. ತೀವ್ರ ಬಿಸಿಗಾಳಿಯು ಮನುಷ್ಯ ಜೀವಕ್ಕೂ ಕುತ್ತು ತರಬಹುದು. ಗರ್ಭಿಣಿಯರು, ಬಾಣಂತಿಯರು, ಶಿಶು–ಮಕ್ಕಳು, ವೃದ್ಧರು, ಬೇರೆ ಬೇರೆ ಕಾಯಿಲೆಯಿಂದ ಬಳಲುತ್ತಿರುವವರು ಹೆಚ್ಚಿನ ನಿಗಾ ವಹಿಸಬೇಕಾಗುತ್ತದೆ

- ಬೆಳಿಗ್ಗೆ 11ರಿಂದ ಮಧ್ಯಾಹ್ನ 3ರವರೆಗೆ ಮನೆಯಿಂದ ಹೊರಹೋಗಬೇಡಿ
- ಬಾಯಾರಿಕೆ ಇಲ್ಲದಿದ್ದರೂ ಹೆಚ್ಚಿಗೆ ನೀರನ್ನು ಕುಡಿಯಿರಿ
- ಬಿಸಿಲಿನಲ್ಲಿ ಹೋಗುವಾಗ ಕನ್ನಡಕಗಳು, ಕೊಡೆ, ಟೋಪಿ, ಬೂಟುಗಳು ಅಥವಾ ಚಪ್ಪಲಿ ಬಳಸಿ
- ಸಾಕುಪ್ರಾಣಿಗಳನ್ನು ನೆರಳಿನಲ್ಲಿ ಇರಿಸಿ. ಅವುಗಳಿಗೆ ಕುಡಿಯಲು ಸಾಕಷ್ಟು ನೀರು ನೀಡಿ
- ಮನೆಯಲ್ಲಿ ಒಆರ್‌ಎಸ್ ಸದಾ ಇಟ್ಟುಕೊಳ್ಳಿ, ಇದರ ಜೊತೆಗೆ, ಲಸ್ಸಿ, ತೋರಣಿ (ಅಕ್ಕಿ ನೀರು), ನಿಂಬೆ ನೀರು, ಮಜ್ಜಿಗೆ ಸೇವಿಸಿ

ಆಧಾರ: ಹವಾಮಾನ ಇಲಾಖೆ, ರಾಜ್ಯ ಆರೋಗ್ಯ ಇಲಾಖೆ

384 ಗೆಜೆಟೆಡ್ ಪ್ರೊಬೇಷನರಿ ಹುದ್ದೆ ಪೂರ್ವಭಾವಿ ಪರೀಕ್ಷೆ ಜುಲೈ 7ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನವನ್ನು ಏಪ್ರಿಲ್ 15ರವರೆಗೆ ಕೆಪಿಎಸ್‌ಸಿ ವಿಸ್ತರಿಸಿದೆ. ಪೂರ್ವಭಾವಿ ಪರೀಕ್ಷೆ ಜುಲೈ 7ರಂದು ನಡೆಯಲಿದೆ.

ಈ ಹಿಂದೆ ಅರ್ಜಿ ಸಲ್ಲಿಸಲು ಏಪ್ರಿಲ್ 3 ಕೊನೆಯ ದಿನಾಂಕ, ಪೂರ್ವಭಾವಿ ಪರೀಕ್ಷೆಯನ್ನು ಮೇ 5ರಂದು ನಡೆಸಲು ತಾತ್ಕಾಲಿಕವಾಗಿ ಕೆಪಿಎಸ್‌ಸಿ ನಿರ್ಧರಿಸಿತ್ತು. ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ದಿನಾಂಕ ಮುಂದೂಡಲಾಗಿದೆ.

'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ನಡೆಯುವ ಮುಖ್ಯ ಪರೀಕ್ಷೆಯು ಕಡ್ಡಾಯ ಕನ್ನಡ ಮತ್ತು ಕಡ್ಡಾಯ ಇಂಗ್ಲಿಷ್ ಎಂಬ ಎರಡು ಅರ್ಹತಾ ಪರೀಕ್ಷೆಗಳನ್ನು ಒಳಗೊಂಡಿದೆ. ಆಯೋಗ ಈ ಹಿಂದೆ ನಡೆಸಿದ್ದ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಉತ್ತೀರ್ಣರಾಗಿದ್ದರೂ, 2023–24ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಮುಖ್ಯ ಪರೀಕ್ಷೆಗೆ ಅರ್ಹರಾಗುವ ಎಲ್ಲ ಅಭ್ಯರ್ಥಿಗಳು ಎರಡೂ ಅರ್ಹತಾ ಪರೀಕ್ಷೆಗಳನ್ನು ಕಡ್ಡಾಯವಾಗಿ ಬರೆಯಬೇಕು' ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ರಾಕೇಶ್ ಕುಮಾರ್ ತಿಳಿಸಿದ್ದಾರೆ.

ನಾಪೋಕ್ಲು: ಅಲ್ಪ ಪ್ರಮಾಣದ ಮಳೆ

ನಾಪೋಕ್ಲು (ಕೊಡಗು): ಪಟ್ಟಣ ವ್ಯಾಪ್ತಿಯಲ್ಲಿ ಮಂಗಳವಾರ ಮಧ್ಯಾಹ್ನ ಅಲ್ಪ ಪ್ರಮಾಣದ ಮಳೆ ಸುರಿಯಿತು. ಮಧ್ಯಾಹ್ನ 3 ಗಂಟೆ ವೇಳೆಗೆ 10 ನಿಮಿಷ ಮಳೆಯಾಯಿತು.

ಪಟ್ಟಣ ಸೇರಿದಂತೆ ಗ್ರಾಮೀಣದಲ್ಲಿ ಮಳೆಯಾಗಿದೆ. ವಾರದ ಹಿಂದೆ ಬಲ್ಲಮಾವಟಿ, ಪೇರೂರು ವ್ಯಾಪ್ತಿಯಲ್ಲಿ ಮಳೆಯಾಗಿತ್ತು. ಇದೀಗ ನಾಪೋಕ್ಲು ವಿನಲ್ಲಿ ಮೊದಲ ಮಳೆ ಸುರಿದಿದೆ.

ಪೊಲೀಸರ ಸೋಗಿನಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ದರೋಡೆ; ಅಂತರರಾಜ್ಯ ಕಳ್ಳರ ಬಂಧನ

₹21 ಲಕ್ಷ ಮೌಲ್ಯದ ವಿದೇಶಿ ಕರೆನ್ಸಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೀದರ್: ಬಸವಕಲ್ಯಾಣ ಹೊರವಲಯದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಮವಸ್ತ್ರ ಧರಿಸಿಕೊಂಡು ಪೊಲೀಸರ ಸೋಗಿನಲ್ಲಿ ಬಂದು ಹಣ ದೋಚಿದ್ದ ಮೂವರು ಅಂತರರಾಜ್ಯ ಕಳ್ಳರನ್ನು ಬಂಧಿಸಿರುವ ಪೊಲೀಸರು, ಅವರಿಂದ ₹21 ಲಕ್ಷ ಮೌಲ್ಯದ ವಿದೇಶಿ ಕರೆನ್ಸಿಗಳನ್ನು ಜಪ್ತಿ ಮಾಡಿದ್ದಾರೆ.

ಉಬರ್ ವಾಹನ ಚಾಲಕ ನವೀನ್, ಬಾಲಕೃಷ್ಣ ಹಾಗೂ ಸಿದ್ದಿರಾಮ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ವೆಂಕಟ್ ಎಂಬಾತ ತಲೆಮರೆಸಿಕೊಂಡಿದ್ದಾನೆ. ನಾಲ್ಕೂ ಜನರು ಹೈದರಾಬಾದಿನವರು. ಬಾಲಕೃಷ್ಣನ ಪತ್ನಿ ಪೊಲೀಸ್ ಇಲಾಖೆಯಲ್ಲಿ ಕಾನ್‌ಸ್ಟೆಬಲ್ ಆಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಪೊಲೀಸ್ ಡ್ರೆಸ್ ಕೋಡ್ ಸೇರಿದಂತೆ ಎಲ್ಲದರ ಬಗ್ಗೆ ಹೆಂಡತಿಯಿಂದ ತಿಳಿದುಕೊಂಡು, ಅದೇ ತರಹದ ಸಮವಸ್ತ್ರ ಧರಿಸಿ ಈ

ಬಾಲಕೃಷ್ಣ

ಸಿದ್ದರಾಜು

ನವೀನ್

ಕೃತ್ಯ ಎಸಗಿದ್ದಾರೆ. ಅಮೆರಿಕ, ಯುಎಇ ಹಾಗೂ ಸೌದಿ ಅರೇಬಿಯಾ ದೇಶಗಳ ಕರೆನ್ಸಿ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚನ್ನಬಸವಣ್ಣ ಎಸ್.ಎಲ್. ಮಂಗಳವಾರ ಮಾಹಿತಿ ನೀಡಿದ್ದಾರೆ.

'ತೆಲಂಗಾಣದ ಕಮ್ಮಾರೆಡ್ಡಿ ಜಿಲ್ಲೆಯ ಸದಾಶಿವನಗರದ ರಾಮರೆಡ್ಡಿ ಎಂಬ ಚಿನ್ನದ ವ್ಯಾಪಾರಿ ಮಾರ್ಚ್ 28ರಂದು ಚಿನ್ನ ಖರೀದಿಗೆ ಖಾಸಗಿ ಬಸ್‌ನಲ್ಲಿ ಹೈದರಾಬಾದ್‌ನಿಂದ ಮುಂಬೈಗೆ ಹೊರಟಿದ್ದರು. ಬಸವಕಲ್ಯಾಣ ಹೊರವಲಯದ ರಾಷ್ಟ್ರೀಯ ಹೆದ್ದಾರಿಯಲ್ಲಿ ಪೊಲೀಸರ ಸೋಗಿನಲ್ಲಿ ಬಂದ ಈ ದರೋಡೆಕೋರರು ಚುನಾವಣೆ ನೀತಿ ಸಂಹಿತೆಯ ನೆಪದಲ್ಲಿ ಪರಿಶೀಲಿಸಲು ಬಸ್ಸಿನೊಳಗೆ ಹೋಗಿ ನೇರವಾಗಿ ರಾಮರೆಡ್ಡಿ ಬಳಿ ಬಂದು ಕರೆನ್ಸಿಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಕೇಸ್ ಮಾಡಿದರೆ ಜೈಲು ಶಿಕ್ಷೆಯಾಗುತ್ತದೆ ಎಂದು ಹೆದರಿಸಿ ಪರಾರಿಯಾಗಿದ್ದಾರೆ. ಆರಂಭದಲ್ಲಿ ರಾಮರೆಡ್ಡಿ ₹80 ಸಾವಿರ ನಗದು ದೋಚಿಕೊಂಡು ಹೋಗಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದರು. ಆನಂತರ ₹21 ಲಕ್ಷ ಮೌಲ್ಯದ ವಿದೇಶಿ ಕರೆನ್ಸಿ ಇತ್ತು ಎಂದು ಮಾಹಿತಿ ಹಂಚಿಕೊಂಡಿದ್ದಾರೆ. ವಿದೇಶಿ ಕರೆನ್ಸಿಗಳ ಬಗ್ಗೆ ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯಕ್ಕೆ ಪತ್ರ ಬರೆಯಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಬಸವಕಲ್ಯಾಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಕಲಿ ದಾಖಲೆ ಸಲ್ಲಿಸಿ ಸಾಲ 220 ಮಂದಿ ವಿರುದ್ಧ ದೂರು

ಮೈಸೂರು: 'ನಕಲಿ ದಾಖಲೆ ಸಲ್ಲಿಸಿ ಬ್ಯಾಂಕ್‌ನಿಂದ ಸಾಲ ಪಡೆದು ₹ 9.71 ಕೋಟಿ ವಂಚಿಸಲಾಗಿದೆ' ಎಂದು ಆರೋಪಿಸಿ ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ಆರ್.ಡಿ.ಸುಂದರೇಶ್ ಅವರು ತಮ್ಮ ಸಿಬ್ಬಂದಿ ಸೇರಿದಂತೆ 220 ಮಂದಿ ವಿರುದ್ಧ ಲಷ್ಕರ್ ಠಾಣೆಯಲ್ಲಿ ಮಂಗಳವಾರ ದೂರು ದಾಖಲಿಸಿದ್ದಾರೆ.

'ಬ್ಯಾಂಕ್ ಸಿಬ್ಬಂದಿ, ಸಾಲ ಕೊಡಿಸುವ ಏಜೆಂಟ್‌ಗಳು ಸೇರಿ ವಂಚಿಸಿದ್ದಾರೆ. ಸಾಲ ಪಡೆಯಲು ಅರ್ಹರಿಲ್ಲದಿದ್ದರೂ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ. ವೇತನದ ಅರ್ಹತೆ ಸೂಕ್ತವಲ್ಲದಿದ್ದರೂ, ಉದ್ಯೋಗ ವಿಳಾಸ ಸರಿ ಇಲ್ಲದಿದ್ದರೂ, ಸಿಬಿಲ್ ದಾಖಲಾತಿಗಳನ್ನು ತಿದ್ದಿ, ಹೊರಗಿನ ಊರಿನ ವಿಳಾಸವಿದ್ದರೂ ಮಧ್ಯವರ್ತಿಗಳ ಹಾಗೂ ನೌಕರರ ಸಹಕಾರದೊಂದಿಗೆ ಸಾಲ ಪಡೆದು ವಂಚಿಸಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'12 ಸಿಬ್ಬಂದಿ, ಸಾಲ ಪಡೆದ 198 ಮಂದಿ ಹಾಗೂ 8 ಏಜೆಂಟರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಿಚ್ಚು... ಕಲ್ಮೇಶ್ವರ ಹಾಗೂ ಬಸವೇಶ್ವರ ಜಾತ್ರೆ ಪ್ರಯುಕ್ತ ಬೆಳಗಾವಿ ಹೊರವಲಯದ ಬಸವನ ಕುಡಚಿಯಲ್ಲಿ ಮಂಗಳವಾರ ಭಕ್ತರು ಕಿಚ್ಚು ಹಾಯ್ದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ಸದಸ್ಯ ಹುದ್ದೆಗಾಗಿ ₹4 ಕೋಟಿ ವಂಚನೆ

ಒಂದನೇ ಪುಟದಿಂದ...

ನರೇಂದ್ರ ಮೋದಿ ಪರಿಚಯಸ್ಥನೆಂದು ನಂಬಿಕೆ: 'ದೂರುದಾರ ನೀಲಮ್ಮ ಅವರಿಗೆ ಕೆಪಿಎಸ್ಸಿ ಸದಸ್ಯೆ ಆಗಬೇಕೆಂಬ ಆಸೆ ಇತ್ತು. ಇದಕ್ಕಾಗಿ ಹಲವು ರಾಜಕೀಯ ಮುಖಂಡರು ಹಾಗೂ ಅಧಿಕಾರಿಗಳನ್ನು ಭೇಟಿಯಾಗಿದ್ದರು. ಸದಸ್ಯೆ ಆಗಲು ಅರ್ಹರಲ್ಲವೆಂದು ಅವರು ಹೇಳಿದ್ದರು. ಪಟ್ಟು ಬಿಡದ ನೀಲಮ್ಮ, ಪರಿಚಯಸ್ಥರೊಬ್ಬರ ಬಳಿ ವಿಷಯ ಹಂಚಿಕೊಂಡಿದ್ದರು' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

'ನೀಲಮ್ಮ ಅವರಿಗೆ ಪರಿಚಯಸ್ಥರ ಮೂಲಕ ರಿಯಾಜ್ ಅಹ್ಮದ್ ಪರಿಚಯ ವಾಗಿತ್ತು. 'ಪ್ರಧಾನಿ ನರೇಂದ್ರ ಮೋದಿ ಹಾಗೂ ಅವರ ಸಹೋದರ ನನಗೆ ಪರಿಚಯದವರು. ಅವರಿಗೆ ಹೇಳಿ ನಿಮಗೆ ಕೆಪಿಎಸ್ಸಿ ಹುದ್ದೆಗೆ ನೇಮಕ ಮಾಡಿಸುತ್ತೇವೆ. ಅದಕ್ಕೆ ₹ 15 ಕೋಟಿಯಿಂದ ₹ 20 ಕೋಟಿ ಖರ್ಚಾಗುತ್ತದೆ' ಎಂಬುದಾಗಿ ತಿಳಿಸಿದ್ದ.'

'ಯೂಸುಫ್ ಸುಬ್ಬೆಕಟ್ಟೆ ಯನ್ನೇ ನರೇಂದ್ರ ಮೋದಿ ಸಂಬಂಧಿ ಎಂಬುದಾಗಿ ಹೇಳಿದ್ದ ರಿಯಾಜ್, ಆತನನ್ನು ಶಿಕ್ಷಕಿಗೆ ಪರಿಚಯ ಮಾಡಿಸಿದ್ದ. ನಂತರ, ಇತರೆ ಆರೋಪಿಗಳ ಜೊತೆ ಸೇರಿ ಶಿಕ್ಷಕಿ ಜೊತೆ ಮಾತುಕತೆ ನಡೆಸಿದ್ದ. ಆರೋಪಿಗಳು ಹಾಗೂ ದೂರುದಾರರ ನಡುವೆ ಹುದ್ದೆ ನೇಮಕಕ್ಕೆ ₹ 5 ಕೋಟಿಗೆ ಒಪ್ಪಂದವಾಗಿತ್ತು' ಎಂದು ಪೊಲೀಸರು ಹೇಳಿದರು.

'ಮುಖ್ಯಮಂತ್ರಿ ಹಾಗೂ ರಾಜ್ಯಪಾಲರ ಸಹಿಗಳನ್ನು ನಕಲು ಮಾಡಿದ್ದ ಆರೋಪಿಗಳು, ನೇಮಕಾತಿ ಆದೇಶ ಪ್ರತಿ ಸೃಷ್ಟಿಸಿದ್ದರು. ಮುಖ್ಯಮಂತ್ರಿ ಟಿಪ್ಪಣಿ, ನಡಾವಳಿ ಹಾಗೂ ಅವರ ನಕಲಿ ಸಹಿ ಮಾಡಿರುವ ಶಿಫಾರಸು ಪತ್ರವನ್ನೂ ತಯಾರಿಸಿದ್ದರು. ರಾಜ್ಯಪಾಲರ ನಕಲಿ ಸಹಿ ಸಮೇತ ಸುಳ್ಳು ರಾಜ್ಯ-ಪತ್ರವನ್ನೂ ಸೃಷ್ಟಿಸಿ, ಶಿಕ್ಷಕಿಗೆ ತೋರಿಸಿದ್ದರು. ಇದನ್ನೆಲ್ಲ ನಂಬಿದ್ದ ಶಿಕ್ಷಕಿ, ಆರೋಪಿಗಳ ಖಾತೆಗೆ ಹಂತ ಹಂತವಾಗಿ ₹ 4.10 ಕೋಟಿ ಹಾಕಿದ್ದರು' ಎಂದು ಪೊಲೀಸರು ತಿಳಿಸಿದರು.

'ನೇಮಕಾತಿ ಆದೇಶ ಸಿಗುತ್ತಿದ್ದಂತೆ ಶಿಕ್ಷಕಿ ಖುಷಿಯಿಂದ ಕೆಪಿಎಸ್ಸಿ ಕಚೇರಿಗೆ ಹೋಗಿದ್ದರು. ಪತ್ರ ಪರಿಶೀಲಿಸಿದ್ದ ಅಧಿಕಾರಿಗಳು, ನಕಲಿ ಎಂಬುದಾಗಿ ಹೇಳಿದ್ದರು. ಬಳಿಕವೇ ಅವರು ಠಾಣೆಗೆ ದೂರು ನೀಡಿದ್ದರು. ನಾಲ್ವರು ಆರೋಪಿಗಳನ್ನು ಬಂಧಿಸಿ ₹ 40 ಲಕ್ಷ ನಗದು ಹಾಗೂ ನಾಲ್ಕು ಮೊಬೈಲ್ ಜಪ್ತಿ ಮಾಡಲಾಗಿದೆ. ನಾಲ್ವರನ್ನೂ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ' ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ವಸತಿಶಾಲೆ: ಪ್ರವೇಶ ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು: ಮೊರಾರ್ಜಿ, ಕಿತ್ತೂರು ರಾಣಿ ಚೆನ್ನಮ್ಮ ವಸತಿಶಾಲೆಗಳ 6ನೇ ತರಗತಿ ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮಂಗಳವಾರ ಪ್ರಕಟಿಸಿದೆ.

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ವಸತಿಶಾಲೆಗಳ ಪ್ರವೇಶಕ್ಕೆ ಪರೀಕ್ಷೆ ಬರೆದಿದ್ದ 1.98 ಲಕ್ಷ ವಿದ್ಯಾರ್ಥಿಗಳ ಜಿಲ್ಲಾವಾರು ರ್‍ಯಾಂಕ್ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ಸೀಟ್ ಮ್ಯಾಟ್ರಿಕ್ಸ್ ವಿವರಗಳನ್ನು ಸಲ್ಲಿಸಿದ ನಂತರ ವಸತಿಶಾಲಾವಾರು ಸೀಟು ಹಂಚಿಕೆ ಪ್ರಕ್ರಿಯೆ ನಡೆಸಲಾಗುತ್ತದೆ ಎಂದು ಕೆಇಎ ತಿಳಿಸಿದೆ.

ಡಿ.ಸಿ ಕಚೇರಿಯಲ್ಲಿ ಆತ್ಮಹತ್ಯೆಗೆ ಯತ್ನ

ಮಂಗಳೂರು: ಲೋಕಸಭಾ ಚುನಾವಣಾ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಯೊಬ್ಬರು ಇಲ್ಲಿನ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ವಿಷ ಸೇವಿಸಿ ಮಂಗಳವಾರ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

'ಶ್ರೀಧರ್ ಹೆಗಡೆ ಆತ್ಮಹತ್ಯೆಗೆ ಯತ್ನಿಸಿದವರು. ನಗರದ ಜಿಲ್ಲಾ ಚುನಾವಣಾಧಿಕಾರಿ ಕಚೇರಿಯಲ್ಲಿರುವ ಏಕಗವಾಕ್ಷಿ ಪದ್ಧತಿ ತಂಡದ ಸದಸ್ಯರಾಗಿದ್ದ ಅವರು ಮಂಗಳವಾರ ವಿಷ ಸೇವಿಸಿ ಒದ್ದಾಡುತ್ತಿದ್ದರು. ಇದನ್ನು ಗಮನಿಸಿದ ಸಹ ಸಿಬ್ಬಂದಿ ಕೂಡಲೇ ಅವರನ್ನು ನಗರದ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಿದರು.ಅವರ ಆರೋಗ್ಯ ಸ್ಥಿರವಾಗಿದೆ' ಎಂದು ಜಿಲ್ಲಾಧಿಕಾರಿ ಕಚೇರಿಯ ಮೂಲಗಳು ತಿಳಿಸಿವೆ.

'ಬೆಳ್ತಂಗಡಿ ತಾಲ್ಲೂಕು ಕಡಿರುದ್ಯಾವರ ಗ್ರಾಮ ಪಂಚಾಯಿತಿಯಲ್ಲಿ ಅವರು 2019ರಿಂದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಹುದ್ದೆಗೆ ಫೆಬ್ರುವರಿಯಲ್ಲಿ ಮತ್ತೊಬ್ಬರು ವರ್ಗಾವಣೆಯಾಗಿ ಬಂದಿದ್ದು, ಶ್ರೀಧರ್ ಅವರಿಗೆ ಬೇರೆ ಯಾವುದೇ ಹುದ್ದೆ ನೀಡಿರಲಿಲ್ಲ. ಜಿಲ್ಲಾ ಪಂಚಾಯಿತಿಗೆ ಅವರು ವರದಿ ಮಾಡಿಕೊಂಡಿದ್ದರು' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಅವರ ಪತ್ನಿ ಜಯಂತಿ ಬೆಳ್ತಂಗಡಿ ಸರ್ಕಾರಿ ಆಸ್ಪತ್ರೆಯಲ್ಲಿ ಶುಶ್ರೂಷಕಿಯಾಗಿದ್ದಾರೆ. ದಂಪತಿಗೆ ಇಬ್ಬರು ಪುತ್ರಿಯರಿದ್ದು, ಹಿರಿಯ ಪುತ್ರಿಗೆ ಕೆಲ ತಿಂಗಳ ಹಿಂದಷ್ಟೇ ವಿವಾಹವಾಗಿತ್ತು. ಶ್ರೀಧರ್ ಅವರಿಗೆ ಸಾಲವೂ ಇತ್ತು' ಎಂದು ಅವರು ತಿಳಿಸಿದರು.

ಅಂಗನವಾಡಿ ಸಮಯ ಬದಲು

ಕೊಪ್ಪಳ: ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಕಾರಣ ರಾಜ್ಯದ ಕೆಲ ಜಿಲ್ಲೆಗಳಲ್ಲಿ ಅಂಗನವಾಡಿ ಕೇಂದ್ರಗಳ ಸಮಯ ಬದಲಾವಣೆ ಮಾಡಿ ಮಂಗಳವಾರ ಸರ್ಕಾರ ಆದೇಶ ಹೊರಡಿಸಿದೆ.

ಏಪ್ರಿಲ್ ಮತ್ತು ಮೇ ತಿಂಗಳಿಗೆ ಅನ್ವಯವಾಗುವಂತೆ ಕಲಬುರಗಿ, ಯಾದಗಿರಿ, ಬಳ್ಳಾರಿ, ಕೊಪ್ಪಳ, ರಾಯಚೂರು, ಬೀದರ್, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರಗಳ ಸಮಯವನ್ನು ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 12ರ ತನಕ ಪರಿಷ್ಕರಣೆ ಮಾಡಲಾಗಿದೆ. ಈ ಮೊದಲಿನ ವೇಳಾಪಟ್ಟಿ ಪ್ರಕಾರ ಬೆಳಿಗ್ಗೆ 9.30ರಿಂದ ಸಂಜೆ 4 ಗಂಟೆ ತನಕ ಕೇಂದ್ರದಲ್ಲಿ ಮಕ್ಕಳಿರಬೇಕಿತ್ತು.

ಚಿಣ್ಣರ ಮೇಳದ ಅರ್ಜಿಗೆ ಜಾಗರಣೆ!

ಮೈಸೂರು: ರಂಗಾಯಣದಲ್ಲಿ ಏಪ್ರಿಲ್ 12ರಿಂದ ಆರಂಭವಾಗುವ 'ಚಿಣ್ಣರ ಮೇಳ'ದ ಅರ್ಜಿಗಾಗಿ ಪೋಷಕರು ಸೋಮವಾರ ರಾತ್ರಿಯಿಡೀ ಕಾದು ಕುಳಿತಿದ್ದರು.

ಮಂಗಳವಾರ ಮುಂಜಾನೆವರೆಗೆ ಹಲವರು ಜಾಗರಣೆ ಮಾಡಿದರು. ರಾತ್ರಿಯಿಡೀ ಕಾದ ತಮ್ಮ ಗಂಡಂದಿರನ್ನು ಮನೆಗೆ ಕಳಿಸಿದ ಮಹಿಳೆಯರು ಬೆಳಿಗ್ಗೆ 11.45ರವರೆಗೂ ಕಾದು ಕುಳಿತು, ಅರ್ಜಿ ಪಡೆದು ಮನೆಯತ್ತ ಸಂಭ್ರಮದಲ್ಲಿ ಮರಳಿದರು.

'ಪ್ರತಿ ಬೇಸಿಗೆ ರಜೆ ವೇಳೆ ಚಿಣ್ಣರ ಮೇಳವನ್ನು 25 ವರ್ಷದಿಂದ ಆಯೋಜಿಸಲಾಗುತ್ತಿದೆ. 'ಸಮರಸವೇ ಜೀವನ' ಈ ಬಾರಿಯ ಮೇಳದ ಆಶಯ. ರಂಗಭೂಮಿ, ಸಾಂಸ್ಕೃತಿಕ ಕಲೆಗಳು, ಪರಿಸರ ಚಟುವಟಿಕೆಗಳು ಸೇರಿದಂತೆ ಎಲ್ಲ ಕಲಿಕೆಯನ್ನು ಸಂಪನ್ಮೂಲ ವ್ಯಕ್ತಿಗಳು ಕಲಿಸುತ್ತಾರೆ. ಮೇ 7 ಅಥವಾ 8ರಂದು ಸಮಾರೋಪ ನಡೆಯಲಿದೆ' ಎಂದು ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಬಾರಿಯೂ 300 ಅರ್ಜಿಗಳನ್ನು ವಿತರಿಸಲಾಗಿದೆ. ಅರ್ಜಿಗೆ ₹ 100 ಇದ್ದು, ಪ್ರವೇಶಾತಿಗೆ ₹ 3 ಸಾವಿರ ಶುಲ್ಕ ನಿಗದಿ ಪಡಿಸಲಾಗಿದೆ' ಎಂದರು.

ವಾಹನ ಪಲ್ಟಿ ಮೂವರ ಸಾವು

ಹಾವೇರಿ: ಸವಣೂರು ತಾಲ್ಲೂಕಿನ ತೆವರಮೆಳ್ಳಳ್ಳಿ ಗ್ರಾಮದ ಶಿಮ್ಲಾ ಡಾಬಾ ಬಳಿ ಮಂಗಳವಾರ ಕುರಿಗಳು ತುಂಬಿದ್ದ ವಾಹನ ಮತ್ತು ಇನ್ನೊಂದು ವಾಹನದ ನಡುವೆ ಸಂಭವಿಸಿದ ಅಪಘಾತದಲ್ಲಿ ಮೂವರು ಮೃತಪಟ್ಟು, ನಾಲ್ವರಿಗೆ ಗಾಯಗಳಾಗಿವೆ. 10ಕ್ಕೂ ಹೆಚ್ಚು ಕುರಿಗಳು ಮೃತಪಟ್ಟಿವೆ.

'ರಾಣೆಬೆನ್ನೂರು ತಾಲ್ಲೂಕಿನ ಕಾಕೋಳ ಗ್ರಾಮದ ಕುರಿ ವ್ಯಾಪಾರಿಗಳಾದ ಮೈಲಾರಪ್ಪ ಕೈದಾಳ (40), ಗುಡ್ಡಪ್ಪ ಕೈದಾಳ (42) ಮತ್ತು ಚಾಲಕ ಶಿವಕುಮಾರ ಹೊಳೆಪ್ಪನವರ (22) ಮೃತರು.

ಬಾಗಲಕೋಟೆಯಿಂದ ಕುರಿಗಳನ್ನು ಖರೀದಿಸಿ, ಕಾಕೋಳಕ್ಕೆ ಮರಳುವಾಗ ಅಪಘಾತ ಸಂಭವಿಸಿದೆ' ಎಂದು ಸವಣೂರು ಠಾಣೆ ಪೊಲೀಸರು ತಿಳಿಸಿದ್ದಾರೆ.

'ಏಕಪಕ್ಷೀಯ ವಿಚ್ಛೇದನ ಪರಿಗಣನಾರ್ಹ'

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಏಕಪಕ್ಷೀಯ ವಿಚ್ಛೇದನದ ಡಿಕ್ರಿ ಆದೇಶವನ್ನು ವಿಶೇಷ ಸಂದರ್ಭಗಳಲ್ಲಿ ಪರಿಗಣಿಸಬಹುದಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಮೃತ ಸೈನಿಕರೊಬ್ಬರ ಪತ್ನಿಗೆ ಎಲ್ಲ ರೀತಿಯ ವಿಧವಾ ಸೌಲಭ್ಯಗಳನ್ನು ಕಲ್ಪಿಸುವಂತೆ, 'ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ'ಗೆ ಆದೇಶಿಸಿದೆ.

ಈ ಸಂಬಂಧ ಪಾರ್ವತಮ್ಮ (52) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದ್ದು, 'ಅರ್ಜಿದಾರರು ಮಾಜಿ ಸೈನಿಕನ ಪತ್ನಿಯಾಗಿದ್ದರೂ, ವಿಚ್ಛೇದಿತೆ ಎಂಬ ಕಳಂಕ ಹೊರಿಸಿ ಅವರಿಗೆ ದಕ್ಕಬೇಕಾದ ಕಾನೂನುಬಾಧ್ಯ ಸೌಲಭ್ಯಗಳನ್ನು ನಿರಾಕರಿಸಲು ಸಾಧ್ಯವಿಲ್ಲ. ಹಾಗಾಗಿ, ಅವರಿಗೆ ಗುರುತಿನ ಚೀಟಿ ಸೇರಿದಂತೆ ಲಭ್ಯವಿರುವ ಎಲ್ಲ ಸೌಲಭ್ಯಗಳನ್ನು ಮುಂದಿನ ಎರಡು ತಿಂಗಳ ಒಳಗಾಗಿ ಕಲ್ಪಿಸಿ' ಎಂದು ಇಲಾಖೆಯ ಜಂಟಿ ನಿರ್ದೇಶಕರಿಗೆ ತಾಕೀತು ಮಾಡಿದೆ.

'ಪ್ರಕರಣದಲ್ಲಿ ಕೌಟುಂಬಿಕ ನ್ಯಾಯಾಲಯ ಏಕಪಕ್ಷೀಯ ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಲಾದ ಅರ್ಜಿಯ ವಿಚಾರಣೆ ಹಂತದಲ್ಲಿ ಪತಿ ಮೃತಪಟ್ಟಿದ್ದಾರೆ. ಇದೇ ಕಾರಣದಿಂದ ಅರ್ಜಿಯನ್ನು ಮುಕ್ತಾಯಗೊಳಿಸಲಾಗಿದೆ. ಈ ಕಾರಣಕ್ಕಾಗಿಯೇ, ಅರ್ಜಿದಾರರನ್ನು ವಿಚ್ಛೇದಿತೆ ಎಂಬುದಾಗಿ ಗಮನಿಸಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಹೇಳಿದೆ. ಅರ್ಜಿದಾರರ ಪರ ಎಲ್.ಶ್ರೀರಂಗಯ್ಯ ಹಾಗೂ ಪ್ರತಿವಾದಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಪರ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ವಾದ ಮಂಡಿಸಿದ್ದರು.

ಪ್ರಕರಣವೇನು?: ಮದುವೆಯಾದ 30 ವರ್ಷಗಳ ಬಳಿಕ ದಂಪತಿ ಮಧ್ಯೆ ತಲೆದೋರಿದ ಮನಸ್ತಾಪದ ಕಾರಣ ಅರ್ಜಿದಾರರ ಪತಿ (ಮಾಜಿ ಸೈನಿಕ) ವಿಚ್ಛೇದನ ಕೋರಿ ಕೌಟುಂಬಿಕ ನ್ಯಾಯಾಲಯದ ಮೊರೆ ಹೋಗಿದ್ದರು. ಈ ಅರ್ಜಿಗೆ ಸಂಬಂಧಿಸಿದಂತೆ ಪತ್ನಿ ಕೋರ್ಟ್‌ಗೆ ಯಾವತ್ತೂ ಹಾಜರಾಗಿರಲಿಲ್ಲ. ಹೀಗಾಗಿ, ಕೌಟುಂಬಿಕ ನ್ಯಾಯಾಲಯ ಮಾಜಿ ಸೈನಿಕನಿಗೆ ಏಕಪಕ್ಷೀಯವಾಗಿ ವಿಚ್ಛೇದನ ಡಿಕ್ರಿ ಮಂಜೂರು ಮಾಡಿತ್ತು. ಡಿಕ್ರಿ ಆದೇಶವನ್ನು ಹಿಂಪಡೆಯುವಂತೆ ಪತ್ನಿ ಮಾಡಿದ್ದ ಮನವಿ ವಿಚಾರಣೆ ಹಂತದಲ್ಲಿರುವಾಗ ಮಾಜಿ ಸೈನಿಕ ಮೃತಪಟ್ಟಿದ್ದರು. ಈ ಕಾರಣಕ್ಕಾಗಿ ಕೌಟುಂಬಿಕ ನ್ಯಾಯಾಲಯ ಪ್ರಕರಣವನ್ನು ಮುಕ್ತಾಯಗೊಳಿಸಿತ್ತು.

ಏತನ್ಮಧ್ಯೆ ಅರ್ಜಿದಾರ ಪತ್ನಿ, 'ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ'ಗೆ ಮನವಿ ಸಲ್ಲಿಸಿ, 'ನಾನು ಮೃತ ಮಾಜಿ ಸೈನಿಕನ ಪತ್ನಿ (ವಿಧವೆ) ಎಂಬ ಹೆಸರಿನ ಗುರುತಿನ ಚೀಟಿ ನೀಡಬೇಕು' ಎಂದು ಇಲಾಖೆಗೆ ಕೋರಿದ್ದರು. ಇಲಾಖೆ ಕೋರಿಕೆಯನ್ನು ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

'ಮಂತ್ರಾಲಯ: ನೀರಿನ ಕೊರತೆ ಇಲ್ಲ'

ರಾಯಚೂರು: ಮಠದ ಆವರಣದಲ್ಲಿ ನೀರಿಲ್ಲ ಎಂದು ಕೆಲವರು ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾರೆ. ಮಂತ್ರಾಲಯದಲ್ಲಿ ನೀರಿನ ಕೊರತೆ ಆಗಿಲ್ಲ ಎಂದು ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮಠದ ವ್ಯವಸ್ಥಾಪಕರು ಸ್ಪಷ್ಟಪಡಿಸಿದ್ದಾರೆ.

ಮಠಾಧೀಶರು ಎಲ್ಲ ಉದ್ದೇಶಗಳಿಗೆ ಸಾಕಷ್ಟು ನೀರಿನ ಸೌಕರ್ಯ ಒದಗಿಸಿದ್ದಾರೆ. ಹೀಗಾಗಿ ಭಕ್ತರು ಮಂತ್ರಾಲಯಕ್ಕೆ ಬರಬಹುದಾಗಿದೆ ಎಂದು ಹೇಳಿದ್ದಾರೆ.

ಕೆಲವು ಕೊಠಡಿಗಳಿಗೆ ಮಾತ್ರ ಆನ್‌ಲೈನ್ ಬುಕಿಂಗ್ ಸೌಲಭ್ಯ ಒದಗಿಸಲಾಗಿದೆ. ಇವುಗಳನ್ನು ಹೊರತುಪಡಿಸಿ ಭಕ್ತರ ಸೌಲಭ್ಯ ಮತ್ತು ಅನುಕೂಲಕ್ಕಾಗಿ 1,000 ಕೊಠಡಿಗಳು ಆಫ್‌ಲೈನ್‌ನಲ್ಲಿ ಬುಕಿಂಗ್ ಸೌಲಭ್ಯಕ್ಕೆ ಲಭ್ಯವಿದೆ ಎಂದು ತಿಳಿಸಿದ್ದಾರೆ.

6, 7ರಂದು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಬಳಗದ ಶೈಕ್ಷಣಿಕ ಮೇಳ

'ಎಡ್ಯುವರ್ಸ್'ನಲ್ಲಿ 50 ಶಿಕ್ಷಣ ಸಂಸ್ಥೆಗಳು ಭಾಗಿ

ಪ್ರಜಾವಾಣಿ ವಾರ್ತೆ

Eduverse A Premier Education Expo

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಬಳಗ ಪ್ರಸ್ತುತಪಡಿಸುವ ಕರ್ನಾಟಕದ ಪ್ರತಿಷ್ಠಿತ ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಏಪ್ರಿಲ್ 6 ಮತ್ತು 7ರಂದು ಬೆಂಗಳೂರಿನಲ್ಲಿ ನಡೆಯಲಿದೆ.

ನಗರದ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ (ಗೇಟ್ 2/3) ಎರಡೂ ದಿನ ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಮೇಳ ನಡೆಯಲಿದ್ದು, ಎಲ್ಲರಿಗೂ ಮುಕ್ತ ಆಹ್ವಾನವಿದೆ.

ಚಲನಚಿತ್ರ ನಟ ವಿಜಯ ರಾಘವೇಂದ್ರ ಶೈಕ್ಷಣಿಕ ಮೇಳವನ್ನು ಉದ್ಘಾಟಿಸಲಿದ್ದಾರೆ. ಎರಡೂ ದಿನ ಸಿಇಟಿ ಹಾಗೂ ಕಾಮೆಡ್-ಕೆ ಕುರಿತು ವಿಶೇಷ ಗೋಷ್ಠಿಗಳು ನಡೆಯಲಿವೆ. ಏಪ್ರಿಲ್ 13 ಮತ್ತು 14ರಂದು ಹುಬ್ಬಳ್ಳಿಯಲ್ಲಿಯೂ ಈ ಮೇಳವನ್ನೂ ಆಯೋಜಿಸಲಾಗಿದೆ.

ಹದಿಮೂರು ವರ್ಷಗಳಿಂದ ಈ ಶೈಕ್ಷಣಿಕ ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಮೇಳದಲ್ಲಿ ಶಿಕ್ಷಣ ಕ್ಷೇತ್ರದ ಹಲವು ಪರಿಣತರು, ತಜ್ಞರು ಪಾಲ್ಗೊಳ್ಳುತ್ತಿದ್ದಾರೆ. ಪರಿಣತರೊಂದಿಗೆ ಸಂವಾದ, ಉಪನ್ಯಾಸ ಮತ್ತು ಚರ್ಚೆಗಳನ್ನು ಆಯೋಜಿಸಲಾಗುತ್ತದೆ.

50ಕ್ಕೂ ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಈ ಮೇಳದಲ್ಲಿ ಪಾಲ್ಗೊಳ್ಳಲಿವೆ. ಪಿಯುಸಿ ನಂತರ ಮುಂದೇನು ಎಂಬ ಪ್ರಶ್ನೆಗೆ ಮೇಳದಲ್ಲಿ ಪರಿಹಾರ ಪಡೆಯಬಹುದಾಗಿದೆ. ಜೊತೆಗೆ, ಪಿಯುಸಿ ಅಥವಾ ತತ್ಸಮಾನ ವಿದ್ಯಾಭ್ಯಾಸ ಮುಗಿಸಿದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿ ದೊರೆಯಲಿದೆ. ರಾಜ್ಯದಲ್ಲಿರುವ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಸಿಬ್ಬಂದಿ ತಮ್ಮಲ್ಲಿರುವ ವಿಶೇಷ ಕೋರ್ಸ್, ಪದವಿಗಳ ಮಾಹಿತಿ ನೀಡಲಿದ್ದಾರೆ. ವಿದ್ಯಾರ್ಥಿಗಳಿಗಷ್ಟೇ ಅಲ್ಲದೇ, ಪಾಲಕರಿಗೂ ಸಹ ಮಾರ್ಗದರ್ಶಿಯಾಗಿರಲಿದೆ. ಶಿಕ್ಷಣ ಸಾಲದ ಮಾಹಿತಿ ಪಡೆಯಬಹುದಾಗಿದೆ.

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವ ವಿಶೇಷ ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಸಿಇಟಿ ಮತ್ತು ಕಾಮೆಡ್-ಕೆಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನೂ ಸಮಗ್ರವಾಗಿ ನೀಡಲಾಗುತ್ತದೆ. Ad6 Advertising ಬೆಂಬಲಿಸುತ್ತಿರುವ ಈ ಮೇಳಕ್ಕೆ 'ನ್ಯೂಸ್ ಫಸ್ಟ್' ಕನ್ನಡ ಟೆಲಿವಿಷನ್ ಸಹಭಾಗಿತ್ವವಿದೆ.

ಸಿಇಟಿ ಮತ್ತು ಕಾಮೆಡ್-ಕೆ ಪರೀಕ್ಷಾರ್ಥಿಗಳಿಗೆ ಎರಡೂ ದಿನ ಅಣಕು ಪರೀಕ್ಷೆ ಹಮ್ಮಿಕೊಳ್ಳಲಾಗುವುದು. ಈ ಅಣಕು ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಒಂದು ಲಕ್ಷ ಮೌಲ್ಯದ ಬಹುಮಾನಗಳನ್ನು ಗೆಲ್ಲುವ ಅವಕಾಶಗಳಿವೆ.

ಪ್ರಜಾವಾಣಿ ನೋಡಿಯೊ

ಆಸಕ್ತ ವಿದ್ಯಾರ್ಥಿಗಳು www.deccanherald.com/eduverse ಜಾಲತಾಣಕ್ಕೆ ಲಾಗಿನ್ ಆಗಿ, ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ, ನಿಮ್ಮ ಸ್ಥಳವನ್ನು ಕಾಯ್ದಿರಿಸಿಕೊಳ್ಳಿ.

ವಿಶೇಷ ಉಪನ್ಯಾಸಗಳು

ಎರಡು ದಿನಗಳ ಮೇಳದಲ್ಲಿ ಶಿಕ್ಷಣ ತಜ್ಞ ಗುರುರಾಜ ಕರ್ಜಗಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಏಪ್ರಿಲ್ 6ರಂದು ಬೆಳಿಗ್ಗೆ 10ಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿವೃತ್ತ ಪಿಆರ್‌ಒ ಎ.ಎಸ್.ರವಿ ಅವರಿಂದ ಸಿಇಟಿ ಕುರಿತ ವಿಶೇಷ ಉಪನ್ಯಾಸವಿದೆ. ಸಿ.ಇ.ಟಿ ಕೌನ್ಸೆಲಿಂಗ್‌ಗೆ ಸಿದ್ಧತೆ ಹೇಗೆ? ಬೇಕಾಗುವ ದಾಖಲೆಗಳು ಯಾವುವು? ಎಂಜಿನಿಯರಿಂಗ್ ಕಾಲೇಜು ಆಯ್ಕೆ ಹೇಗೆ? ಎಂಬ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಈ ಗೋಷ್ಠಿಯಲ್ಲಿ ಉತ್ತರ ಸಿಗಲಿದೆ.

ಏಪ್ರಿಲ್ 7ರಂದು ಕಾಮೆಡ್-ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಎಸ್.ಕುಮಾರ್ ಅವರು ಕಾಮೆಡ್ -ಕೆ ಕುರಿತು ಮಾಹಿತಿ ನೀಡಲಿದ್ದಾರೆ. ಈ ಗೋಷ್ಠಿಯಲ್ಲಿ ಕೋರ್ಸ್‌ಗಳ ಆಯ್ಕೆ, ಉದ್ಯೋಗಾವಕಾಶ, ಕಾಲೇಜಿನಲ್ಲಿರುವ ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಇದರೊಂದಿಗೆ 'ರೇಡಿಯೊ ಸಿಟಿ' ಎಫ್‌ಎಂನ ಆರ್‌ಜೆ ರಜಸ್ ಅವರು ರೇಡಿಯೊ ಹಾಗೂ ವಾಯ್ಸ್ ಇಂಡಸ್ಟ್ರಿಯಲ್ಲಿರುವ ಅವಕಾಶಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ. ಅಪೊಲೊ ನ್ಯಾಷನಲ್ ಸ್ಕೂಲ್‌ನ ಉಪಾಧ್ಯಕ್ಷೆ ಐಶ್ವರ್ಯಾ ಡಿ.ಕೆ.ಎಸ್ ಹೆಗ್ಡೆ ಅವರು 'ಕಲಿಕೆ ಹಾಗೂ ಬೆಳವಣಿಗೆ' ಕುರಿತು ಉಪನ್ಯಾಸ ನೀಡಲಿದ್ದಾರೆ.



❦ ಸುಭಾಷಿತ ❦

ಅಜ್ಞಾನಕ್ಕಿಂತ ಹೆಚ್ಚು ಅಪಾಯಕಾರಿಯಾದುದು ದುರಹಂಕಾರ.

–ಆಲ್ಬರ್ಟ್ ಐನ್‌ಸ್ಟೀನ್

ಹೆಚ್ಚಲಿದೆ ಸೆಕೆ ಅಲೆಗಳಿಂದ ಸಂಕಷ್ಟ ಎಲ್ಲಿಂದ ಬಂದೀತು ನೆರವಿನ ಹಸ್ತ?

ಚುನಾವಣೆಯ ಕಾವು ಹೆಚ್ಚುತ್ತಿರುವ ಅವಧಿಯಲ್ಲೇ ಈ ಬಾರಿ ಸೆಕೆಯ ಅಲೆಯೂ ಹಿಂದೆಂದಿಗಿಂತ ಹೆಚ್ಚಲಿದೆ ಎಂದು ಕೇಂದ್ರ ಹವಾಮಾನ ಇಲಾಖೆಯು ಎಚ್ಚರಿಕೆಯ ಮುನ್ಸೂಚನೆಯನ್ನು ನೀಡಿದೆ. ಏಪ್ರಿಲ್‌ನಿಂದ ಜೂನ್ ಅವಧಿಯಲ್ಲಿ ದೇಶದ ಬಹುತೇಕ ಕಡೆಗಳಲ್ಲಿ ಗರಿಷ್ಠ ತಾಪಮಾನವು ವಾಡಿಕೆಗಿಂತ ಹೆಚ್ಚಾಗಲಿದೆ ಎಂದೂ ವಿಶೇಷವಾಗಿ ಗುಜರಾತ್, ಮಹಾರಾಷ್ಟ್ರ, ಕರ್ನಾಟಕದ ಉತ್ತರ ಕರ್ನಾಟಕ, ಮಧ್ಯಪ್ರದೇಶ, ಒಡಿಶಾ ಮತ್ತು ಆಂಧ್ರಪ್ರದೇಶದಲ್ಲಿ ಸೆಕೆಯ ಅಲೆಗಳ ಅವಧಿ ಹೆಚ್ಚಾಗಲಿದೆಯೆಂದೂ ಹೇಳಲಾಗಿದೆ. ದಿನದ ತಾಪಮಾನ 45 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಿದ್ದರೆ, ಸತತ ಎರಡು- ಮೂರು ದಿನ ಅದೇ ಮಟ್ಟದಲ್ಲಿದ್ದರೆ ಅದಕ್ಕೆ 'ಸೆಕೆಯ ಅಲೆ' ಎನ್ನುತ್ತಾರೆ. ಪ್ರತಿ ಬೇಸಿಗೆಯಲ್ಲೂ ಒಂದೆರಡು ಬಾರಿ ಅಂಥ ಅಲೆಗಳು ಕಂಡುಬರುತ್ತವಾದರೂ ಈ ಬಾರಿಯ ಬೇಸಿಗೆಯಲ್ಲಿ ಏಳೆಂಟು ಬಾರಿ ಸೆಕೆಯ ಅಲೆಯನ್ನು ಎದುರಿಸಬೇಕಾದೀತೆಂದು ಇಲಾಖೆ ಹೇಳಿದೆ. ನಮ್ಮ ರಾಜ್ಯದಲ್ಲಿ ಬಾಗಲಕೋಟೆ, ಕಲಬುರಗಿ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮಾರ್ಚ್ ತಿಂಗಳಿಂದಲೇ ದಿನದ ಬಿಸಿಲು ಝಳ ಹೆಚ್ಚಾಗುತ್ತ ಬಂದಿದೆ. ಅದು ಇನ್ನಷ್ಟು ತೀವ್ರವಾಗಲಿದೆ, ಇನ್ನಷ್ಟು ಜಿಲ್ಲೆಗಳಿಗೆ ವ್ಯಾಪಿಸಲಿದೆ. ಬಿಸಿ ಅಲೆಯ ಜೊತೆಜೊತೆಗೇ ದೂಳು ಮಾರುತ, ನೀರಿನ ಅಭಾವ, ಕೊಳೆನೀರಿನ ಅನಿವಾರ್ಯ ಬಳಕೆ ಎಲ್ಲವೂ ಹೆಚ್ಚುವುದರಿಂದ ಸಾರ್ವಜನಿಕ ಸ್ವಾಸ್ಥ್ಯದ ಹೊಸ ಹೊಸ ಸವಾಲುಗಳು ಎದುರಾಗಲಿವೆ.

ವಿಪರ್ಯಾಸ ಏನೆಂದರೆ ಚಂಡಮಾರುತ, ಮಹಾಪ್ರವಾಹ, ಭೂಕುಸಿತದಂಥ ನೈಸರ್ಗಿಕ ಪ್ರಕೋಪಗಳಿಗಿಂತ ಇದು ಭಿನ್ನವಾಗಿದ್ದು 'ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ'ದಂಥ ಸಾಂಸ್ಥಿಕ ನೆರವು ಕೂಡ ಧಾವಿಸಿ ಬರುವಂತಿಲ್ಲ. ಸೆಕೆಯ ಅಲೆ ತೀರಾ ಹೆಚ್ಚಾದ ಸಂದರ್ಭಗಳಲ್ಲಿ ಪಶ್ಚಿಮದ ದೇಶಗಳ ದೊಡ್ಡ ನಗರಗಳಲ್ಲಿ ತಾತ್ಕಾಲಿಕವಾಗಿ 'ತಂಪು ತಂಗುದಾಣ'ಗಳನ್ನು ನಿರ್ಮಿಸುವ ವ್ಯವಸ್ಥೆ ಇರುತ್ತದೆಯಾದರೂ ಅಲ್ಲಿನ ಮಾದರಿಗಳನ್ನು ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಜಾರಿಗೆ ತರುವ ಸಿದ್ಧತೆಯೇನೂ ಕಾಣುತ್ತಿಲ್ಲ. ಬಿಸಿಲಿಗೆ ಮೈಯೊಡ್ಡುವವರು, ನಿರ್ಜಲೀಕರಣ ಆಗದಂತೆ ವೈಯಕ್ತಿಕವಾಗಿ ಏನೇನು ಕ್ರಮ ಕೈಗೊಳ್ಳಬೇಕೆಂದು ಸಲಹೆ ನೀಡಲೆಂದು 'ಸೆಕೆ ನಿರ್ವಹಣಾ ಯೋಜನೆ' ಇದೆಯಾದರೂ ಅದರ ಕಾರ್ಯವ್ಯಾಪ್ತಿ ಕುರಿತ ಸ್ಪಷ್ಟ ಚಿತ್ರಣ ಇನ್ನೂ ಸಿಗಬೇಕಿದೆ.

> ಋತುಮಾನದ ಸಂಕಷ್ಟಗಳಿಗೆ ಸ್ಪಂದಿಸುವ ಸುಸ್ಥಿರ ಅಭಿವೃದ್ಧಿ ಯೋಜನೆಗಳಿಗೆ ರಾಜಕೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಗಳಲ್ಲಿ ಹೆಚ್ಚಿನ ಆದ್ಯತೆ ನೀಡಬೇಕಿದೆ

ಥಾರ್ ಮರುಭೂಮಿಯನ್ನು ಬಿಟ್ಟರೆ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ಭಾರತದ ಎರಡನೆಯ ಅತಿ ದೊಡ್ಡ 'ಮರುಭೂಮಿ ಸದೃಶ' ಶುಷ್ಕ ಭೂಪ್ರದೇಶ ಸೃಷ್ಟಿಯಾಗುತ್ತಿದೆ ಎಂದು ವಿಜ್ಞಾನಿಗಳು ಈ ಹಿಂದೆಯೇ ಎಚ್ಚರಿಕೆ ನೀಡಿದ್ದರು. ನೆಲದ ಮೇಲೆ ಹಸಿರಿನ ಹೊದಿಕೆ ಶೀಘ್ರಗತಿಯಲ್ಲಿ ನಿರ್ನಾಮವಾಗುತ್ತಿರುವುದು, ಅದರಿಂದಾಗಿ ಮಣ್ಣಿನಲ್ಲಿ, ಗಾಳಿಯಲ್ಲಿ ತೇವಾಂಶ ಕಡಿಮೆಯಾಗುವುದು ಮತ್ತು ಎಲ್ಲೆಡೆ ಶೀಘ್ರವಾಗಿ ಅಂತರ್ಜಲ ಮಟ್ಟ ಕುಸಿಯುತ್ತಿರುವುದನ್ನು ನೋಡಿದರೆ, ಅರಿವಿದ್ದೋ ಇಲ್ಲದೆಯೋ ಮರುಭೂಮಿಯ ನಿರ್ಮಾಣದಲ್ಲಿ ಎಲ್ಲರೂ ಕೈಜೋಡಿಸಿದಂತೆ ಭಾಸವಾಗುತ್ತದೆ. ಜಾಗತಿಕ ತಾಪಮಾನದ ನಿರಂತರ ಏರಿಕೆಗೆ ವಿಕಸಿತ ದೇಶಗಳೇ ಕಾರಣವೆಂದು ಅದೆಷ್ಟೇ ಎತ್ತರದ ಧ್ವನಿಯಲ್ಲಿ ಅಭಿವೃದ್ಧಿಶೀಲ ದೇಶಗಳು ವಾದಿಸಿದರೂ ನಮ್ಮ ಸುತ್ತಲಿನ ಪರಿಸರ ದಿನದಿನಕ್ಕೆ ಬಿಗಡಾಯಿಸುತ್ತಿರುವುದಕ್ಕೆ ಸ್ಥಳೀಯ ನಾಯಕತ್ವದ ನಿಷ್ಕಾಳಜಿ ಮತ್ತು ಸರ್ಕಾರಗಳ ಧೋರಣೆಗಳೂ ಕಾರಣವಾಗುತ್ತಿವೆ ಎಂಬುದಂತೂ ನಿಜ. ಅನೇಕ ದೇಶಗಳಲ್ಲಿ ಬರನಿರೋಧಕ ಯೋಜನೆಗಳಲ್ಲಿ ನಾಗರಿಕರನ್ನು ತೊಡಗಿಸಿಕೊಳ್ಳಲಾಗುತ್ತಿದೆ. ಆಫ್ರಿಕಾದ ಸಹೇಲ್ ಮರುಭೂಮಿಯ ವಿಸ್ತರಣೆಯನ್ನು ತಡೆಯಲೆಂದು ಎಂಟು ಸಾವಿರ ಕಿಲೊಮೀಟರ್ ವರೆಗೆ ಗಿಡಮರಗಳ 'ಹಸಿರುಗೋಡೆ' ನಿರ್ಮಾಣಕ್ಕೆ 22 ರಾಷ್ಟ್ರಗಳು ಕೈಜೋಡಿಸಿವೆ. ವಿಜ್ಞಾನ-ತಂತ್ರಜ್ಞಾನ ಅದೆಷ್ಟೇ ಮುಂದುವರಿದರೂ ಯಾರೂ ಒಂದು ತೊಟ್ಟು ನೀರನ್ನೂ ಸೃಷ್ಟಿಸಲು ಸಾಧ್ಯವಿಲ್ಲ. ಆದರೆ ಜನಸಾಮಾನ್ಯರನ್ನು ಸಹಭಾಗಿಗಳನ್ನಾಗಿ ಮಾಡಿದರೆ ಪ್ರಕೃತಿ ನೀಡುವ ಹನಿಹನಿ ನೀರನ್ನೂ ಸಂಗ್ರಹಿಸಿ ಬಳಸಿಕೊಂಡು ಮರುಭೂಮಿಯನ್ನು ತಡೆಗಟ್ಟಲು, ಬಿಸಿ ಬೇಗೆಯನ್ನು ಸಹನೀಯ ಮಾಡಲು ಸಾಧ್ಯವಿದೆ.

ರಾಜಕೀಯ ಪಕ್ಷಗಳು ತಂತಮ್ಮ ಚುನಾವಣಾ ಪ್ರಣಾಳಿಕೆಗಳನ್ನು ಸಿದ್ಧಪಡಿಸುತ್ತಿರುವ ಸಂದರ್ಭದಲ್ಲೇ ಹವಾಮಾನ ಇಲಾಖೆಯ ಎಚ್ಚರಿಕೆ ಬಂದಿದ್ದು ಸಕಾಲಿಕವಾಗಿದೆ. ಈಗಿನ ಬರಗಾಲ, ಬಿಸಿಗಾಳಿ, ದೂಳು ಮಾರುತದಂಥ ಋತುಕ್ಷೋಭೆಗಳಂತೆ ನಂತರ ಸುಂಟರಗಾಳಿ, ಮೇಘಸ್ಫೋಟ, ಭೂಕುಸಿತ, ನೆರೆಹಾವಳಿ ಎಲ್ಲವೂ ಆವರ್ತನರೂಪದಲ್ಲಿ ಮತ್ತಷ್ಟು ಉಗ್ರವಾಗುತ್ತಲೇ ಹೋಗಲಿವೆ ಎಂದು ವಿಜ್ಞಾನಿಗಳು ತಜ್ಞರು ಎಚ್ಚರಿಸುತ್ತಲೇ ಬಂದಿದ್ದಾರೆ. ಅಭಿವೃದ್ಧಿಯ ಪರಿಕಲ್ಪನೆಯನ್ನೇ ಬದಲಿಸಬೇಕಾದ ಹಂತಕ್ಕೆ ನಾವು ಬಂದಿದ್ದೇವೆ. ಬರ ನಿವಾರಣೆ, ಜಲಮೂಲಗಳ ಸಂವರ್ಧನೆ, ಕೃಷಿ ಕ್ಷೇತ್ರದ ರಕ್ಷಣೆ, ಆರೋಗ್ಯ ನಿರ್ವಹಣೆಯಂಥ ಸುಸ್ಥಿರ ಅಭಿವೃದ್ಧಿಯ ಯೋಜನೆಗಳಿಗೆ ರಾಜಕೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಗಳಲ್ಲಿ ಹಿಂದೆಂದಿಗಿಂತ ಹೆಚ್ಚಿನ ಆದ್ಯತೆಯನ್ನು ನೀಡಬೇಕಿದೆ. ಬಿಸಿ ಬೇಗೆಯಲ್ಲಿ ಚುನಾವಣಾ ಪ್ರಚಾರಕ್ಕೆ ಹೊರಡುವವರನ್ನು ಈ ಕುರಿತು ಪ್ರಶ್ನಿಸುವ ಅವಕಾಶ ಮತದಾರರಿಗೆ ಬಂದಿದೆ. 'ಋತುಮಾನದ ಸಂಕಷ್ಟಗಳಿಗೆ ನಿಮ್ಮ ಪಕ್ಷ ನೀಡುವ ಪರಿಹಾರ ಏನು' ಎಂಬ ಪ್ರಶ್ನೆಗೆ ಉತ್ತರಿಸಲು ಮತಬೇಟೆಗೆ ಹೊರಟವರು ಸಿದ್ಧರಾಗಬೇಕಿದೆ. 'ಸುಡುಬಿಸಿಲಿನಲ್ಲಿ ಮತಗಟ್ಟೆಗೆ ಹೋಗಬೇಕಾದರೆ ಎಳೆಮಕ್ಕಳನ್ನು ಒಯ್ಯಬೇಡಿ' ಎಂದು ತಾಯಂದಿರಿಗೆ ಚುನಾವಣಾ ಆಯೋಗವೇನೋ ಆಗಲೇ ಎಚ್ಚರಿಕೆ ನೀಡಿದೆ. ಚುನಾವಣೆಯ ನಂತರವೂ ಎಳೆಮಕ್ಕಳ ಭವಿಷ್ಯ ಸುಭದ್ರವಾಗುವಂಥ ದೀರ್ಘಕಾಲದ ಯೋಜನೆಗಳು ಬೇಕಲ್ಲವೆ?

ದಿನದ ಟ್ವೀಟ್

ನಗದು ಒಯ್ಯುವಾಗ ಎಚ್ಚರವಿರಲಿ

ಹೊರಗೆ ಹೋಗುವಾಗ ದಾಖಲೆ ಇಲ್ಲದೆ ₹ 50 ಸಾವಿರಕ್ಕಿಂತ ಹೆಚ್ಚು ಹಣವನ್ನು ಕೊಂಡೊಯ್ಯಬೇಡಿ ಚುನಾವಣೆ ಮುಗಿಯುವವರೆಗಾದರೂ ಕೊಂಡೊಯ್ಯಬೇಡಿ. ಮುಂದಿನ ಎರಡು ತಿಂಗಳ ಕಾಲ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಹೀಗೆ ಮಾಡಬೇಕಾಗುತ್ತದೆ. ತಮಿಳುನಾಡಿನ ಮೂಲಕ ಸಂಚರಿಸುತ್ತಿದ್ದ ಪಂಜಾಬ್ ಕುಟುಂಬವೊಂದರ ₹ 68,000 ನಗದನ್ನು ಚುನಾವಣಾ ಆಯೋಗದ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಪರಿಶೀಲನೆಯ ಬಳಿಕ ಅದೇ ಹಣವನ್ನು ಹಿಂದಿರುಗಿಸಲಾಯಿತು. ಕುಟುಂಬದ ಮಹಿಳೆಯರ ಕಣ್ಣೀರಿಗೆ ಅಧಿಕಾರಿಗಳು ಕರಗದೇ ಹೋದದ್ದು ಒಳ್ಳೆಯದು. ಭಾರತದ ಕಾನೂನುಗಳು ಮುಂದುವರಿದ ರಾಷ್ಟ್ರಗಳಿಗಿಂತಲೂ ಹೆಚ್ಚು ಕಠಿಣವಾಗುತ್ತಿರುವುದು ಮಾತ್ರವಲ್ಲ ಅವುಗಳನ್ನು ಜಾರಿಗೊಳಿಸುತ್ತಿರುವುದೂ ಮುಖ್ಯವಾದ ಸಂಗತಿಯಾಗಿದೆ.

ರಾಕೇಶ್ ಕೃಷ್ಣನ್ ಸಿಂಹ, ರಕ್ಷಣಾ ವಿಷಯಗಳ ವಿಶ್ಲೇಷಕ

ಕಿಡಿನುಡಿ

ಭಾರತವು ಕಚ್ಚತೀವು ಕುರಿತು ಪ್ರಸ್ತಾಪಿಸಿರುವುದು, ಆಂತರಿಕ ರಾಜಕಾರಣಕ್ಕಾಗಿ ಧ್ವನಿ ಎತ್ತುವುದು ಶ್ರೀಲಂಕಾದೊಂದಿಗಿನ ರಾಜತಾಂತ್ರಿಕ ವ್ಯವಹಾರ ಮತ್ತು ಸಂಬಂಧಗಳಿಗೆ ಹೊಡೆತ ನೀಡುತ್ತದೆ. ಎಸ್. ಜೈಶಂಕರ್ ಅವರಂತಹ ನುರಿತ ರಾಜತಂತ್ರಜ್ಞರು ಅದರ ಬಗ್ಗೆ ಮಾತನಾಡುವುದು ಅವರ ವರ್ಚಸ್ಸಿಗೆ ಧಕ್ಕೆ ತರುತ್ತದೆ. ಮಾಲ್ದೀವ್ಸ್‌ನಂತೆಯೇ ಶ್ರೀಲಂಕಾವೂ ಪುನಃ ಚೀನಾದ ತೆಕ್ಕೆ ಸೇರಲು ಇದು ಎಡೆಮಾಡಿಕೊಡಬಹುದು. ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಇದರಿಂದ ಯಾವ ಗಣನೀಯ ಲಾಭವೂ ಆಗುವುದಿಲ್ಲ.

ಕೆ.ಸಿ.ಸಿಂಗ್, ನಿವೃತ್ತ ರಾಜತಾಂತ್ರಿಕ ಅಧಿಕಾರಿ

25 ವರ್ಷಗಳ ಹಿಂದೆ

ಶನಿವಾರ, 3-4-1999

• ಭೂಕಂಪ ಪೀಡಿತರಿಗೆ ಪ್ರಕೃತಿ, ಪ್ರಾಣಿ ಕಾಟ

ಗೋಪೇಶ್ವರ (ಉತ್ತರ ಪ್ರದೇಶ) ಏ. 2 (ಯುಎನ್‌ಐ, ಪಿಟಿಐ)– ಭೂಕಂಪಕ್ಕೆ ತುತ್ತಾಗಿರುವ ಚಮೋಲಿ ಹಾಗೂ ರುದ್ರ ಪ್ರಯಾಗ್ ಜಿಲ್ಲೆಗಳ ಇನ್ನೂ ಹಲವು ಗ್ರಾಮಗಳಿಗೆ ಪರಿಹಾರ ಸಾಮಗ್ರಿಗಳು ತಲುಪದೇ ಆತಂಕದ ವಾತಾವರಣ ಒಂದೆಡೆ ಸೃಷ್ಟಿಯಾಗಿದ್ದರೆ, ಮತ್ತೊಂದೆಡೆ, ಕಾಡುಪ್ರಾಣಿಗಳ ಹಾವಳಿ ಹಾಗೂ ಮತ್ತಷ್ಟು ನೈಸರ್ಗಿಕ ವಿಕೋಪಕ್ಕೆ ಗುರಿಯಾಗುವ ಭಯದ ನೆರಳಿನಲ್ಲಿ ಇಲ್ಲಿನ ಜನರು ವಾಸಿಸುತ್ತಿದ್ದಾರೆ.

ಸಿಬ್ಬಂದಿಯ ಕೊರತೆಯೂ ಸೇರಿದಂತೆ ಹಲವು ಕಾರಣಗಳಿಂದ ಪರಿಹಾರ ಕಾರ್ಯ ವಿಳಂಬವಾಗುತ್ತಿದೆ. ಈ ಎರಡು ಜಿಲ್ಲೆಗಳ ದೂರದ ಹಳ್ಳಿಗಳನ್ನು ತಲುಪಲು ಸಾಧ್ಯವಾಗದೇ ಪರಿಹಾರ ಕಾರ್ಯಕ್ಕೆ ಅಡಚಣೆ ಉಂಟಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 3-4-1974

• ಕೃಷಿ ಭೂಮಿ ಮೇಲೆ ಎಕರೆಗೆ ಸಾವಿರ ರೂ. ಅಭಿವೃದ್ಧಿ ತೆರಿಗೆ; ಸದ್ಯದಲ್ಲೇ ವಿಧೇಯಕ

ಬೆಂಗಳೂರು, ಏ. 2– ನೂರಾರು ಕೋಟಿ ರೂಪಾಯಿಗಳ ಸರ್ಕಾರಿ ಹಣದ, ನೀರಾವರಿ ಯೋಜನೆಗಳ ಫಲ ಪಡೆದು ಶ್ರೀಮಂತವಾಗಿರುವ ಕೃಷಿ ಜಮೀನಿನ ಮೇಲೆ 'ಎಕರೆಗೆ ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಿಲ್ಲದಂತೆ' ಅಭಿವೃದ್ಧಿ ತೆರಿಗೆಯನ್ನು ವಿಧಿಸಲು ಕರ್ನಾಟಕ ಸರ್ಕಾರ ತೀರ್ಮಾನ ಮಾಡಿದೆ.

ಇದಕ್ಕೆ ಸಂಬಂಧಿಸಿದಂತೆ ವಿಧೇಯಕ- ವೊಂದನ್ನು ವಿಧಾನಸಭೆಯ ಈ ಅಧಿವೇಶನದಲ್ಲಿಯೇ ತಾವು ಮಂಡಿಸಲಿರುವುದಾಗಿ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಇಂದು ಸದನದಲ್ಲಿ ಪ್ರಕಟಿಸಿದರು.

'ಜಲಸಾಥಿ' ಯೋಜನೆಯಡಿ ಮಾದರಿಯಾಗಿದೆ ಒಡಿಶಾದ ಜಲ ವಿತರಣೆ ಕಾರ್ಯ

ನೀರು ನಿರ್ವಹಣೆಯಲ್ಲಿ ನಾರಿಶಕ್ತಿ

ವಿಶ್ಲೇಷಣೆ

ಬಿ.ಸಿ.ಪ್ರಭಾಕರ್, ಕೆ.ಎನ್.ರಾಧಿಕಾ

ಒಂದು ಕಾಲಕ್ಕೆ ಒಡಿಶಾ ಎಂದರೆ ಕ್ಷಾಮ ಮತ್ತು ಬಡತನದ ರಾಜ್ಯ ಎಂಬ ಅಪಖ್ಯಾತಿ ಇತ್ತು. ಕುಡಿಯುವ ನೀರಿನ ಬವಣೆ, ನೀರು ನಿರ್ವಹಣೆಯಲ್ಲಿ ಅದಕ್ಷತೆ, ನೀರಿಗಾಗಿ ಪಡಿಪಾಟಲು ಪಡುವ ಸನ್ನಿವೇಶಗಳು ಇದ್ದವು. ಒಡಿಶಾ ತನ್ನ ನೀರಾವರಿ ಹಾಗೂ ಕುಡಿಯುವ ನೀರಿಗೆ ಸುಮಾರು ಶೇಕಡ 60ರಷ್ಟು ಅಂತರ್ಜಲವನ್ನೇ ಅವಲಂಬಿಸಿದ್ದು, ಅಲ್ಲಿ ಕೂಡ ಅಂತರ್ಜಲ ಕುಸಿತದ ಸಮಸ್ಯೆ ಇದೆ. ಆದರೆ ನೀರಿನ ಹೊಸ ಮೂಲಗಳಿಂದ, ಅಂದರೆ ಚಿಲ್ಕಾ ಸರೋವರ ಮತ್ತು ಹಲವಾರು ನದಿಗಳಿಂದ ನೀರಿನ ಸಂಪರ್ಕಜಾಲವನ್ನು ಸಾಧಿಸಿದ ಮೇಲೆ ಪರಿಸ್ಥಿತಿ ಗಣನೀಯವಾಗಿ ಸುಧಾರಿಸಿದೆ.

ರಾಜಕೀಯ ಇಚ್ಛಾಶಕ್ತಿ ಮತ್ತು ತಂತ್ರಜ್ಞಾನದ ಸಮರ್ಪಕ ಅಳವಡಿಕೆ ಏನೆಲ್ಲ ಮಾರ್ಪಾಡು ಹಾಗೂ ಸುಧಾರಣೆ ತರಬಲ್ಲವು ಎಂಬುದನ್ನು ಅರಿಯಲು ಇಂದು ಒಡಿಶಾ ರಾಜ್ಯವನ್ನು ನೋಡಬೇಕು. ಅಂತರರಾಷ್ಟ್ರೀಯ ಮಾನದಂಡದ ಪ್ರಕಾರ, ಗುಣಮಟ್ಟದ ಕುಡಿಯುವ ನೀರನ್ನು 130 ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ದಿನದ 24 ಗಂಟೆಯೂ ಒಡಿಶಾ ಸರ್ಕಾರ ಒದಗಿಸು- ತ್ತಿದ್ದು, ಮುಂದಿನ ದಿನಗಳಲ್ಲಿ ಈ ಯೋಜನೆಯನ್ನು ರಾಜ್ಯದ ಪ್ರತಿ ಮನೆಗೂ ತಲುಪಿಸುವ ಕಾರ್ಯಕ್ರಮ ಹಾಕಿಕೊಂಡಿದೆ. ಈ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ 'ಡ್ರಿಂಕ್ ಫ್ರಮ್ ಟ್ಯಾಪ್' ಎಂಬ ಪ್ರಗತಿಪರ ಚಿಂತನೆ ಮತ್ತು ಅಲ್ಲಿನ ಹಿರಿಯ ಐಎಎಸ್ ಅಧಿಕಾರಿ ಮತಿ ವದನನ್ ಅವರ ಅವಿರತ ಶ್ರಮವಿದೆ.

ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಮನಸ್ಸಿಟ್ಟು ಕೆಲಸ ಮಾಡಿದರೆ ಸಮಾಜದ ದಿಕ್ಕನ್ನೇ ಬದಲಾಯಿಸುವ ಇಂತಹ ಕಾರ್ಯಗಳನ್ನು ಯಶಸ್ವಿಗೊಳಿಸಬಹುದು ಎಂಬುದಕ್ಕೆ ಒಡಿಶಾವೇ ಉದಾಹರಣೆ. 'ಜನ ಮೊದಲು' ಎಂಬ ಧೋರಣೆ ಮತ್ತು ಕಾಳಜಿ ಸರ್ಕಾರಕ್ಕೆ ಇದ್ದರೆ ಯಾವುದೇ ಯೋಜನೆಯನ್ನು ಖಾಸಗೀಕರಣಗೊಳಿಸದೆಯೂ ಸಾಧಿಸಬಹುದು ಎಂಬುದು ಇದರಿಂದ ವೇದ್ಯವಾಗುತ್ತದೆ.

2017ರಲ್ಲಿ ಒಡಿಶಾ ಸರ್ಕಾರವು 'ಡ್ರಿಂಕ್ ಫ್ರಮ್ ಟ್ಯಾಪ್' ಯೋಜನೆಯನ್ನು ಪಟ್ಟಣ ಮತ್ತು ನಗರ ಪ್ರದೇಶಗಳಲ್ಲಿ ಪ್ರಾರಂಭಿಸಿತು. ಇಡೀ ದೇಶದಲ್ಲಿ ಕಾರ್ಯಗತಗೊಳಿಸಿದ ಮೊದಲ ಮತ್ತು ಏಕಮಾತ್ರ ರಾಜ್ಯವೆನಿಸಿ, ನಲ್ಲಿಯ ನೀರನ್ನು ನೇರವಾಗಿ ಕುಡಿಯುವ ರೀತಿಯಲ್ಲಿ ಶುದ್ಧೀಕರಿಸಿ ಸರಬರಾಜು ಮಾಡಲಾಗುತ್ತಿದೆ. ಈ ಯೋಜನೆಯ ಮೂಲ ಉದ್ದೇಶ ನಗರದ ಬಡವರಿಗೆ ಶುದ್ಧ ನೀರಿನ ಬವಣೆಯನ್ನು ನೀಗಿಸುವುದು, ನೀರಿನಿಂದ ಉಂಟಾಗುವ ಕಾಯಿಲೆಗಳನ್ನು ತಗ್ಗಿಸುವುದು, ಮನೆಯ ಮೇಲೆ ಟ್ಯಾಂಕ್ ನಿರ್ಮಿಸುವುದು, ನೀರಿನ ಸಂಪ್ ನಿರ್ಮಾಣ ಮತ್ತು ನೀರಿನ ಶುದ್ಧೀಕರಣಕ್ಕಾಗಿ ವಾಟರ್ ಫಿಲ್ಟರ್‌ನಂತಹ ಉಪಕರಣಗಳ ಖರ್ಚುಗಳನ್ನು ಉಳಿಸುವುದು. ಈ ಯೋಜನೆಯಡಿ ಲಕ್ಷಾಂತರ ಜನರಿಗೆ ಪ್ರಯೋಜನ ದೊರೆತಿದ್ದು, ಇನ್ನೂ 17 ನಗರಗಳಲ್ಲಿ ಯೋಜನೆ ಪ್ರಗತಿಯಲ್ಲಿದೆ. ಈ ವರ್ಷಾಂತ್ಯದ ಹೊತ್ತಿಗೆ ಮತ್ತೂ ಹಲವು ಲಕ್ಷ ಜನರಿಗೆ ಯೋಜನೆಯ ಪ್ರಯೋಜನ ದೊರೆಯಲಿದೆ.

ಈ ಯೋಜನೆಯಲ್ಲಿ ಅತ್ಯಂತ ದೊಡ್ಡ ಸವಾಲಾಗಿದ್ದು ನೀರು ಸೋರುವಿಕೆಯ ತಡೆ ಮತ್ತು ನೀರಿನ ಗುಣಮಟ್ಟದ ಖಾತರಿ. ಇದಕ್ಕಾಗಿ ನಿರಂತರ ಗುಣಮಟ್ಟದ ಪರೀಕ್ಷೆಗಾಗಿ ಪ್ರತಿ ಮನೆಯ ನೀರಿನ ಸಂಪರ್ಕಸೇತುವನ್ನು ಮುಖ್ಯ ಕೇಂದ್ರ ಸರ್ವರ್‌ಗೆ ಸೇರಿಸಿ ಗುಣಮಟ್ಟ ಪರೀಕ್ಷೆಯ ವಿವರಗಳನ್ನು ದಾಖಲಿಸುವ ವ್ಯವಸ್ಥೆ ಇದೆ. ಸಂಚಾರಿ ಲ್ಯಾಬ್‌ಗಳಲ್ಲಿ ಸ್ಥಳದಲ್ಲೇ ಗುಣಮಟ್ಟ ಪರೀಕ್ಷೆಯ ವ್ಯವಸ್ಥೆ ಮಾಡಿದ್ದು, ನೀರಿನ ಒಟ್ಟಾರೆ ಗುಣಮಟ್ಟದ ಖಾತರಿಗಾಗಿ ವ್ಯಾಪಕ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿದೆ. ಹೊಂದಾಣಿಕೆ ಮತ್ತು ಸಮುದಾಯ ಒಳಗೊಳ್ಳುವಿಕೆಯ ಮಹತ್ವ ಅರಿತ ಸರ್ಕಾರ ಅದಕ್ಕೆ ಭಿನ್ನ ಮಾರ್ಗಗಳನ್ನು ಅಳವಡಿಸಿಕೊಂಡಿದೆ. 'ಜಲಸಾಥಿ' ಎಂಬ ವಿನೂತನ ಮಾರ್ಗದಡಿ ಸ್ವಸಹಾಯ ಮಹಿಳಾ ಗುಂಪುಗಳನ್ನು ನೇಮಿಸಿಕೊಂಡು ನಗರ ನೀರು ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದೆ.

ಸಮುದಾಯಗಳ ಪ್ರತಿನಿಧಿಗಳಾದ ಇವರು ಈ ಯೋಜನೆಯನ್ನು ಜಾರಿಗೆ ತರಲು ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ನೀರು ಸರಬರಾಜಿನ ಮುಖ್ಯಸ್ಥ ಭವಾನಿ ಶಂಕರ್ ಮಹಂತಿ ಹೇಳುತ್ತಾರೆ. ಏಕೆಂದರೆ, ನೀರಿನ ಬವಣೆಯ ಕಷ್ಟ ಮಹಿಳೆಯರಿಗೇ ಹೆಚ್ಚು ತಾಕುವುದು ಮತ್ತು ಅದರ ಮಹತ್ವದ ಅರಿವು ಅವರಿಗೆ ಜಾಸ್ತಿ ಎನ್ನುವುದು ಅವರ ಅಭಿಪ್ರಾಯ. ಅದಕ್ಕಾಗಿಯೇ ಅವರಿಗೆ ತರಬೇತಿ ಕೊಟ್ಟು ತಳಮಟ್ಟದಿಂದಲೇ ಕಾರ್ಯ ನಿರ್ವಹಿಸುವ ಗುಂಪುಗಳನ್ನು ಕಟ್ಟಲಾಗಿದೆ. ಈಗ ಒಡಿಶಾದ ಜಲ ನಿರ್ವಹಣೆಯಲ್ಲಿ ಗ್ರಾಹಕರು ಮತ್ತು ಸರ್ಕಾರದ ನಡುವೆ 'ಜಲಸಾಥಿ'ಗಳು ಸಮುದಾಯಗಳ ಒಂದು ಭಾಗವೇ ಆಗಿರುವುದರಿಂದ ಗ್ರಾಹಕಸ್ನೇಹಿ ಸೇವೆ ಒದಗಿಸಲು ಸಹಾಯವಾಗಿದೆ.

ನೀರಿನ ನಿರ್ವಹಣೆಗೆ ಅಲ್ಲಿನ ಸರ್ಕಾರವು ಸಾರ್ವಜನಿಕ ಆರೋಗ್ಯ ಮತ್ತು ಎಂಜಿನಿಯರಿಂಗ್ ವಿಭಾಗದ ತನ್ನ ಕಾರ್ಯಬಾಹುಳ್ಯವನ್ನು ವಿಸ್ತರಿಸಿದ ಅಂಗವಾಗಿ 'ಜಲಸಾಥಿ' ಯೋಜನೆಯನ್ನು ಆರಂಭಿಸಿತು. ಅದಕ್ಕಾಗಿ 'ಜಲಸಾಥಿ'ಗಳ ಜವಾಬ್ದಾರಿ ಮತ್ತು ಹಕ್ಕು ಬಾಧ್ಯತೆಗಳಿಗೆ ವಿಶೇಷ ಕಾರ್ಯ- ವಿಧಾನಗಳ ಮೂಲಕ ಪಾರದರ್ಶಕ ವ್ಯವಸ್ಥೆಯನ್ನು ರೂಪಿಸಿದೆ. ಈ ರೂಪುರೇಷೆಗಳಲ್ಲಿ 'ಜಲಸಾಥಿ'ಗಳ ಆಯ್ಕೆ, ಅವರ ಸಾಮರ್ಥ್ಯ ಹೆಚ್ಚಿಸುವುದು, ಅವರಿಗೆ ಇರುವ ಪ್ರೋತ್ಸಾಹಕ ಸೌಲಭ್ಯಗಳು, ಸ್ವಇಚ್ಛೆಯಿಂದ ಭಾಗವಹಿಸುವ ಪಾಲುದಾರಿಕಾ ಸಂಸ್ಥೆಗಳನ್ನು ವಿಷದಪಡಿಸಲಾಗಿದೆ.

130 ಪಟ್ಟಣ ಮತ್ತು ನಗರ ಪ್ರದೇಶಗಳ ಪ್ರತಿ ವಾರ್ಡ್‌ನಲ್ಲಿ ನೀರು ಸರಬರಾಜು ಮತ್ತು ಸಂಬಂಧಿತ ಸಮಸ್ಯೆಗಳ ಉಸ್ತುವಾರಿ, ಮೀಟರ್ ಓದಿ ನೀರಿನ ಬಿಲ್ ನೀಡುವುದು, ನೀರಿನ ಹಣ ಪಾವತಿಸಿಕೊಳ್ಳುವುದು, ಜನರ ನೀರಿನ ಸಮಸ್ಯೆಗಳಿಗೆ ಪರಿಹಾರ ಕೊಡುವುದು ಮತ್ತು ಗ್ರಾಹಕ ಸಂಬಂಧಗಳನ್ನು ಸುಧಾರಿಸುವುದು ಇದರಲ್ಲಿ ಸೇರಿವೆ. ಆರಂಭದಲ್ಲಿ ಜಲ ನಿರ್ವಹಣೆಯ ಅನುವುಗಾರರ ರೀತಿಯಲ್ಲಿ ಇದ್ದ 'ಜಲಸಾಥಿ'ಯರು ಇಂದು ನಗರ ಪ್ರದೇಶಗಳ ಜಲ ನಿರ್ವಹಣೆಯ ಆಧಾರಸ್ತಂಭಗಳೇ ಆಗಿದ್ದಾರೆ.

ಭುವನೇಶ್ವರ ನಗರದಲ್ಲಿ ಪ್ರಾರಂಭವಾದ 'ಜಲಸಾಥಿ' ಯೋಜನೆ ಇಂದು ಒಡಿಶಾದ ಎಲ್ಲ ಪಟ್ಟಣ ಪ್ರದೇಶಗಳಿಗೂ ವ್ಯಾಪಿಸಿ ಒಂದು ಸಾವಿರಕ್ಕೂ ಹೆಚ್ಚು ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ಸ್ವಸಹಾಯ ಗುಂಪುಗಳ ಮೂಲಕ ಆಯ್ಕೆಯಾದ 'ಜಲಸಾಥಿ' ಹಾಗೂ ಸಾರ್ವಜನಿಕ ಆರೋಗ್ಯ ಮತ್ತು ಎಂಜಿನಿಯರಿಂಗ್ ಇಲಾಖೆಯ ನಡುವೆ ಲಿಖಿತ ಒಡಂಬಡಿಕೆಯ ಮೂಲಕ ಇವರು ಕಾರ್ಯನಿರ್ವಹಿಸುತ್ತಿದ್ದು, ಆ ಇಲಾಖೆಯೇ ಇವರಿಗೆ ವೇತನವನ್ನು ಪಾವತಿಸುತ್ತದೆ.

ಪ್ರತಿ ಜಲಸಾಥಿಗೂ ಇಂತಿಷ್ಟು ವಸತಿ ಅಥವಾ ಕೈಗಾರಿಕಾ ಪ್ರದೇಶವೆಂದು ನಿಗದಿಪಡಿಸಿ ಅದರ ಪ್ರಕಾರವೇ ಅವರು ಕೆಲಸ ನಿರ್ವಹಿಸುತ್ತಾರೆ. ಸಮವಸ್ತ್ರ, ಗುರುತಿನ ಚೀಟಿ, ನೀರು ಪರೀಕ್ಷೆಯ ಕಿಟ್, ರಿಜಿಸ್ಟರ್‌ಗಳು ಮತ್ತು ಇವುಗಳನ್ನೆಲ್ಲ ಇಟ್ಟುಕೊಳ್ಳಲು ಒಂದು ಬ್ಯಾಗ್ ಇವಿಷ್ಟನ್ನು 'ಜಲಸಾಥಿ'ಯ ಮಹಿಳೆಗೆ ಕೊಟ್ಟು ಅವರ ಕಾರ್ಯಕ್ಷಮತೆಗೆ ಹೆಚ್ಚು ಇಂಬು ಕೊಡಲಾಗಿದೆ. ತಮ್ಮೆಲ್ಲ ಜವಾಬ್ದಾರಿಯನ್ನು ಚೆನ್ನಾಗಿ ನಿಭಾಯಿಸಲು ಅವರಿಗೆ ಸೂಕ್ತ ತರಬೇತಿಯನ್ನು ಕೊಟ್ಟಿರುತ್ತಾರೆ.

ಜನಸ್ನೇಹಿಯಾದ ಈ 'ಜಲಸಾಥಿ' ಯೋಜನೆ ಬೇರೆ ರಾಜ್ಯಗಳಿಗೊಂದು ಮಾದರಿಯಾಗಿದೆ. ಅಲ್ಲಿನ ಸಮುದಾಯದ ಜನರ ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆ ಮತ್ತು ನೀರು ತೆರಿಗೆಯ ಸಂಗ್ರಹದಲ್ಲಿ ಪ್ರಗತಿ ಸಾಧ್ಯವಾಗಿದೆ. ಮಹಿಳೆಯ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯಲ್ಲಿ ಮತ್ತು ಅವರ ಸ್ವಶಕ್ತೀಕರಣದಲ್ಲಿ ಆಮೂಲಾಗ್ರ ಬದಲಾವಣೆಗಳಾಗಿ, ನೀರು ನಿರ್ವಹಣೆ- ಯಲ್ಲಿ ಇದು ಮಹತ್ತರ ಹೆಜ್ಜೆಯಾಗಿದೆ. ಸಮುದಾಯಗಳನ್ನು ಒಳಗೊಂಡ ಕಾರ್ಯಕ್ರಮಗಳಿಂದ ಜನರಲ್ಲಿ 'ಇದು ನಮ್ಮದೇ ಕಾರ್ಯಕ್ರಮ' ಎಂಬ ಭಾವನೆ ಉಂಟಾಗಿ ಸುಸ್ಥಿರ ಯಶಸ್ಸು ಕಾಣುವತ್ತ ಒಡಿಶಾ ಸರ್ಕಾರ ದೃಢ ಹೆಜ್ಜೆ ಇಟ್ಟಿದೆ. ಸರ್ಕಾರ ಮತ್ತು ಜನರ ನಡುವೆ ಸದೃಢ ಸಂಪರ್ಕ ಸೇತುವೆಯಂತಾಗಿ ಬೇರೆ ಯೋಜನೆಗಳಿಗೂ ಇದು ಮಾದರಿಯಂತಾಗಿದೆ.

ಚುರುಮುರಿ



ಎಲೆಕ್ಷನ್ ಎಕ್ಸಿಬಿಷನ್

• ಮಣ್ಣೆ ರಾಜು

ಶಂಕ್ರಿ, ಸುಮಿ ಎಲೆಕ್ಷನ್ ಎಕ್ಸಿಬಿಷನ್‌ಗೆ ಬಂದಿದ್ದರು.

'ಬನ್ನಿ ಮೇಡಂ... ನಮ್ಮದು ಅನ್ನಭಾಗ್ಯ ಮಳಿಗೆ, ಐದು ಕೆ.ಜಿ ಅಕ್ಕಿ ಉಚಿತವಾಗಿ ಕೊಡ್ತೀವಿ' ಅಂದ ಮಳಿಗೆಯವ.

'ಹತ್ತು ಕೆ.ಜಿ ಕೊಡ್ತೀವಿ ಅಂತ ಹೇಳಿದ್ರಿ...' ಅಂದ ಶಂಕ್ರಿ.

'ಖರೀದಿಸಲು ಅಕ್ಕಿ ಸಿಗದಂತೆ ಮಾಡಿದ್ದಾರೆ ಇವ್ರು' ಎಂದು ಪಕ್ಕದ ಮಳಿಗೆಯವನನ್ನು ದೂರಿ, 'ಅಕ್ಕಿ ಬದಲು ದುಡ್ಡು ಕೊಡ್ತಿದ್ದೀವಲ್ಲ' ಅಂದ.

'ನಿಮ್ಮ ಅಕ್ಕಿ ದುಡ್ಡು ಉಪ್ಪು, ಮೆಣಸಿನಕಾಯಿಗೂ ಸಾಕಾಗಲ್ಲ' ಪಕ್ಕದವನು ಕಿಚಾಯಿಸಿದ.

'ನಾವು ಎಷ್ಟೊಂದು ಫ್ರೀ ಕೊಡ್ತಿದ್ದೀವಿ, ನೀವು ಯಾವುದನ್ನಾದ್ರೂ ಫ್ರೀ ಕೊಟ್ಟಿದ್ದೀರೇನ್ರೀ?' ಅಂದ. ಇಬ್ಬರೂ ಜಗಳಕ್ಕೆ ಬಿದ್ದರು.

ಶಂಕ್ರಿ, ಸುಮಿ ಇನ್ನೊಂದು ಮಳಿಗೆಗೆ ಬಂದರು. 'ಎಲೆಕ್ಷನ್ ಟಿಕೆಟ್ ಸಿಗದೆ ನೊಂದವರಿಗೆ ಸಾಂತ್ವನ ಹೇಳುವ ಪರಿಣಾಮಕಾರಿ ಪುಸ್ತಕಗಳು ನಮ್ಮಲ್ಲಿವೆ. ಪುಸ್ತಕ ಓದಿಯೂ ನೋವು ನಿವಾರಣೆ ಆಗದಿದ್ದರೆ, ತಜ್ಞರಿಂದ ಚಿಕಿತ್ಸೆ ಕೊಡುಸ್ತೀವಿ' ಎಂದ.

'ಮೇಕೆ ಮಳಿಗೆ'ಗೆ ಬಂದರು. 'ಇದು ಮಟನ್ ಸ್ಟಾಲಾ?' ಸುಮಿ ಕೇಳಿದಳು.

'ಅಲ್ಲ ಮೇಡಂ, ನಮ್ಮಲ್ಲಿ ಕಾವೇರಿ ನದಿ ದಾಟಬಲ್ಲ ಮೇಕೆಗಳಿವೆ. ಎಲೆಕ್ಷನ್‌ನಲ್ಲಿ ಗೆದ್ದರೆ ನಾವು ಮೇಕೆಯನ್ನು ನದಿ ದಾಟಿಸುತ್ತೇವೆ' ಅಂದ.

ಭಾಗ್ಯ, ಸೌಭಾಗ್ಯದ ಮಳಿಗೆಗಳನ್ನು ಸುತ್ತಾಡಿ ಶಂಕ್ರಿ, ಸುಮಿ ದಣಿದು ಬಾಯಾರಿದರು.

'ನೀರಿನ ಮಳಿಗೆ ಎಲ್ಲಿದೆ?' ಶಂಕ್ರಿ ಕೇಳಿದ.

'ನೀರು ಮಾತ್ರ ಕೇಳಬೇಡಿ ಸಾರ್, ನಾವೇ ದುಡ್ಡು ಕೊಟ್ಟು ಟ್ಯಾಂಕರ್‌ನಲ್ಲಿ ನೀರು ತರಿಸಿಕೊಳ್ತಿದ್ದೀವಿ, ಎಲೆಕ್ಷನ್ ಎಕ್ಸಿಬಿಷನ್‌ನಲ್ಲಿ ನೀರಿನ ಮಳಿಗೆ ಇಲ್ಲ...' ಅಂದ.

ಸಂಗತ

ಜನರೇ ಹಣ ಕೊಟ್ಟರು ಈ ಜನನಾಯಕನಿಗೆ!

ಚುನಾವಣೆಯಲ್ಲಿ ಹಣವೇ ಪ್ರಧಾನವಾಗಿರುವ ಈ ಕಾಲಘಟ್ಟದಲ್ಲಿ, ಜನರೇ ದುಡ್ಡು ಕೊಟ್ಟು ಗೆಲ್ಲಿಸಿದ ಶಾಂತವೇರಿ ಗೋಪಾಲಗೌಡರ ಅಪೂರ್ವ ಮಾದರಿ ನಮ್ಮ ಮುಂದಿದೆ

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಮತ್ತೊಂದು ಚುನಾವಣೆಯ ಹೊಸ್ತಿಲಲ್ಲಿ, ಧೀಮಂತ ರಾಜಕಾರಣಿ, ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಅವರ ಜನ್ಮಶತಮಾನೋತ್ಸವವು (ಜನನ: 14, ಮಾರ್ಚ್ 1923) ನಾಡಿನಲ್ಲಿ ವರ್ಷಪೂರ್ತಿ ನಡೆದು ಈಚೆಗಷ್ಟೇ ಸಂಪನ್ನಗೊಂಡಿದೆ. ಗೌಡರ ತವರುನೆಲ ಮತ್ತು ಚಳವಳಿಯ ತೊಟ್ಟಿಲು ಎನಿಸಿಕೊಂಡ ಶಿವಮೊಗ್ಗದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶತಮಾನೋತ್ಸವ ವರ್ಷಾಚರಣೆಯ ಅಂತ್ಯದಲ್ಲಿ ಜನ್ಮಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಗೌಡರ ಬದುಕು, ಹೋರಾಟ, ವಿಚಾರಧಾರೆಯ ಕುರಿತು ಚಿಂತಕರು, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳೊಟ್ಟಿಗೆ ವಿಚಾರಮಂಡನೆ, ಸಂವಾದಗಳಿಗೆ ವೇದಿಕೆ ಕಲ್ಪಿಸಿದ್ದು ಶ್ಲಾಘನೀಯ ಕಾರ್ಯವೆನಿಸಿತು.

ಬಡತನದ ಹಿನ್ನೆಲೆಯಿಂದ ಬಂದು ಮೂರು ಬಾರಿ ಶಾಸಕರಾಗಿದ್ದ ಗೋಪಾಲಗೌಡರು ಜನರ ಕಷ್ಟಗಳಿಗೆ ದನಿಯಾಗಿ, ನ್ಯಾಯಯುತ ಬದಲಾವಣೆಗೆ ಕಾರಣರಾಗಿ ಕೊನೆಗೆ ಬರಿಗೈಯಲ್ಲೇ ಹೊರಟು ಹೋಗಿದ್ದನ್ನು ನಾಡು ಹೆಮ್ಮೆಯಿಂದ ನೆನೆಯುತ್ತದೆ. ಅದೊಂದು ನಾಡಿನ ರಾಜಕೀಯ ಚರಿತ್ರೆಯ ಸೋಜಿಗದ ಪಯಣ. 19 ವರ್ಷದವರಾಗಿದ್ದಾಗಲೇ ಆಕರ್ಷಕ ವ್ಯಕ್ತಿತ್ವ ಅವರದಾಗಿತ್ತು. ಪ್ರಖರ ವಾಗ್ಮಿ, ಛಲದ ಹೋರಾಟಗಾರನಾಗಿ ರಾಷ್ಟ್ರಮಟ್ಟದಲ್ಲಿ ಗುರು- ತಿಸಿಕೊಂಡಿದ್ದ ಗೌಡರು, 29 ವರ್ಷಕ್ಕೆ ಶಾಸನಸಭೆ ಪ್ರವೇಶಿಸಿದವರು. 49 ವರ್ಷಕ್ಕೆ ತೀರಿಕೊಂಡ ಅವರನ್ನು ಅರ್ಧ ಶತಮಾನದ ಬಳಿಕವೂ ಸ್ಮರಿಸಿಕೊಳ್ಳಲು ಸಕಾರಣಗಳಿವೆ. ಜಾತಿ ಮೀರಿ, ಚುನಾವಣೆಯಲ್ಲಿ ಹಣ ಹಂಚದೆಯೇ 'ಒಂದು ನೋಟು, ಒಂದು ವೋಟು' ಘೋಷಣೆಯೊಂದಿಗೆ ಜನರೇ ದುಡ್ಡು ಕೊಟ್ಟು ಗೆಲ್ಲಿಸಿ ಕಳಿಸುತ್ತಿದ್ದ ಅಪೂರ್ವ ನಿದರ್ಶನವದು.

ನಾಡು, ನುಡಿಯ ಸ್ವಾಭಿಮಾನ ಮತ್ತು ಶೋಷಿತ ವರ್ಗಗಳ ಕಳಕಳಿಯ ದನಿಯಾಗಿ, ಶಾಸನಸಭೆಯಲ್ಲಿ ನೇರ, ನಿಷ್ಠುರವಾಗಿ ಮಂಡಿಸುತ್ತಿದ್ದ ಅವರ ವಿಚಾರ ಲಹರಿಗಳು ಮಾಹಿತಿ ಕಣಜಗಳಂತಿದ್ದು, ಹೊಸ ಜನಪ್ರತಿನಿಧಿಗಳಿಗಂತೂ ಮಾದರಿ ಕೈಪಿಡಿಯಂತಿರು- ವುದು ಸತ್ಯ. ಮುಖ್ಯಮಂತ್ರಿಯಲ್ಲದ, ಮಂತ್ರಿಗಿರಿಯ ಅಧಿಕಾರವೂ ಇರದ ಗೋಪಾಲಗೌಡರ ಹೆಸರನ್ನು ಹೊರಗಿಟ್ಟು ಸಮಕಾಲೀನ ಕರ್ನಾಟಕದ ರಾಜಕೀಯ ಅಥವಾ ಸಾಂಸ್ಕೃತಿಕ ಚರಿತ್ರೆಯನ್ನು ಬರೆಯಲು ಯಾರಿಗೂ ಸಾಧ್ಯವಾಗದು!

ಗೋಪಾಲಗೌಡರು ಸಮಕಾಲೀನ ಸಾಹಿತ್ಯ ಮತ್ತು ಚರಿತ್ರೆಯ ಆಳ ಓದುಗರಾಗಿದ್ದರು. ಹಿರಿಯರು, ದಾರ್ಶನಿಕರ ಒಡನಾಟವಿದ್ದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ, ಜೈಲೇ ವಿಶ್ವವಿದ್ಯಾಲಯವಾಗಿ ಅವರ ವ್ಯಕ್ತಿತ್ವವನ್ನು ಅಪ್ಪಟ ಸಮಾಜವಾದಿಯನ್ನಾಗಿ ರೂಪಿಸಿತ್ತು. ರಾಜಕೀಯ ಸ್ವಾತಂತ್ರ್ಯ ಮತ್ತು ಪ್ರಾತಿನಿಧಿತ್ವದೊಟ್ಟಿಗೆ ಸಾಮಾಜಿಕ, ಆರ್ಥಿಕ ಸಮಾನತೆ ಸಾಧ್ಯವಾಗದ ವಿನಾ ರಾಷ್ಟ್ರ ಏಳಿಗೆ ಕಾಣದು ಎಂದು ನಂಬಿದ್ದವರಲ್ಲಿ ಅಗ್ರಮಾನ್ಯರು. ಸ್ವಾತಂತ್ರ್ಯ ಚಳವಳಿ, ರೈತ ಚಳವಳಿ, ಸಮಾಜವಾದಿ ಪಕ್ಷ ಸಂಘಟನೆ, ಕನ್ನಡ ಏಕೀಕರಣ ಹೋರಾಟ, ಶಾಸನಸಭೆಯಲ್ಲಿನ ಅಧಿಕಾರ ರಾಜಕಾರಣ, ಬಡವರು ಮತ್ತು ಶಿಕ್ಷಣದ ಬಗೆಗಿನ ಕಾಳಜಿ ಎಲ್ಲೆಡೆಯೂ ಅವರ ಪಾತ್ರ, ಪ್ರಭಾವಗಳು ಢಾಳಾಗಿದ್ದವು. ಅವರು ಈ ನೆಲದ ಸಂಸ್ಕೃತಿಯನ್ನು ಬಲ್ಲ 'ಫೈರ್ ಬ್ರ್ಯಾಂಡ್' ರಾಜಕಾರಣಿಯಾಗಿದ್ದರು. ಬಡವರು ಮತ್ತು ಗೇಣಿದಾರ ರೈತರಲ್ಲಿ ನ್ಯಾಯಮಾರ್ಗದ ವಿಚಾರಗಳನ್ನು ಬಿತ್ತಿ 'ಕಾಗೋಡು ಚಳವಳಿ' ರಕ್ತರಹಿತ ಕ್ರಾಂತಿಗೆ ಬಲ ತುಂಬಿದರು. ಮುಂದೆ ಅದು ಭೂಸುಧಾರಣಾ ಕಾಯ್ದೆಯಾಗಿ ಬಡ ಕುಟುಂಬಗಳ ಹಿತ ಕಾಯುವಂತಾಗಿದ್ದು ಚರಿತ್ರಾರ್ಹ ಸಂಗತಿಯೇ.

ಮತ್ತೊಮ್ಮೆ ಚುನಾವಣೆ ಎದುರಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಇರುವ ರಾಷ್ಟ್ರಗಳ ಪೈಕಿ ಜಗತ್ತಿನ ಅತಿದೊಡ್ಡ ಮತದಾನದ ಹಬ್ಬ ಇದೀಗ ಕಳೆಗಟ್ಟುತ್ತಿದೆ. ಪ್ರಜಾಪ್ರಭುತ್ವದ ಮೂಲ ಆಶಯವೇ ತಾಯ್ತನದ ಆಡಳಿತ. ಅದೇ ಹಿನ್ನೆಲೆಯಲ್ಲಿ ರೂಪುಗೊಂಡ ಸಂವಿಧಾನವು ಸರ್ವರಿಗೂ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವವನ್ನು ಸಾರುತ್ತದೆ.

ಇಂದಿನ ಚುನಾವಣಾ ಪ್ರಕ್ರಿಯೆಯ ಆರಂಭದ ಹಂತವೇ ದಿಗಿಲು ಮೂಡಿಸುವಂತಿದೆ. ಪಕ್ಷಭೇದ ಮರೆತು ಭಾರಿ ಭ್ರಷ್ಟರು, ಕ್ರಿಮಿನಲ್ ಹಿನ್ನೆಲೆಯುಳ್ಳವರು, ಧನಿಕರು, ರಾಜಕಾರಣಿಗಳ ಕುಟುಂಬಸ್ಥರು, ಜಾತಿವಾದಿಗಳು ಉಮೇದುವಾರರಾಗಿ ಎದುರಾಗು ತ್ತಿರುವ ಹೊತ್ತಿದು. ಹಣ, ಮದ್ಯ, ಜಾತಿ, ಧರ್ಮ, ದೊಂಬಿ ಇವೆಲ್ಲವನ್ನೂ ಮೀರಿ, ದೇಶದ ಭವಿಷ್ಯದ ಬಗ್ಗೆ ಚಿಂತಿಸುವ ಯೋಗ್ಯರನ್ನು ಆಯ್ಕೆ ಮಾಡಬೇಕಾದ ಮತದಾರ ಪ್ರಭುಗಳು, ಯಾರೆಷ್ಟು ದುಡ್ಡು ಕೊಟ್ಟರು, ಸೀರೆ, ಕುಕ್ಕರ್ ಹಂಚಿದರು, ಮದ್ಯ ಕುಡಿಸಿದರು, ಯಾರು ನಮ್ಮ ಜಾತಿಯವರು, ಧರ್ಮದವರು ಅಂತೆಲ್ಲಾ ಲೆಕ್ಕಾಚಾರದಲ್ಲಿ ಮುಳುಗಿದರೆ ನಾಳೆಗಳು ಕರಾಳ. ಅಕ್ರಮವಾಗಿ ಚುನಾವಣೆ ಗೆದ್ದವರು ಭ್ರಷ್ಟರಾಗು ವುದು ಮತ್ತು ಕೆಲವೊಮ್ಮೆ ಹಣ, ಅಧಿಕಾರಕ್ಕಾಗಿ ಮಾರಾಟಗೊಳ್ಳುವ ಸಂಪ್ರದಾಯವೂ ಇತ್ತೀಚೆಗೆ ಚಾಲ್ತಿಯಲ್ಲಿರುವುದನ್ನು ಮರೆಯಬಾರದು.

ಜೀವನಪೂರ್ತಿ ಅತ್ಯಂತ ಸರಳವಾಗಿ, ಗಾಢವಾಗಿ ಬದುಕಿದ, ಮತದಾರರ ಹಣದಿಂದಲೇ ರಾಜಕೀಯ ಮಾಡಿದ, ತನ್ನ ಕುಟುಂಬಸ್ಥರನ್ನು ರಾಜಕೀಯ ಪಡಸಾಲೆಗೆ ಕರೆತರದ ಗೋಪಾಲಗೌಡರಂತಹ ಅಪರೂಪದ ವ್ಯಕ್ತಿತ್ವವು ರಾಜಕಾರಣಿಗಳಿಗೆ ಆದರ್ಶ ಆಗಬೇಕು. ಎಲ್ಲಾ ಕಾಲದ ಮಾದರಿಯಾಗಿ ನಿಲ್ಲುವಂತಹ, ಬಹುಜನರ ಹಿತ ಕಾಯುವಂತಹ ಶಾಂತವೇರಿ ಗೋಪಾಲಗೌಡರ ಸೈದ್ಧಾಂತಿಕ ಬದ್ಧತೆ, ಪ್ರಾಮಾಣಿಕತೆ, ಸರಳತೆ ಮತ್ತು ನಿಸ್ವಾರ್ಥ ರಾಜಕಾರಣವನ್ನು ಮತ್ತೆಮತ್ತೆ ಬಿತ್ತುವುದು ಮುಖ್ಯ. ಹಣ, ಮದ್ಯ, ಜಾತಿ, ಧರ್ಮವು ಚುನಾವಣಾ ಅಸ್ತ್ರಗಳಾಗಿ ಬಳಕೆಯಾಗದಂತೆ ಎಚ್ಚರ ವಹಿಸುವುದು ಪ್ರಜಾಪ್ರಭುತ್ವದ ಆರೋಗ್ಯದ ದೃಷ್ಟಿಯಿಂದ ತುರ್ತು ಅಗತ್ಯ.

ವಾಚಕರ ವಾಣಿ

ಆಹಾರ ಪೋಲು: ಮೂಡಲಿ ಜಾಗೃತಿ

ವಿಶ್ವಸಂಸ್ಥೆ ಬಿಡುಗಡೆ ಮಾಡಿರುವ 'ಆಹಾರ ಪೋಲು ಸೂಚ್ಯಂಕ' ವರದಿಯು ಖಂಡಿತವಾಗಿಯೂ ಎಲ್ಲರ ಕಣ್ಣು ತೆರೆಸುವಂಥದ್ದು. ಜಗತ್ತಿನ ಅನೇಕ ದೇಶಗಳಲ್ಲಿ ಹೊಟ್ಟೆಗೆ ಊಟ ಸಿಗದೇ ಸಾಯುತ್ತಿರುವವರ ಸಂಖ್ಯೆಯನ್ನು ಗಮನಿಸಿದರೆ, ಈ ವರದಿಯಲ್ಲಿನ ಸಂಗತಿಯು ಮನುಷ್ಯರಾದ ನಾವೆಲ್ಲರೂ ನಾಚಿಕೆಪಡುವಂತಹದ್ದು. ಇಂತಹ ಪರಿಸ್ಥಿತಿಗೆ ಪ್ರತಿಯೊಂದು ಕುಟುಂಬ ಹಾಗೂ ಪ್ರತಿಯೊಬ್ಬ ವ್ಯಕ್ತಿಯೂ ಕಾರಣ. ಇದರಲ್ಲಿ ಸರ್ಕಾರಗಳ ವೈಫಲ್ಯ ಸಹ ಇದೆ. ಏಕೆಂದರೆ, ಎಷ್ಟೋ ಸಲ ರೈತರು ಬೆಳೆದ ಫಸಲನ್ನು ಸಂಗ್ರಹಿಸಿ ಇಡುವ ವ್ಯವಸ್ಥೆ ಇಲ್ಲದೆ, ಬೆಳೆಗೆ ಸೂಕ್ತ ಬೆಲೆ ಸಿಗದೆ ಫಸಲನ್ನು ರಸ್ತೆಗೆ ಚೆಲ್ಲುವ ಉದಾಹರಣೆಗಳು ಬೇಕಾದಷ್ಟು ಸಿಗುತ್ತವೆ. ಒಂದೊಮ್ಮೆ ತರಕಾರಿ ಮಂಡಿಗೆ, ಹಣ್ಣಿನ ಮಾರುಕಟ್ಟೆಗೆ ಭೇಟಿ ನೀಡಿದರೆ ನೂರಾರು ಕೆ.ಜಿ.ಗಳಷ್ಟು ಫಸಲನ್ನು ತಿಪ್ಪೆಗೆ ಎಸೆಯುವುದು ಕಂಡುಬರುತ್ತದೆ. ಇತ್ತ ರೈತನಿಗೂ ಇಲ್ಲ, ಅತ್ತ ಗ್ರಾಹಕನಿಗೂ ಇಲ್ಲದಂಥ ಸನ್ನಿವೇಶಗಳು ಸೃಷ್ಟಿಯಾಗಿವೆ. ಅಲ್ಲದೆ ಕೆಲವು ದೇಶಗಳಲ್ಲಿ ಟೊಮೆಟೊ ಹಣ್ಣುಗಳನ್ನು ರಸ್ತೆಗಳಲ್ಲಿ ಚೆಲ್ಲಿ ಆಟವಾಡುವ ವಿಚಿತ್ರದ ಬಗ್ಗೆಯೂ ಕೇಳಿದ್ದೇವೆ.

ಶೀತಲೀಕರಣ ವ್ಯವಸ್ಥೆ, ಮಾರುಕಟ್ಟೆ ಅಗತ್ಯಕ್ಕೆ ತಕ್ಕಂತೆ ಬೆಳೆ ಬೆಳೆಯುವುದು, ವೈಜ್ಞಾನಿಕ ಬೆಲೆ ನಿಗದಿಯಂತಹ ಕ್ರಮಗಳು ಆಹಾರ ಪೋಲಾಗುವುದನ್ನು ತಡೆಯಲು ಸಹಕಾರಿ. ಆಹಾರವನ್ನು ಚೆಲ್ಲಿ ವ್ಯರ್ಥ ಮಾಡುವುದರ ವಿರುದ್ಧ ಜಾಗೃತಿ ಮೂಡಿಸುವುದರ ಜೊತೆಗೆ ಅಗತ್ಯ ಇರುವಷ್ಟು ಮಾತ್ರ ಆಹಾರ ಖರೀದಿಸುವ ಮತ್ತು ಬೇಯಿಸುವ ಪ್ರವೃತ್ತಿಗೆ ಇಂಬು ಕೊಡಬೇಕು. ಮದುವೆ, ಸಭೆ, ಸಮಾರಂಭಗಳಲ್ಲಿ ಅಗತ್ಯವಿರುವಷ್ಟು ಆಹಾರ ಹಾಕಿಸಿಕೊಂಡು ತಿನ್ನುವ ಪ್ರವೃತ್ತಿಗೆ ಉತ್ತೇಜನ ನೀಡಬೇಕು. ಇದಕ್ಕಾಗಿ ಸಾರ್ವಜನಿಕರಿಗೆ, ವಿಶೇಷವಾಗಿ ಶಾಲಾ ಮಕ್ಕಳಿಗೆ ತಿಳಿವಳಿಕೆ ನೀಡುವ ಅಭಿಯಾನ ಕೈಗೊಳ್ಳಲು ಇದು ಸಕಾಲ.

ಗುರುರಾಜ್ ಕೆ.ಎಚ್., ದಾವಣಗೆರೆ

ಚುನಾವಣಾ ಆಯೋಗದ ಶ್ಲಾಘನೀಯ ಕಾರ್ಯ

ಮುಂಬರುವ ಲೋಕಸಭಾ ಚುನಾವಣೆಯಲ್ಲಿನ ತಮ್ಮ ಗೆಲುವಿಗಾಗಿ ಅಭ್ಯರ್ಥಿಗಳು ನಾನಾ ರಣತಂತ್ರಗಳನ್ನು ರೂಪಿಸುತ್ತಿರುವುದು ಒಂದು ಕಡೆಯಾದರೆ, ಮತ್ತೊಂದು ಕಡೆ, ಕೇಂದ್ರ ಚುನಾವಣಾ ಆಯೋಗವು ಪ್ರಜಾಪ್ರಭುತ್ವದಲ್ಲಿ ಯಾರು ಕೂಡ ಮತದಾನದಿಂದ ದೂರ ಉಳಿಯಬಾರದು ಎಂಬ ದೃಷ್ಟಿಯಿಂದ ಕ್ರಮ ಕೈಗೊಂಡಿರುವುದು ಗಮನಸೆಳೆದಿದೆ. ಅರುಣಾಚಲ ಪ್ರದೇಶದ ಗುಡ್ಡಗಾಡು ಪ್ರದೇಶದಲ್ಲಿರುವ, ಚೀನಾ ಗಡಿಗೆ ಹೊಂದಿಕೊಂಡಿರುವ ಮಾಲೋಗಮ್ ಎಂಬ ಗ್ರಾಮದಲ್ಲಿ ಮಹಿಳೆಯೊಬ್ಬರ ಒಂದೇ ಒಂದು ಮತಕ್ಕಾಗಿ ಮತಗಟ್ಟೆ ನಿರ್ಮಾಣ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಇದಕ್ಕಾಗಿ ಚುನಾವಣಾ ಸಿಬ್ಬಂದಿ 40 ಕಿಲೊಮೀಟರ್ ಕಾಲ್ನಡಿಗೆಯಲ್ಲಿ ಗುಡ್ಡಗಾಡು ಪ್ರದೇಶದಲ್ಲಿ ಸಾಗಬೇಕಿದೆ. ಇಲ್ಲಿ ಯಾವುದೇ ರೀತಿಯ ಮೂಲಸೌಕರ್ಯ ಇಲ್ಲ.

ದೇಶದ ಬಹುತೇಕರಲ್ಲಿ 'ನನ್ನ ಒಂದು ಮತದಿಂದ ಅವನು ಗೆದ್ದುಬಿಡುತ್ತಾನೆಯೇ?' 'ನನ್ನ ಒಂದು ಮತದಿಂದ ದೇಶ ಬದಲಾಗಿ ಬಿಡುತ್ತದೆಯೇ?' ಎಂಬಂತಹ ಆಲಸ್ಯ, ಉಡಾಫೆಯ ಮಾತುಗಳು ಕೇಳಿಬರುತ್ತವೆ. ಅನೇಕ ವಿದ್ಯಾವಂತರು ಸೋಮಾರಿತನದಿಂದ ಮತಗಟ್ಟೆಯ ಕಡೆ ತಿರುಗಿ ನೋಡುವುದೇ ಇಲ್ಲ. ಇನ್ನೊಂದಷ್ಟು ಜನ ಇದೇ ಸದವಕಾಶವೆಂದು ಭಾವಿಸಿ, ಆ ರಜೆಯಂದು ಕುಟುಂಬದೊಂದಿಗೆ ಪ್ರವಾಸ ತೆರಳಿ ಮೋಜು, ಮಸ್ತಿ ಮಾಡುತ್ತಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದೊಂದು ಮತಕ್ಕೂ ತನ್ನದೇ ಆದ ಮಹತ್ವವಿರುತ್ತದೆ. ಹೀಗಾಗಿ ಪ್ರತಿಯೊಬ್ಬರ ಮತವೂ ಅತ್ಯಮೂಲ್ಯವಾಗಿರುತ್ತದೆ. ಬರೀ ಒಂದು ಮತದಿಂದ ಸೋತವರಿದ್ದಾರೆ. ಆದ್ದರಿಂದ ಮತದಾನಕ್ಕೆ ಅರ್ಹರಾದವರೆಲ್ಲರೂ ಅಮೂಲ್ಯವಾದ ಮತವನ್ನು ಚಲಾಯಿಸಿ ತಮ್ಮ ಕರ್ತವ್ಯವನ್ನು ಮೆರೆಯಬೇಕಾಗಿದೆ.

ಪರಶಿವಮೂರ್ತಿ ಎನ್.ಪಿ., ನಂಜೀಪುರ, ಸರಗೂರು

> **ಕ್ಷುದ್ರ– ಭದ್ರ**
>
> 'ಕ್ಷುದ್ರಗ್ರಹಕ್ಕೆ ವಿಜ್ಞಾನಿಯ ಹೆಸರು (ಪ್ರ.ವಾ., ಮಾರ್ಚ್ 23),
> ಛೆ! ಏನು ಪಾಪ ಮಾಡಿದ್ದರು ಆ ವಿಜ್ಞಾನಿ?
> ಯಾವುದಾದರೂ 'ಭದ್ರ'ಗ್ರಹದ ಹೆಸರಿಡಬಾರದಿತ್ತೇ?
>
> **ಸಿ.ಪಿ.ಕೆ.,** ಮೈಸೂರು

ಪಕ್ಷಾಂತರದ ಸಮರ್ಥನೆ ಸಲ್ಲ

ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಪಕ್ಷಾಂತರ ಅನಿವಾರ್ಯವಾಗಿ ಹೋಗಿದೆ ಎಂಬ ಕೆ.ವಿ.ವಾಸು ಅವರ ಪತ್ರವನ್ನು ನೋಡಿದರೆ (ವಾ.ವಾ., ಏ. 2), ಪಕ್ಷಾಂತರ ಮಾಡುವುದು ತಪ್ಪಲ್ಲ ಎಂದು ಅವರು ಹೇಳುತ್ತಿರುವಂತಿದೆ. ರಾಜಕಾರಣ ನಿಂತ ನೀರಲ್ಲದೇ ಇರಬಹುದು, ಆದರೆ ಪಕ್ಷಾಂತರ ಮಾಡುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡುವ ದೊಡ್ಡ ದ್ರೋಹ.

ಪಕ್ಷಾಂತರವೇ ಒಂದು ರೀತಿಯ ರಾಜಕೀಯ ಪಿಡುಗು. ತಮ್ಮ ವೈಯಕ್ತಿಕ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು, ಆಸ್ತಿಪಾಸ್ತಿ ಉಳಿಸಿಕೊಳ್ಳಲು, ಐ.ಟಿ., ಇ.ಡಿ. ಕ್ರಮಗಳಿಂದ ಪಾರಾಗಲು ಮತ್ತು ಸದಾ ಅಧಿಕಾರದಲ್ಲಿ ಇರಬೇಕೆಂಬ ದುರಾಸೆಯ ಫಲವಾಗಿ ಪಕ್ಷಾಂತರ ಮಾಡಲಾಗುತ್ತಿದೆ. ವೈಯಕ್ತಿಕ ನೆಲೆಯಲ್ಲಿ ನೈತಿಕತೆ ಅಧೋಗತಿಗೆ ಇಳಿಯುತ್ತಿದೆ. ಸಾರ್ವಜನಿಕ ಜೀವನದಲ್ಲಿ ಮರ್ಯಾದೆ ಹೋದರೂ ಪರವಾಗಿಲ್ಲ ಅಧಿಕಾರ ಮತ್ತು ಹಣ ಮುಖ್ಯ ಎಂಬ ಮನಃಸ್ಥಿತಿ ಇದರ ಹಿಂದೆ ಇರುತ್ತದೆ. ಮತದಾರರು ಪಕ್ಷಾಂತರವನ್ನು ಸಮರ್ಥಿಸಿಕೊಂಡರೆ ಅದು ಪ್ರಜಾಪ್ರಭುತ್ವದ ಅಧಃಪತನಕ್ಕೆ ಕಾರಣವಾಗಬಹುದು.

ಬೂಕನಕೆರೆ ವಿಜೇಂದ್ರ, ಮೈಸೂರು

ಚಿಕಿತ್ಸೆಗೆ ನೆರವಾಗಿ

ನನ್ನ ಹೆಸರು ಮನುಜಾ ಡಿ.ಸಿ. (36 ವರ್ಷ). ಎರಡೂ ಮೂತ್ರಪಿಂಡಗಳ ವೈಫಲ್ಯದಿಂದ ಬಳಲುತ್ತಿದ್ದೇನೆ. ಮೂತ್ರಪಿಂಡ ಕಸಿ ಶಸ್ತ್ರಚಿಕಿತ್ಸೆಗೆ ವೈದ್ಯರು ಶಿಫಾರಸು ಮಾಡಿದ್ದಾರೆ. ಅಂಗಾಂಗ ದಾನಿಗಳಿಂದ ಮೂತ್ರಪಿಂಡದ ವ್ಯವಸ್ಥೆಯಾಗಿದೆ. ಈ ಶಸ್ತ್ರಚಿಕಿತ್ಸೆಗೆ ₹ 9.40 ಲಕ್ಷ ವೆಚ್ಚವಾಗಲಿದೆ. ಅಷ್ಟೊಂದು ಹಣ ಭರಿಸುವ ಸಾಮರ್ಥ್ಯ ನನ್ನ ಕುಟುಂಬಕ್ಕೆ ಇಲ್ಲ. ಹೀಗಾಗಿ, ದಾನಿಗಳು ಧನಸಹಾಯ ಮಾಡಬೇಕೆಂದು ಕೋರುತ್ತೇನೆ. ಬ್ಯಾಂಕ್ ಖಾತೆ ವಿವರ: ಮನುಜಾ ಡಿ.ಸಿ., ಖಾತೆ ಸಂಖ್ಯೆ: 50100713353501, ಎಚ್‌ಡಿಎಫ್‌ಸಿ ಬ್ಯಾಂಕ್, ಕೋಣನಕುಂಟೆ ಕ್ರಾಸ್ ಶಾಖೆ, ಬೆಂಗಳೂರು, IFSC: HDFC0006431 ಮೊಬೈಲ್: 7411539256, 9742892123

ಮನುಜಾ ಡಿ.ಸಿ., ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಲ್ಲಿ ಐದು ಭಾರತೀಯರು

ಭಾರತದ ಚೆಸ್ ಕಲಿಗಳ ಮೇಲೆ ಕೌತುಕದ ಕಣ್ಣು

• ನಾಗೇಶ್ ಶೆಣೈ

ಕೆನಡಾದ ಟೊರಾಂಟೊದಲ್ಲಿ ಇಂದಿನಿಂದ (ಬುಧವಾರ) ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ ನಡೆಯಲಿದೆ. ಇದು ವಿಶ್ವದ ಪ್ರತಿಷ್ಠಿತ ಟೂರ್ನಿ. ಎರಡು ವರ್ಷಗಳಿಗೊಮ್ಮೆ ನಡೆಯುವ ಈ ಟೂರ್ನಿಯಲ್ಲಿ ವಿಶ್ವದ ಎಂಟು ಮಂದಿ ಆಟಗಾರರು ಮಾತ್ರ ಆಡುವ ಅರ್ಹತೆ ಪಡೆಯುತ್ತಾರೆ. ಇದರಲ್ಲಿ ಗೆಲ್ಲುವ ಆಟಗಾರ ವಿಶ್ವ ಚಾಂಪಿಯನ್‌ಗೆ ಪ್ರಸ್ತುತ ಡಿಂಗ್ ಲಾರೆನ್ ಅವರಿಗೆ ಸವಾಲು ಹಾಕುವ ಅರ್ಹತೆ ಪಡೆಯುತ್ತಾರೆ.

ಭಾರತ ಕಂಡ ಸಾರ್ವಕಾಲಿಕ ಶ್ರೇಷ್ಠ ಆಟಗಾರ, ಐದು ಬಾರಿಯ ವಿಶ್ವ ಚಾಂಪಿಯನ್ ಆಗಿದ್ದ ವಿಶ್ವನಾಥನ್ ಆನಂದ್ ಮಾತ್ರ ಈ ಹಿಂದೆ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ನಿಯಮಿತವಾಗಿ ಆಡಿದ್ದರು. ಕೊನೆಯ ಬಾರಿ 2014ರಲ್ಲಿ ಅವರು ಕ್ಯಾಂಡಿಡೇಟ್ಸ್ ಟೂರ್ನಿ ಗೆದ್ದು ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಸವಾಲಿಗ (ಚಾಲೆಂಜರ್) ಆಗಿದ್ದರು. ಆದರೆ ಅಷ್ಟರಲ್ಲಾಗಲೇ ವಿಶ್ವದ ಅಗ್ರಮಾನ್ಯ ಆಟಗಾರರಾಗಿ ಬೆಳೆದಿದ್ದ ಕಾರ್ಲ್‌ಸನ್ ಎದುರು ಫೈನಲ್‌ನಲ್ಲಿ ಅವರು ಗೆಲ್ಲಲಾಗಲಿಲ್ಲ. ನಂತರ ಭಾರತದ ಯಾರೂ ಈ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆದಿರಲಿಲ್ಲ.

ಆದರೆ ಈ ಬಾರಿಯ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ, ಭಾರತದ ಒಬ್ಬರಲ್ಲ, ಮೂವರು ಓಪನ್ ವಿಭಾಗದಲ್ಲಿ ಭಾಗವಹಿಸುತ್ತಿದ್ದಾರೆ. ಹೀಗಾಗಿ ಅಭಿಮಾನಿಗಳ ಕಣ್ಣು ಭಾರತದ ಆಟಗಾರರ ಕಡೆ ನೆಟ್ಟಿದೆ. ಡಿ.ಗುಕೇಶ್, ಪ್ರಜ್ಞಾನಂದ ಜೊತೆಗೆ ಹಿರಿಯ ಆಟಗಾರ ವಿದಿತ್ ಗುಜರಾತಿ ಅರ್ಹತೆ ಪಡೆದಿದ್ದಾರೆ. ಇದೇ ಮೊದಲ ಬಾರಿ ಕ್ಯಾಂಡಿಡೇಟ್ಸ್ ಓಪನ್ ವಿಭಾಗದ ಜೊತೆಜೊತೆಯಲ್ಲೇ ಮಹಿಳಾ ವಿಭಾಗದ ಟೂರ್ನಿಯನ್ನೂ ನಡೆಸಲಾಗುತ್ತಿದೆ. ಇದರಲ್ಲೂ ಮೊದಲ ಸಲ ಭಾರತದ ಇಬ್ಬರು ಆಟಗಾರ್ತಿಯರು– ವೈಶಾಲಿ ಆರ್. (ಪ್ರಜ್ಞಾನಂದನ ಅಕ್ಕ) ಮತ್ತು ಅನುಭವಿ ಆಟಗಾರ್ತಿ ಕೋನೇರು ಹಂಪಿ– ಪಾಲ್ಗೊಳ್ಳುತ್ತಿರುವುದು ವಿಶೇಷ.

ಆಟಗಾರರ ಆಯ್ಕೆ ಹೇಗೆ? ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಎಂಟು ಆಟಗಾರರು ವಿವಿಧ ಮಾನದಂಡಗಳ ಆಧಾರದಲ್ಲಿ ಆಯ್ಕೆಯಾಗುತ್ತಾರೆ. ವಿಶ್ವಕಪ್‌ನಲ್ಲಿ ಮೊದಲ ಮೂರು ಸ್ಥಾನ ಪಡೆದವರು, ಫಿಡೆ ಗ್ರ್ಯಾಂಡ್ ಸ್ವಿಸ್ ಟೂರ್ನಿಯಲ್ಲಿ ಮೊದಲ ಎರಡು ಸ್ಥಾನ ಗಳಿಸಿದವರು, ಕಳೆದ ಬಾರಿಯ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಸೋತ ಆಟಗಾರ, ಹಿಂದಿನ ವರ್ಷ ಫಿಡೆ ಟೂರ್ನಿಗಳಲ್ಲಿ ಅತ್ಯುತ್ತಮ ಸಾಧನೆ ತೋರಿದ ಆಟಗಾರ ಮತ್ತು 2024ರ ಜನವರಿ ರ‍್ಯಾಂಕಿಂಗ್ ಪ್ರಕಾರ (ಕ್ಲಾಸಿಕಲ್ ವಿಭಾಗದ ಮತ್ತು ಈಗಾಗಲೇ ಬೇರೆ ವಿಭಾಗದಿಂದ ಆಯ್ಕೆಯಾಗಿರದ) ಅಗ್ರ ಆಟಗಾರ.

ಮೊದಲ ಸಲ ವಿಶ್ವಕಪ್ ಗೆದ್ದಿದ್ದ ಕಾರ್ಲ್‌ಸನ್ ಅವರೂ ಕ್ಯಾಂಡಿಡೇಟ್ಸ್‌ನಲ್ಲಿ ಆಡಬೇಕಾಗಿತ್ತು. ಆದರೆ ಅವರು ವಿಶ್ವ ಚಾಂಪಿಯನ್‌ಷಿಪ್ ಮಾದರಿಗೆ ಅಸಮಾಧಾನ ವ್ಯಕ್ತಪಡಿಸಿದ್ದು ಹಿಂದೆ ಸರಿದಿದ್ದಾರೆ. ವಿಶ್ವ ಚಾಂಪಿಯನ್ ಆಗಿದ್ದಾಗಲೇ ಅವರು ತಾವು 2023ರಲ್ಲಿ ಪಟ್ಟ ಉಳಿಸಿಕೊಳ್ಳಲು ಕಣಕ್ಕಿಳಿಯುವುದಿಲ್ಲ. ಆಡುವ ಪ್ರೇರಣೆ ಕಳೆದುಕೊಂಡಿರುವುದಾಗಿ ಹೇಳಿದ್ದರು.

ಹೀಗಾಗಿ ವಿಶ್ವಕಪ್‌ನಲ್ಲಿ ಎರಡು, ಮೂರನೇ ಸ್ಥಾನ ಪಡೆದ ಪ್ರಜ್ಞಾನಂದ, ಅಮೆರಿಕದ ಫ್ಯಾಬಿಯಾನ ಕರುವಾನ ಜೊತೆ ನಾಲ್ಕನೇ ಸ್ಥಾನ ಪಡೆದ ನಿಜತ್ ಅಬಸೋವ್ (ಅಜರ್‌ಬೈಜಾನ್) ಕೂಡ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದರು. ವಿದಿತ್ ಗುಜರಾತಿ ಫಿಡೆ ಗ್ರ್ಯಾಂಡ್ ಸ್ವಿಸ್‌ನಲ್ಲಿ ಮೊದಲ ಸ್ಥಾನ ಪಡೆದರೆ, ಅಮೆರಿಕದ ಹಿಕಾರು ನಕಾಮುರಾ ಎರಡನೇ ಸ್ಥಾನ ಪಡೆದು ಟೊರಾಂಟೊಕ್ಕೆ ಟಿಕೆಟ್ ಪಡೆದರು. ನೆಪೊಮ್‌ನಿಯಾಚಿ ಕಳೆದ ವರ್ಷದ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಆಡಿದ್ದ ಕಾರಣ ಅರ್ಹತೆ ಪಡೆದರು. ಫಿಡೆ ಸರ್ಕ್ಯೂಟ್ ಟೂರ್ನಿಗಳಲ್ಲಿ ಉತ್ತಮ ಸಾಧನೆಗಾಗಿ ಗುಕೇಶ್ ಆಯ್ಕೆಯಾದರೆ, ಜನವರಿ ಕೊನೆಯಲ್ಲಿ ರ‍್ಯಾಂಕಿಂಗ್ ಆಧಾರದಲ್ಲಿ ಅಲಿರೇಜಾ ಫಿರೋಜ (ಇರಾನ್ ಸಂಜಾತ ಫ್ರಾನ್ಸ್ ಆಟಗಾರ) ಅವಕಾಶ ಪಡೆದರು.

ಮಹಿಳೆಯರ ವಿಭಾಗದಲ್ಲಿ ಪಾಲ್ಗೊಳ್ಳುವ ಎಂಟು ಮಂದಿ: ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (ವಿಶ್ವಕಪ್ ವಿಜೇತೆ), ಬಲ್ಗೇರಿಯಾದ ಸಲಿಮೊವಾ (ವಿಶ್ವಕಪ್ ಎರಡನೇ ಸ್ಥಾನ) ಉಕ್ರೇನ್‌ನ ಅನ್ನಾ ಮುಝಿಚುಕ್ (ಮೂರನೇ ಸ್ಥಾನ), ಚೀನಾದ ಲೀ ಟಿಂಗ್ಜಿ (ವಿಶ್ವ ಚಾಂಪಿಯನ್‌ಷಿಪ್ ರನ್ನರ್ ಅಪ್), ಭಾರತದ ಆರ್.ವೈಶಾಲಿ (ಗ್ರ್ಯಾಂಡ್ ಚೆಸ್ ವಿಜೇತೆ), ಚೀನಾದ ತಾನ್ ಝೊಂಗ್‌ಯಿ (ಗ್ರ್ಯಾಂಡ್ ಚೆಸ್ ರನ್ನರ್ ಅಪ್), ಕೋನೇರು ಹಂಪಿ (ಶ್ರೇಷ್ಠ ರ‍್ಯಾಂಕಿಂಗ್), ರಷ್ಯಾದ ಕ್ಯಾತರಿನಾ ಲಾಗ್ನೊ (ಫಿಡೆ ಸರ್ಕಿಟ್‌ನಲ್ಲಿ ಉತ್ತಮ ಸಾಧನೆ).

ಆದರೆ ದಿಗ್ಗಜ ವಿಶ್ವನಾಥನ್ ಆನಂದ್ ಸೇರಿದಂತೆ ವಿಶ್ವದ ಘಟಾನುಘಟಿ ಆಟಗಾರರು ಭಾರತದ ಆಟಗಾರರಿಗೆ ಗೆಲ್ಲುವ ಸಾಧ್ಯತೆಯ ಬಗ್ಗೆ ಭರವಸೆಯ ಮಾತುಗಳನ್ನಾಡಿಲ್ಲ. 'ಭಾರತದ ಆಟಗಾರರು ಪ್ರಶಸ್ತಿ ಗೆಲ್ಲುವ ಮೊದಲು ಸಾಕಷ್ಟು ಹಾದಿ ಸವೆಸಬೇಕಾಗಿದೆ. ಮೊದಲು ಹೊಂದಿಕೊಳ್ಳಲಿ, ನಂತರ ಪ್ರಶಸ್ತಿ ಗೆಲ್ಲುವ ಕಡೆ ಗಮನಹರಿಸಬೇಕು' ಎಂದು ಆನಂದ್ ಕಿವಿಮಾತು ಹೇಳಿದ್ದಾರೆ.

'ಕರುವಾನಾ (ಅಮೆರಿಕ) ಮತ್ತು ನಕಾಮುರಾ (ಅಮೆರಿಕ) ಅವರಿಗೆ ಉತ್ತಮ ಅವಕಾಶವಿದೆ. ಕಳೆದ ವರ್ಷ ಫೈನಲ್ ಆಡಿದ್ದ ನೆಪೊಮ್‌ನಿಯಾಚಿ ಅವರನ್ನೂ ಕಡೆಗಣಿಸುವಂತಿಲ್ಲ' ಎಂಬರ್ಥದಲ್ಲಿ ಕಾರ್ಲ್‌ಸನ್ ಮಾತನಾಡಿದ್ದಾರೆ. ಕರುವಾನಾ ಮತ್ತ ನಕಾಮುರಾ ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಕಾರ್ಲ್‌ಸನ್ ನಂತರ ಎರಡು ಮತ್ತು ಮೂರನೇ ಸ್ಥಾನದಲ್ಲಿದ್ದಾರೆ. 33 ವರ್ಷದ ನೆಪೊಮ್‌ನಿಯಾಚಿ ಸತತ ಮೂರನೇ ವರ್ಷ ಕ್ಯಾಂಡಿಡೇಟ್ಸ್‌ನಲ್ಲಿ ಆಡುತ್ತಿದ್ದಾರೆ. ಅಬಸೋವ್ 114ನೇ ಸ್ಥಾನದಲ್ಲಿದ್ದಾರೆ.

ಆರ್.ಪ್ರಜ್ಞಾನಂದ

ರೇಟಿಂಗ್: 2747

ವಿಶ್ವ ಚೆಸ್‌ನಲ್ಲಿ ಭರವಸೆ ಮೂಡಿಸಿರುವ ಪ್ರತಿಭಾನ್ವಿತರಲ್ಲಿ ಅಗ್ರಪಂಕ್ತಿಯಲ್ಲಿ ಇರುವ ಆಟಗಾರ. 18 ವರ್ಷದ 'ಪ್ರಗ್ಗು' ಕಳೆದ ವರ್ಷ ವಿಶ್ವಕಪ್ ಫೈನಲ್ ತಲುಪಿದ್ದ ಅತಿ ಕಿರಿಯ ಆಟಗಾರ ಎನಿಸಿದ್ದರು. ಫೈನಲ್‌ನಲ್ಲಿ ಕಾರ್ಲ್‌ಸನ್ ಅವರಿಗೆ ಸೋತರೂ ಚೆನ್ನೈನ ಆಟಗಾರ ಎಲ್ಲರ ಮೆಚ್ಚುಗೆ ಗಳಿಸಿದ್ದರು. ಕಳೆದ ಕೆಲವು ವರ್ಷಗಳಿಂದ ವಿವಿಧ ಟೂರ್ನಿಗಳಲ್ಲಿ ಕಾರ್ಲ್‌ಸನ್, ವೆಸ್ಲಿ ಸೊ, ತೀಮೊರ್ ರಾಜಾಬೊವ್ ಮೊದಲಾದ ಉನ್ನತ ರ‍್ಯಾಂಕಿನ ಆಟಗಾರರನ್ನು ಸೋಲಿಸಿದ್ದಾರೆ. ಪ್ರತಿಷ್ಠಿತ ಟಾಟಾ ಸ್ಟೀಲ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಮೇಲೆ ಜಯಗಳಿಸಿದ್ದರು. ಸಹಜವಾಗಿ ಈತನ ಮೇಲೆ ಕುತೂಹಲ ಇದೆ. ಇವರು ವಿಶ್ವ ಕ್ರಮಾಂಕದಲ್ಲಿ 14ನೇ ಸ್ಥಾನದಲ್ಲಿ ಇದ್ದಾರೆ.



ಕೋನೇರು ಹಂಪಿ

ರೇಟಿಂಗ್: 2546

ಅನುಭವಿ ಆಟಗಾರ್ತಿಯಾಗಿರುವ ಹಂಪಿ ಪ್ರಸ್ತುತ ವಿಶ್ವ ಮಹಿಳಾ ವಿಭಾಗದಲ್ಲಿ ಐದನೇ ಸ್ಥಾನದಲ್ಲಿದ್ದಾರೆ. 2002ರಲ್ಲೇ ಭಾರತದ ಮೊದಲ ಮಹಿಳಾ ಜಿಎಂ ಆಗಿದ್ದ ಹಂಪಿ 2004, 2008 ಮತ್ತು 2010ರಲ್ಲಿ ವಿಶ್ವ ಚಾಂಪಿಯನ್‌ಷಿಪ್ ಸೆಮಿಫೈನಲ್‌ವರೆಗೆ ತಲುಪಿದ್ದರು. 2020ರಲ್ಲಿ ವಿಶ್ವ ಮಹಿಳಾ ರ‍್ಯಾಪಿಡ್ ವಿಭಾಗದಲ್ಲಿ ಚಾಂಪಿಯನ್ ಆಗಿದ್ದಾರೆ. ಚೆನ್ನೈ ಚೆಸ್ ಒಲಿಂಪಿಯಾಡ್‌ನಲ್ಲಿ ಕಂಚಿನ ಪದಕ ಗೆದ್ದ ಭಾರತ ತಂಡದ ನೇತೃತ್ವ ವಹಿಸಿದ್ದರು.

ಡಿ.ಗುಕೇಶ್

ರೇಟಿಂಗ್: 2743

ದೊಮ್ಮರಾಜು ಗುಕೇಶ್ (17) ಈ ಟೂರ್ನಿಯಲ್ಲಿ ಭಾಗವಹಿಸುತ್ತಿರುವ ಅತಿ ಕಿರಿಯ ಆಟಗಾರ. 12 ವರ್ಷ, 7 ತಿಂಗಳಿದ್ದಾಗ ಜಿಎಂ ಪಟ್ಟ. ಈ ಸಾಧನೆ ಮಾಡಿದ ವಿಶ್ವದ ಮೂರನೇ ಅತಿ ಕಿರಿಯ ಆಟಗಾರ. 2750 ರೇಟಿಂಗ್ ದಾಟಿದ ಅತಿ ಕಿರಿಯ ಆಟಗಾರನೆಂಬ ಶ್ರೇಯ ಕಳೆದ ವರ್ಷದ ಆಗಸ್ಟ್‌ನಲ್ಲಿ ಈ ಆಟಗಾರನದಾಗಿತ್ತು. 44ನೇ ಚೆಸ್ ಒಲಿಂಪಿಯಾಡ್‌ನಲ್ಲಿ ಭಾರತ–2 ತಂಡದ ಪರ ಆಡಿ ಅಗ್ರ ರ‍್ಯಾಂಕಿನ ಅಮೆರಿಕದ ಮೇಲೆ ಜಯಗಳಿಸುವಲ್ಲಿ ಗುಕೇಶ್ ಪಾತ್ರ ಪ್ರಮುಖವಾಗಿತ್ತು. ಡಸೆಲ್‌ಡಾರ್ಫ್‌ನಲ್ಲಿ ನಡೆದ ಡಬ್ಲ್ಯುಆರ್ ಮಾಸ್ಟರ್ಸ್ ಟೂರ್ನಿಯಲ್ಲಿ ಕಾರ್ಲ್‌ಸನ್ ಮೇಲೆ ಜಯಗಳಿಸಿದ್ದ ಗುಕೇಶ್ ಟ್ರೋಫಿ ಗೆದ್ದುಕೊಂಡಿದ್ದರು. ಫಿಡೆ ಸರ್ಕೀಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಕಾರಣ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಗಳಿಸಿದ್ದಾರೆ. ವಿಶ್ವ ಕ್ರಮಾಂಕದಲ್ಲಿ ಅವರು 16ನೇ ಸ್ಥಾನದಲ್ಲಿ ಇದ್ದಾರೆ.

ಆರ್.ವೈಶಾಲಿ

ರೇಟಿಂಗ್: 2475

ಪ್ರಜ್ಞಾನಂದ ಅವರ ಅಕ್ಕ, ಚೆನ್ನೈನ ಆರ್. ವೈಶಾಲಿ ಅವರು ಫಿಡೆ ಗ್ರ್ಯಾಂಡ್ ಸ್ವಿಸ್ ಟೂರ್ನಿ ಗೆಲ್ಲುವ ಮೂಲಕ ಈ ಟೂರ್ನಿಗೆ ಅರ್ಹತೆ ಪಡೆದಿದ್ದಾರೆ. ಇಲ್ಲಿ 11 ಸುತ್ತುಗಳಿಂದ 8.5 ಅಂಕ ಗಳಿಸಿದ್ದ ಅವರು ಒಂದೂ ಪಂದ್ಯ ಸೋತಿರಲಿಲ್ಲ. ಈ ಪ್ರಶಸ್ತಿ ಗೆದ್ದ ಬೆನ್ನಲ್ಲೇ ಗ್ರ್ಯಾಂಡ್‌ಮಾಸ್ಟರ್ ಪಟ್ಟವನ್ನೂ ಪಡೆದಿದ್ದಾರೆ. ಕೋನೇರು ಹಂಪಿ, ಹಾರಿಕಾ ಬಿಟ್ಟರೆ ಈ ಸಾಧನೆ ಮಾಡಿದ ಭಾರತದ ಮೂರನೇ ಆಟಗಾರ್ತಿ. ಸೋದರ–ಸೋದರಿ ಗ್ರ್ಯಾಂಡ್‌ಮಾಸ್ಟರ್ ಆಗಿದ್ದು ಅದೇ ಮೊದಲು. ಪ್ರಸ್ತುತ ವಿಶ್ವಕ್ರಮಾಂಕದಲ್ಲಿ 15ನೇ ಸ್ಥಾನದಲ್ಲಿದ್ದಾರೆ. ಆದರೆ ಉತ್ತಮ ಸಾಧನೆಯಿಂದ ಕಳೆದೊಂದು ವರ್ಷದಿಂದ ಸಾಕಷ್ಟು ರ‍್ಯಾಂಕಿಂಗ್ ಪಾಯಿಂಟ್ಸ್ ಸಂಪಾದಿಸಿದ್ದಾರೆ.

ವಿದಿತ್ ಎಸ್. ಗುಜರಾತಿ

ರೇಟಿಂಗ್: 2727

2023ರ ಫಿಡೆ ಗ್ರ್ಯಾಂಡ್ ಸ್ವಿಸ್‌ನಲ್ಲಿ ತೋರಿದ ಉತ್ತಮ ಸಾಧನೆಯಿಂದ 29 ವರ್ಷದ ವಿದಿತ್ ಈ ಟೂರ್ನಿಗೆ ಅರ್ಹತೆ ಪಡೆದಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಭಾರತ ಒಲಿಂಪಿಯಾಡ್ ತಂಡದ ಕಾಯಂ ಆಟಗಾರರಾಗಿರುವ ವಿದಿತ್ ಎರಡು ವರ್ಷಗಳಿಂದ ಪ್ರಮುಖ ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡಿದ್ದಾರೆ.

ಗ್ರ್ಯಾಂಡ್ ಸ್ವಿಸ್ ಜೊತೆ ಅವರು ಅಜರ್‌ಬೈಜಾನ್‌ನಲ್ಲಿ ನಡೆದ ವುಗಾರ್ ಗಶಿಮೊವ್ ಸ್ಮಾರಕ ಟೂರ್ನಿಯಲ್ಲೂ ಪ್ರಶಸ್ತಿ ಗೆದ್ದಿದ್ದಾರೆ. ಸ್ಥಿರ ಪ್ರದರ್ಶನ ನೀಡಿದರೆ ನಾಸಿಕ್‌ನ ಈ ಆಟಗಾರನನ್ನು ಕಡೆಗಣಿಸುವಂತಿಲ್ಲ. ಏಪ್ರಿಲ್ ರೇಟಿಂಗ್ ಪ್ರಕಾರ ವಿಶ್ವದಲ್ಲಿ 25ನೇ ರ‍್ಯಾಂಕ್ ಹೊಂದಿದ್ದಾರೆ.

ಕ್ಯಾಂಡಿಡೇಟ್ಸ್ ಟೂರ್ನಿ ಇತಿಹಾಸ

ಮೊದಲ ಬಾರಿ ಕ್ಯಾಂಡಿಡೇಟ್ಸ್ ಟೂರ್ನಿ ನಡೆದಿದ್ದು 1950ರಲ್ಲಿ. ಹಂಗರಿಯ ಬುಡಾಪೆಸ್ಟ್‌ನಲ್ಲಿ ನಡೆದ ಆ ಟೂರ್ನಿಯಲ್ಲಿ 10 ಆಟಗಾರರು ಕಣದಲ್ಲಿದ್ದರು. ವಿಶ್ವ ಚಾಂಪಿಯನ್ ಮೈಕೆಲ್ ಬೋಟ್ವಿನಿಕ್ ಅವರಿಗೆ ಸವಾಲು ಹಾಕುವ ಆಟಗಾರನನ್ನು ನಿರ್ಧರಿಸಲು ಟೂರ್ನಿ ನಡೆಯಿತು. ಅಂದಿನ ಸೋವಿಯತ್ ರಷ್ಯಾದ ಡೇವಿಡ್ ಬ್ರಾನ್‌ಸ್ಟೀನ್ ಅಧಿಕೃತವಾಗಿ ಮೊದಲ ಚಾಲೆಂಜರ್ ಆದರು.

ಅಂದಿನಿಂದ 1991ರವರೆಗೆ ಪ್ರತಿ ಮೂರು ವರ್ಷಕ್ಕೆ ಒಮ್ಮೆ ಟೂರ್ನಿ ನಡೆಯುತಿತ್ತು. 1990ರ ದಶಕದ ಆರಂಭದಲ್ಲಿ ಫಿಡೆಯಲ್ಲಿ ಒಡಕು ಕಾಣಿಸಿತು. ರಷ್ಯಾದ ವಿಶ್ವ ಚಾಂಪಿಯನ್ ಗ್ಯಾರಿ ಕ್ಯಾಸ್ಪರೋವ್ ಮತ್ತು ಬ್ರಿಟನ್‌ನ ನೈಜೆಲ್ ಶಾರ್ಟ್ ನೇತೃತ್ವದಲ್ಲಿ 1993ರಲ್ಲಿ ಪ್ರೊಫೆಷನಲ್ ಚೆಸ್ ಅಸೋಸಿಯೇಷನ್ ಸ್ಥಾಪಿಸಿದರು. 2007ರಲ್ಲಿ ಮತ್ತೆ ಒಗ್ಗಟ್ಟು ಮೂಡಿ ಏಕೀಕೃತ ಕ್ಯಾಂಡಿಡೇಟ್ಸ್ ಟೂರ್ನಿ ನಡೆಸಲಾಯಿತು. 2013 ರಿಂದ ಎರಡು ವರ್ಷಕ್ಕೊಮ್ಮೆ ಈ ಟೂರ್ನಿ ನಡೆಯುತ್ತಿದೆ. 2020–21ರ ಟೂರ್ನಿ ರಷ್ಯಾದ ಏಕತಾರಿನ್‌ಬರ್ಗ್‌ನಲ್ಲಿ 2022ರ ಟೂರ್ನಿ ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ನಡೆದಿತ್ತು.

ಟೈಗ್ರಾನ್ ಪೆಟ್ರೋಸಿಯಾನ್ (1962), ಬಾಬಿ ಫಿಷರ್ (1971), ಅನತೋಲಿ ಕಾರ್ಪೋವ್, ಗ್ಯಾರಿ ಕ್ಯಾಸ್ಪರೋವ್ (1983–84) ಕ್ಯಾಂಡಿಡೇಟ್ಸ್ ಗೆದ್ದ ಕೆಲವು ವಿಶ್ವಪ್ರಸಿದ್ಧರು.

ಈ ಬಾರಿಯ ಟೂರ್ನಿ ಟೊರಾಂಟೊದ 'ಗ್ರೇಟ್ ಹಾಲ್'ನಲ್ಲಿ ಏ. 3 ರಿಂದ 23ರವರೆಗೆ ನಡೆಯಲಿದೆ. ಡಬಲ್ ರೌಂಡ್ ರಾಬಿನ್ (14 ಸುತ್ತು) ಮಾದರಿಯ ಟೂರ್ನಿಯಲ್ಲಿ ನಾಲ್ಕು ವಿಶ್ರಾಂತಿ (ಏ. 8. 12, 16 19) ದಿನಗಳೂ ಇವೆ.

ಈ ಬಾರಿ ಓಪನ್ ವಿಭಾಗದಲ್ಲಿ ಬಹುಮಾನದ ಮೊತ್ತ ಸುಮಾರು ₹4.5 ಕೋಟಿ ಇದೆ. ಮಹಿಳಾ ವಿಭಾಗದಲ್ಲಿ ಬಹುಮಾನ ನಿಧಿ ಸುಮಾರು ₹2.25 ಕೋಟಿ ಇದೆ.

ಏ.19ಕ್ಕೆ '02' ಸಿನಿಮಾ ರಿಲೀಸ್

ಪಿಆರ್‌ಕೆ ಪ್ರೊಡಕ್ಷನ್ಸ್ ನಿರ್ಮಾಣದ, ಆಶಿಕಾ ರಂಗನಾಥ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ '02' ಸಿನಿಮಾ ಬಿಡುಗಡೆಗೆ ದಿನಾಂಕ ನಿಗದಿಯಾಗಿದ್ದು, ಚಿತ್ರದ ಟ್ರೇಲರ್ ರಿಲೀಸ್ ಆಗಿದೆ.

ರಾಘವ್ ನಾಯಕ್ ಹಾಗೂ ಪ್ರಶಾಂತ್ ರಾಜ್ ರಚಿಸಿ, ನಿರ್ದೇಶಿಸಿರುವ ಈ ಸಿನಿಮಾ ಏ.19ರಂದು ತೆರೆಕಾಣುತ್ತಿದೆ. ಮೆಡಿಕಲ್ ಥ್ರಿಲ್ಲರ್ ಜಾನರ್‌ನ ಈ ಸಿನಿಮಾದ ಕಥೆಯು ಕೇವಲ ಥ್ರಿಲ್ಲರ್ ಅಂಶಗಳನ್ನಷ್ಟೇ ಅಲ್ಲದೆ ಲವ್‌ಸ್ಟೋರಿಯನ್ನೂ ಒಳಗೊಂಡಿದೆ. ಹೀಗಾಗಿ ಈ ಚಿತ್ರವನ್ನು 'ಲವ್ ಥ್ರಿಲ್ಲರ್' ಎಂದು ಪರಿಗಣಿಸಬಹುದು ಎಂದಿದೆ ಚಿತ್ರತಂಡ. ಪಿಆರ್‌ಕೆ ಬ್ಯಾನರ್‌ನಲ್ಲಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರ ನಿರ್ಮಾಣದ ಹತ್ತನೇ ಚಿತ್ರ ಇದಾಗಿದೆ. ಪ್ರವೀಣ್ ತೇಜ್, ರಾಘವ್ ನಾಯಕ್, ಸಿರಿ ರವಿಕುಮಾರ್, ಪ್ರಕಾಶ್ ಬೆಳವಾಡಿ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ.

ಭಿನ್ನ ಕಥಾಹಂದರ ಚಿತ್ರ ಇದಾಗಿದೆ. ಸಾಯುತ್ತಿರುವವರನ್ನು ಬದುಕಿಸುವುದೇ ವೈದ್ಯರ ಆದ್ಯ ಕರ್ತವ್ಯ ಎಂದು ನಂಬುವ 'ಶ್ರದ್ಧಾ' (ಆಶಿಕಾ ರಂಗನಾಥ್), ಸಂಶೋಧನೆ ನಡೆಸಿ '02' ಎಂಬ ಔಷಧದ ಮೂಲಕ ಸಾವು-ಬದುಕಿನ ಮಧ್ಯೆ ಹೋರಾಡುತ್ತಿರುವವರನ್ನು ಬದುಕಿಸುವ ಪ್ರಯತ್ನಕ್ಕೆ ಮುಂದಾಗುತ್ತಾಳೆ. ಎಲ್ಲಾ ಅಡೆತಡೆಗಳನ್ನು ಮೀರಿ ಗುರಿ ತಲುಪಲು ಶ್ರದ್ಧಾಳಿಗೆ ಸಾಧ್ಯವೇ ಎನ್ನುವುದು ಚಿತ್ರದ ಕಥೆ ಎಂದು ವಿವರಿಸಿದೆ ಚಿತ್ರತಂಡ. ❖

ಸೆಟ್ಟೇರಿದ ಮೆಜೆಸ್ಟಿಕ್–2

ಸಂಹಿತಾ ವಿನ್ಯಾ, ಭರತ್

ಬೆಂಗಳೂರಿನ ಹೃದಯಭಾಗದಂತಿರುವ 'ಮೆಜೆಸ್ಟಿಕ್' ಅನ್ನೇ ಚಿತ್ರ ಶೀರ್ಷಿಕೆಯಾಗಿಸಿಕೊಂಡು ನಟ ದರ್ಶನ್ ಮಾಡಿದ್ದ ಚಿತ್ರ ಸೂಪರ್ ಹಿಟ್ ಆಗಿತ್ತು. 'ಮೆಜೆಸ್ಟಿಕ್–2' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಹಿರಿಯ ನಿರ್ಮಾಪಕ ಹಾಗೂ ವಿತರಕ ಶಿಲ್ಪಾ ಶ್ರೀನಿವಾಸ್ ಪುತ್ರ ಭರತ್ ನಾಯಕನಾಗಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ಅಂದು 'ಮೆಜೆಸ್ಟಿಕ್'ಗೆ ಕಥೆ ಬರೆದಿದ್ದ ರಾಮು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

'ಮೆಜೆಸ್ಟಿಕ್ ಕುರಿತು ಇತಿಹಾಸವನ್ನೇ ಬರೆಯಬಹುದು. ಹಗಲಲ್ಲಿ ನಡೆಯುವ ಚಟುವಟಿಕೆಗಳದ್ದು ಒಂದು ಕಥೆಯಾದರೆ, ರಾತ್ರಿ ನಡೆಯುವ ಚಟುವಟಿಕೆಗಳದ್ದು ಮತ್ತೊಂದು ಕಥೆ. ನಾನು ಬೆಂಗಳೂರಿಗೆ ಬಂದಾಗ ಮೆಜೆಸ್ಟಿಕ್‌ನಲ್ಲಿ ಏನೇನೆಲ್ಲ ಚಟುವಟಿಕೆಗಳು ನಡೆಯುತ್ತಿದ್ದವು ಎಂಬುದನ್ನು ಕಣ್ಣಾರೆ ನೋಡಿದ್ದೆ. ಆ ಘಟನೆಗಳನ್ನು ಇಟ್ಟುಕೊಂಡು ಮೆಜೆಸ್ಟಿಕ್ ಕಥೆ ಬರೆದಿದ್ದೆ. ಈಗಿನ ಕಾಲದಲ್ಲಿ ಅಲ್ಲಿ ರೌಡಿಸಂ ಹೇಗೆ ನಡೆಯುತ್ತಿದೆ ಎಂದು ಈ ಚಿತ್ರದಲ್ಲಿ ಹೇಳುತ್ತಿದ್ದೇನೆ' ಎಂದರು ನಿರ್ದೇಶಕರು.

ಅಮ್ಮಾ ಎಂಟರ್‌ಪ್ರೈಸಸ್ ಮೂಲಕ ಚಿತ್ರದುರ್ಗದ ಟಿ.ಆನಂದಪ್ಪ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ. ನಟಿ ಶ್ರುತಿ ನಾಯಕನ ತಾಯಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಸಂಹಿತಾ ವಿನ್ಯಾ ನಾಯಕಿ. ಈ ಚಿತ್ರಕ್ಕೆ ವಿನು ಮನಸು ಸಂಗೀತ ನಿರ್ದೇಶನ, ವೀನಸ್ ಮೂರ್ತಿ ಛಾಯಾಚಿತ್ರಗ್ರಹಣವಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಹಕ್ಕಿ ಹೇಳಿದ ಮಾತು



ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಆ ಹಳ್ಳಿಯಲ್ಲಿ ಮಧುರವಾಗಿ ಕೂಗುವ ಹಕ್ಕಿಯೊಂದು ವಾಸವಾಗಿತ್ತು. ಇರುಳ ಕನಸುಗಳು ಮುಗಿದಾಗ ಬೆಳಗಾಯಿತು ಏಳಿರಿ ಎಂದು ಜನರಿಗೆ ಎಚ್ಚರಿಸುತ್ತಿತ್ತು. ಈ ಹಕ್ಕಿಯ ನಾದ ಎದೆಯಾಳಕ್ಕೆ ಇಳಿದು ಸಂತೃಪ್ತಿ ನೀಡುತ್ತಿತ್ತು. ಇದರ ಕೊಕ್ಕು ಮತ್ತು ರೆಕ್ಕೆಯ ಬಣ್ಣವನ್ನು ಕಂಡು ಜನ ಹಿಗ್ಗುತ್ತಿದ್ದರು. ಇದರ ಹಾರಾಟ ನೋಡಿ ಸಂಭ್ರಮಿಸುತ್ತಿದ್ದರು. ಹಕ್ಕಿಯ ರಾಗ ಮಾಧುರ್ಯ ಹಳ್ಳಿಯ ದೇವವಾಣಿಯೇ ಆಗಿತ್ತು.

ಒಂದು ದಿನ ಇದ್ದಕ್ಕಿದ್ದಂತೆ ಈ ಹಕ್ಕಿ ಊರು ಬಿಟ್ಟು ಹೊರಟು ಹೋಯಿತು. ಅದು ಹೋದ ಮೇಲೆ ಹಳ್ಳಿಯಲ್ಲಿ ಮಳೆ ಬೆಳೆ ಕಡಿಮೆಯಾದವು. ಕುಡಿಯುವ ನೀರಿಗೂ ತತ್ವಾರ ಹುಟ್ಟಿತು. ಗಿಡ ಮರ ಬಳ್ಳಿಗಳು ಒಣಗಿದವು. ಜಾನುವಾರುಗಳು ಮೇವಿಲ್ಲದೆ ಸಾಯತೊಡಗಿದವು. ಊರಲ್ಲಿ ರೋಗ, ಸಾವುಗಳು ಹೆಚ್ಚಾದವು.

ಊರಿನ ಹಿರಿಯರು ಹಕ್ಕಿಯನ್ನು ವಾಪಸ್ಸು ಊರಿಗೆ ಕರೆ ತರಲು ಹೊರಟರು. ಬಹಳ ದೂರ ನಡೆದು ದಟ್ಟ ಅರಣ್ಯವನ್ನು ಮುಟ್ಟಿದರು. ಆ ಹಕ್ಕಿ ಹಚ್ಚ ಹಸಿರಾದ ತಾಣದಲ್ಲಿತ್ತು. ತಿಳಿ ನೀರು ಹರಿವ, ತಂಪಾದ ಗಾಳಿ ಸುಳಿಯುವ ಜಾಗದಲ್ಲಿ ಕೂತು ಹಾಡುತ್ತಿತ್ತು. ಸುತ್ತ ಹೂವು, ಹಣ್ಣಿನ ಮರಗಳಿದ್ದವು. ಚಿಗುರಾದ ಬಳ್ಳಿಗಳು ತಲೆಯಾಡಿಸುತ್ತಿದ್ದವು.

ಹಳ್ಳಿಯ ಹಿರಿಯರು ನೀನು ನಮ್ಮೂರು ತೊರೆದು ಬಂದ ಮೇಲೆ ಬರಗಾಲವೇ ಬಂದಿದೆ. ನಮ್ಮ ಬದುಕು ಕಷ್ಟವಾಗಿದೆ. ದಯಮಾಡಿ ಹಿಂತಿರುಗು. ನೀನಿಲ್ಲದೆ ನಮಗೆ ಸುಖ, ಸಂತೋಷ, ನೆಮ್ಮದಿಗಳಿಲ್ಲ ಎಂದು ಕೋರಿಕೊಂಡರು. ಆಗ ಹಕ್ಕಿ ಅಯ್ಯೋ ಹುಚ್ಚಪ್ಪಗಳಿರಾ! ನೀವು ತಪ್ಪು ತಿಳಿದಿದ್ದೀರಿ. ನಾನಿರುವ ಜಾಗದಲ್ಲಿ ನೆಮ್ಮದಿ ಇರುವುದಿಲ್ಲ. ನೆಮ್ಮದಿ ಇರುವ ಜಾಗದಲ್ಲಿ ನಾನಿರುತ್ತೇನೆ. ಇಲ್ಲಿರುವಂತೆ ಮತ್ತೆ ನಿಮ್ಮೂರು ಬದಲಾದಾಗ ನಾನು ಖಂಡಿತಾ ಬರುತ್ತೇನೆ. ನೆಮ್ಮದಿಯ ನಿಮ್ಮೂರು ಹಾಳಾಗಿದ್ದನ್ನು ಮೊದಲು ಸರಿಪಡಿಸಿ ಹೋಗಿ ಎಂದಿತು.

ಹಿರಿಯರಿಗೆ ಹೌದಲ್ಲ ಮೊದಲು ನಮ್ಮೂರು ಕೂಡ ಹೀಗೆ ಇತ್ತು, ಅದನ್ನು ನಾಶ ಮಾಡಿದವರು ನಾವೇ ಅಲ್ಲವೇ? ಪ್ರಕೃತಿ ನಮಗೆ ಬಳುವಳಿಯಾಗಿ ಕೊಟ್ಟ ಗಿಡ, ಮರ, ಹಳ್ಳ ಕೊಳ್ಳಗಳನ್ನು ನಾವು ಉಳಿಸಿಕೊಳ್ಳಲಿಲ್ಲ. ಅದರ ಮೌಲ್ಯವೇನೆಂದು ತಿಳಿಯಲಿಲ್ಲ. ನಾವು ಏನೆಲ್ಲಾ ಕಳೆದುಕೊಂಡಿದ್ದೇವೆ ಎಂದು ಕೂತು ಲೆಕ್ಕ ಹಾಕಿದಾಗ ಭಯವಾಯಿತು. ಹಕ್ಕಿಗೆ ಅರ್ಥವಾದ ಸರಳ ಪರಿಸರದ ಪಾಠ ನಮ್ಮ ಅರಿವಿಗೆ ಬರದಾಯಿತಲ್ಲ ಎಂದು ಚಿಂತಿಸಿದರು. ಮತ್ತೆ ಎಲ್ಲವನ್ನೂ ಮರಳಿ ಗಳಿಸಿ ಹಕ್ಕಿ ನಮ್ಮೂರಿಗೆ ಬರುವಂತೆ ಮಾಡೋಣ ಎಂದು ದೃಢ ಸಂಕಲ್ಪ ಮಾಡಿಕೊಂಡು ಹಳ್ಳಿಗೆ ಬಂದರು.

ನಮಗೆ ಸಿಕ್ಕ ಪರಿಸರದ ಉಚಿತ ಉಡುಗೊರೆಗಳ ಬಗ್ಗೆ ಅಸಡ್ಡೆ ಹೆಚ್ಚು. ಹಾಗೆಯೇ ಅದಮ್ಯ ಪ್ರೀತಿ, ಸ್ನೇಹ, ಮಮತೆ, ತೋರುವ ಮನುಷ್ಯ ಸಂಬಂಧಗಳ ಬಗ್ಗೆಯೂ ತಿರಸ್ಕಾರ ಅಧಿಕ. ದುರಹಂಕಾರದಲ್ಲಿ ವರ್ತಿಸಿ ಎಲ್ಲವನ್ನೂ ಕಳೆದುಕೊಂಡ ಮೇಲೆ ಹಪಹಪಿಕೆ, ಪಶ್ಚಾತ್ತಾಪ, ಕಳಕಳಿ ತೋರುತ್ತೇವೆ. ಇದ್ದಾಗ ಒದ್ದು ಸತ್ತ ಮೇಲೆ ಬಂದು ರೋಧಿಸುವ ಮನುಷ್ಯನ ಈ ನೀಚತನವೇ ವಿಚಿತ್ರ. ಅಪ್ಪ, ಅವ್ವನ ಋಣವನ್ನು, ಒಳ್ಳೆಯ ಮಿತ್ರನ ಸ್ನೇಹವನ್ನು, ಅಕ್ಕ, ತಂಗಿಯರ ಬೆಚ್ಚಗಿನ ಬಾಂದವ್ಯವನ್ನು, ಹುಟ್ಟಿದ ಹಳ್ಳಿಯ ಸೊಗಡನ್ನು ತಿರಸ್ಕರಿಸಿ ನಂತರ ಕೂತು ಅಳುವ ಪ್ರಸಂಗ ಯಾರಿಗೂ ಬಾರದಿರಲಿ. ಹಕ್ಕಿ ಮತ್ತೆ ಹಳ್ಳಿಗೆ ಬಂದೀತು. ಆದರೆ ನಮ್ಮ ಬದುಕಲ್ಲಿ ಕಳೆದು ಹೋದ ಯಾವ ಹಕ್ಕಿಗಳು ಮತ್ತೆಂದೂ ಹಾರಿ ಬರುವುದಿಲ್ಲ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಏಪ್ರಿಲ್ 3, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ನವಮಿ ಗಂ. 18-30 ನಕ್ಷತ್ರ: ಉತ್ತರಾಷಾಢ ಗಂ. 21-48 ಯೋಗ: ಶಿವ ಗಂ. 16-10 ಕರಣ: ತೈತಿಲ ಗಂ. 07-24, ಮೀನ ಮಾಸದ 20 ನೇ ದಿನ, ಮಳೆನಕ್ಷತ್ರ: ರೇವತಿ 2.

ರಾಹುಕಾಲ : ಮಧ್ಯಾಹ್ನ 12-00 - 01-30

ಸೂರ್ಯೋದಯ : 06-28 ಸೂರ್ಯಾಸ್ತ : 06-39

ಮುಸ್ಲಿಂ ದಿನಾಂಕ : 23 ರಂಜಾನ್

ಅದೃಷ್ಟ ಸಂಖ್ಯೆ : 7, 12

ಮೇಷ: ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುವವರು ಜಾಗ್ರತರಾಗಿರಿ. ಕಾರ್ಯನಿರ್ವಹಣೆಯಲ್ಲಿ ನಿಮ್ಮಿಂದ ದೋಷಗಳು ಸಂಭವಿಸಬಹುದು. ಮೆಕಾನಿಕಲ್ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮ ಪಡುವುದು ಅಗತ್ಯ.

ವೃಷಭ: ವ್ಯವಹಾರದಲ್ಲಿ ಸಂಬಂಧಿಗಳನ್ನು ಸೇರಿಸಿಕೊಂಡು ನೂತನ ಘಟಕಗಳನ್ನು ಆರಂಭಿಸಬಹುದು. ಕಾರ್ಯರಂಗದಲ್ಲಿ ಅನುಭವಸ್ಥರ ಸಹಯೋಗದಿಂದಾಗಿ ಪ್ರಗತಿ ನೋಡಬಹುದು.

ಮಿಥುನ: ಭಾವನಾತ್ಮಕ ಆಲೋಚನೆಗಳನ್ನು ಬದಿಗೆ ಸರಿಸಿ ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಲು ಇದು ಸೂಕ್ತವಾದ ಸಮಯ. ಬಂಗಾರವನ್ನು ಜಾಗ್ರತೆ ಮಾಡುವುದು ಉತ್ತಮ. ಕೆಲಸಗಳಿಗೆ ಹಣದ ಅಡಚಣೆ ಇರುವುದಿಲ್ಲ.

ಕರ್ಕಾಟಕ: ಜವಾಬ್ದಾರಿಯನ್ನೂ ಯೋಚಿಸದೇ, ಅವಸರದಲ್ಲಿ ಒಪ್ಪಿ ಕೊಳ್ಳಬೇಡಿ. ರಾಜಕೀಯ ವ್ಯಕ್ತಿಗಳು ಸಾಮಾಜಿಕ ಕಾರ್ಯಕ್ರಮದಿಂದ ಮತ್ತು ಮಾಧ್ಯಮದಿಂದ ದೂರ ಉಳಿಯುವ ಬಗ್ಗೆ ತೀರ್ಮಾನಿಸುವುದು ಒಳ್ಳೆಯದು.

ಸಿಂಹ: ಸಾಂಸಾರಿಕ ವಿಷಯದಲ್ಲಿ ಆರಿಸಿಕೊಳ್ಳುವ ನಿರ್ಧಾರಗಳು ಹಿರಿಯರ ಕೋಪಕ್ಕೆ ಕಾರಣವಾಗುತ್ತದೆ. ಕಿರು ಸಂಚಾರವು ಇರುವುದರಿಂದ ಕಾಲಕ್ಕೆ ಸರಿಯಾಗಿ ಆಹಾರ ಸೇವನೆ ಮಾಡಲು ಅಡ್ಡಿ ಉಂಟಾಗಬಹುದು.

ಕನ್ಯಾ: ಪಠ್ಯೇತರ ಕಲಿಕೆ ಅದರಲ್ಲೂ ಚಿತ್ರಕಲೆಯಲ್ಲಿನ ಆಸಕ್ತಿಯಿಂದಾಗಿ ಹೆಚ್ಚಿನ ಕಲಿಕೆಗಾಗಿ ವಿಶೇಷ ತರಗತಿಗೆ ಕಳುಹಿಸಲು ತಂದೆಯವರಿಂದ ಒಪ್ಪಿಗೆ ದೊರೆಯುವುದು. ವಿದ್ಯಾರ್ಥಿನಿಯರಿಗೆ ವಿಶೇಷವಾಗಿ ಪ್ರಗತಿ ಪ್ರಾಪ್ತಿ.

ತುಲಾ: ಆಗಾಗ ಹಲವಾರು ವಿಚಾರಗಳಲ್ಲಿ ತೊಂದರೆ ಕಂಡುಬಂದರೂ ಆಂಜನೇಯನ ಆರಾಧನೆ ಮಾಡುವುದರಿಂದ ಸಮಸ್ಯೆಗಳು ಪರಿಹಾರವಾಗು-ವುದು. ಹೊರದೇಶದಲ್ಲಿ ಉದ್ಯೋಗದ ಅನ್ವೇಷಣೆ ಮಾಡುವುದಕ್ಕೆ ಸುದಿನ.

ವೃಶ್ಚಿಕ: ತಾಂತ್ರಿಕ ವರ್ಗದಲ್ಲಿ ಕರ್ತವ್ಯ ನಿರ್ವಹಿಸುವವರಿಗೆ ಅಧಿಕ ಒತ್ತಡದ ಜತೆಯಲ್ಲಿ ವಿದೇಶದಲ್ಲಿ ಕೆಲಸ ಮಾಡುವ ಅವಕಾಶ ಸಿಗಬಹುದು. ಆತ್ಮ ವಿಶ್ವಾಸದಿಂದ ಕೆಲಸಕಾರ್ಯಗಳಲ್ಲಿ ಯಶಸ್ಸು ಹೊಂದುವಿರಿ.

ಧನು: ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭವು ಒದಗಿ ಬರಲಿದೆ. ಉದ್ಯೋಗ, ವ್ಯವಹಾರಗಳಲ್ಲಿ ಸಿಂಹಾವಲೋಕನದ ಅಗತ್ಯವಿದೆ. ಗೃಹ ನಿರ್ಮಾಣದ ಯೋಚನೆಯು ಕಾರ್ಯರೂಪಕ್ಕೆ ಬರಲಿದೆ.

ಮಕರ: ನಿಮ್ಮ ವಿರುದ್ಧವಾಗಿ ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು. ಎದುರಾಗುವ ಸ್ಪರ್ಧೆಯಲ್ಲಿ ಪ್ರಮುಖ ಸ್ಥಾನ ಪಡೆಯಲು ತಯಾರಿ ನಡೆಸುವಿರಿ. ಮಕ್ಕಳ ಕೆಲಸಗಳ ಬಗ್ಗೆ ಪ್ರಶಂಸೆಯ ಮಾತು ಕೇಳಿ ಆನಂದವಾಗುತ್ತದೆ.

ಕುಂಭ: ಕುಟುಂಬದ ಮಾರ್ಗಸೂಚಕರ ಮಾರ್ಗಸೂಚಿಯಂತೆ ಕಳೆದು ಹೋಗಿದ್ದ ವಸ್ತುಗಳೂ ಪತ್ತೆಯಾಗುವುವು. ನಿಮ್ಮ ನಿಷ್ಠೂರ ಮಾತುಗಾರಿಕೆಯಿಂ-ದಾಗಿ ಸಹೋದರರ ನಡುವೆ ಕಲಹ ಉಂಟಾಗಬಹುದು.

ಮೀನ: ದೀರ್ಘಕಾಲದಿಂದಿರುವ ಆರೋಗ್ಯ ಸಮಸ್ಯೆಗೆ ಸೂಕ್ತ ವೈದ್ಯರಿಂದ ಸಲಹೆ ಸಿಗಲಿದೆ. ಆರೋಗ್ಯದಲ್ಲಿ ಚೇತರಿಕೆಯನ್ನು ಕಾಣುವಿರಿ. ವೃತ್ತಿ ರಂಗದಲ್ಲಿ ನಿಮಗಾಗಿ ಅದೃಷ್ಟದ ಬಾಗಿಲು ತೆರೆಯುವುದು.

ಪದಬಂಧ 5640

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉದಯ ಕಾಲದಲ್ಲಿ ಶೇಖರಿಸಿಟ್ಟಿರುವ ನೀರು (3)
3.ಮಂದಿಯ ಹತ್ತಿರವಿರುವ ತಂದೆ (3)
5.ಹರಿದಾರಿಯಲ್ಲೇ ವಿಷ್ಣು ಪ್ರತ್ಯಕ್ಷನಾಗಿರುವನಲ್ಲಾ! (2)
6.ನಗರದಲ್ಲಿರುವ ಮನುಷ್ಯ (2)
8.ಕತ್ತರಿಸುವ ಸಾಧನವಿದು (3)
9.ಶೀಘ್ರ ಬರುವ ಸಿಟ್ಟು (3)
11.ವರನಿಗೆ ಕೇಳಿಸಿದ ಧ್ವನಿ! (2)
13.ಸುರುಳಿಯಾಗಿರುವ ಕಾಲಿನ ಆಭರಣ (2)
14.ಹೆರಳು ಹಾಕಿದವಳ ಛಾಯೆ ಇಲ್ಲಿ ಕಾಣುತ್ತಿದೆ (3)
15.ದನದ ಸಲುವಾಗಿ ನಡೆದ ಯುದ್ಧ (3)

ಮೇಲಿಂದ ಕೆಳಕ್ಕೆ

1.ಧಾರಾಳ ಸ್ವಭಾವದವನು (3)
2.ಕನ್ನಡಿಗನ ಚಾಳೀಸು (4)
3.ಜಾರಿಕೊಳ್ಳದೇ ವಹಿಸಿಕೊಂಡಿರುವ ಹೊಣೆಗಾರಿಕೆ (4)
4.ವನದ ಬಗ್ಗೆ ಬರೆದ ಪದ್ಯ (3)
5.ಮೋಸಗಾರ ಹರನೊಳಗಡಗಿದ್ದಾನಲ್ಲಾ?(5)
7.ಸೊಗಸಾದ ಚಿತ್ರಗಳನ್ನು ನೇಯ್ದಿರುವ ಕಂಬಳಿ (5)
9.ಮುಂದಲೆಯ ಮೇಲೆ ಬಿದ್ದಿರುವ ಕೂದಲು (4)
10.ಸಿಂಚನವನ್ನು ಈ ಪರಿ ಹೇಳಿ! (4)
12.ವರ್ತಕನ ರೂಢಿ (3)
13.ಜಿನನಿಗೂ ಆವರಿಸಿದ ಬೇನೆ ! (3)



5639ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಉಗಿ 3.ರಾಗ
5.ನಿಷ್ಪಕ್ಷಪಾತ 6.ಸಮೀಪ
7.ಗುಳಂಬ 8.ರಾಜಕಾರಣ
9.ಸಮಾಧಿ 10.ಕಟಾಕ್ಷ
13.ದಂತಮಂಜನ
14.ಜರ 15.ಅಂಕ

ಮೇಲಿಂದ ಕೆಳಕ್ಕೆ:

1.ಉಪವಾಸ 2.ಅಕ್ಷತೆ
4.ಗಲ್ಲುಗಂಬ 5.ನಿರಪರಾಧಿ
7.ಗುಣಕಥನ 9.ಸತ್ಕುಲಜ
11.ಕ್ಷಪಣಿಕ 12.ಧೀಮಂತ

ಸುಡೊಕು 6025

		5		8		4		
	8		7		5			9
7		1		6		2		
							3	2
3	6		5		7	8		
		8					4	7
		7		5		1		3
5			9		8			
2		3				9	8	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6024 ಸುಡೊಕು

6	4	1	8	5	9	7	3	2
2	9	3	6	4	7	5	8	1
8	5	7	1	3	2	6	4	9
3	6	5	2	1	4	8	9	7
7	2	9	5	8	3	4	1	6
1	8	4	7	9	6	3	2	5
9	7	8	3	6	1	2	5	4
5	1	6	4	2	8	9	7	3
4	3	2	9	7	5	1	6	8

ಗುಸುಗುಸು

ಗೆಲಿಸುವ, ಸೋಲಿಸುವ ಆಟ

ಲೋಕಸಭೆ ಚುನಾವಣೆಯಲ್ಲಿ ಹೆಚ್ಚು ಸ್ಥಾನ ದಕ್ಕಿಸಿಕೊಳ್ಳಬೇಕೆಂಬ ಕಾರಣಕ್ಕೆ ಸಚಿವರ ಮಕ್ಕಳಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟು ಕಣಕ್ಕೆ ಇಳಿಸಿದೆ. ಸಚಿವರ ಪ್ರತಿಷ್ಠೆಯೇ ಪಣವಾಗಿದ್ದು, ಯಾರ ಮಕ್ಕಳು ಗೆದ್ದರೆ ಯಾರಿಗೆ ಅನುಕೂಲ, ಯಾರು ಸೋತರೆ ಮತ್ತ್ಯಾರಿಗೆ ಹಿನ್ನಡೆ ಎಂಬ ಗುಸುಗುಸು ಬೆಳಗಾವಿಯ ಜಿಲ್ಲೆಯಾದ್ಯಂತ ಹಬ್ಬುತ್ತಲೇ ಇದೆ.

ಜಿಲ್ಲೆ ಒಂದೇ ಆದರೂ ಎರಡು ಲೋಕಸಭಾ ಕ್ಷೇತ್ರಗಳು ಇಲ್ಲಿವೆ. ಜಿಲ್ಲೆಯ ಹಿಡಿತದಲ್ಲಿ ಮೇಲುಗೈ ಸಾಧಿಸಲು ಹಲವು ಕುಟುಂಬಗಳು ಯತ್ನ ನಡೆಸುತ್ತಲೇ ಇವೆ. ಈ ಬಾರಿ ಜಾರಕಿಹೊಳಿ, ಜೊಲ್ಲೆ, ಹೆಬ್ಬಾಳ್ಕರ ಕುಟುಂಬಗಳ ಪೈಪೋಟಿ ಈ ಕ್ಷೇತ್ರಗಳಲ್ಲಿದೆ. ಜಿಲ್ಲಾ ಉಸ್ತುವಾರಿ ಸಚಿವ, ಮುಖ್ಯಮಂತ್ರಿಯಾಗಲೇಬೇಕೆಂಬ ಆಕಾಂಕ್ಷೆ ಹೊಂದಿರುವ ಸತೀಶ ಜಾರಕಿಹೊಳಿ ಕುಟುಂಬ ಹೆಚ್ಚಿನ ಪ್ರಾಬಲ್ಯ ಹೊಂದಿರುವುದು ರಹಸ್ಯವೇನಲ್ಲ. ಇದಕ್ಕೆ, ಸಡ್ಡುಹೊಡೆದಂತೆ ತಮ್ಮ ಪತಿ ಅಣ್ಣಾಸಾಹೇಬ ಜೊಲ್ಲೆಯವರನ್ನು ಗೆಲ್ಲಿಸಿಕೊಂಡಿದ್ದು ಶಾಸಕಿ ಶಶಿಕಲಾ ಜೊಲ್ಲೆ. ಈ ಬಾರಿ ಜೊಲ್ಲೆಗೆ ಎದುರಾಳಿ ಜಾರಕಿಹೊಳಿ ಮಗಳು ಪ್ರಿಯಾಂಕಾ. ಅತ್ತ ಬೆಳಗಾವಿ ಕ್ಷೇತ್ರ ಉಪಚುನಾವಣೆಯಲ್ಲಿ ಜಾರಕಿಹೊಳಿ ಕೇವಲ 5 ಸಾವಿರ ಮತಗಳಿಂದ ಸೋತಿದ್ದರು. ಅದೇನೂ ಸೋಲಲ್ಲ; 'ಸಾವ್ಕಾರ್' ಮನಸ್ಸು ಮಾಡಿದ್ದರೆ ಗೆಲ್ಲಬಹುದಿತ್ತು. ಅಂದರೆ, ಅಷ್ಟರಮಟ್ಟಿಗೆ ಸಾವ್ಕಾರ್ ಹಿಡಿತ ಇದೆ ಅಂತಾಯ್ತು. ಹೀಗಾಗಿ, ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ತಮ್ಮ ಮಗ ಮೃಣಾಲ್ ನಿಂತು ಗೆಲ್ಲಬೇಕಾದರೆ, ಅತ್ತ ಪ್ರಿಯಾಂಕಾಳನ್ನೇ ಕಣಕ್ಕೆ ಇಳಿಸಬೇಕು ಎಂದು ಪಟ್ಟು ಹಿಡಿದಿದ್ದಾರಂತೆ. ಜಾರಕಿಹೊಳಿ ಕುಟುಂಬ ಕ್ಷೇತ್ರದತ್ತ ಹಾಯದೇ, ಚಿಕ್ಕೋಡಿಗೆ ಗಮನ ಕೇಂದ್ರೀಕರಿಸಿದರೆ ಸಾಕು. ಹೇಗಾದರೂ ತಮ್ಮ ಮಗನನ್ನು ಗೆಲ್ಲಿಸಿಕೊಂಡು ಬರುವೆ ಎಂಬುದು ಇದರ ಹಿಂದಿನ ಗುಟ್ಟಂತೆ. ಒಂದು ವೇಳೆ, ಅವರು ತಮ್ಮ ಕುಟುಂಬದವರನ್ನು ನಿಲ್ಲಿಸದಿದ್ದರೆ ಬೆಳಗಾವಿಯ ಹಿಡಿತಕ್ಕಾಗಿ ನಡೆಸುವ ತಂತ್ರಗಾರಿಕೆ ಹಿನ್ನಡೆ ತಂದೀತು ಎಂಬುದು ಲಕ್ಷ್ಮೀ ಲೆಕ್ಕಾಚಾರವಂತೆ. ಇದ ಹಿಂದಿನ ಸತ್ಯ ಸಾವ್ಕಾರ್ ಮತ್ತು ಕೆಪಿಸಿಸಿ ಅಧ್ಯಕ್ಷರಿಗಷ್ಟೇ ಗೊತ್ತು ಎಂಬ ಗುಸುಗುಸೂ ಹರಿದಾಡುತ್ತಿದೆ.

ಮತ ಆಮಿಷ: ಆಯೋಗದ ವಶ

₹26.11 ಕೋಟಿ ನಗದು

ಉಚಿತ ಉಡುಗೊರೆ	₹ 1.74 ಕೋಟಿ
ಮದ್ಯ	₹ 29.42 ಕೋಟಿ (9.17 ಲಕ್ಷ ಲೀ)
ಮಾದಕವಸ್ತು	₹ 3.13 ಕೋಟಿ (284.54 ಕೆ.ಜಿ.)
ಚಿನ್ನ	₹ 9.43 ಕೋಟಿ (16.02 ಕೆ.ಜಿ.)
ಬೆಳ್ಳಿ	₹27.23 ಲಕ್ಷ (59.04 ಕೆ.ಜಿ.)

ಎಂಥಾ ಮಾತು!

ಮೈಸೂರು–ಕೊಡಗು ಕ್ಷೇತ್ರದಲ್ಲಿ ಯದುವೀರ್ ಬಿಜೆಪಿ ಅಭ್ಯರ್ಥಿಯಾಗಲು ದೇವೇಗೌಡರೇ ಕಾರಣ. ಒಕ್ಕಲಿಗ ಸಮುದಾಯದ ಪ್ರತಾಪ ಸಿಂಹಗೆ ಟಿಕೆಟ್ ತಪ್ಪಿಸಿದ್ದೂ ಅವರೇ. ಮೈಸೂರು ಅರಸರು ಕೆಆರ್‌ಎಸ್ ಅಣೆಕಟ್ಟೆ ಕಟ್ಟಿ ಮಂಡ್ಯದ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದರು. ಹೀಗಾಗಿ ಮಂಡ್ಯಕ್ಕೆ ಯದುವೀರ್ ಅವರನ್ನು ಪ್ರಚಾರಕ್ಕೆ ಕರೆದೊಯ್ದು ಆ ಮೂಲಕ ಕುಮಾರಸ್ವಾಮಿಯವರನ್ನು ಗೆಲ್ಲಿಸಲು ಯೋಜನೆ ರೂಪಿಸಿದ್ದಾರೆ. ನಾನು ದೇವೇಗೌಡರ ಹತ್ತಿರದ ಸಂಬಂಧಿ. ಅವರ ಸ್ವಾರ್ಥ ರಾಜಕಾರಣ ಸಹಿಸದೇ ಜೆಡಿಎಸ್ ತೊರೆದಿದ್ದೆ. ಆಗ ನನ್ನ ಕೈ ಹಿಡಿದು ಮಾರ್ಗದರ್ಶನ ತೋರಿದ್ದು ಸಿದ್ದರಾಮಯ್ಯ

ಕೆ. ವೆಂಕಟೇಶ್, ಪಶು ಸಂಗೋಪನೆ ಸಚಿವ

ಕ್ಷೇತ್ರ ಮಹಾತ್ಮೆ

ಚಾಮರಾಜನಗರ

ನಂಜುಂಡೇಶ್ವರನ ನಂಜನಗೂಡಿನ ಜತೆಗೆ ಮಲೆ ಮಹದೇಶ್ವರನ ತಪ್ಪಲು–ಒಕ್ಕಲು, 'ಪವಾಡ' ತೋರಿದನೆಂಬ ನಂಬುಗೆಯಿರುವ ಮಂಟೇಸ್ವಾಮಿ ಸನ್ನಿಧಿ... ಇವೆಲ್ಲದರ ಜತೆಗೆ ಬಹುಕಾಲದಿಂದಲೂ ಶ್ರೀನಿವಾಸ್ ಪ್ರಸಾದ್ ಪ್ರಭಾವ ವಲಯದಲ್ಲಿರುವ, ಮುಖ್ಯಮಂತ್ರಿ ಸಿದ್ದರಾಮಯ್ಯನವರ 'ವರುಣ' ಕ್ಷೇತ್ರವನ್ನೂ ಚಾಚಿಕೊಂಡ ಚಾಮರಾಜನಗರದ ಚುನಾವಣೆಯಲ್ಲಿ ಯಾರಿಗೆ ಯಾರು ಹಿತವರು ಎಂಬ ಪ್ರಶ್ನೆ ಎದುರಾಗಿದೆ. ನೀವೇ ನಿಲ್ಲಿ ಎಂದರೂ ಒಲ್ಲೆ ಎಂದ ಸಚಿವ ಎಚ್.ಸಿ. ಮಹದೇವಪ್ಪ, ಹಟ ಬಿದ್ದು ತಮ್ಮ ಮಗ ಸುನಿಲ್ ಬೋಸ್‌ಗೆ ಟಿಕೆಟ್ ಕೊಡಿಸಿದ್ದಾರೆ. ಶಾಸಕರನ್ನು ಒಪ್ಪಿಸಿಕೊಳ್ಳುವ ಹೊಣೆ ಅವರ ಹೆಗಲಿಗೆ ಬಿದ್ದಿದೆ. ಹಾಲಿ ಸಂಸದ ಶ್ರೀನಿವಾಸ್ ಪ್ರಸಾದ್ ಪ್ರಭಾವ ಇರುವ ಕ್ಷೇತ್ರದಲ್ಲಿ ಅವರ ಕುಟುಂಬ ಟಿಕೆಟ್ ಕೇಳಿತ್ತು. ಬಿಜೆಪಿಯು ಮಾಜಿ ಶಾಸಕ ಬಾಲರಾಜ್ ಅವರನ್ನು ಕಣಕ್ಕೆ ದೂಡಿದೆ. ತಾವು ಪ್ರತಿನಿಧಿಸುವ ಕ್ಷೇತ್ರವನ್ನು ಒಳಗೊಂಡ ಚಾಮರಾಜನಗರದಲ್ಲಿ ಗೆಲ್ಲುವುದು ಸಿದ್ದರಾಮಯ್ಯಗೂ ಸವಾಲು. ಮಹದೇವಪ್ಪಗೂ ಪ್ರತಿಷ್ಠೆಯೇ ಪಣ. ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರವಾದರೂ ಲಿಂಗಾಯತ ಮತಗಳೂ ನಿರ್ಣಾಯಕ. ಯಡಿಯೂರಪ್ಪ ತಮ್ಮ ಸ್ವಕ್ಷೇತ್ರ ಹಾಗೂ ಉಳಿದ 26 ಕ್ಷೇತ್ರಗಳಲ್ಲಿ ಓಡಾಡಬೇಕಾಗಿರುವುದರಿಂದ ಚಾಮರಾಜನಗರದ ಮೇಲೆಯೇ ಗಮನ ಹರಿಸುವುದು ಕಷ್ಟ. ಲಿಂಗಾಯತ ಮತಗಳನ್ನು ನೆಚ್ಚಿಕೊಂಡವರನ್ನು 'ಮಹದೇಶ್ವರ' ಲೋಕಸಭೆಯ ಬೆಟ್ಟ ಹತ್ತಿಸುತ್ತಾನೋ, ಹೆಸರಿನಲ್ಲೇ ಮಹದೇವ ಎಂದಿಟ್ಟುಕೊಂಡಿರುವ ಸುನಿಲ್ ಬೋಸ್, ದೆಹಲಿಗೆ ದೌಡಾಯಿಸುತ್ತಾರೋ... ಕುತೂಹಲ ಭಾರಿ ಇದೆ.

ಅಭ್ಯರ್ಥಿಗಳ 'ಜಾತಿವೃಕ್ಷ'

ಹಿಂದುಳಿದ ವರ್ಗಗಳು

ಕ್ಷೇತ್ರ	ಬಿಜೆಪಿ	ಕಾಂಗ್ರೆಸ್
ಮೈಸೂರು	ಯದುವೀರ ಒಡೆಯರ್	
ದಕ್ಷಿಣ ಕನ್ನಡ	–	ಪದ್ಮರಾಜ್
ಉಡುಪಿ–ಚಿಕ್ಕಮಗಳೂರು	ಕೋಟ ಶ್ರೀನಿವಾಸ ಪೂಜಾರಿ	
ಶಿವಮೊಗ್ಗ	—	ಗೀತಾ ಶಿವರಾಜ್‌ಕುಮಾರ್
ಉತ್ತರ ಕನ್ನಡ	—	ಅಂಜಲಿ ನಿಂಬಾಳ್ಕರ್
ಧಾರವಾಡ	—	ವಿನೋದ್ ಅಸೂಟಿ
ಕೊಪ್ಪಳ	—	ರಾಜಶೇಖರ ಹಿಟ್ನಾಳ್
ಚಿಕ್ಕಬಳ್ಳಾಪುರ	—	ರಕ್ಷಾ ರಾಮಯ್ಯ
ಬೆಂಗಳೂರು ಕೇಂದ್ರ	ಪಿ.ಸಿ. ಮೋಹನ್	

ವೀರಶೈವ–ಲಿಂಗಾಯತ

ಕ್ಷೇತ್ರ	ಬಿಜೆಪಿ	ಕಾಂಗ್ರೆಸ್
ಬೆಳಗಾವಿ	ಜಗದೀಶ ಶೆಟ್ಟರ್	ಮೃಣಾಲ್ ಹೆಬ್ಬಾಳ್ಕರ್
ಹಾವೇರಿ	ಬಸವರಾಜ ಬೊಮ್ಮಾಯಿ	ಆನಂದ ಗಡ್ಡದೇವರ ಮಠ
ಬಾಗಲಕೋಟೆ	ಪಿ.ಸಿ. ಗದ್ದಿಗೌಡರ್	ಸಂಯುಕ್ತಾ ಪಾಟೀಲ
ಬೀದರ್	ಭಗವಂತ ಖೂಬಾ	ಸಾಗರ್ ಖಂಡ್ರೆ
ಶಿವಮೊಗ್ಗ	ಬಿ.ವೈ. ರಾಘವೇಂದ್ರ	
ದಾವಣಗೆರೆ	ಗಾಯತ್ರಿ ಸಿದ್ದೇಶ್ವರ	ಪ್ರಭಾ ಮಲ್ಲಿಕಾರ್ಜುನ್
ತುಮಕೂರು	ವಿ. ಸೋಮಣ್ಣ	
ಕೊಪ್ಪಳ	ಬಸವರಾಜ ಕ್ಯಾವಟರ್	
ಚಿಕ್ಕೋಡಿ	ಅಣ್ಣಾ ಸಾಹೇಬ ಜೊಲ್ಲೆ	

ಪರಿಶಿಷ್ಟ ಜಾತಿ (ಎಸ್‌ಸಿ)

ಕ್ಷೇತ್ರ	ಬಿಜೆಪಿ	ಕಾಂಗ್ರೆಸ್	ಜೆಡಿಎಸ್
ಕೋಲಾರ	–	ಕೆ.ವಿ. ಗೌತಮ್	ಎಂ. ಮಲ್ಲೇಶ್ ಬಾಬು
ವಿಜಯಪುರ	ರಮೇಶ್ ಜಿಗಜಿಣಗಿ	ರಾಜು ಅಲಗೂರು	
ಕಲಬುರಗಿ	ಉಮೇಶ್ ಜಾಧವ್	ರಾಧಾಕೃಷ್ಣ ದೊಡ್ಡಮನಿ	
ಚಿತ್ರದುರ್ಗ	ಗೋವಿಂದ ಕಾರಜೋಳ	ಬಿ.ಎನ್. ಚಂದ್ರಪ್ಪ	
ಚಾಮರಾಜನಗರ	ಎಸ್. ಬಾಲರಾಜ್	ಸುನಿಲ್ ಬೋಸ್	

ಒಕ್ಕಲಿಗ

ಕ್ಷೇತ್ರ	ಬಿಜೆಪಿ	ಕಾಂಗ್ರೆಸ್	ಜೆಡಿಎಸ್
ಹಾಸನ	—	ಶ್ರೇಯಸ್ ಪಟೇಲ್	ಪ್ರಜ್ವಲ್ ರೇವಣ್ಣ
ಮಂಡ್ಯ	—	ವೆಂಕಟರಮಣೇಗೌಡ	ಎಚ್.ಡಿ.ಕುಮಾರಸ್ವಾಮಿ
ಮೈಸೂರು	—	ಎಂ. ಲಕ್ಷ್ಮಣ್	
ಬೆಂಗಳೂರು ಗ್ರಾಮಾಂತರ	ಡಾ.ಸಿ.ಎನ್. ಮಂಜುನಾಥ್	ಡಿ.ಕೆ. ಸುರೇಶ	
ಬೆಂಗಳೂರು ಉತ್ತರ	ಶೋಭಾ ಕರಂದ್ಲಾಜೆ	ಎಂ.ವಿ. ರಾಜೀವ್ ಗೌಡ	
ತುಮಕೂರು	—	ಎಸ್.ಪಿ.ಮುದ್ದಹನುಮೇಗೌಡ	
ಚಿಕ್ಕಬಳ್ಳಾಪುರ	ಕೆ.ಸುಧಾಕರ್		
ದಕ್ಷಿಣ ಕನ್ನಡ	ಬೃಜೇಶ್ ಚೌಟ		
ಚಿಕ್ಕಮಗಳೂರು–ಉಡುಪಿ	–	ಜಯಪ್ರಕಾಶ್ ಹೆಗ್ಡೆ	
ಬೆಂಗಳೂರು ದಕ್ಷಿಣ	–	ಸೌಮ್ಯಾ ರೆಡ್ಡಿ	

ಪರಿಶಿಷ್ಟ ಪಂಗಡ (ಎಸ್‌ಟಿ)

ಕ್ಷೇತ್ರ	ಬಿಜೆಪಿ	ಕಾಂಗ್ರೆಸ್
ರಾಯಚೂರು	ರಾಜಾ ಅಮರೇಶ್ವರ ನಾಯಕ	ಜಿ. ಕುಮಾರನಾಯಕ
ಬಳ್ಳಾರಿ	ಶ್ರೀರಾಮುಲು	ಇ. ತುಕಾರಾಂ
ಚಿಕ್ಕೋಡಿ	—	ಪ್ರಿಯಾಂಕಾ ಜಾರಕಿಹೊಳಿ

ಮುಸ್ಲಿಂ

ಕ್ಷೇತ್ರ	ಬಿಜೆಪಿ	ಕಾಂಗ್ರೆಸ್
ಬೆಂಗಳೂರು ಕೇಂದ್ರ	–	ಮನ್ಸೂರ್ ಅಲಿಖಾನ್



ಬ್ರಾಹ್ಮಣ

ಕ್ಷೇತ್ರ	ಬಿಜೆಪಿ
ಉತ್ತರ ಕನ್ನಡ	ವಿಶ್ವೇಶ್ವರ ಹೆಗಡೆ ಕಾಗೇರಿ
ಧಾರವಾಡ	ಪ್ರಲ್ಹಾದ ಜೋಶಿ
ಬೆಂಗಳೂರು ದಕ್ಷಿಣ	ತೇಜಸ್ವಿ ಸೂರ್ಯ

ಬಿಜೆಪಿ

ಲಿಂಗಾಯತ	ಒಕ್ಕಲಿಗ	ಬ್ರಾಹ್ಮಣ	ಹಿಂದುಳಿದ ವರ್ಗ	ಮುಸ್ಲಿಂ	ಎಸ್‌ಸಿ	ಎಸ್‌ಟಿ
9	4	3	3	0	4	2

ಕಾಂಗ್ರೆಸ್

ಲಿಂಗಾಯತ	ಒಕ್ಕಲಿಗ	ಬ್ರಾಹ್ಮಣ	ಹಿಂದುಳಿದ ವರ್ಗ	ಮುಸ್ಲಿಂ	ಎಸ್‌ಸಿ	ಎಸ್‌ಟಿ
5	8	0	6	1	5	3

ಜೆಡಿಎಸ್

ಒಕ್ಕಲಿಗ	ಎಸ್‌ಸಿ
2	1

ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಸಂವಿಧಾನ, ಸಾಮಾಜಿಕ ನ್ಯಾಯ, ಜಾತ್ಯತೀತವಾಗಿ ನಡೆಯಬೇಕಾದ ಚುನಾವಣೆ ಜಾತಿಯನ್ನು ಆಧರಿಸಿಯೇ ನಡೆಯುತ್ತಿರುವುದು ಹೊಸ ವಿದ್ಯಮಾನವೇನಲ್ಲ. 'ಜಾತಿ' ಹಾಗೂ ಗೆಲ್ಲುವ ಕುದುರೆಯಾಗಿರಬೇಕು ಎಂಬುದಷ್ಟೇ ಅಭ್ಯರ್ಥಿಯ ಅರ್ಹತೆಯನ್ನು ನಿರ್ಧರಿಸಿರುವ ಮಾನದಂಡವಾಗಿರುವುದು ವಿಪರ್ಯಾಸವೂ ಹೌದು. ತಾವು ದಲಿತರು, ಹಿಂದುಳಿದವರ ಪರ ಎಂದು ರಾಜಕೀಯ ನಾಯಕರು ಹೇಳಿಕೊಂಡರೂ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ, ಅಭ್ಯರ್ಥಿ ಆಯ್ಕೆಯಲ್ಲಿ ಪ್ರಾತಿನಿಧ್ಯ ಕೊಟ್ಟಿಲ್ಲ. ಬಿಜೆಪಿ ಲಿಂಗಾಯತರಿಗೆ, ಬ್ರಾಹ್ಮಣರಿಗೆ ಹೆಚ್ಚಿನ ಕ್ಷೇತ್ರಗಳನ್ನು ನೀಡಿದೆ. ಒಕ್ಕಲಿಗ ಮತಬ್ಯಾಂಕ್ ಭದ್ರಪಡಿಸಿಕೊಳ್ಳಲು ಮುಂದಾಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಈ ಬಾರಿ ಒಕ್ಕಲಿಗರಿಗೆ ಹೆಚ್ಚು ಕ್ಷೇತ್ರ ಕೊಡಿಸಿದ್ದಾರೆ. ಗೆಲ್ಲುವ ಅಭ್ಯರ್ಥಿಗಳ ಲೆಕ್ಕದಲ್ಲಿ, ಒಕ್ಕಲಿಗ–ಲಿಂಗಾಯತರಿಗೆ ಪ್ರಾತಿನಿಧ್ಯಕ್ಕೆ ಸಮ್ಮತಿ ಸೂಚಿಸಿದಂತಿರುವ ಸಿದ್ದರಾಮಯ್ಯ, ಹಿಂದುಳಿದ ಸಮುದಾಯವರಿಗೂ ಆದ್ಯತೆ ಮೇರೆಗೆ ಕ್ಷೇತ್ರ ಕೊಡಿಸಿದ್ದಾರೆ. ಮುಸ್ಲಿಂ ಸಮುದಾಯದ ಒಬ್ಬರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ.

ರೆಡ್ಡಿ ಮತ್ತು ಬಂಟ ಸಮುದಾಯದವರನ್ನು ಒಕ್ಕಲಿಗರ ಪಟ್ಟಿಯಲ್ಲೇ ರಾಜಕೀಯ ಪಕ್ಷಗಳು ಗುರುತಿಸುತ್ತವೆ. ಹಿಂದುಳಿದ ಸಮಯದಾಯದ ಪೈಕಿ ಈಡಿಗ, ಕುರುಬ, ಬಲಿಜ ಸಮುದಾಯದ ಅಭ್ಯರ್ಥಿಗಳಿದ್ದಾರೆ.

ಮಾಹಿತಿ: ಚಂದ್ರಹಾಸ ಹಿರೇಮಳಲಿ

ಬಂಡಾಯ ಶಮನಗೊಳಿಸಿ, ಹುರುಪು ತುಂಬಿದ ಶಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಂತರಿಕ ಭಿನ್ನಮತ ಮತ್ತು ಬಂಡಾಯದ ಕಾರಣ ಕೆಲವು ಲೋಕಸಭಾ ಕ್ಷೇತ್ರಗಳಲ್ಲಿ ಉಂಟಾಗಿದ್ದ ಸಮಸ್ಯೆಯನ್ನು ಬಗೆಹರಿಸುವಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಬಹುತೇಕ ಯಶಸ್ವಿಯಾಗಿದ್ದು, ವಿವಿಧ ಕ್ಷೇತ್ರಗಳಲ್ಲಿದ್ದ 'ವಿಘ್ನ'ಗಳನ್ನು ನಿವಾರಿಸುವುದರ ಜತೆಗೆ ಕಾರ್ಯಕರ್ತರಲ್ಲಿ ರಣೋತ್ಸಾಹ ತುಂಬಿದರು.

ಅಮಿತ್ ಶಾ ಅವರು ಮಂಗಳವಾರ ಇಡೀ ದಿನ ಸರಣಿ ಸಭೆಗಳು, ಕಾರ್ಯಕರ್ತರ ಸಮಾವೇಶ ಮತ್ತು ಚನ್ನಪಟ್ಟಣದಲ್ಲಿ ರೋಡ್ ಶೋದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಈಗಾಗಲೇ ಬಿ.ಎಸ್.ಯಡಿಯೂರಪ್ಪ ಮತ್ತು ಬಿ.ವೈ.ವಿಜಯೇಂದ್ರ ಅವರು ಕೆಲವು ಕ್ಷೇತ್ರಗಳಲ್ಲಿ ಬಂಡಾಯವನ್ನು ಶಮನ ಮಾಡಿದ್ದರು. ಉಳಿದ ಕ್ಷೇತ್ರಗಳಲ್ಲಿನ ಭಿನ್ನಮತವನ್ನು ಅಮಿತ್ ಶಾ ಅವರೇ ಬಗೆಹರಿಸಿದರು. ಅಲ್ಲದೇ, ಜೆಡಿಎಸ್ ಜತೆ ಸಮನ್ವಯದಿಂದ ಮುನ್ನಡೆಯಲು ಪಕ್ಷದ ನಾಯಕರು ಮತ್ತು ಕಾರ್ಯಕರ್ತರಿಗೆ ಸೂಚನೆ ನೀಡಿದರು.

'ಯಾವುದೇ ಕಾರಣಕ್ಕೂ ಅಸಮಾಧಾನ ಅತೃಪ್ತಿಯ ಕಾರಣಕ್ಕೆ ಪಕ್ಷದ ಅಭ್ಯರ್ಥಿಯ ವಿರುದ್ಧ ಕೆಲಸ ಮಾಡಬಾರದು. ಇಲ್ಲಿ ವ್ಯಕ್ತಿಗಳು ಮುಖ್ಯವಲ್ಲ ಪಕ್ಷ ಮುಖ್ಯ. ಮೋದಿ ಮತ್ತೊಮ್ಮೆ ಪ್ರಧಾನಿ ಆಗಬೇಕು. ಅದಕ್ಕಾಗಿ ಎಲ್ಲ ಬೇಸರ, ಅತೃಪ್ತಿಯನ್ನು ಬದಿಗಿಟ್ಟು ಕೆಲಸ ಮಾಡಬೇಕು. ಇದೇ ವೇಳೆ ಜೆಡಿಎಸ್ ನಾಯಕರು ಮತ್ತು ಕಾರ್ಯಕರ್ತರ ಜತೆ ಹೆಗಲಿಗೆ ಹೆಗಲುಕೊಟ್ಟು ಕೆಲಸ ಮಾಡಬೇಕು' ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬಿಜೆಪಿ–ಜೆಡಿಎಸ್ ನಾಯಕರ ಜತೆ ಬೆಳಿಗ್ಗೆ ಸಮಾಲೋಚನೆ ನಡೆಸಿದ ಶಾ, ಆ ಬಳಿಕ ದಾವಣಗೆರೆ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಕ್ಷೇತ್ರಗಳ ಕೋರ್ ಕಮಿಟಿ ಸದಸ್ಯರ ಸಭೆ ನಡೆಸಿದರು. 'ಭಿನ್ನಾಭಿಪ್ರಾಯ, ಅಸಮಾಧಾನ ಬದಿಗಿಟ್ಟು ಈ ಎಲ್ಲ ಕ್ಷೇತ್ರಗಳಲ್ಲೂ ಪಕ್ಷದ ಅಭ್ಯರ್ಥಿಗಳನ್ನು ಅತಿ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಿಕೊಂಡು ಬರಬೇಕು. ಇದಕ್ಕೆ ಒಗ್ಗಟ್ಟಿನ ಹೋರಾಟ ಮುಖ್ಯ' ಎಂದು ಸೂಚನೆ ನೀಡಿದರು.

ತಮ್ಮ ಪತ್ನಿ ಕಣಕ್ಕಿಳಿದಿರುವ ಕ್ಷೇತ್ರದಲ್ಲಿ ಕೆಲವು ಮುಖಂಡರ ಸಹಕಾರ ಸಿಗುತ್ತಿಲ್ಲ ಎಂದು ದಾವಣಗೆರೆ ಸಂಸದ ಜಿ.ಎಂ. ಸಿದ್ದೇಶ್ವರ್ ಅಳಲು ತೋಡಿಕೊಂಡರು. ಆಗ ಮಾಜಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮತ್ತು ಇತರರು ಆಕ್ಷೇಪ ವ್ಯಕ್ತಪಡಿಸಿದಾಗ, ಅಮಿತ್ ಶಾ ಮಧ್ಯಪ್ರವೇಶಿಸಿ ಅವರೆಲ್ಲರನ್ನು ಸಮಾಧಾನಪಡಿಸಿದರು ಎಂದು ಮೂಲಗಳು ಹೇಳಿವೆ.

'ಜೆಡಿಎಸ್ ಮತಗಳು ಬಿಜೆಪಿ ಅಭ್ಯರ್ಥಿಗೂ, ಬಿಜೆಪಿ ಮತಗಳು ಜೆಡಿಎಸ್ ಅಭ್ಯರ್ಥಿಗಳಿಗೆ ಪೂರ್ಣ ಪ್ರಮಾಣದಲ್ಲಿ ವರ್ಗಾವಣೆ ಆಗುವಂತೆ ನೋಡಿಕೊಳ್ಳಬೇಕು. ಮತದಾನದ ದಿನ ಬಿಜೆಪಿ ಮತ್ತು ಜೆಡಿಎಸ್ ಮತಗಳೂ ಒಂದೂ ವ್ಯರ್ಥ ಆಗಬಾರದು. ಪರಸ್ಪರ ಮಾತನಾಡಿಕೊಂಡು ಚಲಾವಣೆ ಆಗಬೇಕು. ಮತ ಎಣಿಕೆ ಆಗುವರೆಗೂ ಜೆಡಿಎಸ್ ಜತೆ ಗಟ್ಟಿಯಾಗಿ ನಿಲ್ಲಬೇಕು' ಎಂಬ ಸೂಚನೆಯನ್ನೂ ನೀಡಿದರು.

ಇದೇ ಸಂದರ್ಭದಲ್ಲಿ ಕರುಣಾಕರ ರೆಡ್ಡಿ, ಎಂ.ಪಿ. ರೇಣುಕಾಚಾರ್ಯ, ಮಾಡಾಳ್ ವಿರೂಪಾಕ್ಷಪ್ಪ ಅವರು ಸ್ಥಳೀಯ ಮಟ್ಟದ ಕೆಲವು ವಿಷಯಗಳನ್ನು ಪ್ರಸ್ತಾಪಿಸಿದಾಗ, ಸಣ್ಣ ವಿಷಯಗಳನ್ನು ಏಕೆ ದೊಡ್ಡದು ಮಾಡುತ್ತೀರಿ? ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಲು ಕೆಲಸ ಮಾಡಿ. ಉಳಿದ ನಿಮ್ಮ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಅವರು ಭರವಸೆ ನೀಡಿದರು.

ಮತ ಕೇಳುವ ನೈತಿಕತೆ ಇಲ್ಲ: ಸಿ.ಎಂ

ಪ್ರಜಾವಾಣಿ ವಾರ್ತೆ

ಮೈಸೂರು: 'ಕೇಂದ್ರ ಗೃಹ ಸಚಿವ ಅಮಿತ್ ಶಾಗೆ ರಾಜ್ಯದಲ್ಲಿ ಪ್ರಚಾರ ನಡೆಸುವ ನೈತಿಕತೆಯೇ ಇಲ್ಲ. ಯಾವ ಮುಖವಿಟ್ಟುಕೊಂಡು ಮತ ಕೇಳುತ್ತಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಬರ ಪರಿಹಾರ ನಿರ್ಧರಿಸುವ ಸಮಿತಿಗೆ ಅಮಿತ್ ಶಾ ಅವರೇ ಅಧ್ಯಕ್ಷ. ಐದು ತಿಂಗಳಾದರೂ ರಾಜ್ಯಕ್ಕೆ ಬಿಡಿಗಾಸು ಬರ ಪರಿಹಾರ ನೀಡಿಲ್ಲ. ಅವರೇನು ತಮ್ಮ ಮನೆಯಿಂದ ಪರಿಹಾರದ ಹಣ ಕೊಡ್ತಾರ? ನಮಗೆ ಅದೇನು ಭಿಕ್ಷೆನಾ? ಪರಿಹಾರ ನೀಡದೇ ಹೇಗೆ ಇಲ್ಲಿಗೆ ಬಂದು ಮತ ಕೇಳುತ್ತಾರೆ' ಎಂದು ಪ್ರಶ್ನಿಸಿದರು.

'ಕುಮಾರಸ್ವಾಮಿಯವರೇ ಬಿಜೆಪಿಯ ದೊಡ್ಡ ವಕ್ತಾರರಾಗಿದ್ದಾರೆ. ಕೇಂದ್ರ ಪರಿಹಾರ ಕೊಡದ್ದನ್ನೂ ಸಮರ್ಥಿಸಿಕೊಳ್ಳುತ್ತಿದ್ದಾರೆ. ಅವರೇ ಬಿಜೆಪಿ ನಾಯಕರಿಗೆ ಇದನ್ನೆಲ್ಲ ಹೇಳಬೇಕು' ಎಂದರು.

> **ಕಳೆದ ಚುನಾವಣೆಯಲ್ಲಿ ನಾನು ಹೋಗಿದ್ದಕ್ಕೇ ಹಾಸನದಲ್ಲಿ ಪ್ರಜ್ವಲ್ ರೇವಣ್ಣ ಗೆದ್ದಿದ್ದು. ಈ ಬಾರಿಯೂ ಹಾಸನಕ್ಕೆ ಹೋಗುತ್ತೇನೆ. ಪ್ರಜ್ವಲ್‌ನನ್ನು ಸೋಲಿಸುತ್ತೇನೆ**
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಬಿಜೆಪಿಯನ್ನು ಅಧಿಕಾರದಿಂದ ದೂರವಿಡಲು 60 ಸಾವಿರ ಲೀಡ್ ಕೊಡಿ ಎಂದು ವರುಣಾ ಕ್ಷೇತ್ರದ ಜನರನ್ನು ಕೇಳಿದ್ದೇನೆ. ಭಾವನಾತ್ಮಕವಾಗಿ ಮಾತನಾಡಿಲ್ಲ. ಮುಂದಿನ ವಿಧಾನಸಭೆ ಚುನಾವಣೆ ವೇಳೆಗೆ ನನಗೆ 82 ವರ್ಷ ವಯಸ್ಸಾಗುತ್ತದೆ. ಆ ವಯಸ್ಸಿನಲ್ಲಿ, ಉತ್ಸಾಹದಲ್ಲಿ ರಾಜಕೀಯ ಮಾಡಲಾಗದು. ಹೀಗಾಗಿ ನಾನು ಸ್ಪರ್ಧಿಸುವುದಿಲ್ಲ' ಎಂದು ಸ್ಪಷ್ಟನೆ ನೀಡಿದರು.

'ಮಂಡ್ಯದ ಸ್ಪರ್ಧೆ ದೇವರ ಇಚ್ಛೆ' ಎಂಬ ಕುಮಾರಸ್ವಾಮಿ ಹೇಳಿಕೆಗೆ ತಿರುಗೇಟು ನೀಡಿದ ಅವರು, 'ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗಲೇ ಅವರ ಮಗ ಮಂಡ್ಯದಲ್ಲಿ ಸೋತಿದ್ದ. ಈ ಬಾರಿ ಮೂರು ಕ್ಷೇತ್ರದಲ್ಲೂ ಜೆಡಿಎಸ್‌ನವರು ಸೋಲುತ್ತಾರೆ. ಮೈತ್ರಿ ಧರ್ಮವೆಂದರೆ ಎಲ್ಲ ಕ್ಷೇತ್ರಕ್ಕೂ ಒಂದೇ. ಮೈಸೂರಿನಲ್ಲಿ ಚೂರಿ ಹಾಕಿ, ಈಗ ಮಂಡ್ಯದಲ್ಲಿ ತಮಗೆ ಚೂರಿ ಹಾಕಿದ್ದಾರೆ ಎಂದರೆ, ಅದರಲ್ಲಿ ಯಾವ ನ್ಯಾಯವಿದೆ?' ಎಂದು ಪ್ರಶ್ನಿಸಿದರು.

ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿ, 'ಬಿಜೆಪಿ ಕೋಮುವಾದಿ ಪಕ್ಷವೆಂದು ದೇವೇಗೌಡರೇ ಹೇಳಿದ್ದರು. ಈಗ ಅಪವಿತ್ರ ಮೈತ್ರಿ ಮಾಡಿಕೊಂಡಿದ್ದಾರೆ. ಜೆಡಿಎಸ್‌ನಿಂದ 'ಎಸ್' ತೆಗೆಯಿರಿ ಎಂದಿದ್ದಕ್ಕೆ ನನ್ನ ಗರ್ವ ಭಂಗ ಮಾಡುತ್ತೇನೆ ಎಂದಿದ್ದಾರೆ. ಆದರೆ ನನಗೆ ಗರ್ವವೇ ಇಲ್ಲ' ಎಂದರು.

'ನಾನು ದೇವೇಗೌಡರ ನಿರ್ಣಯಗಳಿಗೆ ವಿರುದ್ಧವಾಗಿದ್ದೇನೆಯೇ ಹೊರತು ವೈಯಕ್ತಿಕವಾಗಿ ಅಲ್ಲ' ಎಂದರು.

'ಚುನಾವಣೆಯಲ್ಲಿ ಸ್ಪರ್ಧಿಸಲು ಭಕ್ತರ ಒತ್ತಡ'

ಧಾರವಾಡ: 'ಧಾರವಾಡ ಲೋಕಸಭಾ ಕ್ಷೇತ್ರದಿಂದ ಪಕ್ಷೇತರರಾಗಿ ಸ್ಪರ್ಧಿಸುವಂತೆ ಭಕ್ತರು ಒತ್ತಾಯಿಸಿದ್ದಾರೆ. ನಮ್ಮ ಪೀಠಕ್ಕೆ ಸಂಬಂಧಿಸಿದ ಗುರುಗಳು ಮತ್ತು ಪ್ರಮುಖರ ಅಭಿಪ್ರಾಯ ಪಡೆದು, ಬೆಂಗಳೂರಿನಲ್ಲಿ ನಿರ್ಧಾರ ಪ್ರಕಟಿಸುವೆ' ಎಂದು ಶಿರಹಟ್ಟಿಯ ಭಾವೈಕ್ಯ ಪೀಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ತಿಳಿಸಿದರು.

'ಪ್ರಲ್ಹಾದ ಜೋಶಿ ಅವರನ್ನು ಧಾರವಾಡ ಕ್ಷೇತ್ರದ ಬಿಜೆಪಿ ಟಿಕೆಟ್ ಘೋಷಿಸಿದ್ದನ್ನು ಬದಲಿಸಲು ಕೇಳಿದ್ದೆ. ಆದರೆ, ಅದು ಆಗದು ಎಂದು ಅವರ ಪಕ್ಷದವರು ಹೇಳಿದ್ದಾರೆ. ಹೀಗಾಗಿ, ಹೋರಾಟಕ್ಕೆ ಮುಂದಾಗಿದ್ದೇನೆ. ಮುಂದಿಟ್ಟ ಹೆಜ್ಜೆ ಹಿಂದಿಡದಂತೆ ಭಕ್ತರು ಸಲಹೆ ನೀಡಿದ್ದಾರೆ' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಹೋರಾಟ ಕೈಬಿಡಲ್ಲ, ಒತ್ತಡಕ್ಕೆ ಮಣಿಯಲ್ಲ, ಆಮಿಷಕ್ಕೆ ಬಗ್ಗಲ್ಲ. ನಮ್ಮ ಹೋರಾಟ ಜೋಶಿ ಅವರ ವ್ಯಕ್ತಿತ್ವ, ನಡೆ-ನುಡಿ ವಿರುದ್ಧವೇ ಹೊರತು ಬಿಜೆಪಿ ವಿರುದ್ಧವಲ್ಲ. ಜೋಶಿ ಅವರನ್ನು ಸೋಲಿಸುವುದೇ ಗುರಿಯಾಗಿದೆ' ಎಂದು ಅವರು ತಿಳಿಸಿದರು.

'ಧಾರವಾಡ ಲೋಕಸಭಾ ಮತಕ್ಷೇತ್ರದ ಹಿತರಕ್ಷಣಾ ಸಮಿತಿ ರಚಿಸಲು ಭಕ್ತರು ನಿರ್ಧರಿಸಿದ್ದಾರೆ. ಭಕ್ತರು ಸಮಿತಿಯ ಮುಖ್ಯಸ್ಥರಾಗಿರುತ್ತಾರೆ. ಅವರೇ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ' ಎಂದರು.

'ಒಗ್ಗೂಡಿದ ಮಠಾಧಿಪತಿಗಳನ್ನು ಒಡೆದು ಆಳುವ ನೀತಿಯನ್ನು ಜೋಶಿ ಅನುಸರಿಸಿದ್ದಾರೆ. ಮಠಾಧಿಪತಿಗಳ ಸ್ವಾತಂತ್ರ್ಯವನ್ನು ಕಸಿದುಕೊಂಡಿದ್ದಾರೆ'. ಎಂದರು.

ಕಣದತ್ತ ಕಿರುನೋಟ

ಖರ್ಗೆ ತವರಲ್ಲಿ ನಡೆಯುವುದೇ 'ಮೋಡಿ'

ಅಭ್ಯರ್ಥಿಗಳು

ಡಾ. ಉಮೇಶ ಜಾಧವ
ಬಿಜೆಪಿ

ರಾಧಾಕೃಷ್ಣ ದೊಡ್ಡಮನಿ
ಕಾಂಗ್ರೆಸ್

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ಜಿಲ್ಲೆ ಕಲಬುರಗಿ ಲೋಕಸಭಾ ಕ್ಷೇತ್ರದಿಂದ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಅವರ ಅಳಿಯ ರಾಧಾಕೃಷ್ಣ ದೊಡ್ಡಮನಿ ಅಖಾಡಕ್ಕೆ ಇಳಿದಿದ್ದಾರೆ. ಖರ್ಗೆ ಅವರ ಪ್ರತಿಷ್ಠೆಯನ್ನು ಉಳಿಸಲು ರಾಧಾಕೃಷ್ಣ ಅವರನ್ನು ಗೆಲ್ಲಿಸಲೇಬೇಕಾದ ಅನಿವಾರ್ಯತೆಗೆ ಜಿಲ್ಲೆಯ ಕಾಂಗ್ರೆಸ್ ನಾಯಕರು ಸಿಲುಕಿದ್ದಾರೆ.

ಮತ್ತೊಂದೆಡೆ ಹಾಲಿ ಸಂಸದ ಬಿಜೆಪಿಯ ಡಾ.ಉಮೇಶ ಜಾಧವ ಚುನಾವಣೆ ಘೋಷಣೆಗೆ ಮುನ್ನವೇ ಎರಡು ಸುತ್ತು ಪ್ರಚಾರ ಮುಗಿಸಿದ್ದು ಪುನರಾಯ್ಕೆಯಾಗುವ ವಿಶ್ವಾಸದಲ್ಲಿದ್ದಾರೆ.

ಖರ್ಗೆ ಅವರ ಹಿಂದಿನ ಚುನಾವಣೆಗಳಲ್ಲಿ ರಾಧಾಕೃಷ್ಣ ಅವರು ಹಿಂದೆ ನಿಂತು ತಂತ್ರಗಾರಿಕೆ ರೂಪಿಸುತ್ತಿದ್ದರು. ಕೊನೆಗಳಿಗೆಯಲ್ಲಿ ಪಕ್ಷವು ಅವರನ್ನು ಕಣಕ್ಕಿಳಿಸಿದ್ದು, ಈಗಷ್ಟೇ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು, ಕ್ಷೇತ್ರದಲ್ಲಿನ ಪಕ್ಷದ ಆರು ಶಾಸಕರ ಬಲ, ಪರಿಶಿಷ್ಟ ಬಲಗೈ ಸಮುದಾಯ ಹಾಗೂ ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿರುವುದರ ಜೊತೆಗೆ ಖರ್ಗೆ ಅವರ ವರ್ಚಸ್ಸನ್ನು ನೆಚ್ಚಿಕೊಂಡು ಚುನಾವಣೆಯನ್ನು ಎದುರಿಸುತ್ತಿದ್ದಾರೆ.

ಬಿಜೆಪಿ ಅಭ್ಯರ್ಥಿ ಡಾ.ಉಮೇಶ ಜಾಧವ ಅವರು ಮೋದಿ 'ನಾಮಬಲ'ವನ್ನು ನೆಚ್ಚಿಕೊಂಡಿದ್ದಾರೆ. 'ಮೋದಿ ಹವಾ' ಈ ಬಾರಿ ಕ್ಷೇತ್ರದಲ್ಲಿ ಅಷ್ಟೇನೂ ಕಂಡು ಬರುತ್ತಿಲ್ಲ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

6	1	1

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
10,34,005	10,30,677	336

ಒಟ್ಟು 20,65,018

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಡಾ.ಉಮೇಶ ಜಾಧವ	ಬಿಜೆಪಿ	6,20,192
ಸಮೀಪದ ಪ್ರತಿಸ್ಪರ್ಧಿ	ಮಲ್ಲಿಕಾರ್ಜುನ ಖರ್ಗೆ	ಕಾಂಗ್ರೆಸ್	5,24,740

ಕುಮಾರಸ್ವಾಮಿ ವಿರುದ್ಧ ಸ್ಟಾರ್ ಚಂದ್ರು

ಅಭ್ಯರ್ಥಿಗಳು



ಸ್ಟಾರ್ ಚಂದ್ರು
ಕಾಂಗ್ರೆಸ್

ಎಚ್.ಡಿ. ಕುಮಾರಸ್ವಾಮಿ
ಜೆಡಿಎಸ್

ಕಾಂಗ್ರೆಸ್ ಅಭ್ಯರ್ಥಿ, ನಾಗಮಂಗಲ ತಾಲ್ಲೂಕಿನ ಕನ್ನಾಘಟ್ಟದ ಉದ್ಯಮಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಹಾಗೂ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಲಿರುವ ಎಚ್.ಡಿ.ಕುಮಾರಸ್ವಾಮಿ ನಡುವೆ ತೀವ್ರ ಪೈಪೋಟಿ ನಡೆಯುತ್ತಿದೆ. ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸೇರಿ ಕಾಂಗ್ರೆಸ್ ಶಾಸಕರು ಸ್ಟಾರ್ ಚಂದ್ರು ಸುತ್ತಲೂ ಕೋಟೆಯಂತೆ ಸುತ್ತುವರಿದಿದ್ದು ಈಗಾಗಲೇ ಹಲವು ಸುತ್ತಿನ ಪ್ರಚಾರ ಪೂರ್ಣಗೊಳಿಸಿದ್ದಾರೆ. ಚಂದ್ರು ಮನೆಯನ್ನೂ ಖರೀದಿಸಿದ್ದು ಸ್ಥಳೀಯ ಎಂಬ ಹಣೆಪಟ್ಟಿಯೊಂದಿಗೆ ಮತದಾರರನ್ನು ಸೆಳೆಯುತ್ತಿದ್ದಾರೆ.

'ಹಾಸನ ನನ್ನ ಜನ್ಮಭೂಮಿ, ರಾಮನಗರ ಕರ್ಮಭೂಮಿ. ಎರಡಕ್ಕೂ ಮಿಗಿಲಾದ ನೆಲ ಮಂಡ್ಯ' ಎನ್ನುತ್ತಾ ಸಕ್ಕರೆ ಜಿಲ್ಲೆಯತ್ತ ಹೆಜ್ಜೆ ಇಡುತ್ತಿರುವ ಎಚ್.ಡಿ.ಕುಮಾರಸ್ವಾಮಿ ಗುರುವಾರ ಮೈತ್ರಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುತ್ತಿದ್ದಾರೆ. ವಿವಿಧ ಪಕ್ಷಗಳ ಮುಖಂಡರನ್ನು ಜೆಡಿಎಸ್‌ಗೆ ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಬಿಜೆಪಿ ಟಿಕೆಟ್ ವಂಚಿತರಾದ ಸಂಸದೆ ಸುಮಲತಾರ ಬೆಂಬಲ ಕೋರಿದ್ದಾರೆ. ಕಳೆದ ಚುನಾವಣೆಯ ಕಹಿ ಘಟನೆಗಳನ್ನೆಲ್ಲಾ ಮರೆತು ಇಬ್ಬರೂ ಒಂದಾಗಲಿದ್ದಾರೆಯೇ ಎಂಬ ಪ್ರಶ್ನೆ ಕ್ಷೇತ್ರದಲ್ಲಿದೆ. ಸುಮಲತಾ ಬುಧವಾರ ಉತ್ತರಿಸಿದ್ದಾರೆ. ಅನಾರೋಗ್ಯ, ನಿಖಿಲ್ ಸೋಲಿನ ಅನುಕಂಪ, ಒಕ್ಕಲಿಗರ ಬೆಂಬಲವೂ ಎಚ್‌ಡಿಕೆ ಬೆನ್ನಿಗಿವೆ ಎಂದೇ ಹೇಳಲಾಗುತ್ತಿದೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

6	1	ಸರ್ವೋದಯ ಕರ್ನಾಟಕ ಪಕ್ಷ 1

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
8,67,652	8,91355	168

ಒಟ್ಟು 17,59,175

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಸುಮಲತಾ	ಪಕ್ಷೇತರ	7,03,660
ಸಮೀಪದ ಪ್ರತಿಸ್ಪರ್ಧಿ	ನಿಖಿಲ್ ಕುಮಾರಸ್ವಾಮಿ	ಜೆಡಿಎಸ್/ ಕಾಂಗ್ರೆಸ್ ಮೈತ್ರಿ	5,77,784

'ಕಮಲ'ದ ಓಟಕ್ಕೆ ಕಾಂಗ್ರೆಸ್ ತಡೆ ಒಡ್ಡುವುದೇ?

ಅಭ್ಯರ್ಥಿಗಳು

ತೇಜಸ್ವಿ ಸೂರ್ಯ
ಬಿಜೆಪಿ

ಸೌಮ್ಯ ರೆಡ್ಡಿ
ಕಾಂಗ್ರೆಸ್

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯ ಸಂಸದ ತೇಜಸ್ವಿ ಸೂರ್ಯ ಎದುರಿಗೆ ಕಾಂಗ್ರೆಸ್ ಈ ಬಾರಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರ ಪುತ್ರಿ ಸೌಮ್ಯಾರೆಡ್ಡಿಯವರನ್ನು ಕಣಕ್ಕೆ ಇಳಿಸಿದೆ. ಬಿಜೆಪಿಯ ಭದ್ರಕೋಟೆ ಎನಿಸಿರುವ ಈ ಕ್ಷೇತ್ರದಲ್ಲಿ ಮೂರು ದಶಕಗಳಿಂದ ಬಿಜೆಪಿ ಅಭ್ಯರ್ಥಿಗಳು ನಿರಂತರವಾಗಿ ಗೆಲುವು ಸಾಧಿಸುತ್ತಲೇ ಬಂದಿದ್ದಾರೆ. ಬಿಜೆಪಿಯ ಗೆಲುವಿನ ಓಟಕ್ಕೆ ಸೌಮ್ಯಾರೆಡ್ಡಿ ತಡೆ ಒಡ್ಡುವರೇ ಎಂಬುದು ನಿಗೂಢ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೌಮ್ಯಾ ಅವರು ಜಯನಗರ ವಿಧಾನಸಭಾ ಕ್ಷೇತ್ರದಿಂದ ಅತಿ ಕಡಿಮೆ ಮತಗಳ ಅಂತರದಿಂದ ಸೋತಿದ್ದರು. ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಅನಂತ್‌ಕುಮಾರ್ ಅವರ ನಿಧನದಿಂದಾಗಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಗಿಟ್ಟಿಸಿದ ತೇಜಸ್ವಿ ಸೂರ್ಯ ಅವರು ಕ್ಷೇತ್ರದಲ್ಲಿ ಸಾಕಷ್ಟು ಜನಪ್ರಿಯತೆ ಹೊಂದಿದ್ದಾರೆ. ಇಬ್ಬರೂ ಅಭ್ಯರ್ಥಿಗಳಿಗೂ ಸ್ವಪಕ್ಷೀಯರ ಬಂಡಾಯದ ಕಾಟವಿಲ್ಲ. ತೇಜಸ್ವಿಗೆ ಬಿಜೆಪಿಯ ಭದ್ರ ನೆಲೆ ಜತೆಗೆ, ದೇವೇಗೌಡರ ಬೆಂಬಲವೂ ಸಿಕ್ಕಿದೆ. ರಾಮಲಿಂಗಾರೆಡ್ಡಿಯವರಿಗೆ ಕಾಂಗ್ರೆಸ್ ಶಾಸಕ ಎಂ.ಕೃಷ್ಣಪ್ಪ ಹಾಗೂ ಆರ್.ವಿ.ದೇವರಾಜ್ ಅವರೂ ನೆರವಿಗೆ ನಿಂತಿದ್ದಾರೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

3	5

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
11,95,285	11,21,788	399

ಒಟ್ಟು 23,17,472

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ತೇಜಸ್ವಿ ಸೂರ್ಯ	ಬಿಜೆಪಿ	7,39,299
ಸಮೀಪದ ಪ್ರತಿಸ್ಪರ್ಧಿ	ಬಿ.ಕೆ.ಹರಿಪ್ರಸಾದ್	ಕಾಂಗ್ರೆಸ್	4,08,037

ಸಹಾಯಧನ ಮುಂದುವರಿಸಿ ಲೋಕಸಭಾ ಚುನಾವಣೆಯಲ್ಲೂ ಮಹಿಳಾ ಮತದಾರರನ್ನು ಹಿಡಿದಿಟ್ಟುಕೊಳ್ಳುವ ತಂತ್ರ

ವಿಕಸಿತ ಬಿಜೆಪಿಗೆ ‘ಉಜ್ವಲಾ’ ಬಲ?

• ಜಯಸಿಂಹ ಆರ್.

ಮಹಿಳಾ ಸಬಲೀಕರಣವನ್ನು ಕೇಂದ್ರದ ಬಿಜೆಪಿ ಸರ್ಕಾರವು ‘ನಾರೀಪಥ–ನಾರೀಶಕ್ತಿ’ ಎಂದು ಹೊಸ ಹೆಸರಿನಿಂದ ಕರೆಯುತ್ತಿದೆ. ಮಹಿಳೆಯರನ್ನೇ ಕೇಂದ್ರೀಕರಿಸಿಕೊಂಡು ಜಾರಿಗೆ ತಂದ ಎಲ್ಲಾ ಯೋಜನೆಗಳನ್ನು ಸಮಗ್ರವಾಗಿ ಬಿಜೆಪಿ ಹೀಗೆ ಕರೆಯುತ್ತಿದೆ. ಚುನಾವಣಾ ಪ್ರಚಾರದಲ್ಲೂ ಅದನ್ನು ಬಳಸಿಕೊಳ್ಳುತ್ತಿದೆ. ಬಿಜೆಪಿ ಹೀಗೆ ರೂಪಿಸಿದ ಹತ್ತಾರು ಯೋಜನೆಗಳಲ್ಲಿ ಅತ್ಯಂತ ಪ್ರಮುಖವಾದುದು ಮತ್ತು ಚುನಾವಣೆಗಳನ್ನು ಪ್ರಭಾವಿಸುತ್ತಿರುವುದು ‘ಉಜ್ವಲಾ’ ಯೋಜನೆ. ಈ ಲೋಕಸಭಾ ಚುನಾವಣೆಯಲ್ಲೂ ಈ ಯೋಜನೆಯು ಮಹಿಳಾ ಮತದಾರರ ಮತನಿರ್ಣಯವನ್ನು ಪ್ರಭಾವಿಸುವುದರಲ್ಲಿ ಎರಡನೇ ಮಾತಿಲ್ಲ ಎನ್ನಬಹುದು.

ದೇಶದ ನನ್ನ ತಾಯಂದಿರು, ಸೋದರಿಯರು ಉರುವಲು ಒಲೆಯ ಹೊಗೆಯಲ್ಲಿ ಬಳಲುವುದನ್ನು ತಪ್ಪಿಸಲು ಈ ಯೋಜನೆ ಜಾರಿಗೆ ತರುತ್ತಿದ್ದೇವೆ ಎಂದು 2016ರಲ್ಲಿ ಯೋಜನೆ ಉದ್ಘಾಟಿಸುವಾಗ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದರು. ಬಿಪಿಎಲ್ ಪಡಿತರ ಚೀಟಿ ಹೊಂದಿರುವವರಿಗೆ ಉಚಿತವಾಗಿ ಎಲ್‌ಪಿಜಿ ಸಂಪರ್ಕ ಒದಗಿಸಲಾಗುತ್ತದೆ ಎಂದೂ ಘೋಷಿಸಿದ್ದರು. ಯೋಜನೆ ಅಡಿ ಹೆಸರು ನೋಂದಾಯಿಸಿಕೊಂಡ ವಾರದ ಒಳಗೆ ಮನೆಗೆ ಎಲ್‌ಪಿಜಿ ಒಲೆ ಮತ್ತು ಸಿಲಿಂಡರ್ ಬಂದದ್ದು ಫಲಾನುಭವಿ ಮಹಿಳೆಯರಲ್ಲಿ ಹೊಸ ಉತ್ಸಾಹವನ್ನು ತಂದಿತ್ತು. ಹೀಗೆ ಸರ್ಕಾರವು 2023ರ ಅಂತ್ಯದವರೆಗೆ ಒಟ್ಟು 10 ಕೋಟಿ ಉಜ್ವಲಾ ಎಲ್‌ಪಿಜಿ ಸಂಪರ್ಕಗಳನ್ನು ಒದಗಿಸಿದೆ.

10 ಕೋಟಿ ಸಂಪರ್ಕಗಳನ್ನು ಯೋಜನೆ ಅಡಿ ಒದಗಿಸಲಾಗಿತ್ತಾದರೂ, ಅನುಷ್ಠಾನದಲ್ಲಿ ಹಲವು ದೋಷಗಳು ಮತ್ತು ಅಕ್ರಮಗಳು ಇದ್ದವು. ಈ ದೋಷಗಳ ಬಗ್ಗೆ ಮಹಾಲೇಖಪಾಲರ (ಸಿಎಜಿ) ವರದಿಯಲ್ಲೂ ಕಟುವಾಗಿ ಉಲ್ಲೇಖಿಸಲಾಗಿತ್ತು. ಯೋಜನೆ ಆರಂಭಿಸಿದಾಗ ಎಲ್‌ಪಿಜಿ ಸಿಲಿಂಡರ್‌ಗೆ ಇದ್ದ ಬೆಲೆ ನಂತರದ ವರ್ಷಗಳಲ್ಲಿ ಭಾರಿ ಏರಿಕೆಯಾಗಿತ್ತು. ಹೀಗಾಗಿ ಯೋಜನೆಯ ಬಹುತೇಕ ಫಲಾನುಭವಿಗಳು ಎಲ್‌ಪಿಜಿ ಬಳಕೆಯಿಂದ ದೂರ ಸರಿದಿದ್ದಾರೆ ಎಂದು ಸಿಎಜಿ ಹೇಳಿತ್ತು. ಸಿಲಿಂಡರ್ ಬೆಲೆ ಏರಿಕೆಯು ಯಾವಾಗಲೂ ಚುನಾವಣೆಯ ವಿಷಯವೇ ಹೌದು. ಆದರೆ ಉಜ್ವಲಾ ಯೋಜನೆ ಸಿಲಿಂಡರ್ ಬೆಲೆ ಏರಿಕೆಯ ವ್ಯಾಪ್ತಿಯನ್ನು ಹಲವು ಪಟ್ಟು ವಿಸ್ತರಿಸಿತ್ತು. ಆರೇಳು ವರ್ಷಗಳಲ್ಲಿ ಸಿಲಿಂಡರ್ ಬೆಲೆ ₹480ರಿಂದ ₹1,100 ತಲುಪಿದ್ದು, ಉಜ್ವಲಾ ಫಲಾನುಭವಿಗಳ ಕೈಸುಡಲಾರಂಭಿಸಿತ್ತು. ಸಿಲಿಂಡರ್ ಖರೀದಿಸಲಾಗದ ಕುಟುಂಬಗಳು ಅನಿವಾರ್ಯವಾಗಿ ಸೌದೆ ಒಲೆಗೆ ಮರಳಿದ್ದು, ಉಜ್ವಲಾ ಫಲಾನುಭವಿ ಮಹಿಳೆಯರ ಅಸಮಾಧಾನಕ್ಕೂ ಕಾರಣವಾಗಿತ್ತು. ಅದು ಚುನಾವಣೆ ಮತ್ತು ಸರ್ಕಾರದ ನೀತಿಗಳನ್ನೂ ಪ್ರಭಾವಿಸಿದ್ದು ನಿಜ.

ಕಳೆದ ವರ್ಷದ ಅಂತ್ಯದ ವೇಳೆಗೆ ದೇಶದ ಐದು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ನಡೆದಿತ್ತು. ಆಗ ಗೃಹಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ₹1,000ದ ಆಸುಪಾಸಿನಲ್ಲಿತ್ತು.

> ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ದಿನದಿಂದಲೂ ಮಹಿಳಾ ಸಬಲೀಕರಣದ ಮಾತುಗಳನ್ನಾಡುತ್ತಿದೆ. ಅದು ನೀತಿ ಮಟ್ಟದಲ್ಲಿ ಇರಬಹುದು, ಯೋಜನೆಗಳ ರೂಪದಲ್ಲಿ ಇರಬಹುದು ಮಹಿಳಾ ಮತದಾರರನ್ನು ಸೆಳೆಯುವಂತೆ ಕೇಂದ್ರ ಸರ್ಕಾರ ಕೆಲಸ ಮಾಡುತ್ತಲೇ ಬಂದಿದೆ. ಆ ಯೋಜನೆಗಳು ಎಷ್ಟು ಪರಿಣಾಮಕಾರಿಯಾಗಿವೆ ಎಂಬುದು ಪ್ರಶ್ನಾರ್ಹವಾದರೂ ಚುನಾವಣೆಯ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ಅಲ್ಲಗೆಳೆಯಲಾಗದು



ಮಹಿಳೆಯರು ಬಹಿರಂಗವಾಗಿಯೇ ಈ ಬಗ್ಗೆ ತೀವ್ರ ಆಕ್ರೋಶ ಹೊರಹಾಕುತ್ತಿದ್ದರು. ಚುನಾವಣೆಗೆ ಈ ವಿಷಯವನ್ನು ಬಳಸಿಕೊಳ್ಳಲು ಮುಂದಾದ ವಿರೋಧ ಪಕ್ಷಗಳು ಚುನಾವಣೆಯಲ್ಲಿ ಗೆದ್ದರೆ ₹500, ₹400ರ ಸಬ್ಸಿಡಿ ದರದಲ್ಲಿ ಎಲ್‌ಪಿಜಿ ಸಿಲಿಂಡರ್ ಪೂರೈಸುವುದಾಗಿ ಘೋಷಿಸಿದವು. ಇದು ಮಹಿಳಾ ಮತದಾರರನ್ನು ಆಕರ್ಷಿಸಲು ಆರಂಭಿಸಿತ್ತು. ಅದರ ಪರಿಣಾಮವನ್ನು ಗ್ರಹಿಸಿದ ಕೇಂದ್ರದ ಬಿಜೆಪಿ ಸರ್ಕಾರವು, ₹100 ದರ ಕಡಿತ ಮಾಡಿತು ಮತ್ತು ಉಜ್ವಲಾ ಫಲಾನುಭವಿಗಳಿಗೆ ಪ್ರತಿ ಸಿಲಿಂಡರ್ ಮೇಲೆ ಒಟ್ಟು ₹300 ಮೊತ್ತದ ಸಹಾಯಧನ ಘೋಷಿಸಿಬಿಟ್ಟಿತು. ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸಗಡದಲ್ಲಿ ಸಿಲಿಂಡರ್ ಬೆಲೆ ಏರಿಕೆಯು ಚುನಾವಣಾ ಪ್ರಚಾರದಲ್ಲಿ ಮುನ್ನೆಲೆಯಲ್ಲಿ ಇತ್ತು. ಸಹಾಯಧನ ಘೋಷಿಸುವ ಮೂಲಕ ಕೇಂದ್ರ ಸರ್ಕಾರವು ಚುನಾವಣೆಯಲ್ಲಿ ಆ ವಿಷಯವೇ ಇಲ್ಲದಂತೆ ಮಾಡಿತು. ಆ ರಾಜ್ಯಗಳಲ್ಲಿ ಬಿಜೆಪಿ ಭಾರಿ ಬಹುಮತದೊಂದಿಗೆ ಗೆದ್ದಿತು ಎಂಬುದು ಗಮನಾರ್ಹ.

ಹೀಗೆ ತನಗೇ ಮುಳುವಾಗಬಹುದಾಗಿದ್ದ ತನ್ನದೇ ಯೋಜನೆಯನ್ನು ಬಿಜೆಪಿ ಮತ್ತೆ ತನ್ನ ಅನುಕೂಲಕ್ಕೆ ತಿರುಗಿಸಿಕೊಂಡಿತು. ಈಗಲೂ ಸಹಾಯಧನ ಮುಂದುವರಿಸುವ ಮೂಲಕ, ಲೋಕಸಭಾ ಚುನಾವಣೆಯಲ್ಲೂ ಮಹಿಳಾ ಮತದಾರರನ್ನು ಹಿಡಿದಿಟ್ಟುಕೊಳ್ಳುವ ತಂತ್ರವನ್ನು ಬಿಜೆಪಿ ಅನುಸರಿಸುತ್ತಿದೆ. ಸಹಾಯಧನ ದೊರೆಯುತ್ತಿರುವ ಕಾರಣ ಸಿಲಿಂಡರ್ ಬೆಲೆ ಏರಿಕೆಯ ಬಿಸಿ ಉಜ್ವಲಾ ಫಲಾನುಭವಿಗಳನ್ನು ಅಷ್ಟಾಗಿ ಬಾಧಿಸುತ್ತಿಲ್ಲ. ಸೌದೆ ಹೊಂಚುವುದು, ಮಳೆಗಾಲಕ್ಕೆ ಅವನ್ನು ಕೂಡಿಡುವುದು, ಒಲೆಯನ್ನು ಉರಿಸುವಾಗ ಹೊಗೆ ಉಸಿರಾಡುವುದು ತಪ್ಪುವುದರಿಂದ ಫಲಾನುಭವಿ ಮಹಿಳಾ ಮತದಾರರು ಮತದಾನದ ವೇಳೆ ಈ ಬಗ್ಗೆ ಯೋಚಿಸದೇ ಇರಲಾರರು. ಅದು ಬಿಜೆಪಿಗೆ ಎಷ್ಟರಮಟ್ಟಿಗೆ ಅನುಕೂಲಕ್ಕೆ ಬರುತ್ತದೆ ಎಂಬುದನ್ನು ಚುನಾವಣಾ ಫಲಿತಾಂಶವೇ ಸ್ಪಷ್ಟಪಡಿಸಬೇಕು.

‘ಎಸ್‌ಡಿಪಿಐ ಬೆಂಬಲ: ರಾಹುಲ್ ನಿಲುವು ಪ್ರಕಟಿಸಲಿ’

ವಯನಾಡ್ (ಪಿಟಿಐ): ನಿಷೇಧಿತ ಪಿಎಫ್‌ಐನ ರಾಜಕೀಯ ಸಂಘಟನೆಯಾದ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾವು (ಎಸ್‌ಡಿಪಿಐ) ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಬೆಂಬಲ ಘೋಷಿಸಿರುವ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನಿಲುವು ಪ್ರಕಟಿಸಬೇಕೆಂದು ಬಿಜೆಪಿ ಕೇರಳ ರಾಜ್ಯ ಘಟಕದ ಅಧ್ಯಕ್ಷ ಕೆ. ಸುರೇಂದ್ರನ್ ಮಂಗಳವಾರ ಒತ್ತಾಯಿಸಿದ್ದಾರೆ.

ಎಸ್‌ಡಿಪಿಐ ಸಂಘಟನೆಯು ದೇಶವನ್ನು ಒಡೆಯಲು ಯತ್ನಿಸುತ್ತಿದೆ ಎಂದು ಅವರು ಆರೋಪಿಸಿದರು. ಸುರೇಂದ್ರನ್ ಅವರು ವಯನಾಡ್ ಕ್ಷೇತ್ರದಲ್ಲಿ ರಾಹುಲ್ ಗಾಂಧಿ ವಿರುದ್ಧ ಸ್ಪರ್ಧಿಸುತ್ತಿದ್ದಾರೆ.

‘ಹಿಂದೂ ಮತ್ತು ಕ್ರೈಸ್ತರನ್ನು ಕೊಲ್ಲಲು, ದೇವಾಲಯ ಮತ್ತು ಚರ್ಚ್‌ಗಳನ್ನು ಕೆಡವಲು ಹಾಗೂ ಬಿಜೆಪಿ ನಾಯಕರ ಮೇಲೆ ದಾಳಿ ನಡೆಸಲು ಎಸ್‌ಡಿಪಿಐ ಮತ್ತು ಪಿಎಫ್‌ಐ (ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ) ಸಂಘಟನೆಗಳು ಬಹಿರಂಗವಾಗಿಯೇ ಕರೆ ನೀಡಿದ್ದವು’ ಎಂದೂ ಸುರೇಂದ್ರನ್ ಅವರು ಹೇಳಿದರು.

ಮತಬ್ಯಾಂಕ್ ರಾಜಕೀಯಕ್ಕಾಗಿ ಕಾಂಗ್ರೆಸ್ ಪಕ್ಷವು ದೇಶದ ಹಿತಾಸಕ್ತಿಯ ಜೊತೆಗೆ ರಾಜಿ ಮಾಡಿಕೊಂಡಿದೆಯೇ ಎಂದು ಪ್ರಶ್ನಿಸಿದರು.

ಲೋಕಸಭಾ ಚುನಾವಣೆಯಲ್ಲಿ ಕೇರಳದಲ್ಲಿ ಯುಡಿಎಫ್‌ಗೆ ಬೆಂಬಲ ನೀಡುವುದಾಗಿ ಎಸ್‌ಡಿಪಿಐ ಸೋಮವಾರ ಘೋಷಿಸಿತ್ತು.

ಪ್ರಚಾರ

ಚೆನ್ನೈ ಉತ್ತರ ಲೋಕಸಭಾ ಕ್ಷೇತ್ರದ ಡಿಎಂಕೆ ಅಭ್ಯರ್ಥಿ ಕಲಾನಿಧಿ ವೀರಸ್ವಾಮಿ ಪರವಾಗಿ ಮಹಿಳೆಯರು ಮಂಗಳವಾರ ಪ್ರಚಾರ ನಡೆಸಿದರು – ಪಿಟಿಐ ಚಿತ್ರ

ನಾಲ್ಕು ರಾಜ್ಯಗಳ 17 ಕ್ಷೇತ್ರಗಳಿಗೆ ಕಾಂಗ್ರೆಸ್ ಅಭ್ಯರ್ಥಿಗಳ ಘೋಷಣೆ

ಕಡಪದಿಂದ ಶರ್ಮಿಳಾ ಸ್ಪರ್ಧೆ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷವು ನಾಲ್ಕು ರಾಜ್ಯಗಳ 17 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದ್ದು, ಆಂಧ್ರ ಪ್ರದೇಶ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ವೈ.ಎಸ್.ಶರ್ಮಿಳಾ ಅವರನ್ನು ಕಡಪ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ನವದೆಹಲಿಯಲ್ಲಿ ಸೋಮವಾರ ನಡೆದ ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ಸಭೆಯಲ್ಲಿ ಒಡಿಶಾದ 8, ಆಂಧ್ರ ಪ್ರದೇಶದ 5, ಬಿಹಾರದ 3 ಕ್ಷೇತ್ರಗಳು ಹಾಗೂ ಪಶ್ಚಿಮ ಬಂಗಾಳದ ಒಂದು ಕ್ಷೇತ್ರಕ್ಕೆ ಅಭ್ಯರ್ಥಿಯನ್ನು ಅಂತಿಮಗೊಳಿಸಲಾಯಿತು.

ಶರ್ಮಿಳಾ

ಶರ್ಮಿಳಾ ಅವರು ಸೋದರ ಸಂಬಂಧಿಯೂ ಆಗಿರುವ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಹಾಲಿ ಸಂಸದ ವೈ.ಎಸ್.ಅವಿನಾಶ್ ರೆಡ್ಡಿ ಅವರನ್ನು ಎದುರಿಸಲಿದ್ದಾರೆ.

ಕೇಂದ್ರದ ಮಾಜಿ ಸಚಿವ ಎಂ.ಎಂ.ಪಲ್ಲಂ ರಾಜು (ಕಾಕಿನಾಡ ಕ್ಷೇತ್ರ), ಗಿಡುಗು ರುದ್ರ ರಾಜು (ರಾಜಮಂಡ್ರಿ) ಮತ್ತು ಪಿ.ಜಿ.ರಾಮ್‌ಪುಲ್ಲಯ್ಯ ಯಾದವ್ (ಕರ್ನೂಲ್) ಅವರಿಗೆ ಪಕ್ಷವು ಟಿಕೆಟ್ ನೀಡಿದೆ. ಆಂಧ್ರ ಪ್ರದೇಶ ವಿಧಾನಸಭಾ ಚುನಾವಣೆಗೆ 114 ಅಭ್ಯರ್ಥಿಗಳ ಪಟ್ಟಿಯನ್ನೂ ಕಾಂಗ್ರೆಸ್ ಪ್ರಕಟಿಸಿದೆ.

ಬಿಹಾರದ ಕಿಶನ್‌ಗಂಜ್ ಮತ್ತು ಕಟಿಹಾರ್ ಕ್ಷೇತ್ರಗಳಿಗೆ ಕ್ರಮವಾಗಿ ಮೊಹಮ್ಮದ್ ಜಾವೇದ್ ಹಾಗೂ ತಾರಿಖ್ ಅನ್ವರ್ ಅವರನ್ನು ಅಭ್ಯರ್ಥಿಗಳನ್ನಾಗಿ ಘೋಷಿಸಿದೆ. ಶಾಸಕ ಅಜೀತ್ ಶರ್ಮಾ ಅವರನ್ನು ಭಾಗಲ್ಪುರ ಕ್ಷೇತ್ರದಿಂದ ಅಖಾಡಕ್ಕಿಳಿಸಿದೆ.

ಇದರೊಂದಿಗೆ ಪಕ್ಷವು ಒಟ್ಟು 228 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದಂತಾಗಿದೆ. ಉತ್ತರ ಪ್ರದೇಶದ ಅಮೇಠಿ ಮತ್ತು ರಾಯಬರೇಲಿ ಕ್ಷೇತ್ರಗಳಲ್ಲಿ ಪಕ್ಷವು ಯಾರನ್ನು ಕಣಕ್ಕಿಳಿಸಲಿದೆ ಎಂಬ ಕುತೂಹಲ ಮುಂದುವರಿದಿದೆ.

ಒಡಿಶಾ: ಬಿಜೆಪಿಯ 112 ಅಭ್ಯರ್ಥಿಗಳ ಘೋಷಣೆ

ಭುವನೇಶ್ವರ (ಪಿಟಿಐ): ಒಡಿಶಾದ ವಿಧಾನಸಭಾ ಚುನಾವಣೆಗಾಗಿ ಬಿಜೆಪಿಯು ಮಂಗಳವಾರ 112 ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆಗೊಳಿಸಿದೆ. ಹಾಲಿ 22 ಶಾಸಕರ ಪೈಕಿ ಪಕ್ಷವು 21 ಮಂದಿಗೆ ಟಿಕೆಟ್ ನೀಡಿದೆ.

ಪಟ್ಟಿಯಲ್ಲಿ ಎಂಟು ಮಹಿಳೆಯರಿಗೆ ಸ್ಥಾನ ನೀಡಲಾಗಿದೆ. ಒಡಿಶಾ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಮನಮೋಹನ್ ಸಮಾಲ್ ಅವರು ಚಾಂದ್‌ಬಾಲಿ ಕ್ಷೇತ್ರದಿಂದ ಸ್ಪರ್ಧಿಸಿದರೆ, ಹಿಂಜಿಲಿ ಕ್ಷೇತ್ರದಿಂದ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ವಿರುದ್ಧ ಶಿಶಿರ್ ಮಿಶ್ರಾ ಅವರು ಕಣಕ್ಕಿಳಿಯಲಿದ್ದಾರೆ. ಒಡಿಶಾ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಜಯನಾರಾಯಣ ಮಿಶ್ರಾ ಸಂಬಲ್‌ಪುರದಿಂದ ಸ್ಪರ್ಧಿಸುವರು.

ಬಿಜೆಡಿಯಿಂದ ಬಿಜೆಪಿಗೆ ಬಂದಿರುವ ಐವರಿಗೆ ಟಿಕೆಟ್ ನೀಡಲಾಗಿದೆ. ‘ಬಿಜೆಡಿ 72 ಕ್ಷೇತ್ರಗಳ ಅಭ್ಯರ್ಥಿಗಳನ್ನು ಘೋಷಿಸಿದ್ದರೆ, ಬಿಜೆಪಿ 112 ಉಮೇದುವಾರರ ಪಟ್ಟಿಯನ್ನು ಬಿಡುಗಡೆಗೊಳಿಸಿದೆ. ಎಲ್ಲ ಕಡೆಗಳಲ್ಲೂ ಪ್ರಬಲ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿದ್ದೇವೆ’ ಎಂದು ಬಿಜೆಪಿ ಹೇಳಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಾಜೀನಾಮೆ

ಹರಿದ್ವಾರ (ಪಿಟಿಐ): ಲೋಕಸಭಾ ಚುನಾವಣೆಯ ವೇಳೆ ಉತ್ತರಾಖಂಡದಲ್ಲಿ ಕಾಂಗ್ರೆಸ್‌ಗೆ ಮತ್ತೊಂದು ಹಿನ್ನಡೆ ಉಂಟಾಗಿದೆ. ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ) ಪ್ರಧಾನ ಕಾರ್ಯದರ್ಶಿ ಮತ್ತು ಸೇವಾ ದಳದ ಮುಖ್ಯಸ್ಥ ರಾಜೇಶ್ ರಸ್ತೋಗಿ ಪಕ್ಷದ ಎಲ್ಲ ಹುದ್ದೆಗಳಿಗೂ ಮಂಗಳವಾರ ರಾಜೀನಾಮೆ ನೀಡಿದ್ದು, ‘ಕೌಟುಂಬಿಕ ರಾಜಕಾರಣವು ಪಕ್ಷವನ್ನು ಮುಗಿಸುತ್ತಿದೆ’ ಎಂದು ತಮ್ಮ ರಾಜೀನಾಮೆ ಪತ್ರದಲ್ಲಿ ತಿಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಹರೀಶ್ ರಾವತ್ ಅವರು ತಮ್ಮ ಮಗನಿಗೆ ಹರಿದ್ವಾರ ಲೋಕಸಭಾ ಕ್ಷೇತ್ರದ ಟಿಕೆಟ್ ‘ತಂದುಕೊಟ್ಟಿದ್ದಾರೆ’ ಎಂದು ರಸ್ತೋಗಿ ಟೀಕಿಸಿದರು. ‘ಉತ್ತರಾಖಂಡ ಕಾಂಗ್ರೆಸ್ ಮುಖಂಡರು ಗುಂಪುಗಾರಿಕೆ, ಟಿಕೆಟ್ ಮಾರಾಟದಲ್ಲಿ ನಿರತರಾಗಿದ್ದಾರೆ. ಇವನ್ನು ಹತೋಟಿಗೆ ತರದಿದ್ದರೆ ಪಕ್ಷವು ವಿರೋಧ ಪಕ್ಷವಾಗಿಯೂ ಉಳಿಯುವುದಿಲ್ಲ’ ಎಂದಿದ್ದಾರೆ.

ವಿಬಿಎ ಜತೆ ಮಾತುಕತೆಗೆ ಸಿದ್ಧ: ಸಂಜಯ್ ರಾವುತ್

ಮುಂಬೈ (ಪಿಟಿಐ): ಮಹಾವಿಕಾಸ ಅಘಾಡಿಯು (ಎಂವಿಎ) ಪ್ರಕಾಶ್ ಅಂಬೇಡ್ಕರ್ ನೇತೃತ್ವದ ವಂಚಿತ್ ಬಹುಜನ್ ಅಘಾಡಿ (ವಿಬಿಎ) ಜತೆಗೆ ಸ್ಥಾನ ಹಂಚಿಕೆಗೆ ಸಂಬಂಧಿಸಿದಂತೆ ಮಾತುಕತೆ ನಡೆಸಲು ಇನ್ನೂ ಆಸಕ್ತಿ ಹೊಂದಿದೆ ಎಂದು ಶಿವಸೇನಾ (ಯುಬಿಟಿ) ಮುಖಂಡ ಸಂಜಯ್ ರಾವುತ್ ಮಂಗಳವಾರ ತಿಳಿಸಿದ್ದಾರೆ.



ಲೋಕಸಭಾ ಚುನಾವಣೆಗಾಗಿ ಕಾಂಗ್ರೆಸ್, ಎನ್‌ಸಿಪಿ (ಶರದ್ ಪವಾರ್ ಬಣ) ಮತ್ತು ಶಿವಸೇನಾ (ಯುಬಿಟಿ) ಪಕ್ಷಗಳನ್ನೊಳಗೊಂಡ ಎಂವಿಎ ಜತೆಗೆ ಪ್ರಕಾಶ್ ಅಂಬೇಡ್ಕರ್ ಮೈತ್ರಿ ಮಾತುಕತೆ ನಡೆಸುತ್ತಿದ್ದರು. ಅದರ ನಡುವೆಯೇ ಪ್ರಕಾಶ್ ಇತ್ತೀಚೆಗೆ ಮಹಾರಾಷ್ಟ್ರದ 48 ಸ್ಥಾನಗಳ ಪೈಕಿ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದ್ದರು.

ಅನಂತನಾಗ್–ರಜೌರಿ ಕ್ಷೇತ್ರದಿಂದ ಆಜಾದ್ ಸ್ಪರ್ಧೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಗುಲಾಂ ನಬಿ ಆಜಾದ್ ಅವರು ಡೆಮಾಕ್ರಟಿಕ್ ಪ್ರೋಗ್ರೆಸಿವ್ ಆಜಾದ್ ಪಕ್ಷದ (ಡಿಪಿಎಪಿ) ಅಭ್ಯರ್ಥಿಯಾಗಿ ಅನಂತನಾಗ್–ರಜೌರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

2022ರಲ್ಲಿ ಕಾಂಗ್ರೆಸ್ ತೊರೆದಿದ್ದ ಆಜಾದ್ ಅವರು, ಬಳಿಕ ಡಿಪಿಎಪಿ ಪಕ್ಷವನ್ನು ಸ್ಥಾಪಿಸಿದ್ದರು.

ಉತ್ತರಾಖಂಡದ ಚುನಾವಣಾ ರ್‍ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ವಾಕ್‌ಪ್ರಹಾರ

ಹತಾಶೆಯಿಂದ ಬೆಂಕಿ ಹಚ್ಚುವ ಮಾತು

ರುದ್ರಪುರ/ಜೈಪುರ (ಪಿಟಿಐ): ಬಿಜೆಪಿ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದರೆ ದೇಶದಲ್ಲಿ ‘ದಳ್ಳುರಿ’ ಉಂಟಾಗುತ್ತದೆ ಎಂದಿರುವ ರಾಹುಲ್ ಗಾಂಧಿ ಹೇಳಿಕೆ ಉಲ್ಲೇಖಿಸಿ ಅವರ ವಿರುದ್ಧ ವಾಕ್ ಪ್ರಹಾರ ನಡೆಸಿದ ಪ್ರಧಾನಿ ಮೋದಿ, ಕಾಂಗ್ರೆಸ್ ಪಕ್ಷವನ್ನು ಎಲ್ಲೆಡೆಯಿಂದಲೂ ಅಳಿಸಿ ಹಾಕಿ ಎಂದು ಮಂಗಳವಾರ ಮತದಾರರಿಗೆ ಕರೆ ನೀಡಿದರು.

ಉತ್ತರಾಖಂಡದ ರುದ್ರಪುರದಲ್ಲಿ ತಮ್ಮ ಮೊದಲ ಚುನಾವಣಾ ರ್‍ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

‘ಕಾಂಗ್ರೆಸ್ ಮತ್ತು ‘ಇಂಡಿಯಾ’ ಕೂಟದ ಉದ್ದೇಶ ಸ್ಪಷ್ಟವಿದೆ. ಕಾಂಗ್ರೆಸ್‌ನ ರಾಜಕುಟುಂಬದ ‘ಶೆಹಜಾದ’ (ರಾಜಕುಮಾರ), ಮೋದಿ ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಬೆಂಕಿ ಬೀಳುತ್ತದೆ ಎಂದು ಬೆದರಿಕೆಯೊಡ್ಡಿದ್ದಾರೆ. ಅಧಿಕಾರದಿಂದ ದೂರ ಇರುವ ಅವರು ಹತಾಶೆಯಿಂದ ದೇಶಕ್ಕೆ ಬೆಂಕಿ ಹಚ್ಚುವ ಮಾತು ಆಡುತ್ತಿದ್ದಾರೆ. ಹಾಗೆ ಮಾಡಲು ನೀವು ಬಿಡುವಿರೇ? ಪ್ರಜಾಪ್ರಭುತ್ವದಲ್ಲಿ ಇಂಥ ಭಾಷೆ ಬಳಸುತ್ತಾರೆಯೇ, ನೀವು ಅವರನ್ನು ಶಿಕ್ಷಿಸುವುದಿಲ್ಲವೇ ಎಂದು ಮೋದಿ ಪ್ರಶ್ನಿಸಿದರು.

‘ಅವರು ಬೆಂಕಿ ಹಚ್ಚುವ ಮಾತನ್ನಾಡುತ್ತಿದ್ದರೆ, ಮೋದಿ ಕಳೆದ 10 ವರ್ಷಗಳಿಂದ ಅಂಥ ಬೆಂಕಿ ನಂದಿಸುತ್ತಿದ್ದಾರೆ’ ಎಂದು ಹೇಳಿದರು.

‘ಕಾಂಗ್ರೆಸ್ ತುರ್ತುಪರಿಸ್ಥಿತಿಯ ಮನಸ್ಥಿತಿಯನ್ನು ಹೊಂದಿದ್ದು, ಅದಕ್ಕೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಉಳಿದಿಲ್ಲ. ಆದ್ದರಿಂದ ಅದು ಜನಾದೇಶದ ವಿರುದ್ಧ ಜನರನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಿದೆ’ ಎಂದು ದೂರಿದರು.

‘ನನ್ನನ್ನು ಭ್ರಷ್ಟರು ಬೆದರಿಸುತ್ತಿದ್ದಾರೆ ಮತ್ತು ನಿಂದಿಸುತ್ತಿದ್ದಾರೆ. ಆದರೆ, ನಾನು ಮತ್ತೆ ಅಧಿಕಾರಕ್ಕೆ ಬಂದ ಬಳಿಕ ಭ್ರಷ್ಟಾಚಾರದ ವಿರುದ್ಧದ ಕಾರ್ಯಾಚರಣೆಯನ್ನು ಹೆಚ್ಚಿಸುತ್ತೇನೆ’ ಎಂದು ತಿಳಿಸಿದರು.

‘ಕಾಂಗ್ರೆಸ್ ಸರ್ಕಾರಗಳ ದೌರ್ಬಲ್ಯವು ದೇಶದ ವಿಭಜನೆಗೆ ಮತ್ತು ಕರ್ತಾರಪುರ ಸಾಹಿಬ್ ಗುರುದ್ವಾರ ಭಾರತೀಯ ಸಿಖ್ಖರ ಕೈತಪ್ಪಲು ಕಾರಣವಾಯಿತು’ ಎಂದು ಆರೋಪಿಸಿದರು.

‘ಮೂರನೇ ಅವಧಿಯಲ್ಲಿ ನಿಮ್ಮ ಮಗ ಮತ್ತೊಂದು ದೊಡ್ಡ ಕೆಲಸ ಮಾಡಲಿದ್ದಾನೆ. ನೀವು ದಿನದ 24 ಗಂಟೆ ವಿದ್ಯುತ್, ಶೂನ್ಯ ವಿದ್ಯುತ್ ಶುಲ್ಕ ಪಡೆಯುವುದರ ಜತೆಗೆ ವಿದ್ಯುತ್‌ನಿಂದ ಹಣವನ್ನೂ ಗಳಿಸಬಹುದು. ಮೋದಿಯು ‘ಪ್ರಧಾನ ಮಂತ್ರಿ ಸೂರ್ಯ ಘರ್ ಮುಫ್ತ್ ಬಿಜಲಿ ಯೋಜನಾ’ ಆರಂಭಿಸಿದ್ದಾರೆ’ ಎಂದು ತಿಳಿಸಿದರು. ಮೋದಿ ಗ್ಯಾರಂಟಿ ಎಂದರೆ ಗ್ಯಾರಂಟಿಯ ಈಡೇರಿಕೆ ಎಂದು ಅವರು ಹೇಳಿದರು.



> **ಭ್ರಷ್ಟಾಚಾರದ ವಿರುದ್ಧದ ಕಾರ್ಯಾಚರಣೆಯನ್ನು ತಡೆಯಲು ಎಲ್ಲ ಭ್ರಷ್ಟರು ರ್‍ಯಾಲಿ ಮಾಡುತ್ತಿರುವ ಮೊದಲ ಲೋಕಸಭಾ ಚುನಾವಣಾ ಇದಾಗಿದೆ**
> **ನರೇಂದ್ರ ಮೋದಿ,** ಪ್ರಧಾನಿ

ರಾಹುಲ್ ಹೇಳಿದ್ದೇನು?

ಕೇಜ್ರಿವಾಲ್ ಬಂಧನ ವಿರೋಧಿಸಿ ದೆಹಲಿಯ ರಾಮಲೀಲಾ ಮೈದಾನದಲ್ಲಿ ‘ಇಂಡಿಯಾ’ ಕೂಟ ಭಾನುವಾರ ಆಯೋಜಿಸಿದ್ದ ರ್‍ಯಾಲಿಯಲ್ಲಿ ರಾಹುಲ್ ಗಾಂಧಿ ‘ಬಿಜೆಪಿಯು ‘ಮ್ಯಾಚ್ ಫಿಕ್ಸಿಂಗ್’ ಮೂಲಕ ಚುನಾವಣೆಯನ್ನು ಗೆದ್ದು, ಸಂವಿಧಾನವನ್ನು ಬದಲಿಸಿದರೆ, ದೇಶಕ್ಕೆ ಬೆಂಕಿ ಬೀಳುತ್ತದೆ, ದೇಶ ಉಳಿಯುವುದಿಲ್ಲ’ ಎಂದು ಹೇಳಿದ್ದರು.

ಬಿಜೆಪಿ ವಿರುದ್ಧ ಕಾಂಗ್ರೆಸ್ ದೂರು

ನವದೆಹಲಿ (ಪಿಟಿಐ): ಬಿಜೆಪಿಯ ಜಾಹೀರಾತು ಪ್ರಚಾರದ ವಿರುದ್ಧ ಚುನಾವಣಾ ಆಯೋಗಕ್ಕೆ ಮಂಗಳವಾರ ದೂರು ನೀಡಿರುವ ಕಾಂಗ್ರೆಸ್, ತಿದ್ದಿದ ಮತ್ತು ವಿರೂಪಗೊಳಿಸಿದ ವಿಡಿಯೊಗಳ ಮೂಲಕ ಬಿಜೆಪಿಯು ವಿರೋಧ ಪಕ್ಷಕ್ಕೆ ಹಾನಿ ಮಾಡುತ್ತಿದೆ ಎಂದು ಆರೋಪಿಸಿದೆ.

ವಿಡಿಯೊ ತಯಾರಕರ ವಿರುದ್ಧ ತಕ್ಷಣವೇ ಕ್ರಮ ಜರುಗಿಸುವಂತೆ ಕೋರಿರುವ ಪಕ್ಷವು, ಅದನ್ನು ವಾಪಸ್ ಪಡೆಯಲು ಸೂಚಿಸುವಂತೆ ಒತ್ತಾಯಿಸಿದೆ. ಕಾಂಗ್ರೆಸ್ ಪ್ರಚಾರವನ್ನು ಕೋಟ್ಯಧಿಪತಿ ಹೂಡಿಕೆದಾರ ಜಾರ್ಜ್ ಸೊರೊಸ್ ಜತೆ ಬೆಸೆಯುವ ಮೂಲಕ ಬಿಜೆಪಿ ‘ದುರುದ್ದೇಶಪೂರಿತ ಪ್ರಯತ್ನ’ಗಳಲ್ಲಿ ತೊಡಗಿದೆ ಮತ್ತೊಂದು ದೂರಿನಲ್ಲಿ ತಿಳಿಸಿದೆ.

ಕಾಂಗ್ರೆಸ್ ನಿಯೋಗವು ಮಂಗಳವಾರ ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿತು.

ಚುಟುಕು

ರಜಪೂತರ ಮನವೊಲಿಕೆಗೆ ಬಿಜೆಪಿ ಯತ್ನ

ಅಹಮದಾಬಾದ್ (ಪಿಟಿಐ): ರಜಪೂತ ದೊರೆಗಳ ಬಗ್ಗೆ ‘ಆಕ್ಷೇಪಾರ್ಹ’ ಎನ್ನಲಾದ ಮಾತುಗಳನ್ನು ಆಡಿದ್ದಾರೆ ಎಂದು ಕೇಂದ್ರ ಸಚಿವ ಹಾಗೂ ರಾಜ್‌ಕೋಟ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಪರಶೋತ್ತಮ್ ರೂಪಾಲಾ ವಿರುದ್ಧ ಸಿಡಿದೆದ್ದಿರುವ ಕ್ಷತ್ರಿಯ ಸಮುದಾಯವನ್ನು ಸಮಾಧಾನಿಸಲು ಬಿಜೆಪಿ ಮುಂದಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ರೂಪಾಲಾ ಅವರು ಈಗಾಗಲೇ ಮೂರು ಬಾರಿ ಕ್ಷಮೆಯಾಚಿಸಿರುವುದರಿಂದ ಅವರನ್ನು ಮನ್ನಿಸಿ ಎಂದು ಗುಜರಾತ್ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಿ.ಆರ್.ಪಾಟೀಲ್ ಮಂಗಳವಾರ ಮನವಿ ಮಾಡಿದ್ದಾರೆ. ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಸಮ್ಮುಖದಲ್ಲಿ ರಜಪೂತ ಸಮುದಾಯದ ಮುಖಂಡರೊಂದಿಗೆ ಪಾಟೀಲ್ ಸಭೆ ನಡೆಸಿದರು. ಪ್ರಕರಣಕ್ಕೆ ಅಂತ್ಯ ಹಾಡುವ ಸಲುವಾಗಿ ಒಂದು ಪರಿಹಾರ ಕಂಡುಕೊಳ್ಳಲು ಸಮುದಾಯದ ಸಮನ್ವಯ ಸಮಿತಿ ಸಭೆಯನ್ನು ಬುಧವಾರ ಮಧ್ಯಾಹ್ನ ಕರೆಯಲಾಗಿದೆ ಎಂದು ಪಟೇಲ್ ತಿಳಿಸಿದರು.

‘ರಜಪೂತ ದೊರೆಗಳು ಬ್ರಿಟಿಷರಿಗೆ ಸಹಕರಿಸಿದ್ದರು ಮತ್ತು ಅವರಿಗೆ ತಮ್ಮ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಟ್ಟಿದ್ದರು’ ಎಂದು ರೂಪಾಲಾ ಹೇಳಿದ್ದರು.

ಜಿಗಿ–ನೆಗೆದಾಟ

ಮುಜಫ್ಫರ್‌ಪುರ ಬಿಜೆಪಿ ಸಂಸದ ಕಾಂಗ್ರೆಸ್‌ಗೆ ಸೇರ್ಪಡೆ

ನವದೆಹಲಿ(ಪಿಟಿಐ): ಬಿಹಾರದ ಮುಜಫ್ಫರ್‌ಪುರದ ಬಿಜೆಪಿ ಸಂಸದ ಅಜಯ್ ಕುಮಾರ್ ನಿಶಾದ್ ಅವರು ಮಂಗಳವಾರ ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು. ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಅಜಯ್ ಅವರಿಗೆ ಬಿಜೆಪಿ ಟಿಕೆಟ್ ನಿರಾಕರಿಸಿತ್ತು.

ಎಐಸಿಸಿ ಮುಖ್ಯ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಕಾಂಗ್ರೆಸ್ ಬಿಹಾರ ಘಟಕದ ಅಧ್ಯಕ್ಷ ಅಖಿಲೇಶ್ ಪ್ರಸಾದ್ ಸಿಂಗ್, ಎಐಸಿಸಿ ರಾಜ್ಯ ಉಸ್ತುವಾರಿ ಮೋಹನ್ ಪ್ರಕಾಶ್, ಎಐಸಿಸಿ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರ ಸಮ್ಮುಖದಲ್ಲಿ ಅಜಯ್ ಅವರು ಪಕ್ಷಕ್ಕೆ ಸೇರಿದರು. ಮುಜಫ್ಫರ್‌ಪುರ ಕ್ಷೇತ್ರಕ್ಕೆ ಬಿಜೆಪಿಯು ರಾಜ್ ಭೂಷಣ್ ನಿಶಾದ್ ಅವರನ್ನು ಅಭ್ಯರ್ಥಿಯನ್ನಾಗಿಸಿದೆ. ಈ ಮೂಲಕ ಪಕ್ಷ ತೊರೆದ ಬಿಜೆಪಿಯ ಮೂರನೇ ಸಂಸದ ಇವರಾಗಿದ್ದಾರೆ.

ಎಂಥಾ ಮಾತು!

ರಷ್ಯಾ ಮತ್ತು ಚೀನಾದಲ್ಲಿರುವ ಆಡಳಿತದ ಮಾದರಿಯನ್ನು ದೇಶದಲ್ಲಿಯೂ ಅನುಸರಿಸಲು ಬಿಜೆಪಿ ಬಯಸುತ್ತಿದೆ. ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಮತ್ತು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರಂತೆ ಇಲ್ಲಿಯೂ ಯಾವುದೇ ವಿರೋಧಪಕ್ಷಗಳಿಲ್ಲದೆ ಆಡಳಿತ ನಡೆಸಲು ಬಿಜೆಪಿ ನಾಯಕರು ಯತ್ನಿಸುತ್ತಿದ್ದಾರೆ. ಸಂವಿಧಾನದ ರಕ್ಷಣೆಗಾಗಿಯೇ ‘ಇಂಡಿಯಾ’ ಒಕ್ಕೂಟವು ರೂಪುಗೊಂಡಿದ್ದು, ಸಂವಿಧಾನವನ್ನು ಸಮಾಧಿ ಮಾಡಲು ನಾವು ಬಿಡುವುದಿಲ್ಲ. ಲಡಾಖ್ ಮತ್ತು ಅರುಣಾಚಲ ಪ್ರದೇಶದಲ್ಲಿ ಚೀನಾವು ನಿರಂತರ ಅತಿಕ್ರಮಣ ಮಾಡುತ್ತಿದ್ದರೂ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಏಕೆ ಮೌನವಾಗಿದೆ?

ಫಾರೂಕ್ ಅಬ್ದುಲ್ಲಾ, ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ

ಜಾತಿ, ಕುಟುಂಬ ಮತ್ತು ಓಲೈಕೆ ರಾಜಕಾರಣ ಸಂಸ್ಕೃತಿಯಲ್ಲಿ ಬದಲಾವಣೆ ತಂದಿರುವ ಪ್ರಧಾನಿ ನರೇಂದ್ರ ಮೋದಿ ಅವರು ಅಭಿವೃದ್ಧಿಯ ರಾಜಕೀಯವನ್ನು ಮುನ್ನೆಲೆಗೆ ತಂದಿದ್ದಾರೆ. ಜನಸಾಮಾನ್ಯರ ಮನೋಭಾವ ಕೂಡ ಬದಲಾಗಿದೆ. ಅವರು ಈ ಬದಲಾವಣೆಯನ್ನು ಸ್ವೀಕರಿಸಿದ್ದಾರೆ. ಮೋದಿ ಅವರು ಭ್ರಷ್ಟಾಚಾರವನ್ನು ಬುಡಸಮೇತ ಕಿತ್ತೆಸೆಯಲು ಪ್ರಯತ್ನಿಸಿದ್ದಾರೆ. ‘ಇಂಡಿಯಾ’ ಒಕ್ಕೂಟವು ಭ್ರಷ್ಟ ಮತ್ತು ಕುಟುಂಬ ರಾಜಕಾಣದ ಹಿನ್ನೆಲೆಯಿಂದ ಬಂದಿರುವ ಮುಖಂಡರ ಗುಂಪಾಗಿದೆ

ಜೆ.ಪಿ. ನಡ್ಡಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ

ಕ್ಷೇತ್ರ ಮಹಾತ್ಮೆ

ಕಳೆದೆರಡು ಲೋಕಸಭಾ ಚುನಾವಣೆಗಳಲ್ಲಿ ಮಧ್ಯಪ್ರದೇಶದ ರಾಜಗಢ ಕ್ಷೇತ್ರದಲ್ಲಿ ಗೆಲುವಿನ ಸಿಹಿ ಉಂಡಿದ್ದ ಬಿಜೆಪಿಯ ರೋಡ್ಮಲ್ ನಾಗರ್ ಅವರು ಈ ಬಾರಿಯೂ ಸ್ಪರ್ಧೆ ಗಿಳಿದಿದ್ದಾರೆ. ಇವರ ಗೆಲುವಿನ ಓಟಕ್ಕೆ ಕಡಿವಾಣ ಹಾಕಲು ಕಾಂಗ್ರೆಸ್ ಪಕ್ಷವು, ಹಿರಿಯ ಮುಖಂಡ ದಿಗ್ವಿಜಯ ಸಿಂಗ್ ಅವರನ್ನು ಅಖಾಡಕ್ಕಿಳಿಸಿದೆ. ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ದಿಗ್ವಿಜಯ್ ಸಿಂಗ್ ಸ್ಪರ್ಧೆಗಿಳಿದಿರುವುದರಿಂದ ಕಣವು ಇನ್ನಷ್ಟು ರಂಗೇರಿದೆ. ಸದ್ಯ ರಾಜ್ಯಸಭಾ ಸದಸ್ಯರಾಗಿರುವ ಅವರು ಈ ಬಾರಿ ಅದೃಷ್ಟ ಕೈಹಿಡಿಯಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ. 2019ರ ಲೋಕಸಭಾ ಚುನಾವಣೆಯಲ್ಲಿ ಭೋಪಾಲ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ದಿಗ್ವಿಜಯ್ ಅವರನ್ನು ಬಿಜೆಪಿಯ ಪ್ರಗ್ಯಾಸಿಂಗ್ ಠಾಕೂರ್ ಅವರು ಸೋಲಿಸಿದ್ದರು. ಕಳೆದ ಚುನಾವಣೆಯಲ್ಲಿ ಬಿಜೆಪಿಯ ರೋಡ್ಮಲ್ ಅವರು 8,23,824 ಮತಗಳನ್ನು ಪಡೆದು ಭರ್ಜರಿ ಜಯ ತಮ್ಮದಾಗಿಸಿಕೊಂಡಿದ್ದರು. ಆರ್‌ಎಸ್‌ಎಸ್ ಪ್ರಭಾವವಿರುವ ಈ ಕ್ಷೇತ್ರದಲ್ಲಿ ರೋಡ್ಮಲ್ ಅವರು ಮೂರನೇ ಬಾರಿಯೂ ಜಯಗಳಿಸಲಿದ್ದಾರೆ ಎಂಬ ವಿಶ್ವಾಸ ಕಮಲ ಪಕ್ಷದ್ದು. 2009ರಲ್ಲಿ ಕಾಂಗ್ರೆಸ್ ಅಭ್ಯರ್ಥಿ ನಾರಾಯಣ ಸಿಂಗ್ ಅಮ್ಲಾಬೆ ಅವರು ಇಲ್ಲಿಂದ ಸಂಸತ್‌ಗೆ ಆಯ್ಕೆಯಾಗಿದ್ದರು. ನಂತರದ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಾಯಿತು. ಈ ಬಾರಿಯಾದರೂ ಕ್ಷೇತ್ರವನ್ನು ಮರಳಿ ತೆಕ್ಕೆಗೆ ಪಡೆಯಬೇಕೆಂದು ಕಾಂಗ್ರೆಸ್ ಕೂಡ ಶ್ರಮಿಸುತ್ತಿದೆ. ದಿಗ್ವಿಜಯ್ ಅವರು ಆರ್‌ಎಸ್‌ಎಸ್ ಮುಖಂಡರೊಬ್ಬರನ್ನು ಟೀಕಿಸಿ, ಫೇಸ್‌ಬುಕ್ ಪೋಸ್ಟ್ ಹಾಕಿದ್ದು ಕಳೆದ ವರ್ಷ ವಿವಾದಕ್ಕೆ ಕಾರಣವಾಗಿತ್ತು.

ಮುಖಾಮುಖಿ

ರಾಜನಂದಗಾಂವ್ (ಛತ್ತೀಸಗಢ)

ಭೂಪೇಶ್ ಬಘೇಲ್
(ಕಾಂಗ್ರೆಸ್)

ಛತ್ತೀಸಗಢದಲ್ಲಿ ಬಿಜೆಪಿಯ ಗೆಲುವಿನ ಕ್ಷೇತ್ರಗಳಲ್ಲೊಂದಾದ ರಾಜನಂದಗಾಂವ್‌ನಿಂದ ಕಾಂಗ್ರೆಸ್, ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರನ್ನು ಕಣಕ್ಕಿಳಿಸಿದೆ. 1999ರಿಂದಲೂ ಬಿಜೆಪಿಯ ಕೈವಶವಿರುವ ಈ ಕ್ಷೇತ್ರದಿಂದ ಪ್ರಬಲ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಮೂಲಕ ಈ ಬಾರಿ ಗೆಲುವು ಸಾಧಿಸಬಹುದು ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರ. ಅವಿಭಜಿತ ಮಧ್ಯಪ್ರದೇಶದಲ್ಲಿ ದಿಗ್ವಿಜಯ ಸಿಂಗ್ ಸರ್ಕಾರ ಅಧಿಕಾರದಲ್ಲಿದ್ದಾಗ ಬಘೇಲ್ ಅವರು ಸಾರಿಗೆ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು. 2023ರಲ್ಲಿ ಪಟಾನ್ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಆ ಚುನಾವಣೆಯಲ್ಲಿ ರಾಜನಂದಗಾಂವ್ ಲೋಕಸಭಾ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳ ಪೈಕಿ ಐದರಲ್ಲಿ ಕಾಂಗ್ರೆಸ್ ಗೆದ್ದಿತ್ತು. ಮಹದೇವ್ ಆನ್‌ಲೈನ್ ಬೆಟ್ಟಿಂಗ್ ಆ್ಯಪ್ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಛತ್ತೀಸಗಢದ ಆರ್ಥಿಕ ಅಪರಾಧಗಳ ವಿಭಾಗವು (ಇಒಡಬ್ಲ್ಯು) ಬಘೇಲ್ ಅವರ ಬೆನ್ನುಬಿದ್ದಿದೆ.

V/S

ಸಂತೋಷ್ ಪಾಂಡೆ
(ಬಿಜೆಪಿ)

ರಾಜನಂದಗಾಂವ್ ಕ್ಷೇತ್ರದಿಂದ ಬಿಜೆಪಿಯು ಈ ಬಾರಿಯೂ ಸಂತೋಷ್ ಪಾಂಡೆ ಅವರನ್ನು ಅಭ್ಯರ್ಥಿಯನ್ನಾಗಿಸಿದೆ. ಕಳೆದ ಚುನಾವಣೆಯಲ್ಲಿ ಇವರು 6,62,387 ಮತಗಳನ್ನು ಪಡೆದು, ಕಾಂಗ್ರೆಸ್‌ನ ಭೋಲಾ ರಾಮ್ ಸಾಹು ಅವರನ್ನು ಪರಾಭವಗೊಳಿಸಿದ್ದರು. 2014ರಿಂದ 2019ರ ವರೆಗೆ ಪಾಂಡೆ ಅವರು ರಾಜ್ಯ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದರು. ಆರ್‌ಎಸ್‌ಎಸ್ ಹಿನ್ನೆಲೆಯಿಂದ ಬಂದಿರುವ ಪಾಂಡೆ, ಉತ್ತಮ ವಾಗ್ಮಿಯೂ ಹೌದು. ಪಕ್ಷದ ವಿವಿಧ ಜವಾಬ್ದಾರಿಗಳನ್ನು ನಿಭಾಯಿಸಿದ್ದ ಅವರು ಸ್ಥಳೀಯವಾಗಿಯೂ ಹೆಚ್ಚು ಪ್ರಭಾವವಿರುವ ಬಿಜೆಪಿ ನಾಯಕರಾಗಿದ್ದಾರೆ. ರಾಜನಂದಗಾಂವ್ ಕ್ಷೇತ್ರ ವ್ಯಾಪ್ತಿಯ ಕವರ್ಧಾಕ್ಕೆ ವೈದ್ಯಕೀಯ ಕಾಲೇಜು ಮತ್ತು ಕೇಂದ್ರೀಯ ವಿದ್ಯಾಲಯ ತಂದಿರುವುದರಿಂದ ಈ ಬಾರಿಯೂ ಮತದಾರರು ಕೈಬಿಡಲಾರರು ಎಂಬುದು ಪಾಂಡೆ ಅವರ ವಿಶ್ವಾಸ.

ಷೇರುಪೇಟೆ ವಹಿವಾಟು 110 — 74,014 ಹಿಂದಿನ ಅಂತ್ಯ; 73,903 ಇಂದಿನ ಅಂತ್ಯ (10:00 – 16:00)

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	22,462
ಇಂದಿನ ಅಂತ್ಯ	22,453
▼	8
ದಿನದ ಕನಿಷ್ಠ	22,388

ವಿನಿಮಯ ದರ	
$ ಡಾಲರ್	83.42
£ ಪೌಂಡ್	104.82
€ ಯುರೊ	89.57
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು 100ಕ್ಕೆ	₹440
12 ಕ್ಕೆ	₹60
ಮೈಸೂರು 100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)	
ಶೇಂಗಾ (ರಿಫೈನ್ಡ್)	₹1510 (1500)
ಸೋಯಾ (ರಿಫೈನ್ಡ್)	₹980 (980)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹975 (972)

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಪ್ರ.ಕೆ.ಜಿ)	₹300-441
ದ್ವಿತಳಿ (ಪ್ರ.ಕೆ.ಜಿ)	₹255-585

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)	
ಅರಸೀಕೆರೆ	₹9000-9325
ಕೆ. ಆರ್.ಪೇಟೆ	₹8000-8000
ತಿಪಟೂರು	₹8000-9000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹179.50
ಆರ್‌ಎಸ್‌ಎಸ್-5	₹173
ಗುಡ್ ಲಾಟ್	₹163

ವಿಸ್ತಾರಾ: 50 ವಿಮಾನ ಸಂಚಾರ ರದ್ದು

ಪರಿಷ್ಕೃತ ವೇತನಕ್ಕೆ ಅಸಮಾಧಾನ: ಅನಾರೋಗ್ಯದ ರಜೆ ಹಾಕಿದ ಪೈಲಟ್‌ಗಳು

ನವದೆಹಲಿ/ ಮುಂಬೈ (ಪಿಟಿಐ): ಪೈಲಟ್‌ಗಳು ಏಕಾಏಕಿ ಅನಾರೋಗ್ಯದ ರಜೆ ಹಾಕಿರುವುದರಿಂದ ಮಂಗಳವಾರ ವಿಸ್ತಾರಾ ಏರ್‌ಲೈನ್ಸ್‌ನ 50ಕ್ಕೂ ಹೆಚ್ಚು ವಿಮಾನಗಳ ಹಾರಾಟ ರದ್ದಾಗಿದೆ.

ಹಲವು ವಿಮಾನಗಳ ಹಾರಾಟದಲ್ಲಿ ವಿಳಂಬವಾಗಿದೆ. ಇದರಿಂದ ಪ್ರಯಾಣಿಕರು ತಮಗಾದ ತೊಂದರೆ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಏರ್ ಇಂಡಿಯಾ ಜೊತೆಗೆ ವಿಸ್ತಾರಾ ವಿಲೀನಗೊಂಡ ಬಳಿಕ ಹೊಸ ಒಪ್ಪಂದದ ಅನ್ವಯ ಪೈಲಟ್‌ಗಳಿಗೆ ಪರಿಷ್ಕೃತ ವೇತನ ಪಟ್ಟಿ ಪ್ರಕಟಿಸಲಾಗಿದೆ. ಇದಕ್ಕೆ ಪೈಲಟ್‌ಗಳಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು, ರಜೆ ಹಾಕಿದ್ದಾರೆ ಎಂದು ಮೂಲಗಳು ತಿಳಿಸಿವೆ.

ವಿಸ್ತಾರಾ ಎ320 ವಿಮಾನ ಸಂಚಾರ ಮತ್ತು ಕಾರ್ಯಾಚರಣೆಗೆ ನಿರ್ದೇಶನ ನೀಡುವ ಹಿರಿಯ ಅಧಿಕಾರಿಗಳು ಕೂಡ ರಜೆಯ ಮೇಲೆ ತೆರಳಿದ್ದಾರೆ ಎಂದು ತಿಳಿಸಿವೆ. ಪೈಲಟ್‌ಗಳ ಅಲಭ್ಯತೆ ಹಾಗೂ ಕಾರ್ಯಾಚರಣೆಯಲ್ಲಿ ಎದುರಾಗಿರುವ ತೊಂದರೆಯಿಂದಾಗಿ ವಿಮಾನಗಳ ಹಾರಾಟದ ಸಂಖ್ಯೆಯನ್ನು ತಗ್ಗಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಪ್ರತಿದಿನ ವರದಿಗೆ ಡಿಜಿಸಿಎ ಸೂಚನೆ: ವಿಮಾನ ಹಾರಾಟ ರದ್ದು ಮತ್ತು ವಿಳಂಬ ಕುರಿತು ಪ್ರತಿದಿನ ವರದಿ ಸಲ್ಲಿಸುವಂತೆ ವಿಸ್ತಾರಾಗೆ, ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯವು (ಡಿಜಿಸಿಎ) ಸೂಚಿಸಿದೆ.

ಪ್ರಯಾಣಿಕರಿಗೆ ಆಗಿರುವ ತೊಂದರೆ ಬಗ್ಗೆ ಪರಿಶೀಲನೆ ನಡೆಸುತ್ತಿದ್ದು, ಸೂಕ್ತ ಪರಿಹಾರಕ್ಕೆ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದೆ.

'ಡಿಜಿಸಿಎ ನಿಯಮಾವಳಿಗಳ ಅನುಸಾರ ತೊಂದರೆಗೆ ಸಿಲುಕಿರುವ ಪ್ರಯಾಣಿಕರಿಗೆ ಕಂಪನಿಯು ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕಿದೆ' ಎಂದು ನಾಗರಿಕ ವಿಮಾನಯಾನ ಸಚಿವಾಲಯವು 'ಎಕ್ಸ್‌'ನಲ್ಲಿ ಸೂಚಿಸಿದೆ.

ಹೊಸ ಒಪ್ಪಂದದ ಅನ್ವಯ ನಿಶ್ಚಿತ ವೇತನದ ಮೊತ್ತವನ್ನು ಕಡಿತಗೊಳಿಸಲಾಗಿದೆ. ವಿಮಾನಗಳ ಹಾರಾಟಕ್ಕೆ ಅನುಗುಣವಾಗಿ ಪೈಲಟ್‌ಗಳಿಗೆ ಪ್ರೋತ್ಸಾಹ ಧನ ನೀಡಲು ಪ್ರಕಟಿಸಲಾಗಿದೆ. ವಿಸ್ತಾರಾ ಮತ್ತು ಏರ್ ಇಂಡಿಯಾ ಪೈಲಟ್‌ಗಳ ನಡುವೆ ವೇತನದಲ್ಲಿ ಸಮಾನತೆ ಕಾಯ್ದುಕೊಳ್ಳಲು ಈ ಹೊಸ ಒಪ್ಪಂದ ರೂಪಿಸಲಾಗಿದೆ ಎಂದು ಹೇಳಲಾಗಿದೆ.

15 ಪೈಲಟ್‌ಗಳ ರಾಜೀನಾಮೆ

ಮುಂಬೈ (ಪಿಟಿಐ): ಪರಿಷ್ಕೃತ ವೇತನ ಸಂಬಂಧ ಕಳೆದ ಕೆಲವು ವಾರಗಳಿಂದ ಟಾಟಾ ಸಮೂಹದ ವಿಮಾನಯಾನ ಸಂಸ್ಥೆಗಳಲ್ಲಿ ಇರುವ ಪೈಲಟ್‌ಗಳ ನಡುವೆ ಅಸಮಾಧಾನ ಭುಗಿಲೆದ್ದಿದೆ ಎಂದು ಮೂಲಗಳು ತಿಳಿಸಿವೆ.

15 ಹಿರಿಯ ಪೈಲಟ್‌ಗಳು ರಾಜೀನಾಮೆ ನೀಡಿದ್ದು, ಇತರೆ ವಿಮಾನಯಾನ ಸಂಸ್ಥೆಗಳಿಗೆ ಸೇರ್ಪಡೆಯಾಗಿದ್ದಾರೆ ಎಂದು ತಿಳಿಸಿವೆ. ಈ ಬಗ್ಗೆ ಪ್ರತಿಕ್ರಿಯೆ ನೀಡಲು ವಿಸ್ತಾರಾ ವಕ್ತಾರರು ನಿರಾಕರಿಸಿದ್ದಾರೆ. ಪ್ರತಿದಿನ ವಿಸ್ತಾರಾದ 300ಕ್ಕೂ ಹೆಚ್ಚು ವಿಮಾನಗಳು ಕಾರ್ಯಾಚರಣೆ ನಡೆಸುತ್ತಿದ್ದು, 800 ಪೈಲಟ್‌ಗಳಿದ್ದಾರೆ.

16 ವರ್ಷದ ಗರಿಷ್ಠ ಮಟ್ಟಕ್ಕೆ ದಾಖಲು: ಉದ್ಯೋಗ ನೇಮಕಾತಿ ಚುರುಕು

ತಯಾರಿಕಾ ಚಟುವಟಿಕೆ ಏರಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಬೆಳವಣಿಗೆಯು ಮಾರ್ಚ್‌ನಲ್ಲಿ ಉತ್ತಮ ಏರಿಕೆ ಕಂಡಿದ್ದು, 16 ವರ್ಷಗಳ ಗರಿಷ್ಠ ಮಟ್ಟಕ್ಕೆ ದಾಖಲಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ತಯಾರಿಕೆ ಮತ್ತು ಬೇಡಿಕೆಯಲ್ಲಿ ಹೆಚ್ಚಳವಾಗಿದೆ. ಜೊತೆಗೆ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೊಸ ಆರ್ಡರ್‌ಗಳು ಹೆಚ್ಚಳವಾಗಿರುವುದೇ ಈ ಏರಿಕೆಗೆ ಕಾರಣವಾಗಿದೆ ಎಂದು ಮಂಗಳವಾರ ಬಿಡುಗಡೆಯಾದ ವರದಿ ತಿಳಿಸಿದೆ.

ಫೆಬ್ರುವರಿಯಲ್ಲಿ 56.9 ಇದ್ದ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ), ಮಾರ್ಚ್‌ನಲ್ಲಿ 59.1ಕ್ಕೆ ಏರಿಕೆಯಾಗಿದೆ. 2008ರ ಬಳಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ. ಪಿಎಂಐ 50ಕ್ಕಿಂತ ಹೆಚ್ಚಿದ್ದರೆ ಬೆಳವಣಿಗೆಯ ಏರಿಕೆಯನ್ನು ತೋರಿಸುತ್ತದೆ. ಇದಕ್ಕಿಂತ ಕೆಳಗಿದ್ದರೆ ಬೆಳವಣಿಗೆಯ ಕುಸಿತದ ಸೂಚಕವಾಗಿದೆ.

ತಯಾರಿಕಾ ವಲಯದಲ್ಲಿ ಬೇಡಿಕೆ ಹೆಚ್ಚಿರುವುದು ಹೊಸದಾಗಿ ಉದ್ಯೋಗ ಹುಡುಕುವವರಿಗೆ ನೆರವಾಗಿದೆ. ಕಳೆದ ಎರಡು ತಿಂಗಳಿಗೆ ಹೋಲಿಸಿದರೆ ಮಾರ್ಚ್‌ನಲ್ಲಿ ಕಾರ್ಖಾನೆಗಳಲ್ಲಿ ಉದ್ಯೋಗದ ನೇಮಕಾತಿ ಹೆಚ್ಚಿದೆ.

ಮಾರ್ಚ್‌ನಲ್ಲಿ ಉದ್ಯೋಗಾವಕಾಶ ಸೃಷ್ಟಿಯು ನಿರೀಕ್ಷಿತ ಮಟ್ಟದಷ್ಟು ವೇಗ ವಾಗಿಲ್ಲ. ಆದರೆ, 2023ರ ಸೆಪ್ಟೆಂಬರ್ ನಂತರದ ಅವಧಿಗೆ ಹೋಲಿಸಿದರೆ ಉತ್ತಮವಾಗಿದೆ.

'ಹೊಸ ಆರ್ಡರ್‌ಗಳ ಸ್ವೀಕಾರ ಹಾಗೂ ಉತ್ಪಾದನೆ ಸದೃಢಗೊಂಡಿದೆ. ಇದರಿಂದ ತಯಾರಿಕಾ ವಲಯದ ಕಂಪನಿಗಳು ನೇಮಕಾತಿಯನ್ನು ವಿಸ್ತರಿಸಿವೆ. ಪೂರ್ಣಾವಧಿಗೆ ಉದ್ಯೋಗಿಗಳ ನೇಮಕಕ್ಕೆ ಮುಂದಾಗಿರುವುದು ಉತ್ತಮ ಬೆಳವಣಿಗೆ' ಎಂದು ಎಚ್‌ಎಸ್‌ಬಿಸಿ ಅರ್ಥಶಾಸ್ತ್ರಜ್ಞ ಇನೆಸ್ ಲ್ಯಾಮ್ ಹೇಳಿದ್ದಾರೆ.

ಬೇಡಿಕೆ ವೃದ್ಧಿಸಿರುವುದರಿಂದ ಉತ್ಪಾದನೆ ಮತ್ತು ಮಾರಾಟದಲ್ಲಿ ಕ್ಷಿಪ್ರಗತಿಯ ಏರಿಕೆಯಾಗಿದೆ. ಹೊಸ ವಹಿವಾಟುಗಳಿಗೆ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಲಭಿಸಿದೆ. ಆಫ್ರಿಕಾ, ಏಷ್ಯಾ, ಯೂರೋಪ್, ಅಮೆರಿಕದಿಂದ ಹೊಸ ಆರ್ಡರ್, ಮಾರಾಟ ಹೆಚ್ಚಿದೆ.



₹40,314 ಕೋಟಿ ಆಸ್ತಿ ನಗದೀಕರಣ

ನವದೆಹಲಿ (ಪಿಟಿಐ): ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು 2023–24ನೇ ಆರ್ಥಿಕ ಸಾಲಿನಡಿ ₹40,314 ಕೋಟಿಯಷ್ಟು ಆಸ್ತಿ ನಗದೀಕರಣ ಮಾಡಿದೆ.

₹28,968 ಕೋಟಿ ಆಸ್ತಿ ನಗದೀಕರಣಕ್ಕೆ ಗುರಿ ಹೊಂದಲಾಗಿತ್ತು. ಇದಕ್ಕಿಂತಲೂ ಹೆಚ್ಚು ಹಣ ಸಂಗ್ರಹಿಸಲಾಗಿದೆ ಎಂದು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶುಲ್ಕ–ನಿರ್ವಹಣೆ–ವರ್ಗಾವಣೆ ಮಾದರಿಯಡಿ (ಟಿಒಟಿ) ₹15,968 ಕೋಟಿ, ಮೂಲ ಸೌಕರ್ಯ ಹೂಡಿಕೆ ಟ್ರಸ್ಟ್ ಮಾದರಿಯಡಿ ₹15,700 ಕೋಟಿ ಹಾಗೂ ಭದ್ರತೆ ಮಾದರಿಯಲ್ಲಿ ₹8,646 ಕೋಟಿ ಸಂಗ್ರಹಿಸಲಾಗಿದೆ ಎಂದು ವಿವರಿಸಿದ್ದಾರೆ.

2022–23ನೇ ಆರ್ಥಿಕ ವರ್ಷದಲ್ಲಿ ವಿವಿಧ ಮಾದರಿಯಡಿ ₹32,855 ಕೋಟಿ ನಗದೀಕರಿಸಲಾಗಿತ್ತು. ಇಲ್ಲಿಯವರೆಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಆಸ್ತಿ ನಗದೀಕರಣ ಮೊತ್ತವು ₹1 ಲಕ್ಷ ಕೋಟಿ ದಾಟಿದೆ ಎಂದು ತಿಳಿಸಿದ್ದಾರೆ.

ಆಸ್ತಿ ನಗದೀಕರಣದ ಮೂಲಕ ಹೆದ್ದಾರಿಗಳ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಲಾಗುತ್ತದೆ. ಈ ಆಸ್ತಿಗಳ ಮೇಲೆ ಸರ್ಕಾರದ ಒಡೆತನವಿರುತ್ತದೆ. ಇದು ದೀರ್ಘಾವಧಿಯ ಗುತ್ತಿಗೆಯಾಗಿದ್ದು, ಅವಧಿ ಮುಗಿದ ಬಳಿಕ ಆಸ್ತಿಗಳನ್ನು ಸರ್ಕಾರಕ್ಕೆ ಹಿಂತಿರುಗಿಸಬೇಕಾಗುತ್ತದೆ.

ಬೈಜುಸ್: 500 ಉದ್ಯೋಗಿಗಳ ವಜಾ

ನವದೆಹಲಿ (ಪಿಟಿಐ): ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿರುವ ಬೈಜುಸ್ ಕಂಪನಿಯು ತನ್ನ ಮಾರಾಟ ಹಾಗೂ ಟ್ಯೂಷನ್ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 500 ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ನಿರ್ಧರಿಸಿದೆ.

ಕಳೆದ 20 ದಿನಗಳ ಹಿಂದೆಯೇ ಉದ್ಯೋಗಿಗಳ ವಜಾ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ. ಹಳಿ ತಪ್ಪಿರುವ ಕಂಪನಿಯ ವಹಿವಾಟನ್ನು ಸರಿದಾರಿಗೆ ತರಲು ಈ ತೀರ್ಮಾನ ಕೈಗೊಂಡಿದೆ ಎಂದು ಮೂಲಗಳು ತಿಳಿಸಿವೆ.

ಉದ್ಯೋಗ ಕಡಿತವು ಮಾರಾಟ ವಿಭಾಗದ ಸಿಬ್ಬಂದಿ, ಶಿಕ್ಷಕರು ಹಾಗೂ ಟ್ಯೂಷನ್ ಕೇಂದ್ರಗಳ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಲಾಗಿದೆ.

'ಸದ್ಯ ಕಂಪನಿಯ ಕಾರ್ಯಾಚರಣೆಯನ್ನು ಸರಳೀಕರಿಸುತ್ತಿದ್ದೇವೆ. ವೆಚ್ಚ ಕಡಿತದ ಮೂಲಕ ಆಡಳಿತ ಮಂಡಳಿಗೆ ಹಣಕಾಸಿನ ಹರಿವು ಹೆಚ್ಚಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಬೈಜುಸ್ ವಕ್ತಾರರು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ — 02-4-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1510)
ಒಂದು ವಾರದ ಡೆಲಿವರಿ	1515 (1505)
ಸೋಯಾ ಕಚ್ಚಾ	940 (940)
ಪಾಮ್ ವಾರದ ಡೆಲಿವರಿ	973 (970)
ಸೂರ್ಯಕಾಂತಿ ಎಣ್ಣೆ ಕಚ್ಚಾ	900 (900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹68,750 (68,500)

ಬೆಳ್ಳಿ ಕೆ.ಜಿ ₹76,100 (75,300)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ — ಸಕಲೇಶಪುರ

ಕೂಳೆ	950-1000
ನಡುಗೋಲು	1050-1100
ರಾಶಿ	1150-1200
ರಾಶಿ ಉತ್ತಮ	1300-1350
ಹೆರಕಿದ್ದು	1900-2000
ಹಸಿರು ಸಾಧಾರಣ	1200-1300
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	525

ಅಡಿಕೆ (ಬಂಟ್ವಾಳ)

ಕೋಕ	18000-28500
ಹೊಸತು	28500-36000
ಹಳತು	36000-44000

ಚಿತ್ರದುರ್ಗ

ಅಪಿ	46600-47000
ಬೆಟ್ಟೆ	33600-34000
ಕೆಂಪುಗೋಟು	28200-28600
ರಾಶಿ	46100-46500

ಪುತ್ತೂರು

ಕೋಕ	11500-26000

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14,200	14,100	-	191.80 ಸೆಂಟ್ಸ್
ಎಸಿ	8,175	7,900	-	
ಆರ್‌ಪಿ	14,850	14,300	-	ಲಂಡನ್
ಆರ್‌ಸಿ	9,120	330 on OT	-	3,479 ಡಾಲರ್ಸ್

ಆದಿತ್ಯ ಬಿರ್ಲಾ, ಅದಾನಿ ಷೇರು ಏರಿಕೆ

ನವದೆಹಲಿ (ಪಿಟಿಐ): ಆದಿತ್ಯ ಬಿರ್ಲಾ ಫ್ಯಾಷನ್ ಆ್ಯಂಡ್ ರಿಟೇಲ್ ಲಿಮಿಟೆಡ್ ಷೇರಿನ ಮೌಲ್ಯವು ಮಂಗಳವಾರ ಶೇ 12ರಷ್ಟು ಏರಿಕೆಯಾಗಿದೆ.

ಮೌಲ್ಯ ಹೆಚ್ಚಿಸುವ ದೃಷ್ಟಿಯಿಂದ ಚಿಲ್ಲರೆ ವ್ಯಾಪಾರದಲ್ಲಿ ಮುಂಚೂಣಿಯಲ್ಲಿರುವ ಮಧುರಾ ಫ್ಯಾಷನ್ ಆ್ಯಂಡ್ ಲೈಫ್‌ಸ್ಟೈಲ್ ಅನ್ನು ವಿಭಜಿಸಲಾಗುವುದು ಎಂದು ಕಂಪನಿಯು ಘೋಷಿಸಿದ ಬೆನ್ನಲ್ಲೇ ಷೇರಿನ ಮೌಲ್ಯ ಹೆಚ್ಚಳವಾಗಿದೆ.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 11.55ರಷ್ಟು ಮತ್ತು ಎನ್‌ಎಸ್‌ಇಯಲ್ಲಿ ಶೇ 11.97ರಷ್ಟು ಏರಿಕೆಯಾಗಿದೆ. ಪ್ರತಿ ಷೇರಿನ ಬೆಲೆ ಕ್ರಮವಾಗಿ ₹236.15 ಮತ್ತು ₹237ಕ್ಕೆ ಮುಟ್ಟಿತು.

ಅದಾನಿ ಷೇರು ಏರಿಕೆ: ಅದಾನಿ ಸಮೂಹದ 10 ಕಂಪನಿಗಳ ಪೈಕಿ ಅದಾನಿ ಎನರ್ಜಿ ಸಲ್ಯೂಷನ್ಸ್ ಹೊರತುಪಡಿಸಿ ಉಳಿದ ಕಂಪನಿಗಳ ಷೇರಿನ ಮೌಲ್ಯ ಏರಿಕೆಯಾಗಿದೆ.

ಅದಾನಿ ಪವರ್ ಶೇ 5, ಅದಾನಿ ವಿಲ್ಮರ್ ಶೇ 4.15, ಎಸಿಸಿ ಶೇ 4.09, ಎನ್‌ಡಿಟಿವಿ ಶೇ 2.81, ಅಂಬುಜಾ ಸಿಮೆಂಟ್ಸ್ ಶೇ 2.09, ಅದಾನಿ ಪೋರ್ಟ್ಸ್ ಶೇ 2.02, ಅದಾನಿ ಟೋಟಲ್ ಗ್ಯಾಸ್ ಶೇ 0.65, ಅದಾನಿ ಎಂಟರ್ ಪ್ರೈಸಸ್ ಶೇ 0.51 ಮತ್ತು ಅದಾನಿ ಗ್ರೀನ್ ಎನರ್ಜಿ ಶೇ 0.30 ಹೆಚ್ಚಳವಾಗಿವೆ. ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ 1.25ರಷ್ಟು ಇಳಿಕೆ ಕಂಡಿದೆ.

ಷೇರು ಸೂಚ್ಯಂಕಗಳು ಇಳಿಕೆ: ಐ.ಟಿ, ಖಾಸಗಿ ಬ್ಯಾಂಕ್ ಮತ್ತು ಆಟೊ ಷೇರುಗಳ ಮಾರಾಟದ ಒತ್ತಡ ಮತ್ತು ವಿದೇಶಿ ಬಂಡವಾಳ ಹೊರಹರಿವಿನಿಂದಾಗಿ ಷೇರು ಸೂಚ್ಯಂಕಗಳು ಇಳಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 110 ಅಂಶ ಇಳಿಕೆಯಾಗಿ, 73,903ಕ್ಕೆ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 8 ಅಂಶ ಕಡಿಮೆ ಆಗಿ 22,453ಕ್ಕೆ ಕೊನೆಗೊಂಡಿತು.

ಇಸ್ತಾಂಬುಲ್: ನೈಟ್‌ಕ್ಲಬ್‌ನಲ್ಲಿ ಅಗ್ನಿ ಅವಘಡ–29 ಸಾವು

ಇಸ್ತಾಂಬುಲ್(ಟರ್ಕಿ)(ಎಪಿ): ನಗರದ ದಿ ಮಾಸ್ಕರೇಡ್ ಎಂಬ ನೈಟ್‌ಕ್ಲಬ್‌ನಲ್ಲಿ ನವೀಕರಣ ಕಾರ್ಯ ನಡೆಯುತ್ತಿದ್ದ ವೇಳೆ ಮಂಗಳವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ ಕನಿಷ್ಠ 29 ಮಂದಿ ಮೃತಪಟ್ಟಿದ್ದಾರೆ.

'ಈ ಘಟನೆಯಲ್ಲಿ ಗಾಯಗೊಂಡಿದ್ದ ಒಬ್ಬ ವ್ಯಕ್ತಿಗೆ ಚಿಕಿತ್ಸೆ ನೀಡಲಾಗಿದೆ. ನೈಟ್‌ಕ್ಲಬ್ ವ್ಯವಸ್ಥಾಪಕರು ಸೇರಿದಂತೆ ಐವರನ್ನು ವಶಕ್ಕೆ ಪಡೆದು, ವಿಚಾರಣೆಗೆ ಒಳಪಡಿಸಲಾಗುತ್ತಿದೆ' ಎಂದು ಕಾನೂನು ಸಚಿವ ಯಿಲ್ಮಜ್ ಟಂಕ್ ತಿಳಿಸಿದ್ದಾರೆ.

'ತನಿಖೆ ಬಳಿಕ, ಅಗ್ನಿ ದುರಂತಕ್ಕೆ ಕಾರಣ ತಿಳಿಯಲಿದೆ' ಎಂದು ಇಸ್ತಾಂಬಲ್ ಗವರ್ನರ್ ದವುತ್ ಗುಲ್ ತಿಳಿಸಿದ್ದಾರೆ. ನಗರದ ಬೆಸಿಕ್ತಾಸ್ ಪ್ರದೇಶ ದಲ್ಲಿರುವ 16 ಅಂತಸ್ತಿನ ಜನ ವಸತಿ ಕಟ್ಟಡದ ನೆಲಮಹಡಿಯಲ್ಲಿ ಈ ನೈಟ್‌ಕ್ಲಬ್ ಇದೆ.

ಪ್ರಜಾವಾಣಿ — ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ. ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

₹184 ಕೋಟಿ ಸೇವಾ ತೆರಿಗೆ ಜೊಮಾಟೊಗೆ ನೋಟಿಸ್

ನವದೆಹಲಿ (ಪಿಟಿಐ): ಆನ್‌ಲೈನ್‌ನಲ್ಲಿ ಆಹಾರ ವಿತರಿಸುವ ಸಂಸ್ಥೆಯಾದ ಜೊಮಾಟೊಗೆ ಸೇವಾ ತೆರಿಗೆ ಮತ್ತು ದಂಡ ಸೇರಿ ಒಟ್ಟು ₹184 ಕೋಟಿ ಪಾವತಿಸುವಂತೆ ನವದೆಹಲಿಯ ಕೇಂದ್ರ ತೆರಿಗೆ ಇಲಾಖೆಯು ನೋಟಿಸ್ ನೀಡಿದೆ.

ವಿದೇಶಗಳಲ್ಲಿ ಇರುವ ತನ್ನ ಅಂಗಸಂಸ್ಥೆಗಳು ಮತ್ತು ಶಾಖೆಗಳಿಂದ ಆಹಾರ ಪದಾರ್ಥಗಳನ್ನು ಮಾರಾಟ ಮಾಡಿರುವುದಕ್ಕೆ ಸಂಬಂಧಿಸಿದ ಸೇವಾ ತೆರಿಗೆ ಇದಾಗಿದೆ. 2014ರ ಅಕ್ಟೋಬರ್‌ನಿಂದ 2017ರ ಜೂನ್ ನಡುವಿನ ಅವಧಿಗೆ ಇಷ್ಟು ಮೊತ್ತದ ತೆರಿಗೆ ಪಾವತಿಸುವಂತೆ ಸೂಚಿಸಿದೆ ಎಂದು ಕಂಪನಿಯು, ಷೇರುಪೇಟೆಗೆ ಮಾಹಿತಿ ನೀಡಿದೆ.

ತೆರಿಗೆ ಇಲಾಖೆಯು ನೀಡಿದ್ದ ಷೋಕಾಸ್ ನೋಟಿಸ್‌ಗೆ ಕಾನೂನು ಪ್ರಕಾರವಾಗಿಯೇ ಸೂಕ್ತ ದಾಖಲೆಗಳ ಸಮೇತ ಉತ್ತರಿಸಲಾಗಿತ್ತು. ಆದರೆ, ಇದನ್ನು ಇಲಾಖೆಯು ಒಪ್ಪಿಕೊಂಡಿಲ್ಲ. ಹಾಗಾಗಿ, ಆದೇಶ ಪ್ರಶ್ನಿಸಿ ಸಕ್ಷಮ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದೆ.

ಶಿಕ್ಷಿಸದೆ ಬಿಡೆವು: ಇಸ್ರೇಲ್‌ಗೆ ಇರಾನ್ ಎಚ್ಚರಿಕೆ

ಟೆಹರಾನ್ (ಎಎಫ್‌ಪಿ): ಡಮಾಸ್ಕಸ್‌ನಲ್ಲಿನ ತನ್ನ ರಾಯಭಾರ ಕಚೇರಿ ಮೇಲೆ ವೈಮಾನಿಕ ದಾಳಿ ನಡೆಸಿ ರೆವಲ್ಯೂಷನರಿ ಗಾರ್ಡ್‌ನ ಇಬ್ಬರು ಬ್ರಿಗೇಡಿಯರ್ ಜನರಲ್ ಸೇರಿ ಏಳು ಗಾರ್ಡ್‌ಗಳನ್ನು ಹತ್ಯೆ ಮಾಡಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಇರಾನ್, ಇದಕ್ಕೆ ಇಸ್ರೇಲ್ ಅನ್ನು ಶಿಕ್ಷಿಸದೇ ಬಿಡುವುದಿಲ್ಲ ಎಂದು ಮಂಗಳವಾರ ಎಚ್ಚರಿಕೆ ನೀಡಿದೆ.

ಖಮೇನಿ

ಇರಾನ್‌ನ ಪರಮೋಚ್ಚ ನಾಯಕ ಅಯಾತ್ ಉಲ್ಲಾ ಅಲಿ ಖಮೇನಿ ಇಸ್ರೇಲ್ ಅನ್ನು ಖಂಡಿತವಾಗಿಯೂ ಶಿಕ್ಷಿಸದೆ ಬಿಡೆವು ಎಂದು ಪ್ರತಿಜ್ಞೆ ಮಾಡಿದರು.

'ನಮ್ಮ ವೀರ ಸೇನಾನಿಗಳ ಕೈಯಿಂದ ದುಷ್ಟ ಜಿಯೋನಿಸ್ಟ್ ಆಡಳಿತ ಶಿಕ್ಷಿಸಲಾಗುವುದು. ಈ ಅಪರಾಧ ಮತ್ತು ಇತರ ಅಪರಾಧಗಳ ಬಗ್ಗೆ ಅವರು ವಿಷಾದಿಸುವಂತೆ ನಾವು ಮಾಡುತ್ತೇವೆ' ಎಂದು ಖಮೇನಿ ತಮ್ಮ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ ಸಂದೇಶದಲ್ಲಿ ತಿಳಿಸಿದ್ದಾರೆ.

ಕ್ವಾಡ್ಸ್ ಫೋರ್ಸ್ ವಿದೇಶಿ ಕಾರ್ಯಾಚರಣೆ ವಿಭಾಗದ ಇಬ್ಬರು ಕಮಾಂಡರ್‌ಗಳಾದ, ಬ್ರಿಗೇಡಿಯರ್ ಜನರಲ್ ಮೊಹಮ್ಮದ್ ರೆಜಾ ಜಹೇದಿ ಮತ್ತು ಮೊಹಮ್ಮದ್ ಹಾದಿ ಹಾಜಿ ರಹೀಮಿ ಸೇರಿ ಏಳು ಕ್ರಾಂತಿಕಾರಿ ಗಾರ್ಡ್‌ಗಳನ್ನು ಇಸ್ರೇಲ್ ಕೊಂದಿದೆ ಎಂದು ಇರಾನ್ ಅಧಿಕಾರಿಗಳು ತಿಳಿಸಿದ್ದಾರೆ.

ಸೋಮವಾರ ನಡೆದ ಭಾರಿ ವೈಮಾನಿಕ ದಾಳಿಯಲ್ಲಿ ಇರಾನ್‌ನ ರೆವಲ್ಯೂಷನರಿ ಗಾರ್ಡ್‌ಗಳಲ್ಲದೆ ಇತರ ನಾಲ್ವರು ನಾಗರಿಕರು ಹತರಾಗಿದ್ದು, ಒಟ್ಟು 11 ಮಂದಿ ಸಾವಿಗೀಡಾಗಿದ್ದರು. ಈ ವೈಮಾನಿಕ ದಾಳಿಯ ಬಗ್ಗೆ ಪ್ರತಿಕ್ರಿಯೆ ನೀಡಲು ಇಸ್ರೇಲ್ ನಿರಾಕರಿಸಿದೆ.

ಈ ದಾಳಿಯಲ್ಲಿ ಇರಾನ್ ರಾಯಭಾರ ಕಚೇರಿಯ ಪಕ್ಕದಲ್ಲಿರುವ ಐದು ಅಂತಸ್ತಿನ ಕಟ್ಟಡವು ನೆಲಸಮವಾಗಿದೆ. ಇಸ್ರೇಲ್ ಮತ್ತು ಇರಾನ್ ಮಿತ್ರ ಹಮಾಸ್ ನಡುವಿನ ಗಾಜಾ ಯುದ್ಧವು ಶುರುವಾಗಿ ಈಗಾಗಲೇ ಆರು ತಿಂಗಳು ಪೂರ್ಣವಾಗುವ ಹತ್ತಿರದಲ್ಲಿದ್ದು, ಈ ದಾಳಿಯು ಗಾಜಾದಲ್ಲಿ ಯುದ್ಧದಿಂದಾಗಿ ಉರಿಯುತ್ತಿರುವ ಮಧ್ಯಪ್ರಾಚ್ಯದ ಉದ್ವಿಗ್ನತೆಗೆ ಮತ್ತಷ್ಟು ಕಿಡಿ ಹಚ್ಚಿದೆ.

'ಇಸ್ರೇಲ್ ನಡೆಸಿರುವ ಈ ದಾಳಿಯು ಅಂತರರಾಷ್ಟ್ರೀಯ ನಿಯಮಗಳ ಸ್ಪಷ್ಟ ಉಲ್ಲಂಘನೆ. ಇದು ಖಂಡನೀಯ. ಅವರಿಗೆ ತಕ್ಕ ಉತ್ತರ ನೀಡದೇ ಇರುವುದಿಲ್ಲ' ಎಂದು ಇರಾನ್ ಅಧ್ಯಕ್ಷ ಇಬ್ರಾಹಿಂ ರೈಸಿ ಹೇಳಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸದಾಶಿವ ಕುಮಾರ್, ಆರ್.ಆರ್. ನಗರ, ಬೆಂಗಳೂರು.

- **ಪ್ರಶ್ನೆ: ನಾನು ಬೆಂಗಳೂರು ನಿವಾಸಿಯಾಗಿದ್ದು, ನಾವು 2021-22ನೇ ಆರ್ಥಿಕ ವರ್ಷದಲ್ಲಿ ಸ್ವಂತ ಮನೆ (ಫ್ಲ್ಯಾಟ್) ಖರೀದಿಸಿ ವಾಸಿಸುತ್ತಿದ್ದೇವೆ. ನನ್ನ ಸೇವಾವಧಿಯ ಹೆಚ್ಚಿನ ಉಳಿತಾಯದ ಮೊತ್ತವನ್ನು ಇದಕ್ಕೆ ಉಪಯೋಗಿಸಿದ ಕಾರಣ ಬ್ಯಾಂಕಿನಿಂದ ಸುಮಾರು ₹40 ಲಕ್ಷವನ್ನು ಸಾಲವಾಗಿ ಪಡೆದಿದ್ದೆ. ಮನೆಯು ಎರಡು ಕೊಠಡಿಗಳನ್ನು ಹೊಂದಿದ್ದು, ಸುಮಾರು 900 ಚದರ ಅಡಿ ಇದೆ. ಇದರ ಬಡ್ಡಿ ಮೇಲೆ ನಾನು ತೆರಿಗೆ ರಿಯಾಯಿತಿ ಪಡೆಯುತ್ತಿದ್ದೇನೆ. ಪ್ರಸ್ತುತ ₹3 ಲಕ್ಷಕ್ಕೂ ಹೆಚ್ಚು ಬಡ್ಡಿ ಪಾವತಿಸುತ್ತಿದ್ದೇನೆ. ಆದರೆ, ಬಡ್ಡಿ ರಿಯಾಯಿತಿ ಕೇವಲ ₹2 ಲಕ್ಷ ಮಾತ್ರ ಸಿಗುತ್ತಿದೆ. ಇತ್ತೀಚೆಗೆ ನನ್ನ ಸಹೋದ್ಯೋಗಿಗಳೊಂದಿಗೆ ಮಾತನಾಡಿದಾಗ ಮೊದಲ ಮನೆಗೆ ಸಾಲ ಪಡೆದಿದ್ದರೆ, ₹2 ಲಕ್ಷಕ್ಕಿಂತ ಅಧಿಕ ಮೊತ್ತದ ಬಡ್ಡಿಯ ಮೇಲೂ ಹೆಚ್ಚುವರಿ ರಿಯಾಯಿತಿ ಸಿಗುತ್ತದೆ ಎಂದು ಹೇಳಿರುತ್ತಾರೆ. ನನ್ನ ಪ್ರಶ್ನೆ ಏನೆಂದರೆ ನಾನು ಈ ಹಿಂದಿನ ವರ್ಷಗಳಲ್ಲಿ ಈಗಾಗಲೇ ಪಾವತಿಸಿದ ಬಡ್ಡಿಯ ಮೇಲೆ ತೆರಿಗೆಯನ್ನು ಅನಗತ್ಯವಾಗಿ ಪಾವತಿಸಿದ್ದೇನೆ? ಇನ್ನು ಮುಂದಿನ ವರ್ಷಗಳಲ್ಲಿ ಹೆಚ್ಚುವರಿ ಬಡ್ಡಿ ಪಡೆಯಬಹುದೇ? ಈ ಬಗ್ಗೆ ತುಸು ಸ್ಪಷ್ಟತೆ ನೀಡಿ.**

ಉತ್ತರ: ನೀವು ನೀಡಿರುವ ಮಾಹಿತಿಯಿಂದ ಆದ್ಯವಾಗಿ ಗಮನಕ್ಕೆ ಬರುವ ವಿಚಾರವೆಂದರೆ ಮೊದಲ ಬಾರಿಗೆ ಹೊಸ ಮನೆಯನ್ನು ಹೊಂದುತ್ತಿದ್ದೀರಿ ಎಂಬುದು. 2019ರ ಏಪ್ರಿಲ್ 1ರಿಂದ 2021ರ ಮಾರ್ಚ್ 31ರ ಅವಧಿಯಲ್ಲಿ ಮೊದಲ ಬಾರಿಗೆ ಮನೆ ಖರೀದಿಸುವ ತೆರಿಗೆದಾರರಿಗೆ ಮಂಜೂರಾದ ಸಾಲಗಳಿಗೆ ಕೆಲವು ಷರತ್ತುಬದ್ಧ ವಿಶೇಷ ತೆರಿಗೆ ರಿಯಾಯಿತಿಗಳನ್ನು ನೀಡಲಾಗಿದೆ. ಮೊದಲನೆಯದಾಗಿ ಖರೀದಿಸಿದ ಆಸ್ತಿ ಮೌಲ್ಯ ₹45 ಲಕ್ಷದೊಳಗಿರಬೇಕು. ಎರಡನೆಯದಾಗಿ ಮನೆಯ ಒಟ್ಟಾರೆ ವಿಸ್ತಾರ 968 ಚದರ ಅಡಿಯ ಒಳಗಿರಬೇಕು. ಮೆಟ್ರೊ ನಗರಗಳಲ್ಲಿ ಈ ಅಳತೆ 645 ಚದರ ಅಡಿಗೆ ಸೀಮಿತವಾಗಿರಬೇಕು. ಸಾಲದ ಮಂಜೂರಾತಿ ಮೇಲೆ ತಿಳಿಸಿರುವ ಅವಧಿಯಲ್ಲಿ ಆಗಿರಬೇಕು. ಇಲ್ಲಿ ಸಾಲದ ಮೊತ್ತಕ್ಕೆ ಮಿತಿ ಹೇರಿಲ್ಲದಿದ್ದರೂ ಆಸ್ತಿ ಮೌಲ್ಯಕ್ಕೆ ಮಿತಿ ಹೇರಲಾಗಿದೆ.

ನೀವು ನೀಡಿದ ಮಾಹಿತಿಯಿಂದ ನಿಮ್ಮ ಮನೆಯ ಒಟ್ಟಾರೆ ಮೌಲ್ಯ ₹45 ಲಕ್ಷಕ್ಕೂ ಮೀರಿರಬಹುದು. ಮಾತ್ರವಲ್ಲ ನಿಮ್ಮ ಮನೆ ಬೆಂಗಳೂರಿನಲ್ಲಿರುವ ಕಾರಣ ಮೆಟ್ರೊ ವಿಭಾಗದಲ್ಲಿ ಬರುತ್ತದೆ. ಇದು ಮೆಟ್ರೊ ವ್ಯಾಪ್ತಿಗೆ ನಿಗದಿಪಡಿಸಿದ ವಿಸ್ತಾರಕ್ಕಿಂತ ಹೆಚ್ಚಾಗಿದೆ. ಈ ಕಾರಣಕ್ಕೆ ನಿಮ್ಮ ಗಮನಕ್ಕೆ ಬಂದ ಮಾಹಿತಿಯಂತೆ ಸೆಕ್ಷನ್ 80ಇಇಎ ಅಡಿ ಹೆಚ್ಚುವರಿ ₹1.50 ಲಕ್ಷದ ರಿಯಾಯಿತಿ ಪಡೆಯುವುದು ಸಾಧ್ಯವಿಲ್ಲ. ಹೀಗಾಗಿ, ಹಿಂದಿನ ವರ್ಷಗಳಲ್ಲೂ ತೆರಿಗೆ ಪಾವತಿಸಿ ನಷ್ಟ ಮಾಡಿಕೊಂಡೆ ಎಂಬ ಆತಂಕ ಬೇಡ. ಈಗಾಗಲೇ ಪಡೆದಿರುವ ರಿಯಾಯಿತಿ ಸರಿಯಾಗಿದೆ ಹಾಗೂ ಮುಂದುವರಿಸಿ.

ರಾಘವೇಂದ್ರ ರಾವ್, ಉಡುಪಿ.

- **ಪ್ರಶ್ನೆ: ನಾನು ವ್ಯಾಪಾರಸ್ಥನಾಗಿದ್ದು, ಕಳೆದ ಕೆಲವು ವರ್ಷಗಳಿಂದ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತಿದ್ದೇನೆ. ನಮ್ಮ ಊರಿನ ಅನೇಕ ಸಂಘ–ಸಂಸ್ಥೆಗಳು ಅಭಿವೃದ್ಧಿಯ ಉದ್ದೇಶದಿಂದ ದೇಣಿಗೆ ಕೋರಿಕೊಂಡು ಪ್ರತಿವರ್ಷ ನಮ್ಮಲ್ಲಿಗೆ ಬರುವುದುಂಟು. ಈ ಸಂದರ್ಭದಲ್ಲಿ ಸಾಕಷ್ಟು ದೇಣಿಗೆ ನೀಡಿರುವುದುಂಟು ಹಾಗೂ ಅದೇ ಸಂಪ್ರದಾಯ ಮುಂದೆಯೂ ಮುಂದುವರಿಯಲಿದೆ. ಕೆಲವು ಸಂದರ್ಭದಲ್ಲಿ ನಗದು ರೂಪದಲ್ಲೂ ದೇಣಿಗೆ ನೀಡಿದ್ದೇನೆ. ಇಂತಹ ಸಂದರ್ಭದಲ್ಲಿ ನಾವು ಈ ಪಾವತಿಗೆ ಆದಾಯ ತೆರಿಗೆ ರಿಯಾಯಿತಿ ಪಡೆಯಬಹುದೇ. ಈ ತನಕ ನಾವು ಈ ರೀತಿಯ ದೇಣಿಗೆಗಳನ್ನು ರಿಯಾಯಿತಿ, ವೆಚ್ಚ ಎಂದು ಪರಿಗಣಿಸಿರಲಿಲ್ಲ. ಒಂದು ವೇಳೆ ಸಿಗುವುದಿದ್ದರೆ ಅದು ಯಾವ ಮಿತಿಯೊಳಗೆ ಬರುತ್ತದೆ. ಈ ಬಗ್ಗೆ ಮಾಹಿತಿ ನೀಡಿ.**

ಉತ್ತರ: ಯಾವುದೇ ಸಂಘ– ಸಂಸ್ಥೆಗಳಿಗೆ ದೇಣಿಗೆ ಕೊಟ್ಟ ಮೊತ್ತಕ್ಕೆ ಶೇಕಡ ನೂರಕ್ಕೆ ನೂರರಷ್ಟು ತೆರಿಗೆ ರಿಯಾಯಿತಿ ಸಿಗುತ್ತದೆ ಎನ್ನುವುದು ನಮ್ಮ ಊಹೆ. ಆದರೆ, ವಾಸ್ತವದಲ್ಲಿ ಇಂತಹ ದೇಣಿಗೆಗೆ ಆದಾಯ ತೆರಿಗೆ ನಿಯಮದಡಿ ರಿಯಾಯಿತಿ ಪಡೆಯುವಂತಾಗಲು ಅಂತಹ ಸಂಘ– ಸಂಸ್ಥೆಗಳು ಆದಾಯ ತೆರಿಗೆ ಇಲಾಖೆಯಲ್ಲಿ ಸೆಕ್ಷನ್ 80ಜಿ ಅಡಿ ದೇಣಿಗೆ ಪಡೆಯಲು ಮತ್ತು ಸೇವಾ ಸಂಸ್ಥೆಯಾಗಿ ಮುಂದುವರಿಯಲು ಮಾನ್ಯತೆ ಹೊಂದಿರಬೇಕಾಗುತ್ತದೆ.

ಒಂದು ವೇಳೆ ಮಾನ್ಯತೆ ಇರದ ಸೇವಾ–ಸಂಸ್ಥೆಗಳಿಗೆ ದೇಣಿಗೆ ಕೊಟ್ಟರೆ ಅದು ತಪ್ಪೇನಲ್ಲ. ಆದರೆ, ತೆರಿಗೆಗೆ ಸಂಬಂಧಿಸಿ ಯಾವುದೇ ರಿಯಾಯಿತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ. ಹೀಗಾಗಿ, ಕೆಲವೊಮ್ಮೆ ಕೇವಲ ಆರ್ಥಿಕ ನೆರವಿನ ದೃಷ್ಟಿಯಿಂದ ಮಾಡುವ ದೇಣಿಗೆ, ವ್ಯವಹಾರದ ಹಿನ್ನೆಲೆಯಲ್ಲಿ ಪ್ರಯೋಜನಕಾರಿಯಾಗಲಾರದು.

ನಿಮ್ಮ ವಿಚಾರದಲ್ಲಿ ಮೊದಲ ಹಂತದಲ್ಲಿ ಇಂತಹ ಸಂಘ– ಸಂಸ್ಥೆಗಳು ಯಾವ ರೀತಿಯವು ಎಂದು ತಿಳಿದುಕೊಳ್ಳಿ. ಬಹಳಷ್ಟು ಬಾರಿ ಅವು ಕೇವಲ ನಿಗದಿತ ಉದ್ದೇಶಕ್ಕೆ ಮಾತ್ರ ಸೀಮಿತ ಆಗಿದ್ದು ಅದು ಪೂರ್ಣವಾದ ಕೂಡಲೇ ಆ ಸಮಿತಿ ಬರ್ಖಾಸ್ತುಗೊಳ್ಳುತ್ತದೆ ಅಥವಾ ಅಂತಹ ಸೇವಾ ಸಂಸ್ಥೆಗಳ ಮೂಲ ಉದ್ದೇಶ ಕೆಲವು ಸೀಮಿತ ಸಮುದಾಯಕ್ಕೆ ನೆರವು ನೀಡಿರುವುದಾಗಿರುತ್ತದೆ. ಅವು ಸಾರ್ವಜನಿಕ ಸೇವಾ ಸಂಸ್ಥೆಗಳಾಗಿರುವುದಿಲ್ಲ ಹಾಗೂ ತೆರಿಗೆ ಇಲಾಖೆಯಿಂದ ಮಾನ್ಯತೆ ಪಡೆಯುವ ವ್ಯಾಪ್ತಿಗೆ ಬಂದಿರುವುದಿಲ್ಲ.

ಆದಾಯ ತೆರಿಗೆಯ ಸೆಕ್ಷನ್ 80ಜಿ ಎಲ್ಲರೂ ತಿಳಿದಿರುವಂತೆ ದೇಣಿಗೆ ನೀಡಿದ್ದಕ್ಕೆ ಸಿಗುವ ಆದಾಯ ತೆರಿಗೆ ರಿಯಾಯಿತಿಯ ಸೆಕ್ಷನ್ ಆಗಿದೆ. ಆದರೆ, ಇದರಡಿ ಮಾನ್ಯತೆ ಪಡೆದ ಸಂಸ್ಥೆಗಳು ದೇಣಿಗೆ ಪಡೆದರೂ, ಮುಖ್ಯವಾಗಿ ನಾಲ್ಕು ಪ್ರತ್ಯೇಕ ವಿಧದ ದೇಣಿಗೆಗಳಿವೆ. 1. ಕೊಟ್ಟ ದೇಣಿಗೆಗೆ ಸಿಗುವ ಸಂಪೂರ್ಣ ತೆರಿಗೆ ರಿಯಾಯಿತಿ. 2. ಕೊಟ್ಟ ದೇಣಿಗೆಗೆ ಸಿಗುವ ಶೇ 50ರಷ್ಟು ತೆರಿಗೆ ರಿಯಾಯಿತಿ. 3. ಆದಾಯದ ಶೇ 10ಕ್ಕೆ ನಿರ್ಬಂಧಿತವಾಗಿ ಕೊಟ್ಟ ದೇಣಿಗೆಗೆ ಸಿಗುವ ಸಂಪೂರ್ಣ ತೆರಿಗೆ ರಿಯಾಯಿತಿ. 4. ಆದಾಯದ ಶೇ 10ಕ್ಕೆ ನಿರ್ಬಂಧಿತವಾಗಿ ಕೊಟ್ಟ ದೇಣಿಗೆಗೆ ಸಿಗುವ ಶೇ 50ರಷ್ಟು ತೆರಿಗೆ ರಿಯಾಯಿತಿ.

ನೀವು ದೇಣಿಗೆ ಕೊಟ್ಟಾಗ ಕಡ್ಡಾಯವಾಗಿ ರಸೀದಿ ಪಡೆಯುವುದು ಹಾಗೂ ನಿಮ್ಮ ಪ್ಯಾನ್ ಸಂಖ್ಯೆಯನ್ನು ಸರಿಯಾಗಿ ದಾಖಲಿಸಿದ್ದಾರೆಯೇ ಎನ್ನುವುದನ್ನೂ ಪರಿಶೀಲಿಸಿ. ಮಾತ್ರವಲ್ಲ ₹2 ಸಾವಿರಕ್ಕೂ ಹೆಚ್ಚು ಮೊತ್ತದ ದೇಣಿಗೆಯನ್ನು ನಗದು ರೂಪದಲ್ಲಿ ಮಾನ್ಯತೆ ಪಡೆದ ಸಂಸ್ಥೆಗಳಿಗೆ ನೀಡಿದರೂ ಯಾವುದೇ ವಿನಾಯಿತಿ ಸಿಗುವುದಿಲ್ಲ ಎಂಬುದು ಗಮನಾರ್ಹ ವಿಚಾರ. ಹೀಗಾಗಿ ದೇಣಿಗೆ ನೀಡುವ ಸಂದರ್ಭದಲ್ಲಿ ಚೆಕ್, ಡಿಡಿ, ನೆಫ್ಟ್ ಇತ್ಯಾದಿ ರೂಪದಲ್ಲಿ ಪಾವತಿಸಿ. ❖

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

WANTED
"Driver for Mahindra Commercial Vehicle and Tata 407 Required. Within City Driving only. Job Timings are Mon-Sat 10AM to 6.30 PM. Please meet in person with Aadhar Copy, DL Copy, and 1 Photo at Pan Office Systems Private Limited, No 5, 1st A Cross, Bismilla Nagar, Bannerghatta Road Cross, Bangalore- 560029 Ph: 080-26684821, 9341221125 If you live outside Bangalore, please DO NOT CALL.

ದೊಡ್ಡಬಳ್ಳಾಪುರದಲ್ಲಿರುವ ಅಪರ್ಣ ಎಂಟರ್‌ಪ್ರೈಸಸ್ ಲಿಮಿಟೆಡ್ ಕಂಪನಿಗೆ (UPVC ಬಾಗಿಲು ಕಿಟಕಿ ತಯಾರಕರು) ಅನುಭವವುಳ್ಳ ಸೂಪರ್‌ವೈಸರ್ ಎಲೆಕ್ಟ್ರೀಷಿಯನ್ಸ್, ಆಪರೇಟರ್ ಹೆಲ್ಪರ್, ಲೋಡಿಂಗ್, un ಲೋಡಿಂಗ್, QC ಹೆಲ್ಪರ್ ಬೇಕಾಗಿದ್ದಾರೆ. ಆಕರ್ಷಕ ವೇತನ OT, ESI, PF ಸೌಲಭ್ಯವಿದೆ. ಸಂದರ್ಶನ: ಗುರುವಾರ (4/4/2024) ಬೆಳಿಗ್ಗೆ10 ಗಂಟೆಯಿಂದ ವಿಳಾಸ: #310 ಒಬದೇನಹಳ್ಳಿ ಕೈಗಾರಿಕಾ ಪ್ರದೇಶ ದೊಡ್ಡಬಳ್ಳಾಪುರ ದೂರವಾಣಿ: 7022028280 9154950410

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

EDUCATION CORNER

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಂಪ್ಯೂಟರ್ ತರಬೇತಿ ಕೇಂದ್ರಗಳಿಗೆ ಅರ್ಜಿ ಆಹ್ವಾನ
ಸರಕಾರದ ಅಂಗೀಕೃತ ಕಂಪ್ಯೂಟರ್, ವಿವಿಧ ಕೋರ್ಸುಗಳನ್ನು ನಡೆಸಲು ಸುವರ್ಣಾಕಾಶ
ಶಾಲೆ ಕಾಲೇಜುಗಳಲ್ಲಿ ಖಾತರಿ ಉದ್ಯೋಗ ಕಲ್ಪಿಸುವ 1 ವರುಷದ ಡಿಪ್ಲೋಮಾ ಇನ್ ಕಂಪ್ಯೂಟರ್ ಟೀಚರ್ಸ್ ಟ್ರೈನಿಂಗ್ ಕೋರ್ಸು (DCTTC)
Nursery Teachers Training Course Qual : PUC. ಈ ಕೋರ್ಸುಗಳಲ್ಲದೆ
Post Graduation Diploma in Information Technology
DIPLOMA IN COMPUTER DATA ENTRY OPERATOR
6 ತಿಂಗಳ DIT,DCA,DOA ಇತ್ಯಾದಿ ಕೋರ್ಸುಗಳು
ಸರಕಾರದ ವಿವಿಧ ಕೌಶಲ್ಯ ಯೋಜನೆಯ ಪಾಲುದಾರಿಕಾ ಸಂಸ್ಥೆ.
ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ
Sharing Computer Literacy with Govt. of India
Recognized by Govt. of Karnataka
The RCSS
Mob. 9008419955, 9901520055, 9449198555
www.thercss.com Email : info@thercss.com

ಭವಿಷ್ಯ — Astrology

★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಪ್ರವಾಸ — Travel

13.04.2024 6ದಿನಗಳು A/Cಬಸ್ಸಿನಲ್ಲಿ ಅಯೋಧ್ಯೆ, ಕಾಶಿ,ಗಯಾ, ಪ್ರಯೋಗರಾಜ್ (ಕೆಲವೇ ಸೀಟುಗಳಿವೆ) 12.07.2024 13/17ದಿನಗಳು ಅಮರನಾಥ್, ವೈಷ್ಣೋದೇವಿ, ಕಾಶ್ಮೀರ, ಅಮೃತಸರ್, ಆಗ್ರ,ದೆಹಲಿ ಇತ್ಯಾದಿ.28000/ಏಪ್ರಿಲ್, ಮೇನಲ್ಲಿ ಹಡಗು/ವಿಮಾನದಲ್ಲಿ ಅಂಡಮಾನ್ ಹವಳದ್ವೀಪ. Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'. 9739847429/ 9845560219

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವೇನಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ — ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

'ಚುನಾವಣಾ ನಾಟಕ, ಬೇರೇನೂ ಅಲ್ಲ'

ಕಚ್ಚತೀವು: ನಮ್ಮ ಹಕ್ಕುಗಳ ರಕ್ಷಣೆ ಕುರಿತು ಚರ್ಚಿಸಲಿ: ಬಿಜೆಪಿಗೆ ರಾಮೇಶ್ವರಂ ಮೀನುಗಾರರ ಆಗ್ರಹ

ಪ್ರಜಾವಾಣಿ ವಾರ್ತೆ

ರಾಮೇಶ್ವರಂ, ತಮಿಳುನಾಡು: 'ಇದು ಚುನಾವಣೆಗೆ ಮೊದಲು ಜನರನ್ನು ವಂಚಿಸಲು ಆರಂಭಿಸಿರುವ ರಾಜಕೀಯ ನಾಟಕ ಎಂಬುದು ಸ್ಪಷ್ಟ. ಮತ ಸೆಳೆಯುವುದೊಂದೇ ಇದರ ಉದ್ದೇಶ...'

ಕಾಂಗ್ರೆಸ್– ಬಿಜೆಪಿ ನಡುವೆ ಸದ್ಯ ವಾಕ್ಸಮರಕ್ಕೆ ಕಾರಣವಾಗಿರುವ 'ಕಚ್ಚತೀವು' ದ್ವೀಪದ ಉಲ್ಲೇಖ ಕುರಿತಂತೆ ತಮಿಳುನಾಡಿನ ಪ್ರಮುಖ ಮೀನುಗಾರಿಕೆ ತಾಣ, ರಾಮೇಶ್ವರಂನಲ್ಲಿ ಕೇಳಿಬಂದ ಮಾತಿದು.

'ಇಲ್ಲಿನ ಮೀನುಗಾರರಿಗೆ 'ಕಚ್ಚತೀವು' ಈಗ ಚರ್ಚೆಯ ವಸ್ತುವಾಗಿದೆ.

285 ಎಕರೆ ವಿಸ್ತೀರ್ಣದ ಕಚ್ಚತೀವು ದ್ವೀಪ, ರಾಮೇಶ್ವರಂನಿಂದ 16 ನಾಟಿಕಲ್ ಮೈಲು ದೂರದಲ್ಲಿದೆ. ಮೆಕ್ಯಾನಿಕ್ ಬೋಟ್‌ಗಳಲ್ಲಿ 90 ನಿಮಿಷದ ಪಯಣ. 1974ರಲ್ಲಿ ಇದನ್ನು ಶ್ರೀಲಂಕಾಕ್ಕೆ ಬಿಟ್ಟುಕೊಡಲಾಗಿದೆ.

ಲೋಕಸಭೆ ಚುನಾವಣೆ ಕಾವು ಹೆಚ್ಚುತ್ತಿರುವ ಹೊತ್ತಿನಲ್ಲಿ ಕಚ್ಚತೀವು ವಿಷಯ ಪ್ರಸ್ತಾಪಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿಯವರು ಈ ಚರ್ಚೆಗೆ ಕಿಡಿಹೊತ್ತಿಸಿದ್ದಾರೆ ಎನ್ನುವುದು ಸ್ಥಳೀಯರ ಪ್ರತಿಕ್ರಿಯೆ.

'ಬಿಜೆಪಿ ಅಧಿಕಾರಕ್ಕೆ ಬಂದು 10 ವರ್ಷವಾಯಿತು. ಈಗ ದಿಢೀರನೆ ಈ ವಿಷಯ ಪ್ರಸ್ತಾಪಿಸಿದ್ದಾರೆ' ಎಂದು ಮೀನುಗಾರರು ಹೇಳಿದರು.

'ತಮಿಳುನಾಡಿನಲ್ಲಿ ಡಿಎಂಕೆ ಸರ್ಕಾರವಿದ್ದಾಗ, ಕೇಂದ್ರದ ಕಾಂಗ್ರೆಸ್ ಸರ್ಕಾರ ದ್ವೀಪ ಬಿಟ್ಟುಕೊಟ್ಟಿತು ಎನ್ನುವುದು ಸಾಮಾನ್ಯಜ್ಞಾನ. ಅದನ್ನೇ ಈಗ ಹೊಸತಾಗಿ ಹೇಳುತ್ತಿರುವ ಉದ್ದೇಶವಾದರೂ ಏನು' ಎಂದು ಮೀನುಗಾರರ ಸಂಘದ ಅಧ್ಯಕ್ಷ ಎಸ್. ದೇವದಾಸ್ ಪ್ರಶ್ನಿಸಿದರು.

'ಭಾರತದ ಜಲಗಡಿಯಲ್ಲಿ ಹೆಚ್ಚು ಮೀನು ಸಿಗದು. ರಾಮೇಶ್ವರಂನಿಂದ 12 ನಾಟಿಕಲ್ ಮೈಲು ದೂರದ ಅಂತರರಾಷ್ಟ್ರೀಯ ಜಲ ಗಡಿ ದಾಟುವುದು ಅನಿವಾರ್ಯ. ಆಗ ಮೀನುಗಾರರ ಬಂಧನವಾಗುತ್ತದೆ. ಅವರನ್ನು ಬಿಡಿಸಿಕೊಂಡು ಬರುವುದೇ ಕಷ್ಟ. ಮೀನುಗಾರರ ಬಿಡುಗಡೆಗೆ ಕೇಂದ್ರ ಏನನ್ನೂ ಮಾಡಿಲ್ಲ. ನಿಯಮದಂತೆ 14 ದಿನಗಳ ಬಳಿಕ ಬಿಡುಗಡೆ ಆದಾಗ, ಅದು ತನ್ನದೇ ಸಾಧನೆ ಎಂಬಂತೆ ಹೇಳಿಕೊಳ್ಳುತ್ತದೆ' ಎಂದು ಎಸ್.ಎಮಿಲ್ ಹೇಳಿದರು.

ಕಚ್ಚತೀವು ದ್ವೀಪವನ್ನು ಮರಳಿ ಪಡೆಯಲಿದ್ದರೆ, ಕನಿಷ್ಠ ಭಾರತೀಯ ಮೀನುಗಾರರ ಹಕ್ಕುಗಳ ರಕ್ಷಣೆ ಕುರಿತಂತೆ ಶ್ರೀಲಂಕಾ ಜೊತೆ ಚರ್ಚಿಸಲಿ. ಈ ಹಕ್ಕು 1974ರ ಭಾರತ–ಶ್ರೀಲಂಕಾ ಒಪ್ಪಂದದಲ್ಲೂ ಇದೆ ಎನ್ನುತ್ತಾರೆ ದೇವದಾಸ್.

'ನನ್ನ ಬೋಟ್ ತಡೆಹಿಡಿದಿದ್ದರು. ₹10 ಲಕ್ಷ ವ್ಯಯಿಸಿದರೂ ಬಿಡಿಸಿಕೊಳ್ಳಲು ಆಗಲಿಲ್ಲ. ಬಿಜೆಪಿ ರಾಜಕಾರಣ ಮಾಡುವುದನ್ನು ಬಿಟ್ಟು ಮೀನುಗಾರರ ನೆರವಿಗೆ ಬರಲಿ. ಶ್ರೀಲಂಕಾದ ನೌಕಾಪಡೆ 10 ವರ್ಷಗಳಲ್ಲಿ ಸುಮಾರು 360 ದೋಣಿಗಳನ್ನು ತಡೆಹಿಡಿದಿದೆ. ಒಂದು ವರ್ಷ ಬೋಟ್‌ಗಳನ್ನು ಬಿಡಿಸಿ ಎಂದು ತಿಳಿಸಿ' ಎಂದು ಆಗ್ರಹಿಸಿದರು.

'ಮೀನುಗಾರರ ಮೇಲಿನ ದೌರ್ಜನ್ಯ ತಡೆಯುವುದಾಗಿ 2014ರಲ್ಲಿ ಪ್ರಚಾರಕ್ಕೆ ಬಂದಿದ್ದ ಸುಷ್ಮಾ ಸ್ವರಾಜ್ ಭರವಸೆ ನೀಡಿದ್ದರು. ಅದು ಏನಾಯಿತು? ಮೋದಿ ಈ ವರ್ಷದ ಜನವರಿಯಲ್ಲಿ ರಾಮೇಶ್ವರಕ್ಕೆ ಬಂದಿದ್ದರು. ಕಚ್ಚತೀವು ಭಾರತದ ಭಾಗವಲ್ಲ ಎಂದು ಈಗ ಗೊತ್ತಾಗಲಿಲ್ಲವೇ' ಎಂದು ಪ್ರಶ್ನಿಸಿದರು.

'ಸ್ವಾತಂತ್ರ್ಯ 75ನೇ ವರ್ಷದ ನಿಮಿತ್ತ 75 ದೋಣಿಗಳ ಕಾರ್ಯಾಚರಣೆಗೆ ರಾಜ್ಯ ಬಿಜೆಪಿ ಅಧ್ಯಕ್ಷ ಕೆ.ಅಣ್ಣಾಮಲೈ ಚಾಲನೆ ನೀಡಿದ್ದರು. ಈ ಪೈಕಿ ಒಂದನ್ನು ಈಗ ನೆರೆ ರಾಷ್ಟ್ರದ ನೌಕಾಪಡೆ ತಡೆಹಿಡಿದಿದೆ. ಬಿಜೆಪಿ ಈ ಬಗ್ಗೆ ಚರ್ಚಿಸುವುದಿಲ್ಲ' ಎನ್ನುವುದು ಮೀನುಗಾರ ಪೆರುಮಾಳ್ ಪ್ರಶ್ನೆ.

ರಾಮೇಶ್ವರಂ ಬಳಿ ಕಡಲಿನಲ್ಲಿ ಮೀನುಗಾರಿಕೆ ದೋಣಿಗಳನ್ನು ಲಂಗರು ಹಾಕಿರುವುದು –ಪ್ರಜಾವಾಣಿ ಚಿತ್ರ

ವಿಷಯ ಚರ್ಚೆಸಿಲ್ಲ: ಶ್ರೀಲಂಕಾ ಸ್ಪಷ್ಟನೆ

ಕೊಲಂಬೊ (ಪಿಟಿಐ): ಕಚ್ಚತೀವು ದ್ವೀಪದ ಸಂಬಂಧ ಸಚಿವ ಸಂಪುಟ ಈವರೆಗೆ ಚರ್ಚೆ ನಡೆಸಿಲ್ಲ ಎಂದು ಶ್ರೀಲಂಕಾ ಸರ್ಕಾರದ ವಕ್ತಾರರು ಮಂಗಳವಾರ ಇಲ್ಲಿ ಹೇಳಿದರು.

'ಸಂಪುಟದಲ್ಲಿ ಈ ವಿಷಯ ಪ್ರಸ್ತಾಪವಾಗಿಲ್ಲ, ಹಾಗಾಗಿ ಚರ್ಚೆ ಆಗಿಲ್ಲ' ಎಂದು ವಾರ್ತಾ ಸಚಿವ ಬಂದುಲ ಗುಣವರ್ಧನ ಅವರು ಮಂಗಳವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಡಿಎಂಕೆಯಿಂದ ಬೇಜವಾಬ್ದಾರಿ ಹೇಳಿಕೆ'

ಚೆನ್ನೈ (ಪಿಟಿಐ): 'ಕಚ್ಚತೀವು ಕುರಿತು ಡಿಎಂಕೆ ಸರ್ಕಾರ ಬೇಜವಾಬ್ದಾರಿ ಹೇಳಿಕೆ ನೀಡುತ್ತಿದೆ' ಎಂದು ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಟೀಕಿಸಿದ್ದಾರೆ.

'1974ರಲ್ಲಿ ಮುಖ್ಯಮಂತ್ರಿಯಾಗಿದ್ದ, ಆಗಿನ ಡಿಎಂಕೆ ಅಧ್ಯಕ್ಷ ದಿವಂಗತ ಎಂ.ಕರುಣಾನಿಧಿ ಅವರಿಗೆ ಆಗ ಕೇಂದ್ರದಲ್ಲಿ ಇದ್ದ ಕಾಂಗ್ರೆಸ್ ಸರ್ಕಾರದ ನಡೆ ಕುರಿತಂತೆ ಮಾಹಿತಿ ಇತ್ತು. ಆದರೆ, ಆಕ್ಷೇಪ ವ್ಯಕ್ತಪಡಿಸಿರಲಿಲ್ಲ' ಎಂದು ಹೇಳಿದ್ದಾರೆ. ಮಂಗಳವಾರ ಇಲ್ಲಿ 'ವಿಕಸಿತ ಭಾರತ' ಕಾರ್ಯಕ್ರಮದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಸಂಘರ್ಷಕ್ಕೆ ಇಂಬುಗೊಟ್ಟೀತು: ಚಿದಂಬರಂ

ನವದೆಹಲಿ (ಪಿಟಿಐ): 'ಕಚ್ಚತೀವು ದ್ವೀಪ ಕುರಿತಂತೆ 50 ವರ್ಷಗಳ ನಂತರ 'ಅಸತ್ಯ ಮತ್ತು ಕದನಕ್ಕೆ ಪ್ರೇರೇಪಿಸುವಂತಹ' ಹೇಳಿಕೆ ನೀಡುವುದು ಶ್ರೀಲಂಕಾ ಸರ್ಕಾರ ಹಾಗೂ ಅಲ್ಲಿರುವ ತಮಿಳಿಗರ ನಡುವೆ ಸಂಘರ್ಷಕ್ಕೆ ಕಾರಣವಾಗಬಹುದು' ಎಂದು ಕಾಂಗ್ರೆಸ್‌ನ ನಾಯಕ ಪಿ.ಚಿದಂಬರಂ ಕೇಂದ್ರಕ್ಕೆ ಎಚ್ಚರಿಸಿದ್ದಾರೆ.

'ಸಚಿವ ಎಸ್.ಜೈಶಂಕರ್ ಮತ್ತು ಇತರರು ಹೇಳಿಕೆ ನೀಡುವ ಮುನ್ನ, ಅಲ್ಲಿ 25 ಲಕ್ಷ ಶ್ರೀಲಂಕಾ ತಮಿಳಿಗರು, 10 ಲಕ್ಷ ಭಾರತೀಯ ತಮಿಳಿಗರು ಇದ್ದಾರೆನ್ನುವುದನ್ನು ಮರೆಯಬಾರದು. ಭಾರತದ ಸುಮಾರು 2 ಸಾವಿರ ಅಡಿ ಭೂಮಿಯನ್ನು ಚೀನಾ ಆಕ್ರಮಿಸಿದೆ. ಯುದ್ಧೋತ್ಸಾಹವನ್ನು ಚೀನಾದತ್ತ ತೋರಿಸಲಿ.' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಚುನಾವಣಾ ಬಾಂಡ್: ಎಸ್‌ಒಪಿ ಬಹಿರಂಗಕ್ಕೆ ಎಸ್‌ಬಿಐ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಹಿತಿ ಹಕ್ಕು ಕಾಯ್ದೆಯಲ್ಲಿ ಇರುವ 'ವಾಣಿಜ್ಯ ಗೋಪ್ಯತೆ'ಯನ್ನು ಉಲ್ಲೇಖಿಸಿರುವ ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಚುನಾವಣಾ ಬಾಂಡ್‌ಗಳ ಮಾರಾಟ ಮತ್ತು ಅವುಗಳ ನಗದೀಕರಣ ಪ್ರಕ್ರಿಯೆಯಲ್ಲಿ ಪಾಲಿಸಿದ 'ಪ್ರಮಾಣಿತ ಕಾರ್ಯಾಚರಣೆ ವಿಧಾನ'ವನ್ನು (ಎಸ್‌ಒಪಿ) ಬಹಿರಂಗ ಪಡಿಸಲು ನಿರಾಕರಿಸಿದೆ. ಎಸ್‌ಬಿಐನ ಈ ನಡೆಗೆ ಪಾರದರ್ಶಕತೆಯ ಪರವಾಗಿ ಇರುವ ಸಾಮಾಜಿಕ ಕಾರ್ಯಕರ್ತರಿಂದ ವಿರೋಧ ವ್ಯಕ್ತವಾಗಿದೆ.

ಚುನಾವಣಾ ಬಾಂಡ್‌ಗಳ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದ 'ಕಾಮನ್ ಕಾಸ್' ಸಂಘಟನೆಯ ಟ್ರಸ್ಟಿ ಕೂಡ ಆಗಿರುವ ಅಂಜಲಿ ಭಾರದ್ವಾಜ್ ಅವರು, ಚುನಾವಣಾ ಬಾಂಡ್‌ಗಳ ಮಾರಾಟ ಮತ್ತು ನಗದೀಕರಣಕ್ಕೆ ಮಾನ್ಯತೆ ಹೊಂದಿದ್ದ ಶಾಖೆಗಳಿಗೆ ರವಾನಿಸಿದ್ದ ಎಸ್‌ಒಪಿ ಪ್ರತಿಯನ್ನು ನೀಡುವಂತೆ ಎಸ್‌ಬಿಐಗೆ ಆರ್‌ಟಿಐ ಅಡಿ ಅರ್ಜಿ ಸಲ್ಲಿಸಿದ್ದರು.

ಇದಕ್ಕೆ ಮಾರ್ಚ್ 30ರಂದು ಉತ್ತರ ನೀಡಿರುವ ಎಸ್‌ಬಿಐ, 'ಚುನಾವಣಾ ಬಾಂಡ್ ಯೋಜನೆ– 2018ರ ಬಗ್ಗೆ ಮಾನ್ಯತೆ ಪಡೆದ ಶಾಖೆಗಳಿಗೆ ಕಾಲಕಾಲಕ್ಕೆ ರವಾನಿಸಿರುವ ಎಸ್‌ಒಪಿ ಆಂತರಿಕ ಮಾರ್ಗಸೂಚಿ ಮಾತ್ರ. ಅದಕ್ಕೆ ಮಾಹಿತಿ ಹಕ್ಕು ಕಾಯ್ದೆಯ ಸೆಕ್ಷನ್ 8(1)(ಡಿ) ಅಡಿಯಲ್ಲಿ ವಿನಾಯಿತಿ ಇದೆ' ಎಂದು ಹೇಳಿದೆ.

ನಿರ್ದಿಷ್ಟ ಬಗೆಯ ಮಾಹಿತಿ ಬಹಿರಂಗಪಡಿಸುವುದನ್ನು ನಿರಾಕರಿಸಲು ಆರ್‌ಟಿಐ ಕಾಯ್ದೆಯ ಸೆಕ್ಷನ್ 8(1)(ಡಿ) ಅಡಿ ಅವಕಾಶ ಇದೆ.

'ಈ ಮಾಹಿತಿಯನ್ನು ಬಹಿರಂಗ ಪಡಿಸುವುದರಿಂದ ಮೂರನೆಯ ವ್ಯಕ್ತಿಯ ಸ್ಪರ್ಧಾತ್ಮಕತೆಗೆ ಹೇಗೆ ಧಕ್ಕೆ ಉಂಟಾಗುತ್ತದೆ ಎಂಬುದನ್ನು ವಿವರಿಸದೆಯೇ ಎಸ್‌ಬಿಐ ಸೆಕ್ಷನ್ 8(1)(ಡಿ) ಅಡಿಯಲ್ಲಿ ಮಾಹಿತಿ ಬಹಿರಂಗಪಡಿಸುವುದರಿಂದ ಇದಕ್ಕೆ ವಿನಾಯಿತಿ ಇದೆ ಎಂದು ಎಸ್‌ಬಿಐ ಹೇಳಿದೆ. ಮಾಹಿತಿ ನಿರಾಕರಿಸಿರುವುದನ್ನು ಮೇಲ್ಮನವಿ ಮೂಲಕ ಪ್ರಶ್ನಿಸಲಾಗುವುದು' ಎಂದು ಅಂಜಲಿ ಹೇಳಿದರು.

ಚುನಾವಣಾ ಬಾಂಡ್‌ಗಳ ಮೂಲಕ ನಡೆದ ಹಣಕಾಸು ವಹಿವಾಟುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಎಸ್‌ಬಿಐ ಹೇಗೆ ದಾಖಲಿಸಿಕೊಂಡಿತ್ತು ಎಂಬ ವಿಚಾರವಾಗಿ ಸ್ಪಷ್ಟತೆ ಕೊರತೆ ಇರುವ ಕಾರಣ ತಾವು ಎಸ್‌ಒಪಿ ಪ್ರತಿಗಾಗಿ ಕೋರಿಕೆ ಸಲ್ಲಿಸಿದ್ದಾಗಿ ತಿಳಿಸಿದರು.

'ಚುನಾವಣಾ ಬಾಂಡ್ ಯೋಜನೆಯು ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ಹೇಳಿದ ನಂತರವೂ, ಖರೀದಿದಾರರು ಹಾಗೂ ನಗದೀಕರಿಸಿಕೊಂಡ ಚುನಾವಣಾ ಬಾಂಡ್‌ಗಳ ಕುರಿತ ಎಲ್ಲ ಮಾಹಿತಿ ಬಹಿರಂಗಪಡಿಸುವುದನ್ನು ಖಾತರಿಪಡಿಸಿದ ನಂತರವೂ ಎಸ್‌ಬಿಐ ಈ ಯೋಜನೆಯ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಪ್ರಮುಖ ಮಾಹಿತಿಯನ್ನು ನಿರಾಕರಿಸುತ್ತಿರುವುದು ಆಘಾತಕಾರಿ' ಎಂದು ಅಂಜಲಿ ಹೇಳಿದರು.

ರಾಮದೇವ್‌ಗೆ 'ಸುಪ್ರೀಂ' ಛೀಮಾರಿ

ನವದೆಹಲಿ (ಪಿಟಿಐ): ಪತಂಜಲಿ ಆಯುರ್ವೇದ ಕಂಪನಿಯು ತನ್ನ ಪ್ರಾಡಕ್ಟ್‌ಗಳ ಜಾಹೀರಾತುಗಳನ್ನು ಸಮರ್ಥಿಸಿಕೊಂಡಿರುವುದನ್ನು ಸುಪ್ರೀಂ ಕೋರ್ಟ್ ಮಂಗಳವಾರ ಕಟುಶಬ್ದಗಳಲ್ಲಿ ಖಂಡಿಸಿದೆ. ಅಲ್ಲದೇ, ಯೋಗಗುರು ಬಾಬಾ ರಾಮದೇವ್ ಮತ್ತು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಅವರು ಈ ಹಿಂದೆ ಕೇಳಿರುವ ಕ್ಷಮೆಯು ಕೇವಲ 'ಬಾಯಿಮಾತಿಗೆ ಅಷ್ಟೆ' ಎಂದೂ ಕೋರ್ಟ್ ಆಕ್ಷೇಪಿಸಿದೆ.

ತನ್ನ ಕಂಪನಿಯ ಉತ್ಪನ್ನಗಳ ಫಲದಾಯಕತೆ ಕುರಿತು ಸುಳ್ಳು ಜಾಹೀರಾತು ಪ್ರಕಟಿಸಿರುವ ಮತ್ತು ಅಲೋಪತಿ ಚಿಕಿತ್ಸಾ ವಿಧಾನದ ಕುರಿತು ಸುಳ್ಳು ಮಾಹಿತಿ ಹರಿಬಿಟ್ಟ ಆರೋಪದ ಮೇಲೆ ಭಾರತೀಯ ವೈದ್ಯಕೀಯ ಸಂಘ ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ನೇತೃತ್ವದ ನ್ಯಾಯಪೀಠ ಹೀಗೆ ಹೇಳಿದೆ.

ಕೆಲ ದಾಖಲೆಗಳನ್ನು ಸಲ್ಲಿಸುವಂತೆ ಪತಂಜಲಿಗೆ ಕೋರ್ಟ್ ಸೂಚಿಸಿತ್ತು. ಆದರೆ, ಕಂಪನಿ ಸಲ್ಲಿಸಿರುವ ದಾಖಲೆಗಳಲ್ಲಿ ತಿರುಚಲಾದ ದಾಖಲೆಗಳೂ ಸೇರಿವೆ ಎಂದ ನ್ಯಾಯಪೀಠ, 'ಇದು ಸಂಪೂರ್ಣ ಅವಿಧೇಯತೆ' ಎಂದು ಹೇಳಿತು.

'ಕೋರ್ಟ್‌ಗೆ ನೀಡಿರುವ ಭರವಸೆಗೆ ನೀವು ಬದ್ಧರಾಗಿರಬೇಕು. ಆದರೆ ನೀವು ಎಲ್ಲ ಎಲ್ಲೆಗಳನ್ನು ಮೀರಿದ್ದೀರಿ. ನೀವು ಕ್ಷಮೆ ಕೇಳುತ್ತಿರುವುದು ಕೂಡ ತಪ್ಪಾಗಿದೆ' ಎಂದು ರಾಮದೇವ್ ಮತ್ತು ಬಾಲಕೃಷ್ಣ ಅವರಿಗೆ ಪೀಠ ಹೇಳಿತು.

ಅರ್ಜಿಯ ಮುಂದಿನ ವಿಚಾರಣೆಯನ್ನು ಏಪ್ರಿಲ್ 10ಕ್ಕೆ ನಿಗದಿಪಡಿಸಿತು.

ಕೇಂದ್ರದ ವಿರುದ್ಧ ಕಿಡಿ: ಕೇಂದ್ರ ಸರ್ಕಾರವನ್ನೂ ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತು. ಕೋವಿಡ್– 19 ಸಾಂಕ್ರಾಮಿಕದಿಂದ ಜನರನ್ನು ಸಂರಕ್ಷಿಸುವುದಾಗಿ ಹೇಳಿ ಕಂಪನಿ ಹೊರಡಿಸಿದ್ದ ಸುಳ್ಳು ಜಾಹೀರಾತುಗಳ ವಿರುದ್ಧ ಕೇಂದ್ರ ಸರ್ಕಾರ ಏಕೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪ್ರಶ್ನಿಸಿತು.

ಎಎಪಿಯ ನಾಲ್ವರನ್ನು ಇ.ಡಿ ಮೂಲಕ ಬಂಧಿಸಲು ಬಿಜೆಪಿ ಸಿದ್ಧತೆ– ಆತಿಶಿ

'ಬಿಜೆಪಿ ಸೇರಿ, ಇಲ್ಲವೇ ಬಂಧನ ಎದುರಿಸಿ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ರಾಜಕೀಯ ಭವಿಷ್ಯ ಉಳಿಸಿಕೊಳ್ಳಲು ಬಿಜೆಪಿ ಸೇರಿ. ಇಲ್ಲವೇ ಒಂದೆರಡು ತಿಂಗಳಲ್ಲಿ ನಿಮ್ಮನ್ನೂ ಸೇರಿ ಎಎಪಿಯ ನಾಲ್ವರು ನಾಯಕರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಮೂಲಕ ಬಂಧಿಸಲಾಗುತ್ತದೆ ಎಂದು ನನಗೆ ಹತ್ತಿರವಿರುವ ವ್ಯಕ್ತಿಯ ಮೂಲಕ ಬಿಜೆಪಿ ಸಂದೇಶ ಕಳಿಸಿದೆ' ಎಂದು ದೆಹಲಿ ಸಚಿವೆ ಆತಿಶಿ ಮಂಗಳವಾರ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ನಾಯಕರು ಎಎಪಿಯನ್ನು ನಾಶ ಮಾಡಲು ನಿರ್ಧರಿಸಿದ್ದಾರೆ. ದೆಹಲಿ ಸಚಿವ ಸೌರಭ್ ಭಾರದ್ವಾಜ್, ಶಾಸಕ ದುರ್ಗೇಶ್ ಪಾಠಕ್ ಮತ್ತು ರಾಜ್ಯಸಭಾ ಸದಸ್ಯ ರಾಘವ್ ಚಡ್ಡಾ ಅವರನ್ನು ಬಂಧಿಸಲಾಗುವುದು ಎಂಬುದಾಗಿ ಅವರು ತಿಳಿಸಿದ್ದಾರೆ' ಎಂದರು.

'ಮುಂದಿನ ದಿನಗಳಲ್ಲಿ ಇ.ಡಿ ತನ್ನ ನಿವಾಸ ಮತ್ತು ಸಂಬಂಧಿಕರ ಮನೆಗಳ ಮೇಲೆ ಶೋಧ ನಡೆಸಲಿದೆ ಎಂಬುದಾಗಿಯೂ ತಿಳಿಸಲಾಗಿದೆ. ಮೊದಲು ಸಮನ್ಸ್ ನೀಡಿ, ನಂತರ ಬಂಧಿಸುವ ಸಾಧ್ಯತೆ ಇದೆ' ಎಂದು ಅವರು ಹೇಳಿದರು.

ಈ ಆರೋಪಗಳನ್ನು ಅಲ್ಲಗಳೆದಿರುವ ಬಿಜೆಪಿಯ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ ಅವರು, 'ಆತಿಶಿ ಸುಳ್ಳು ಹೇಳುತ್ತಿದ್ದಾರೆ, ಇಡೀ ಎಎಪಿ ಪಕ್ಷವು ಅಬಕಾರಿ ಹಗರಣದಲ್ಲಿ ಭಾಗಿಯಾಗಿದೆ' ಎಂದು ದೂರಿದರು.

'ಕೇಜ್ರಿವಾಲ್ ಬಂಧನದಿಂದ ಎಎಪಿಯನ್ನು ವಿಭಜಿಸುವುದು ಸಾಧ್ಯವಿಲ್ಲ ಎಂಬುದನ್ನು ಅರಿತುಕೊಂಡ ಬಳಿಕ ಬಿಜೆಪಿ, ಈಗ ಎಎಪಿಯ ಎರಡನೇ ಸಾಲಿನ ನಾಲ್ವರು ನಾಯಕರನ್ನು ಬಂಧಿಸುವ ಗುರಿ ಹೊಂದಿದೆ' ಎಂದು ಅವರು ದೂರಿದರು. ದೆಹಲಿಯ ರಾಮಲೀಲಾ ಮೈದಾನದಲ್ಲಿ 'ಇಂಡಿಯಾ' ಮೈತ್ರಿಕೂಟದ ರ‍್ಯಾಲಿಯ ಯಶಸ್ಸಿನ ಬಳಿಕ ಬಿಜೆಪಿ ವಿಚಲಿತವಾಗಿದೆ ಎಂದು ಹೇಳಿದರು.

'ನಾವು ಕೇಜ್ರಿವಾಲ್ ಸೈನಿಕರು, ಹೆದರಲ್ಲ': 'ನಿಮ್ಮ ಬೆದರಿಕೆಗಳಿಗೆಲ್ಲ ಹೆದರುವುದಿಲ್ಲ. ನಾವು ಕೇಜ್ರಿವಾಲ್ ಸೈನಿಕರು ಮತ್ತು ಭಗತ್ ಸಿಂಗ್ ಅವರ ಶಿಷ್ಯರು. ದೇಶ, ಸಂವಿಧಾನವನ್ನು ಉಳಿಸಲು ಮತ್ತು ಜನರ ಒಳಿತಿಗಾಗಿ ಎಎಪಿಯ ಕೊನೆಯ ಸ್ವಯಂ ಸೇವಕರಿರುವವರೆಗೂ ಹೋರಾಡುತ್ತೇವೆ' ಎಂದು ಅವರು ಪ್ರತಿಪಾದಿಸಿದರು.

ಬಿಜೆಪಿಯು ತನ್ನ ಶಾಸಕರನ್ನು ಖರೀದಿಸಲು ಯತ್ನಿಸುವ ಮೂಲಕ ಎಎಪಿಯನ್ನು ಒಡೆಯಲು ನೋಡುತ್ತಿದೆ. ಈ ಮೂಲಕ ದೆಹಲಿಯಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಲೂ ಅದು ಬಯಸಿದೆ ಎಂದು ಅವರು ಆರೋಪಿಸಿದರು. ಎಎಪಿ ಶಾಸಕ ರಿತುರಾಜ್ ಝಾ ಅವರನ್ನು ಕೇಸರಿ ಪಕ್ಷಕ್ಕೆ ಸೆಳೆಯಲು ₹ 25 ಕೋಟಿ ಆಮಿಷವೊಡ್ಡಲಾಗಿದೆ ಎಂಬ ಆರೋಪ ಕೇಳಿಬಂದ ಮರುದಿನ ಆತಿಶಿ ಅವರು ಈ ಕುರಿತು ಆರೋಪಗಳನ್ನು ಮಾಡಿದ್ದಾರೆ.

ದೆಹಲಿ ಸಚಿವರಾದ ಸೌರಭ್ ಭಾರದ್ವಾಜ್ ಮತ್ತು ಆತಿಶಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು –ಪಿಟಿಐ ಚಿತ್ರ

> **ತಮ್ಮನ್ನು ಸಂಪರ್ಕಿಸಲು ಬಿಜೆಪಿಯ ಯಾರು ಯತ್ನಿಸಿದರು ಎನ್ನುವುದಕ್ಕೆ ಸಾಕ್ಷ್ಯವನ್ನು ನೀಡದೇ ಇದ್ದರೆ ಆತಿಶಿ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆ**
>
> **ವೀರೇಂದ್ರ ಸಚ್‌ದೇವ**
> ಬಿಜೆಪಿ ದೆಹಲಿ ಘಟಕದ ಮುಖ್ಯಸ್ಥ

ಕೇಜ್ರಿವಾಲ್ ಸಕ್ಕರೆ ಪ್ರಮಾಣದಲ್ಲಿ ಇಳಿಕೆ

ಅಬಕಾರಿ ನೀತಿ ಪ್ರಕರಣದಲ್ಲಿ ಇದೇ 15ರವರೆಗೆ ನ್ಯಾಯಾಂಗ ಬಂಧನಕ್ಕೆ ಒಳಗಾಗಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ತಿಹಾರ್ ಜೈಲಿನ 14X8 ಅಡಿ ವಿಸ್ತೀರ್ಣದ ಕೊಠಡಿಯಲ್ಲಿ ಇರಿಸಲಾಗಿದೆ. ಸೋಮವಾರ ರಾತ್ರಿ ಸ್ವಲ್ಪ ಸಮಯ ಮಾತ್ರ ಅವರು ನಿದ್ದೆ ಮಾಡಿದ್ದಾರೆ ಎಂದು ಜೈಲಿನ ಅಧಿಕಾರಿಯೊಬ್ಬರು ಹೇಳಿದರು.

ಕೇಜ್ರಿವಾಲ್ ಅವರನ್ನು ಸೋಮವಾರ ಸಂಜೆ 4 ಗಂಟೆಗೆ ತಿಹಾರ್ ಜೈಲಿಗೆ ಕರೆತರಲಾಯಿತು. ಅವರನ್ನು ಕೊಠಡಿಗೆ ಕಳುಹಿಸುವ ಮುನ್ನ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ, ಅವರ ಸಕ್ಕರೆ ಪ್ರಮಾಣ 50ಕ್ಕಿಂತ ಕಡಿಮೆ ಇತ್ತು. ಮಂಗಳವಾರ ಬೆಳಿಗ್ಗೆ ಅದು ಇನ್ನಷ್ಟು ಕಡಿಮೆಯಾಗಿತ್ತು. ವೈದ್ಯರ ಸಲಹೆ ಮೇರೆಗೆ ಅವರಿಗೆ ಔಷಧ ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಅವರ ಸಕ್ಕರೆ ಮಟ್ಟ ಸಮರ್ಪಕ ಸ್ಥಿತಿಗೆ ಬರುವವರೆಗೂ, ಮಧ್ಯಾಹ್ನ ಮತ್ತು ರಾತ್ರಿ ಮನೆಯಲ್ಲಿ ತಯಾರಿಸಿದ ಆಹಾರ ಸೇವಿಸಲು ಅನುಮತಿ ನೀಡಲಾಗಿದೆ ಎಂದು ಅವರು ವಿವರಿಸಿದರು.

'ಜೈಲಿನಿಂದಲೇ ಸರ್ಕಾರ ಮುಂದುವರಿಸಲಿ'

ದೆಹಲಿಯ ಎಎಪಿ ಶಾಸಕರು ಅರವಿಂದ ಕೇಜ್ರಿವಾಲ್ ಅವರ ಪತ್ನಿ ಸುನೀತಾ ಕೇಜ್ರಿವಾಲ್ ಅವರನ್ನು ಮಂಗಳವಾರ ಭೇಟಿಯಾಗಿ, ಕೇಜ್ರಿವಾಲ್ ಅವರು ರಾಜೀನಾಮೆ ನೀಡಬಾರದು ಮತ್ತು ಜೈಲಿನಿಂದಲೇ ಸರ್ಕಾರವನ್ನು ಮುಂದುವರಿಸಬೇಕು ಎಂದು ಪ್ರತಿಪಾದಿಸಿದ್ದಾರೆ.

ದೆಹಲಿಯ ಎರಡು ಕೋಟಿ ಜನರು ಕೇಜ್ರಿವಾಲ್ ಪರ ಇದ್ದಾರೆ. ಹೀಗಾಗಿ ಅವರು ಯಾವುದೇ ಕಾರಣಕ್ಕೂ ರಾಜೀನಾಮೆ ನೀಡಬಾರದು. ಈ ಸಂದೇಶವನ್ನು ಕೇಜ್ರಿವಾಲ್ ಅವರಿಗೆ ಮುಟ್ಟಿಸಿ ಎಂದು ಅವರು ಕೋರಿದ್ದಾರೆ.

ದೆಹಲಿಯಲ್ಲಿ ಇರುವ ಎಎಪಿಯ 62 ಶಾಸಕರ ಪೈಕಿ 55 ಮಂದಿ ಈ ವೇಳೆ ಹಾಜರಿದ್ದರು. ನಾಲ್ವರು ಶಾಸಕರು ದೆಹಲಿಯಲ್ಲಿ ಇರಲಿಲ್ಲ. ಉಳಿದಂತೆ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಮತ್ತು ಸತ್ಯೇಂದ್ರ ಜೈನ್ ಜೈಲಿನಲ್ಲಿದ್ದಾರೆ ಎಂದು ಎಎಪಿ ನಾಯಕರು ತಿಳಿಸಿದ್ದಾರೆ.

ಅರುಣಾಚಲದ ಪ್ರದೇಶಗಳಿಗೆ ಚೀನಿ ಹೆಸರು: ಖಂಡನೆ

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶದ ಕೆಲವು ಸ್ಥಳಗಳಿಗೆ ಚೀನಿ ಹೆಸರುಗಳನ್ನು ನಾಮಕಾರಣ ಮಾಡಿರುವ ಚೀನಾದ ನಡೆಯನ್ನು ಕೇಂದ್ರ ಸರ್ಕಾರವು 'ಅವಿವೇಕದ ಧೋರಣೆ' ಎಂದಿದ್ದು, ಮಂಗಳವಾರ ಖಂಡತುಂಡವಾಗಿ ತಿರಸ್ಕರಿಸಿದೆ.

'ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗ. ಅದು ಯಾವಾಗಲೂ ದೇಶದ ಭಾಗವೇ ಆಗಿರಲಿದೆ. ಚೀನಾ ದೇಶವು ಇಲ್ಲಿನ ಪ್ರದೇಶಗಳಿಗೆ ಹೊಸ ಹೆಸರುಗಳನ್ನು ಇಡುವ ಮೂಲಕ ವಾಸ್ತವವನ್ನು ಬದಲಿಸಲು ಸಾಧ್ಯವಿಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಪ್ರತಿಕ್ರಿಯಿಸಿದ್ದಾರೆ.

ಅರುಣಾಚಲ ಪ್ರದೇಶದ ವಿವಿಧ ಸ್ಥಳಗಳಿಗೆ 30 ಹೊಸ ಹೆಸರಿರುವ ನಾಲ್ಕನೇ ಪಟ್ಟಿಯನ್ನು ಚೀನಾ ಬಿಡುಗಡೆ ಮಾಡಿದ ಬೆನ್ನಲ್ಲೇ ಈ ಹೇಳಿಕೆ ನೀಡಿದ್ದಾರೆ.

'ಅರುಣಾಚಲ ಪ್ರದೇಶದ ಸ್ಥಳಗಳ ಹೆಸರುಗಳನ್ನು ಮರುನಾಮಕರಣ ಮಾಡುವ ಅವಿವೇಕದ ಪ್ರಯತ್ನಕ್ಕೆ ಚೀನಾ ಕಟ್ಟುಬಿದ್ದಿದೆ. ಇಂಥ ಪ್ರಯತ್ನಗಳನ್ನು ಭಾರತ ನಿರ್ಭಿಡೆಯಿಂದ ತಿರಸ್ಕರಿಸುತ್ತದೆ' ಎಂದು ಹೇಳಿದ್ದಾರೆ.

ಜೈಶಂಕರ್ ವಿರೋಧ: 'ಅರುಣಾಚಲ ಪ್ರದೇಶವು ಯಾವಾಗಲೂ ಭಾರತದ ರಾಜ್ಯವಾಗಿಯೇ ಇರಲಿದೆ. ಹೆಸರು ಬದಲಾವಣೆಯಿಂದ ಚೀನಾ ಏನನ್ನೂ ಪಡೆದುಕೊಳ್ಳಲಾಗುವುದಿಲ್ಲ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಸೋಮವಾರ ಸೂರತ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು.

'ನಾನು ನಿಮ್ಮ ಮನೆಯ ಹೆಸರನ್ನು ಬದಲಾಯಿಸಿದರೆ ಅದು ನನ್ನ ಮನೆಯಾಗುತ್ತದೆಯೇ? ಹಾಗೆಯೇ ಅರುಣಾಚಲ ಪ್ರದೇಶ ಭಾರತದ ಭಾಗವಾಗಿರಲಿದೆ' ಎಂದು ತಿಳಿಸಿದ್ದಾರೆ.

ಅಪಘಾತ: ನಾಲ್ವರು ಕಾರ್ಮಿಕರ ಸಾವು

ಮುಂಬೈ (ಪಿಟಿಐ): ಕೂಲಿ ಕಾರ್ಮಿಕರನ್ನು ಹೊತ್ತು ಸಾಗುತ್ತಿದ್ದ ಟ್ರ್ಯಾಕ್ಟರ್‌ಗೆ ಟ್ರಕ್ ಒಂದು ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಕಾರ್ಮಿಕರು ಮೃತಪಟ್ಟು, ಇತರ 10 ಮಂದಿ ಗಾಯಗೊಂಡ ಘಟನೆ ಮಹಾರಾಷ್ಟ್ರದ ಸಾಂಗ್ಲಿ ಜಿಲ್ಲೆಯಲ್ಲಿ ಮಂಗಳವಾರ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕವಠೆ ಮಹಾಂಕಾಲ್ ಪಟ್ಟಣ ಬಳಿಯ ಮೀರಾಜ್– ಪಂಡರಪುರ ರಸ್ತೆಯಲ್ಲಿ ಈ ದುರಂತ ನಡೆದಿದೆ. ಕಬ್ಬು ಕೃಷಿ ಕಾರ್ಮಿಕರನ್ನು ಹೊತ್ತೊಯ್ಯುತ್ತಿದ್ದ ಟ್ರ್ಯಾಕ್ಟರ್‌ನ ಇಂಜಿನ್‌ಗೆ ಹಾನಿಯಾಗಿದ್ದ ಕಾರಣ ಅದನ್ನು ಸರಿಪಡಿಸಲು ರಸ್ತೆ ಬದಿ ನಿಲ್ಲಿಸಲಾಗಿತ್ತು. ಆ ವೇಳೆ ವೇಗವಾದ ಬಂದ ಟ್ರಕ್, ಟ್ರ್ಯಾಕ್ಟರ್‌ನ ಟ್ರಾಲಿಗೆ ಅಪ್ಪಳಿಸಿದ ಪರಿಣಾಮ ಸಾವು–ನೋವು ಸಂಭವಿಸಿದೆ. ಗಾಯಾಳುಗಳನ್ನು ಮಿರಾಜ್ ಸಿವಿಲ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತದೇಹಗಳನ್ನು ಕವಟೆ ಮಹಾಂಕಾಲ್‌ನ ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಕಾಯಂ ಸದಸ್ಯತ್ವ: ಭರವಸೆ

ರಾಜ್‌ಕೋಟ್ (ಪಿಟಿಐ): 'ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ (ಯುಎನ್‌ಎಸ್‌ಸಿ) ಭಾರತಕ್ಕೆ ಕಾಯಂ ಸದಸ್ಯತ್ವ ಸ್ಥಾನ ಸಿಗುವ ಭರವಸೆ ಇದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಮಂಗಳವಾರ ತಿಳಿಸಿದ್ದಾರೆ.

ಗುಜರಾತ್‌ನ ರಾಜ್‌ಕೋಟ್‌ನಲ್ಲಿ ಈ ಕುರಿತು ಮಾತನಾಡಿದ ಅವರು, 'ಈ ಅಪೇಕ್ಷಿತ ಸ್ಥಾನವನ್ನು ಗಳಿಸಲು ನಾವು ಕಾರ್ಯನಿಷ್ಠರಾಗಿ ಕೆಲಸ ಮಾಡುವುದು ಅತ್ಯಗತ್ಯವಾಗಿದೆ' ಎಂದು ಹೇಳಿದ್ದಾರೆ.

'ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ ಸ್ಥಾನ ನೀಡಬೇಕೆಂಬ ನಮ್ಮ ಬೇಡಿಕೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿನ ಪ್ರಯತ್ನಗಳು ಸಹಕಾರಿಯಾಗಿವೆ' ಎಂದಿದ್ದಾರೆ.

ಬಾಲಕಿಯರನ್ನು ಅಪಹರಿಸಿ ಅತ್ಯಾಚಾರ

ಜಶಪುರ (ಪಿಟಿಐ): ಛತ್ತೀಸಗಢದ ಜಶಪುರ ಜಿಲ್ಲೆಯಲ್ಲಿ ಅಕ್ಕ–ತಂಗಿ ಸೇರಿದಂತೆ ಮೂವರು ಬಾಲಕಿಯರನ್ನು ಅಪಹರಿಸಿದ ದುಷ್ಕರ್ಮಿಗಳು, ಅವರ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಸೋಮವಾರ ಈ ಘಟನೆ ನಡೆದ ನಂತರ ಬಾಲಕಿಯೊಬ್ಬಳು ತನ್ನ 17 ವರ್ಷದ ಸ್ನೇಹಿತನಿಗೆ ಸಹಾಯಕ್ಕಾಗಿ ಕರೆ ಮಾಡಿದ್ದಳು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ಅತ್ಯಾಚಾರ ಎಸಗಿದವರಲ್ಲಿ ಸಂತ್ರಸ್ತೆಯ ಸ್ನೇಹಿತನೂ ಇದ್ದಾನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕಾನೂನಿನ ಜೊತೆ ಸಂಘರ್ಷಕ್ಕೀಡಾದ ಇಬ್ಬರು ಬಾಲಕರು ಸೇರಿದಂತೆ ನಾಲ್ವರನ್ನು ಬಂಧಿಸಲಾಗಿದೆ' ಎಂದು ಪತ್ಥಲಗಾಂವ್ ಉಪ ವಿಭಾಗೀಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ವಿಚಾರಣೆಗೆ ಅಧಿಕಾರಿಗಳು ಗೈರು– ಕೋರ್ಟ್ ಕೆಂಡ

ನವದೆಹಲಿ (ಪಿಟಿಐ): ಮರಳು ಗಣಿಗಾರಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಎದುರು ವಿಚಾರಣೆಗೆ ಹಾಜರಾಗದ ತಮಿಳುನಾಡಿನ ಐವರು ಜಿಲ್ಲಾಧಿಕಾರಿಗಳ ನಡೆಗೆ ಸುಪ್ರೀಂ ಕೋರ್ಟ್ ಮಂಗಳವಾರ ಅಸಮ್ಮತಿ ಸೂಚಿಸಿದೆ.

ಅಧಿಕಾರಿಗಳು ಇ.ಡಿ. ಎದುರು ಏ. 25ರಂದು ಹಾಜರಾಗಬೇಕು, ಇಲ್ಲದಿದ್ದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಅದು ತಾಕೀತು ಮಾಡಿದೆ. ಕೋರ್ಟ್ ಸೂಚನೆ ಇದ್ದರೂ ಅವರು ವಿಚಾರಣೆಗೆ ಹಾಜರಾಗಿರಲಿಲ್ಲ. ಇದಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪಂಕಜ್ ಮಿತ್ತಲ್ ಅವರು ಇದ್ದ ವಿಭಾಗೀಯ ಪೀಠವು, ಅಧಿಕಾರಿಗಳು ನಿರ್ಲಕ್ಷ್ಯದಿಂದ ನಡೆದುಕೊಂಡಿದ್ದಾರೆ ಎಂದಿದೆ.

ಅಧಿಕಾರಿಗಳು ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಯಲ್ಲಿ ಹಾಗೂ ಸಾಮಾಜಿಕ ಭದ್ರತಾ ಯೋಜನೆಯ ಅನುಷ್ಠಾನದಲ್ಲಿ ತೊಡಗಿಸಿಕೊಂಡಿದ್ದರು ಎಂದು ತಮಿಳುನಾಡು ಸರ್ಕಾರದ ಪರವಾಗಿ ವಾದಿಸಿದ ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ಅಮಿತ್ ಆನಂದ್ ತಿವಾರಿ ತಿಳಿಸಿದರು.

ಶಾಲಾ ಬಸ್ ಪಲ್ಟಿ; 4 ಸಾವು

ಬಾರಾಬಂಕಿ (ಉತ್ತರ ಪ್ರದೇಶ) (ಪಿಟಿಐ): ಸಮೀಪದ ಸಲಾರ್‌ಪುರ ಗ್ರಾಮದ ಬಳಿ ಮಂಗಳವಾರ ಶಾಲಾ ಬಸ್ ಪಲ್ಟಿಯಾದ ಪರಿಣಾಮ ಮೂವರು ಮಕ್ಕಳು ಸೇರಿದಂತೆ ನಾಲ್ವರು ಮೃತಪಟ್ಟು, ಇತರ 32 ಮಕ್ಕಳು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಸೂರತ್‌ಗಂಜ್‌ನ ಹರಕ್ಕ ಸಂಯುಕ್ತ ಶಾಲೆಯ ಬಸ್‌ನಲ್ಲಿ ಮಕ್ಕಳು ಲಖನೌಗೆ ಪಿಕ್‌ನಿಕ್‌ಗೆ ಹೋಗಿದ್ದರು. ಸಂಜೆ ಸೂರತ್ ಗಂಜ್‌ಗೆ ಮರಳುವಾಗ ಈ ಅಪಘಾತ ಸಂಭವಿಸಿದೆ. ಗಾಯಗೊಂಡಿರುವ ಮಕ್ಕಳನ್ನು ಲಖನೌದ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಬೈಕ್ ಸವಾರನೊಬ್ಬನನ್ನು ರಕ್ಷಿಸಲು ಚಾಲಕ ಪ್ರಯತ್ನಿಸಿದ ವೇಳೆ, ಬಸ್ ಪಲ್ಟಿಯಾಗಿದೆ. ಬಸ್ ನಿರ್ವಾಹಕ ಹಾಗೂ 12–13 ವರ್ಷ ವಯಸ್ಸಿನ3ಮಕ್ಕಳು ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ.

ಸೆಂಟ್ರಲ್ ಕಮಾಂಡೋಸ್ ತಂಡ ಸೆಮಿಗೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಗಜಾನನ ರೋಕಡೆ (40 ರನ್, 27ಕ್ಕೆ 2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಸೆಂಟ್ರಲ್ ಕಮಾಂಡೋಸ್ ತಂಡವು ಅಜಿತ್ ವಾಡೇಕರ್ ಸ್ಮರಣಾರ್ಥ ಆಯೋಜಿಸಿರುವ ಅಂಗವಿಕಲರ ರಾಷ್ಟ್ರಮಟ್ಟದ ಟ್ವೆಂಟಿ–20 ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಕಮಾಂಡೋಸ್ ತಂಡವು ಅಜಿತ್ ವಾಡೇಕರ್ ವಾರಿಯರ್ಸ್ ಎದುರು 9 ರನ್‌ಗಳಿಂದ ಜಯಿಸಿತು.

ಸಂಕ್ಷಿಪ್ತ ಸ್ಕೋರು: ಸೆಂಟ್ರಲ್ ಕಮಾಂಡೋಸ್: 20 ಓವರ್‌ಗಳಲ್ಲಿ 7ಕ್ಕೆ 153 (ಗಜಾನನ ರೋಕಡೆ 40; ವಿಕಾಸ್ ಯಾದವ್ 30ಕ್ಕೆ 2); ಅಜಿತ್ ವಾಡೇಕರ್ ವಾರಿಯರ್ಸ್: 17.2 ಓವರ್‌ಗಳಲ್ಲಿ 144 (ವಿಕಾಸ್ ಯಾದವ್ 84; ಅಜರ್ ಮೊಹಮ್ಮದ್ 20ಕ್ಕೆ 3, ಗಜಾನನ ರೋಡೆ 27ಕ್ಕೆ 2).

ಜಿಮ್ಖಾನ ಮೈದಾನ, ಹುಬ್ಬಳ್ಳಿ: ಸಿ.ಎಸ್. ಇನ್ಫೊಕಾಮ್ ಚಾಲೆಂಜರ್ಸ್: 20 ಓವರ್‌ಗಳಲ್ಲಿ 119 (ಪ್ರತಾಪ್ ಕುಮಾರ್ 38; ಗಣೇಶ್ ನವಘಾನೆ 12ಕ್ಕೆ 3, ಯಶ್ ರಾಠೋಡ್ 13ಕ್ಕೆ 2). ವೆಸ್ಟರ್ನ್ ರೇಂಜರ್ಸ್: 11.5 ಓವರ್‌ಗಳಲ್ಲಿ 5ಕ್ಕೆ 121 (ವೃಶಾಂತ್ ಗುಂಜಾಳ್ 69; ಅಭಿನಂದನ್ ಉಪಾಧ್ಯಾಯ 11ಕ್ಕೆ 2). ಫಲಿತಾಂಶ: ವೆಸ್ಟರ್ನ್ ರೇಂಜರ್ಸ್‌ಗೆ 5 ವಿಕೆಟ್ ಜಯ. ಸೆಮಿಫೈನಲ್ ಪ್ರವೇಶ.

ಕೆಎಸ್‌ಸಿಎ ಕ್ರೀಡಾಂಗಣ, ರಾಜನಗರ: ಸದರ್ನ್ ಸ್ಮ್ಯಾಷರ್ಸ್: 20 ಓವರ್‌ಗಳಲ್ಲಿ 6ಕ್ಕೆ 170 (ಮಂಜುನಾಥ ಜಲಗಾರ 37,; ರಾಮ್‌ಪ್ರಸಾಸ್ 20ಕ್ಕೆ2, ಸರ್ಗುಣ ಪಾಂಡಿಯನ್ 28ಕ್ಕೆ 2). ಅಜಿತ್ ವಾಡೇಕರ್ ವಾರಿಯರ್ಸ್: 14.1 ಓವರ್‌ಗಳಲ್ಲಿ 73 (ಎಸ್.ಪಿ.ಜೆ ಸುರೇಶ್ 7ಕ್ಕೆ 3, ನರೇಂದ್ರ ಮಂಗೋರೆ 14ಕ್ಕೆ 2). ಫಲಿತಾಂಶ: ಸದರ್ನ್ ಸ್ಮ್ಯಾಷರ್ಸ್‌ಗೆ 97 ರನ್‌ಗಳ ಜಯ, ಸೆಮಿಫೈನಲ್ ಪ್ರವೇಶ.

ರೈಲ್ವೆ ಮೈದಾನ, ಹುಬ್ಬಳ್ಳಿ: ಈಸ್ಟರ್ನ್ ಈಗಲ್ಸ್: 15.2 ಓವರ್‌ಗಳಲ್ಲಿ 69 (ಅಖಿಬ್ ಮಲಿಕ್ 23ಕ್ಕೆ 3, ಅಮಿತ್ ಸಚ್‌ದೇವ್ 13ಕ್ಕೆ 2). ನಾರ್ಥರ್ನ್ ಫ್ರಾಂಟೈರ್ಸ್: 11.2 ಓವರ್‌ಗಳಲ್ಲಿ 2ಕ್ಕೆ 72 (ಯಶ್ 26). ಫಲಿತಾಂಶ: ನಾರ್ಥರ್ನ್ ಫ್ರಾಂಟೈರ್ಸ್‌ಗೆ 8 ವಿಕೆಟ್ ಜಯ. ಸೆಮಿ ಪ್ರವೇಶ.

ಭಾರತ ಹಾಕಿ ತಂಡ ಆಸ್ಟ್ರೇಲಿಯಾಕ್ಕೆ

ನವದೆಹಲಿ (ಪಿಟಿಐ): ಈ ವರ್ಷದ ಜುಲೈ– ಆಗಸ್ಟ್‌ನಲ್ಲಿ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ಸ್‌ಗೆ ಪೂರ್ವಸಿದ್ಧತೆಯಾಗಿ ಭಾರತ ಪುರುಷರ ಹಾಕಿ ತಂಡ ಐದು ಪಂದ್ಯಗಳ ಟೆಸ್ಟ್ ಸರಣಿ ಆಡಲು ಆಸ್ಟ್ರೇಲಿಯಾಕ್ಕೆ ತೆರಳಿತು.

ಸರಣಿಯ ಮೊದಲ ಪಂದ್ಯ ಇದೇ 6ರಂದು ನಡೆಯಲಿದೆ. ಉಳಿದ ನಾಲ್ಕು ಪಂದ್ಯಗಳು ಕ್ರಮವಾಗಿ ಏ. 7, 10, 12 ಮತ್ತು 13ರಂದು ನಡೆಯಲಿವೆ. ಹರ್ಮನ್‌ಪ್ರೀತ್ ಸಿಂಗ್ ನೇತೃತ್ವದ ತಂಡ ಸೋಮವಾರ ತಡರಾತ್ರಿ ಪ್ರಯಾಣ ಕೈಗೊಂಡಿತು. ತಂಡ ಇತ್ತೀಚೆಗೆ ಭುವನೇಶ್ವರದಲ್ಲಿ ನಡೆದಿದ್ದ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಆಡಿದ ನಾಲ್ಕರಲ್ಲಿ ಮೂರು ಪಂದ್ಯಗಳನ್ನು ಗೆದ್ದುಕೊಂಡಿದ್ದು, ಉತ್ತಮ ಮನೋಬಲದಲ್ಲಿದೆ.

'ಆಸ್ಟ್ರೇಲಿಯಾದ ನಿರ್ಣಾಯಕ ಪ್ರವಾಸಕ್ಕೆ ಸಜ್ಜಾಗಿದ್ದೇವೆ. ಈ ಸರಣಿಯು ನಮಗೆ ಒಲಿಂಪಿಕ್ಸ್‌ಗಿಂತ ಮೊದಲು ನಮ್ಮ ಸಾಮರ್ಥ್ಯ ಮತ್ತು ಸುಧಾರಿಸಿಕೊಳ್ಳಬೇಕಾದ ಕ್ಷೇತ್ರ ತಿಳಿದುಕೊಳ್ಳಲು ನೆರವಾಗಲಿದೆ' ಎಂದು ಹರ್ಮನ್‌ಪ್ರೀತ್ ಹೇಳಿದರು.

'ನಮ್ಮಿಂದ ಆದಷ್ಟು ಒಳ್ಳೆಯ ಆಟ ನೀಡಲು ಬದ್ಧರಾಗಿದ್ದೇವೆ. ಕ್ರೀಡಾಂಗಣದ ಪ್ರತಿ ಕ್ಷಣವೂ ನಮಗೆ ಅಮೂಲ್ಯ' ಎಂದು ಅವರು ಹೇಳಿದರು.

ಚೆಸ್: ಆನಂದ್ ಹಿಂದಿಕ್ಕಿದ ಅರ್ಜುನ್

ಬೆಂಗಳೂರು: ಅರ್ಜುನ್ ಇರಿಗೇಶಿ ಅವರು ಸೋಮವಾರ ಪ್ರಕಟವಾದ ಫಿಡೆ ರೇಟಿಂಗ್ ಪಟ್ಟಿಯಲ್ಲಿ ವಿಶ್ವನಾಥನ್ ಆನಂದ್ ಅವರನ್ನು ಹಿಂದೆಹಾಕಿ ಭಾರತದ ಅಗ್ರಮಾನ್ಯ ಆಟಗಾರ ಎನಿಸಿದ್ದಾರೆ. ಹೊಸ ಪಟ್ಟಿಯಲ್ಲಿ ಅರ್ಜುನ್ (ರೇಟಿಂಗ್ 2756) ವಿಶ್ವ ಕ್ರಮಾಂಕದಲ್ಲಿ ಒಂಬತ್ತನೇ ಸ್ಥಾನದಲ್ಲಿದ್ದಾರೆ.

ವಿಶ್ವನಾಥನ್ ಆನಂದ್ (2751) 11ನೇ ಸ್ಥಾನದಲ್ಲಿದ್ದಾರೆ. 21 ವರ್ಷದ ಅರ್ಜುನ್, ಆನಂದ್ ಅವರನ್ನು ಹಿಂದೆಹಾಕಿದ ಭಾರತದ ಎರಡನೇ ಆಟಗಾರ ಎನಿಸಿದರು. 2023ರ ಸೆಪ್ಟೆಂಬರ್‌ನಲ್ಲಿ ಡಿ.ಗುಕೇಶ್ ಅವರು ಮೊದಲ ಬಾರಿ ಆ ಸಾಧನೆಗೆ ಪಾತ್ರರಾಗಿದ್ದರು. ಆನಂದ್ ದೀರ್ಘಕಾಲದಿಂದ ಭಾರತದ ಅಗ್ರಮಾನ್ಯ ಆಟಗಾರರಾಗಿದ್ದಾರೆ.

ಅರ್ಜುನ್ ಇರಿಗೇಶಿ

ನೂತನ ಪಟ್ಟಿಯಲ್ಲಿ ಪ್ರಜ್ಞಾನಂದ 14ನೇ ಸ್ಥಾನ, ಗುಕೇಶ್ 16ನೇ ಸ್ಥಾನ ಹಾಗೂ ವಿದಿತ್ ಗುಜರಾತಿ 25ನೇ ಸ್ಥಾನದಲ್ಲಿದ್ದಾರೆ.

ಆನಂದ್, ಪಿ.ಹರಿಕೃಷ್ಣ, ಡಿ.ಗುಕೇಶ್ ಅವರ ನಂತರ ವಿಶ್ವದ ಅಗ್ರ ಹತ್ತರಲ್ಲಿ ಸ್ಥಾನ ಪಡೆದ ಭಾರತದ ನಾಲ್ಕನೇ ಆಟಗಾರ ಎಂಬ ಶ್ರೇಯ ಅವರದಾಯಿತು.

ಟೆನಿಸ್: ಎರಡನೇ ಸುತ್ತಿಗೆ ನಗಾಲ್

ನವದೆಹಲಿ: ಭಾರತದ ಅಗ್ರಗಣ್ಯ ಟೆನಿಸ್ ಆಟಗಾರ ಸುಮಿತ್ ನಗಾಲ್ ಅವರು ಮಂಗಳವಾರ ಮರಕೇಶ್ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 95ನೇ ಸ್ಥಾನದಲ್ಲಿರುವ ನಗಾಲ್ ಆರಂಭಿಕ ಸುತ್ತಿನಲ್ಲಿ 4-6, 6-3, 6-2 ರಿಂದ ಫ್ರಾನ್ಸ್‌ನ ಕೊರೆಂಟಿನ್ ಮೌಟೆಟ್ ವಿರುದ್ಧ ಗೆಲುವು ಸಾಧಿಸಿದರು. ಕಳೆದ ವರ್ಷ ಹೆಲ್ಸಿಂಕಿಯಲ್ಲಿ ನಡೆದ ಚಾಲೆಂಜರ್ ಫೈನಲ್‌ನಲ್ಲಿ ನಗಾಲ್ ಇದೇ ಎದುರಾಳಿಯ ಎದುರು ಸೋತಿದ್ದರು. ಮುಂದಿನ ಸುತ್ತಿನಲ್ಲಿ ನಗಾಲ್ ನಾಲ್ಕನೇ ಶ್ರೇಯಾಂಕದ ಇಟಲಿಯ ಲೊರೆಂಜೊ ಸೊನೆಗೊ ಅವರನ್ನು ಎದುರಿಸುವರು.

ಹಾಕಿ: ಕಡೆಮಾಡ ತಂಡಕ್ಕೆ ಜಯ

ನಾಪೋಕ್ಲು: ಕಡೆಮಾಡ ತಂಡ, ಇಲ್ಲಿನ ಚೆರಿಯ ಪರಂಬುವಿನ ಜನರಲ್ ಕೆ.ಎಸ್. ತಿಮ್ಮಯ್ಯ ಕ್ರೀಡಾಂಗಣದಲ್ಲಿ ಮಂಗಳವಾರ ಕೊಡವ ಕುಟುಂಬಗಳ ನಡುವಿನ ಕುಂಡ್ಯೋಳಂಡ ಕಪ್ ಹಾಕಿ ಟೂರ್ನಿಯ ನಾಲ್ಕನೇ ದಿನವಾದ ಮಂಗಳವಾರ ಪೊನ್ನಿಮಾಡ ವಿರುದ್ಧ 6–0 ಅಂತರದಲ್ಲಿ ಸುಲಭ ಜಯಗಳಿಸಿತು.

ಉಳಿದಂತೆ, ಮಲ್ಲಚಿರ ತಂಡವು 5–0 ಗೋಲುಗಳಿಂದ ಪೇರಿಯಂಡ ತಂಡದ ವಿರುದ್ಧ; ಚಪ್ಪಂ ತಂಡವು 5–0 ಯಿಂದ ಪಾಲಂದಿರ ಡ ವಿರುದ್ಧ ಭರ್ಜರಿ ಗೆಲುವು ಸಾಧಿಸಿದವು. ನೆರ್ಪಂಡ ತಂಡವು 3–0ಯಿಂದ ಬಲ್ಲಿಕಾರಂಡ ತಂಡದ ವಿರುದ್ಧ; ಚೋಳಂಡ ತಂಡವು 2–1 ರಿಂದ ಮಾರ್ಚಂಡ ತಂಡದ ವಿರುದ್ಧ 2–1; ಐಯ್ಯನೆರವಂಡ ತಂಡ 2–0 ಯಿಂದ ಕೀತಿಯಂಡ ವಿರುದ್ಧ; ಐಚೆಟ್ಟಿರ ತಂಡವು 3–0ಯಿಂದ ಮುಂಡ್ಯೋಳಂಡ ತಂಡದ ವಿರುದ್ಧ ಗೆಲುವು ಪಡೆದವು.

ನಂದೇಟಿರ ತಂಡವು ತೀತರಮಾಡ ವಿರುದ್ಧ 2–1 ಅಂತರದಿಂದ; ಅಟ್ರಂಗಡ ತಂಡವು ಅಪ್ಪುಮಣಿಯಂಡ ತಂಡದ ವಿರುದ್ಧ 2–1 ಅಂತರದಿಂದ; ಬಿದ್ದಾಟಂಡ ತಂಡವು ಅಲ್ಲುಮಾಡ ತಂಡದ ವಿರುದ್ಧ 1–0 ಅಂತರದಿಂದ; ಬಟ್ಟಿಯಂಡ ತಂಡವು ಚಿಕ್ಕಂಡ ತಂಡದ ವಿರುದ್ಧ 2–1 ಅಂತರದಿಂದ ಜಯ ಸಾಧಿಸಿದವು.

ಮೈಂದ ಪಂಡ ಮತ್ತು ಅಯ್ಯಮಡ ನಡುವೆ ಸಮಬಲದ ಹೋರಾಟ ನಡೆಯಿತು. ಪೆನಾಲ್ಟಿ ಶೂಟೌಟ್‌ನಲ್ಲಿ ಮೈಂದ ಪಂಡ ತಂಡ 4–3 ಗೆಲುವು ಸಾಧಿಸಿತು. ಅಪ್ಪಾರಂಡ ವಿರುದ್ಧದ ಪಂದ್ಯದಲ್ಲಿ ಮುಂಡಚಾಡಿರ ತಂಡವು ಗೆಲುವು ಸಾಧಿಸಿತು.

ತಹಶೀಲ್ದಾರ್ ಹಾಗೂ ತಾಲ್ಲೂಕು ದಂಡಾಧಿಕಾರಿಗಳ ಕಾರ್ಯಾಲಯ
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ. ದೂರವಾಣಿ–08176–252235
Visit us at: www.channarayapatna.kar.nic.in e.mail:tah.crp@gmail.com
ನಂ. ಚುನಾವಣೆ(1)121/2023–24 ದಿನಾಂಕ : 02–04–2024

::ಅಲ್ಪಾವಧಿ ಟೆಂಡರ್ ಪ್ರಕಟಣೆ ::

1.ಲೋಕಸಭಾ ಸಾರ್ವತ್ರಿಕ ಚುನಾವಣೆ–2024 ರ ಸಂಬಂಧ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ಹಾಸನ ಜಿಲ್ಲೆ ಹಾಸನರವರ ಸಭಾ ನಡವಳಿ ಪತ್ರ ಸಂಖ್ಯೆ: ಚುನಾವಣೆ(1)87/2023–24 ದಿ: 27.03.2024 ರ ಸೂಚನೆಯಂತೆ 193– ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದ ಚುನಾವಣಾ ಕಾರ್ಯದ ಸಂಬಂಧ ವೀಡಿಯೋಗ್ರಫಿ ಸೌಂಡ್ಸ್ & ಲೈಟಿಂಗ್ಸ್, ಸಿ.ಸಿ ಟಿವಿ, ಪ್ರೊಜೆಕ್ಟರ್, ಯು.ಪಿ.ಎಸ್, ಭದ್ರತಾ ಕೊಠಡಿ ಸಿದ್ಧತೆ, ಶಾಮಿಯಾನ, ಛೇರ್ಸ್, ಟೇಬಲ್ಸ್, ಬ್ಯಾರಿಕೇಡ್ಸ್, ಜನರೇಟರ್, ಸ್ಟೇಷನರಿ ಹಾಗೂ ಅಧಿಕಾರಿ/ಸಿಬ್ಬಂದಿಗಳಿಗೆ ಊಟೋಪಚಾರ ಒದಗಿಸಬೇಕಾಗಿರುವುದರಿಂದ ಈ ಕೆಳಗೆ ಕಾಣಿಸಿರುವ ಸಾಮಾಗ್ರಿಗಳನ್ನು ಸರಬರಾಜು ಮಾಡಲು ಅಂಗೀಕೃತ ಸಂಸ್ಥೆ/ಏಜೆನ್ಸಿಗಳಿಂದ ಕೊಟೇಷನ್‌ಗಳನ್ನು ಕರೆಯಲಾಗಿದೆ. 2.ಆಸಕ್ತ ಅಂಗೀಕೃತ ಏಜೆನ್ಸಿಗಳು ದಿನಾಂಕ: 09–04–2024 ರ ಸಂಜೆ 5.00 ರ ಒಳಗಾಗಿ ಕೊಟೇಷನ್‌ಗಳನ್ನು ಈ ಕಚೇರಿಗೆ ತಲುಪಿಸತಕ್ಕದ್ದು, ನಿಗಧಿತ ಸಮಯದ ನಂತರ ಬರುವ ಕೊಟೇಷನ್‌ಗಳನ್ನು ಪರಿಗಣಿಸಲಾಗುವುದಿಲ್ಲ. **ಕ್ರ.ಸಂ.1)ಸಾಮಗ್ರಿಗಳು: ವೀಡಿಯೋಗ್ರಫಿ 2)ಸೌಂಡ್ಸ್ & ಲೈಟಿಂಗ್ಸ್, 3)ಸಿ.ಸಿ. ಟಿ.ವಿ, ಯು.ಪಿ.ಎಸ್ 4)ಜನರೇಟರ್ 5)ಶಾಮಿಯಾನ, ಛೇರ್ಸ್, ಟೇಬಲ್ಸ್, ಬ್ಯಾರಿಕೇಡ್ಸ್ 6)ಕೇಟರಿಂಗ್ ಸರ್ವೀಸ್:– ದಿ: 14.04.2024 ಟೀ/ಕಾಫಿ/ಕುಡಿಯುವ ನೀರು, ಚಪಾತಿ, ಪಲ್ಯ, ಸ್ವೀಟ್, ಅನ್ನ, ತರಕಾರಿ ಸಾಂಬಾರು, ರಸಂ, ಹಪ್ಪಳ, ಬಜ್ಜಿ, ಉಪ್ಪಿನಕಾಯಿ, ಮಜ್ಜಿಗೆ. (ನಿರ್ದಿಷ್ಟಪಡಿಸಿದ ದಿನಾಂಕಗಳಲ್ಲಿ ಸರಬರಾಜು ಮಾಡುವುದು) 7)ಸ್ಟೇಷನರಿ 8)ಭದ್ರತಾ ಕೊಠಡಿ ಸಿದ್ಧತೆ 9)ಪ್ರೊಜೆಕ್ಟರ್ ;ಷರತ್ತುಗಳು;** 1.ಮೊಹರಾದ ಟೆಂಡರ್‌ನೊಂದಿಗೆ ರೂ 10000/– (ಹತ್ತು ಸಾವಿರ) ಗಳನ್ನು ಟೆಂಡರ್ ಠೇವಣಿಯನ್ನಾಗಿ ತಹಶೀಲ್ದಾರ್ ಚನ್ನರಾಯಪಟ್ಟಣ ತಾಲ್ಲೂಕು ಚನ್ನರಾಯಪಟ್ಟಣರವರ ಹೆಸರಿಗೆ ಡಿಮಾಂಡ್ ಡ್ರಾಫ್ಟ್ ಲಗತ್ತಿಸುವುದು. 2.ಟೆಂಡರ್ ಸಲ್ಲಿಸುವವರು ಸರ್ಕಾರಕ್ಕೆ ಆದಾಯ ತೆರಿಗೆ ಅಥವಾ ಮಾರಾಟ ತೆರಿಗೆ ಬಾಕಿದಾರರಾಗಿರಬಾರದು ಈ ಬಗ್ಗೆ ಸಿ.ಸಿ ಲಗತ್ತಿಸುವುದು. 3.ಮೊಹರಾದ ಟೆಂಡರ್ ನ್ನು ದಿನಾಂಕ: 03–04–2024 ರ ಸಂಜೆ 5–00 ಗಂಟೆಯೊಳಗೆ ಸ್ವೀಕರಿಸಲಾಗುವುದು. 4.ಟೆಂಡರ್ ನಲ್ಲಿ ಮೇಲ್ಕಂಡ ಸಾಮಾಗ್ರಿ ಒಂದಕ್ಕೆ ಪ್ರತ್ಯೇಕ ದರವನ್ನು ನಮೂದಿಸುವುದು. 5.ಟೆಂಡರ್ ನ್ನು ಅನುಮೋದಿಸುವ ತಿರಸ್ಕರಿಸುವ ವಜಾ ಮಾಡುವ ಅಧಿಕಾರವು ತಹಶೀಲ್ದಾರರಿಗೆ ಮಾತ್ರ ಸೀಮಿತವಾಗಿರುತ್ತದೆ. 6.ಅಂಗೀಕೃತ ಟೆಂಡರ್‌ದಾರರು ಮೇಲ್ಕಂಡ ಸಾಮಾಗ್ರಿಗಳನ್ನು ನಿಗಧಿತ ಅವಧಿಯೊಳಗೆ ತಾಲ್ಲೂಕು ಕಛೇರಿ ಚನ್ನರಾಯಪಟ್ಟಣ ಸರಬರಾಜು ಮಾಡುವುದು. 7.ಟೆಂಡರ್‌ದಾರರು ಈ ಹಿಂದೆ ಯಾವುದಾದರೂ ಸರ್ಕಾರಿ ಕಛೇರಿಗಳಿಗೆ ಮೇಲ್ಕಂಡ ರೀತಿಯ ಸಾಮಾಗ್ರಿಗಳನ್ನು ಸರಬರಾಜು ಮಾಡಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು. 8.ಸರಬರಾಜು ಮಾಡಿರುವ ಮೇಲ್ಕಂಡ ಸಾಮಗ್ರಿಗಳು ಹಾಳಾಗಿರುವುದು ಕಂಡುಬಂದಲ್ಲಿ ಬದಲಾಯಿಸುವ ಹೊಣೆಗಾರಿಕೆಯನ್ನು ನಿಭಾಯಿಸಬಹುದು 9.ತಾಂತ್ರಿಕ ಬಿಡ್ ತೆರೆದು ಇದರಲ್ಲಿ ಅರ್ಹರಾದ ನಂತರ ಆರ್ಥಿಕ ಬಿಡ್ ತೆರೆಯಲಾಗುವುದು 10.ಅನುದಾನವನ್ನು ಮಾನ್ಯ ಜಿಲ್ಲಾಧಿಕಾರಿಗಳಿಂದ ಬಿಡುಗಡೆಯಾದ ನಂತರ ಹಂತ ಹಂತವಾಗಿ ಮಾಹೆವಾರು ನೀಡಲಾಗುವುದು ಮತ್ತು ಸರಬರಾಜುದಾರರು ಜಿ.ಎಸ್.ಟಿ ಬಿಲ್ ನ್ನು ನೀಡುವುದು 11.ಚುನಾವಣಾ ಕಾರ್ಯವು ಅತೀ ತುರ್ತು ಪ್ರಕ್ರಿಯೆಯಾಗಿರುವುದರಿಂದ ಕೆ.ಟಿ.ಪಿ.ಪಿ ನಿಯಮ 4(ಸಿ) ರನ್ವಯ ಅವಕಾಶವಿರುವಂತೆ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಯಾವುದೇ ವಿಳಂಭವಿಲ್ಲದೇ ಸೇವೆ ನೀಡಲು ಬದ್ಧರಾಗಿರಬೇಕು 12.ದಿ: 10.04.2024 ರಂದು ಬೆಳಿಗ್ಗೆ 10.00 ಗಂಟೆಗೆ ತಾಂತ್ರಿಕ ಬಿಡ್ ತೆರೆಯಲಾಗುವುದು ನಂತರ ದಿನಾಂಕ: 11.04.2024 ಕ್ಕೆ ಆರ್ಥಿಕ ಬಿಡ್ ತೆರೆದು ಅಂತಿಮಗೊಳಿಸಲಾಗುವುದು.

ಸಹಿ/– ತಹಶೀಲ್ದಾರ್,
ಚನ್ನರಾಯಪಟ್ಟಣ ತಾಲ್ಲೂಕು

ವಾಸಾಸಂಇ/ಹಿಸನಿ/ಹಾಸನ/01/ಕೆಎಸ್‌ಎಂಸಿಎ/2024–25

ಕ್ವಿಂಟನ್, ಪೂರನ್ ಆರ್ಭಟ • ರಾಹುಲ್ ಬಳಗಕ್ಕೆ ಶರಣಾದ ಬೆಂಗಳೂರು ತಂಡ

ಮಯಂಕ್ ವೇಗಕ್ಕೆ ಒಲಿದ ಜಯ

• ಗಿರೀಶ ದೊಡ್ಡಮನಿ

ಬೆಂಗಳೂರು: ವೇಗದ ಬೌಲಿಂಗ್‌ನ ನವತಾರೆ ಮಯಂಕ್ ಯಾದವ್ ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ದೂಳೆಬ್ಬಿಸಿದರು.

ದೆಹಲಿಯ 21 ವರ್ಷದ ಬಲಗೈ ವೇಗಿ ಮಯಂಕ್ (4–0–14–3) ಅವರ ದಾಳಿಯ ಬಲದಿಂದ ಲಖನೌ ಸೂಪರ್ ಜೈಂಟ್ಸ್ ತಂಡವು 28 ರನ್‌ಗಳಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಜಯಿಸಿತು. 182 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿದ್ದ ಬೆಂಗಳೂರು ತಂಡವು 19.4 ಓವರ್‌ಗಳಲ್ಲಿ 153 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಟೂರ್ನಿಯಲ್ಲಿ ಮೂರನೇ ಸೋಲು ಅನುಭವಿಸಿತು. ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಯಶ್ ದಯಾಳ್ ಅವರನ್ನು ಬಿಟ್ಟರೆ ಉಳಿದ ಬೌಲರ್‌ಗಳು ಹೆಚ್ಚು ರನ್ ಬಿಟ್ಟುಕೊಟ್ಟರು.

ಕಳೆದ ಎರಡೂ ಪಂದ್ಯಗಳಲ್ಲಿ ಅರ್ಧಶತಕ ಗಳಿಸಿದ್ದ ವಿರಾಟ್ ಕೊಹ್ಲಿ (22; 16) ಮತ್ತು ಫಫ್ ಡುಪ್ಲೆಸಿ (19 ರನ್) ಅವರು ಇಲ್ಲಿಯೂ ಉತ್ತಮ ಆರಂಭ ನೀಡಿದರು. ಟೂರ್ನಿಯಲ್ಲಿ ಎರಡನೇ ಪಂದ್ಯವಾಡಿದ ಮಣಿಮಾರನ್ ಸಿದ್ಧಾರ್ಥ್ ಹಾಕಿದ ಐದನೇ ಓವರ್‌ನಲ್ಲಿ ವಿರಾಟ್ ಅವರು ಪಡಿಕ್ಕಲ್ ಪಡೆದ ಅಮೋಘ ಕ್ಯಾಚ್‌ಗೆ ಔಟಾದರು. ಐಪಿಎಲ್‌ನಲ್ಲಿ ತಮ್ಮ ಮೊದಲ ವಿಕೆಟ್ ಪಡೆದ ಸಂಭ್ರಮದಲ್ಲಿ ಸಿದ್ಧಾರ್ಥ್ ತೇಲಿದರು. ಫಫ್ ಡುಪ್ಲೆಸಿ ರನೌಟ್‌ಗೂ ಪಡಿಕ್ಕಲ್ ಕಾರಣರಾದರು.

ಮಯಂಕ್ ಮಿಂಚು: 153 ಕಿ.ಮೀ ವೇಗದ ಎಸೆತಗಳನ್ನು ಪ್ರಯೋಗಿಸಿದ ಮಯಂಕ್ ಮಿಂಚಿದರು. ಅವರು ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಕ್ಯಾಮರಾನ್ ಗ್ರೀನ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಈ ಪಂದ್ಯದಲ್ಲಿ ಲಯಕ್ಕೆ ಮರಳಿದ್ದ ರಜತ್ ಪಾಟೀದಾರ್‌ಗೂ ಮಯಂಕ್ ಅವರೇ ಪೆವಿಲಿಯನ್ ದಾರಿ ತೋರಿಸಿದರು.

ಇಂಪ್ಯಾಕ್ಟ್ ಪ್ಲೇಯರ್ ಮಹಿಪಾಲ್ ಲೊಮ್ರೊರ್ (33; 13ಎ) ಅವರ ಪ್ರಯತ್ನವೂ ಆರ್‌ಸಿಬಿಗೆ ಜಯ ತಂದುಕೊಡಲಿಲ್ಲ. ಅಫ್ಗನ್ ಬೌಲರ್ ನವೀನ್ ಉಲ್ ಹಕ್ ಕೂಡ ಎರಡು ವಿಕೆಟ್ ಗಳಿಸಿದರು. ಇನಿಂಗ್ಸ್ ಕೊನೆಯಲ್ಲಿ ಸಿರಾಜ್ ಹೊಡೆದ ಎರಡು ಸಿಕ್ಸರ್‌ಗಳ ನೆನಪಿನೊಂದಿಗೆ 33 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಮೈದಾನದಿಂದ ಹೊರನಡೆದರು.

ಕ್ವಿಂಟನ್–ಪೂರನ್‌ಗೆ ಜೀವದಾನ: ಲಖನೌ ತಂಡದ ಆರಂಭಿಕ ಬ್ಯಾಟರ್ ಕ್ವಿಂಟನ್ ಡಿ ಕಾಕ್ ಮತ್ತು ಸ್ಫೋಟಕ ಬ್ಯಾಟರ್ ನಿಕೊಲಸ್ ಪೂರನ್ ಅವರ ಕ್ಯಾಚ್‌ಗಳನ್ನು ಕೈಚೆಲ್ಲಿದ ಆತಿಥೇಯರು ಸಂಕಷ್ಟಕ್ಕೆ ಸಿಲುಕಿದರು.

ಏಳನೇ ಓವರ್‌ನಲ್ಲಿ ಕ್ವಿಂಟನ್ ಅವರ ಕ್ಯಾಚ್ ಫೀಲ್ಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಕೈತಪ್ಪಿತು. 17ನೇ ಓವರ್‌ನಲ್ಲಿ ಪೂರನ್ ಅವರ ಬ್ಯಾಟ್ ಮೇಲಂಚಿಗೆ ಬಡಿದು ಮೇಲಕ್ಕೆ ಚಿಮ್ಮಿದ್ದ ಚೆಂಡು ಕವರ್ಸ್‌ನತ್ತ ಹೋಗಿತ್ತು. ವಿಕೆಟ್‌ಕೀಪರ್ ಅನುಜ್ ರಾವತ್ ಓಡಿ ಹೋಗಿ ಕ್ಯಾಚ್ ಪಡೆಯುವ ಪ್ರಯತ್ನ ಮಾಡಿ ವಿಫಲರಾದರು.

ಇದರ ಲಾಭ ಪಡೆದ ಕ್ವಿಂಟನ್ (81; 56ಎ, 4X8, 6X5) ಹಾಗೂ ಪೂರನ್ (ಔಟಾಗದೆ 40; 21ಎ, 4X1, 6X5) ಅಬ್ಬರಿಸಿದರು. ಕ್ವಿಂಟನ್ ಉತ್ತಮ ಅಡಿಪಾಯ ಹಾಕಿದರು. ಲಖನೌ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 181 ರನ್ ಗಳಿಸಿತು.

ಐದು ಓವರ್, 50 ರನ್: ಇನಿಂಗ್ಸ್‌ನ ಕೊನೆಯ ಐದು ಓವರ್‌ಗಳಲ್ಲಿ ಒಟ್ಟು 50 ರನ್ ಹರಿದುಬರಲು ನಿಕೋಲಸ್ ಕಾರಣರಾದರು. ಅದರಲ್ಲೂ ಪೂರನ್ ಅವರು ಇನಿಂಗ್ಸ್‌ನ ಕೊನೆಯ ಎರಡು ಓವರ್‌ಗಳಲ್ಲಿ ಐದು ಸಿಕ್ಸರ್‌ಗಳನ್ನು ಎತ್ತುವ ಮೂಲಕ ತಂಡದ ಮೊತ್ತ ಹಿಗ್ಗಿಸಿದರು. ಇದರಿಂದಾಗಿ ಆರ್‌ಸಿಬಿಗೆ ಕಠಿಣ ಸವಾಲು ಎದುರಾಯಿತು.

19ನೇ ಓವರ್‌ನಲ್ಲಿ ಪೂರನ್ 'ಸಿಕ್ಸರ್ ಹ್ಯಾಟ್ರಿಕ್' ಸಾಧಿಸಿದರು. ಅದರಲ್ಲಿ ಒಂದು ಸಿಕ್ಸರ್‌ನ ಚೆಂಡು ಡೀಪ್ ಮಿಡ್‌ವಿಕೆಟ್ ಮೇಲಿನ ಗ್ಯಾಲರಿಯ ಮೇಲ್ಚಾವಣಿ ಮೇಲೆ ಹೋಗಿ ಬಿತ್ತು. ಕೊನೆಯ ಓವರ್‌ನಲ್ಲಿ ಸಿರಾಜ್ ಮೊದಲ ಮೂರು ಎಸೆತಗಳನ್ನು ಡಾಟ್ ಮಾಡಿದ್ದರು. ಆದರೆ ನಂತರದ ಎರಡೂ ಎಸೆತಗಳನ್ನು ಪೂರನ್ ಸಿಕ್ಸರ್‌ಗೆತ್ತಿದರು. ಇದರೊಂದಿಗೆ ತಂಡದ ಮೊತ್ತ ಹಿಗ್ಗಿಸಿದರು. ಆರ್‌ಸಿಬಿಗೆ ಕಠಿಣ ಸವಾಲು ಎದುರಾಯಿತು.

ವಿಕೆಟ್ ಪಡೆದ ಸಂಭ್ರಮದಲ್ಲಿ ಲಖನೌ ತಂಡದ ಮಯಂಕ್ ಯಾದವ್ ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್.ಜಿ.

ಕ್ವಿಂಟನ್ ಡಿ ಕಾಕ್: 81 ರನ್ | 56 ಎಸೆತ | 8 ಬೌಂಡರಿ | 5 ಸಿಕ್ಸರ್

ಪ್ರಮುಖ ಅಂಶಗಳು

- ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 100ನೇ ಪಂದ್ಯವಾಡಿದ ವಿರಾಟ್ ಕೊಹ್ಲಿ
- ಲಖನೌ ತಂಡದ ಕ್ವಿಂಟನ್ ಡಿ ಕಾಕ್ ಅವರು ಐಪಿಎಲ್‌ನಲ್ಲಿ 3000ಕ್ಕೂ ಹೆಚ್ಚು ರನ್ ಗಳಿಸಿದರು
- ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಆರ್‌ಸಿಬಿ
- ಸಿಕ್ಸರ್ ಹ್ಯಾಟ್ರಿಕ್ ಸಾಧಿಸಿದ ಲಖನೌ ತಂಡದ ನಿಕೊಲಸ್ ಪೂರನ್
- 19 ರನ್‌ಗಳಿಂದ ಶತಕ ಕೈತಪ್ಪಿಸಿಕೊಂಡ ಕ್ವಿಂಟನ್ ಡಿ ಕಾಕ್
- ಪಂದ್ಯದಲ್ಲಿ ಒಟ್ಟು 21 ಬೌಂಡರಿ, 22 ಸಿಕ್ಸರ್

ಪಂತ್ ಬಳಗಕ್ಕೆ ಕೋಲ್ಕತ್ತ ಪಂಥಾಹ್ವಾನ

ವಿಶಾಖಪಟ್ಟಣ (ಪಿಟಿಐ): ಬ್ಯಾಟಿಂಗ್ ಲಯಕ್ಕೆ ಮರಳಿರುವ ರಿಷಭ್ ಪಂತ್ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಬುಧವಾರ ಕೋಲ್ಕತ್ತ ನೈಟ್ ರೈಡರ್ಸ್‌ಎದುರು ಸೆಣಸಲಿದೆ.

ಡೆಲ್ಲಿ ತಂಡವು ಎರಡು ದಿನಗಳ ಹಿಂದೆ ಇದೇ ಕ್ರೀಡಾಂಗಣದಲ್ಲಿ 'ಚಾಂಪಿಯನ್' ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸಿತ್ತು. ಮಹೇಂದ್ರಸಿಂಗ್ ಧೋನಿಯ ಭರ್ಜರಿ ಬ್ಯಾಟಿಂಗ್ ಸವಾಲನ್ನೂ ಗೆದ್ದಿದ್ದ ರಿಷಭ್ ಬಳಗ ಟೂರ್ನಿಯಲ್ಲಿ ಪ್ರಥಮ ಜಯ ಸಾಧಿಸಿತ್ತು.

ಅದರಿಂದಾಗಿ ಅಪಾರ ಆತ್ಮವಿಶ್ವಾಸದಲ್ಲಿರುವ ತಂಡವು ಶ್ರೇಯಸ್ ಅಯ್ಯರ್ ನಾಯಕತ್ವದ ಕೆಕೆಆರ್ ಸವಾಲು ಎದುರಿಸಲು ಸಿದ್ಧವಾಗಿದೆ. ಅಯ್ಯರ್ ಬಳಗವು ಇದುವರೆಗೆ ಆಡಿರುವ ಎರಡೂ ಪಂದ್ಯಗಳಲ್ಲಿ ಜಯಿಸಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರುದ್ಧ ಅಮೋಘ ಜಯ ಸಾಧಿಸಿರುವ ಅಯ್ಯರ್ ಬಳಗವು ಇಲ್ಲಿಗೆ ಬಂದಿಳಿದಿದೆ.

ಕೋಲ್ಕತ್ತ ತಂಡದ ಬ್ಯಾಟಿಂಗ್ ವಿಭಾಗವು ಅತ್ಯಂತ ಬಲಿಷ್ಠವಾಗಿದೆ. ಆರಂಭಿಕ ಫಿಲ್ ಸಾಲ್ಟ್ ಅವರಿಂದ ಎಂಟನೇ ಕ್ರಮಾಂಕದ ಆ್ಯಂಡ್ರೆ ರಸೆಲ್ ಅವರವರೆಗೂ ಬ್ಯಾಟಿಂಗ್ ಶಕ್ತಿ ಇದೆ. ಪಂದ್ಯವನ್ನು ಯಾವುದೇ ಪರಿಸ್ಥಿತಿಯಿಂದಲೂ ಗೆಲುವಿನತ್ತ ತಿರುಗಿಸುವ ಸಾಮರ್ಥ್ಯ ಅವರಲ್ಲಿದೆ. ಆದರೆ ಬೌಲಿಂಗ್‌ನಲ್ಲಿ ಮಾತ್ರ ನಿರೀಕ್ಷಿತ ಸಾಮರ್ಥ್ಯ ಮೂಡಿಬರುತ್ತಿಲ್ಲ. 'ದುಬಾರಿ ಮೌಲ್ಯ' ಗಳಿಸಿ ತಂಡಕ್ಕೆ ಸೇರಿರುವ ಮಿಚೆಲ್ ಸ್ಟಾರ್ಕ್ ರನ್ ಕೊಡುವುದರಲ್ಲಿಯೂ ತುಟ್ಟಿಯಾಗಿದ್ದಾರೆ. 'ನಿಗೂಢ ಕೌಶಲ'ದ ಸ್ಪಿನ್ನರ್ ವರುಣ್ ಚಕ್ರವರ್ತಿಯ ಮೋಡಿಯೂ ನಡೆಯುತ್ತಿಲ್ಲ. ಬೌಲಿಂಗ್‌ನಲ್ಲಿ ಹರ್ಷಿತ್ ರಾಣಾ, ಸುನಿಲ್ ನಾರಾಯಣ ಮತ್ತು ರಸೆಲ್ ಅವರನ್ನೇ ನೆಚ್ಚಿಕೊಳ್ಳಬೇಕಿದೆ.

ಡೆಲ್ಲಿ ತಂಡವು ಇದುವರೆಗೆ ಆಡಿರುವ ಮೂರು ಪಂದ್ಯಗಳಲ್ಲಿ ಎರಡರಲ್ಲಿ ಸೋತಿದೆ. ಆದರೆ ತಂಡವು ಎಲ್ಲ ವಿಭಾಗ ಗಳಲ್ಲಿಯೂ ಸಮತೋಲನದಿಂದ ಕೂಡಿದೆ. ಪೃಥ್ವಿ ಶಾ, ಡೇವಿಡ್ ವಾರ್ನರ್, ನಾಯಕ ರಿಷಭ್, ಮಿಚೆಲ್ ಮಾರ್ಷ್ ಹಾಗೂ ಟ್ರಿಸ್ಟನ್ ಸ್ಟಬ್ಸ್ ಉತ್ತಮ ಲಯದಲ್ಲಿದ್ದಾರೆ. ಎಡಗೈ ವೇಗಿ ಖಲೀಲ್ ಅಹಮದ್, ಅನುಭವಿ ವೇಗಿ ಇಶಾಂತ್ ಶರ್ಮಾ ಹಾಗೂ ಮುಕೇಶ್ ಕುಮಾರ್ ಅವರು ತಂಡದ ಬೌಲಿಂಗ್ ಶಕ್ತಿಯಾಗಿ ದ್ದಾರೆ. ಇವರ ಮುಂದೆ ಕೋಲ್ಕತ್ತದ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಕಠಿಣ ಸವಾಲಂತೂ ಇದೆ.

ವಿಶಾಖಪಟ್ಟಣದಲ್ಲಿ ಮಂಗಳವಾರ ಅಭ್ಯಾಸ ಅವಧಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕ ರಿಷಭ್ ಪಂತ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	3	3	0	6	1.249
ಕೋಲ್ಕತ್ತ ನೈಟ್ ರೈಡರ್ಸ್	2	2	0	4	1.047
ಚೆನ್ನೈ ಸೂಪರ್ ಕಿಂಗ್ಸ್	3	2	1	4	0.976
ಲಖನೌ ಸೂಪರ್ ಜೈಂಟ್ಸ್	3	2	1	4	0.483
ಗುಜರಾತ್ ಟೈಟನ್ಸ್	3	2	1	4	-0.738
ಸನ್‌ರೈಸರ್ಸ್ ಹೈದರಾಬಾದ್	3	1	2	2	0.204
ಡೆಲ್ಲಿ ಕ್ಯಾಪಿಟಲ್ಸ್	3	1	2	2	-0.016
ಪಂಜಾಬ್ ಕಿಂಗ್ಸ್	3	1	2	2	-0.337
ರಾಯಲ್ ಚಾಲೆಂಜರ್ಸ್ ಬೆಂಗಳೂರು	4	1	3	2	-0.876
ಮುಂಬೈ ಇಂಡಿಯನ್ಸ್	3	0	3	0	-1.423

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (203 ರನ್)

ಪರ್ಪಲ್ ಕ್ಯಾಪ್: ಮುಸ್ತಫಿಜುರ್ ರೆಹಮಾನ್, ಸಿಎಸ್‌ಕೆ (7 ವಿಕೆಟ್)

ಸ್ಕೋರ್ ಕಾರ್ಡ್

ಲಖನೌ ಸೂಪರ್ ಜೈಂಟ್ಸ್: 5ಕ್ಕೆ181 (20 ಓವರುಗಳಲ್ಲಿ)
ಡಿಕಾಕ್ ಸಿ ದಾಗರ್ ಬಿ ಟೋಪ್ಲಿ 81 (56ಎ, 4x8, 6x5)
ರಾಹುಲ್ ಸಿ ದಾಗರ್ ಬಿ ಮ್ಯಾಕ್ಸ್‌ವೆಲ್ 20 (14ಎ, 6x2)
ಪಡಿಕ್ಕಲ್ ಸಿ ರಾವತ್ ಬಿ ಸಿರಾಜ್ 6 (11ಎ)
ಸ್ಟೊಯಿನಿಸ್ ಸಿ ದಾಗರ್ ಬಿ ಮ್ಯಾಕ್ಸ್‌ವೆಲ್ 24 (15ಎ, 4x1, 6x2)
ಪೂರನ್ ಔಟಾಗದೇ 40 (21ಎ, 4x1, 6x5)
ಬಡೋನಿ ಸಿ ಡುಪ್ಲೆಸಿ ಬಿ ದಯಾಳ್ 0 (3ಎ)
ಕೃಣಾಲ್ ಔಟಾಗದೇ 0
ಇತರೆ: 10 (ವೈಡ್ 10)
ವಿಕೆಟ್ ಪತನ: 1–53 (ಕೆ.ಎಲ್.ರಾಹುಲ್, 5.3), 2–73 (ದೇವದತ್ತ ಪಡಿಕ್ಕಲ್, 8.5), 3–129 (ಮಾರ್ಕಸ್ ಸ್ಟೊಯಿನಿಸ್, 13.5), 4–143 (ಕ್ವಿಂಟನ್ ಡಿಕಾಕ್, 16.4), 5–148 (ಆಯುಷ್ ಬಡೋನಿ, 17.6).
ಬೌಲಿಂಗ್: ರೀಸ್ ಟೋಪ್ಲಿ 4–0–39–1; ಯಶ್ ದಯಾಳ್ 4–0–24–1; ಮೊಹಮ್ಮದ್ ಸಿರಾಜ್ 4–0–47–1; ಗ್ಲೆನ್ ಮ್ಯಾಕ್ಸ್‌ವೆಲ್ 4–0–23–2; ಮಯಂಕ್ ದಾಗರ್ 2–0–23–0; ಕ್ಯಾಮರೂನ್ ಗ್ರೀನ್ 2–0–25–0

ರಾಯಲ್ ಚಾಲೆಂಜರ್ಸ್ ಬೆಂಗಳೂರು: 153 (19.4 ಓವರ್‌ಗಳಲ್ಲಿ)
ಕೊಹ್ಲಿ ಸಿ ಪಡಿಕ್ಕಲ್ ಬಿ ಸಿದ್ಧಾರ್ಥ್ 22 (16ಎ, 4x2, 6x1)
ಡುಪ್ಲೆಸಿ ರನೌಟ್ (ಪಡಿಕ್ಕಲ್) 19 (13ಎ, 4x3)
ಪಾಟೀದಾರ್ ಸಿ ಪಡಿಕ್ಕಲ್ ಸಿ ಯಾದವ್ 29 (21ಎ, 4x2, 6x2)
ಮ್ಯಾಕ್ಸ್‌ವೆಲ್ ಸಿ ಪೂರನ್ ಬಿ ಯಾದವ್ 0 (2)
ಗ್ರೀನ್ ಬಿ ಯಾದವ್ 9 (9ಎ, 4x1)
ರಾವತ್ ಸಿ ಪಡಿಕ್ಕಲ್ ಬಿ ಸ್ಟೊಯಿನಿಸ್ 11 (21ಎ)
ಲೊಮ್ರೊರ್ ಸಿ ಪೂರನ್ ಬಿ ಯಶ್ 33 (13ಎ, 4x3, 6x3)
ದಿನೇಶ್ ಸಿ ರಾಹುಲ್ ಬಿ ನವೀನ್ 4 (8ಎ)
ದಾಗರ್ ರನೌಟ್ (ಪೂರನ್) 0 (1ಎ)
ಟೋಪ್ಲಿ ಔಟಾಗದೆ 3 (6ಎ)
ಸಿರಾಜ್ ಸಿ ಪೂರನ್ ಬಿ ನವೀನ್ 12 (8ಎ, 6x2)
ಇತರೆ: 11 (ಲೆಗ್‌ಬೈ 3, ವೈಡ್ 8)
ವಿಕೆಟ್ ಪತನ: 1–40 (ವಿರಾಟ್ ಕೊಹ್ಲಿ, 4.2), 2–42 (ಫಫ್ ಡುಪ್ಲೆಸಿ, 5.1), 3–43 (ಗ್ಲೆನ್ ಮ್ಯಾಕ್ಸ್‌ವೆಲ್, 5.4), 4–58 (ಕ್ಯಾಮರೂನ್ ಗ್ರೀನ್, 7.4), 5–94 (ಅನುಜ್ ರಾವತ್, 12.5), 6-103 (ರಜತ್ ಪಾಟೀದಾರ್, 14.2), 7-136 (ದಿನೇಶ್ ಕಾರ್ತಿಕ್, 16.5), 8-137 (ಮಯಂಕ್ ದಾಗರ್, 17.1), 9-138 (ಮಹಿಪಾಲ್ ಲೊಮ್ರೊರ್, 17.5), 10–153 (ಮೊಹಮ್ಮದ್ ಸಿರಾಜ್; 19.4)
ಬೌಲಿಂಗ್: ಮಣಿಮಾರನ್ ಸಿದ್ಧಾರ್ಥ್ 3–0–21–1, ಕೃಣಾಲ್ ಪಾಂಡ್ಯ 1–0–10–0, ನವೀನ್-ಉಲ್-ಹಕ್ 3.4–0–25–2, ಮಯಂಕ್ ಯಾದವ್ 4–0–14–3, ರವಿ ಬಿಷ್ಣೋಯಿ 3–0–33–0, ಯಶ್ ಠಾಕೂರ್ 4–0–38–1, ಮಾರ್ಕಸ್ ಸ್ಟೊಯಿನಿಸ್ 1–0–9–1
ಪಂದ್ಯದ ಆಟಗಾರ: ಮಯಂಕ್ ಯಾದವ್

ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 28 ರನ್‌ಗಳ ಗೆಲುವು

ರಾಮನವಮಿ: ಏ.16, 17ರ ಪಂದ್ಯಗಳ ಮರುನಿಗದಿ

ನವದೆಹಲಿ (ಪಿಟಿಐ): ಇದೇ 16 ಹಾಗೂ 17ರಂದು ನಡೆಯಬೇಕಿದ್ದ ಐಪಿಎಲ್ ಪಂದ್ಯಗಳನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಮರುನಿಗದಿ ಮಾಡಿದೆ.

ಏ.17ರಂದು ರಾಮನವಮಿ ಆಚರಿಸಲಾಗುತ್ತಿದೆ. ಅಂದು ಕೋಲ್ಕತ್ತದ ಈಡನ್ ಗಾರ್ಡನ್ಸ್‌ನಲ್ಲಿ ನಡೆಯಬೇಕಿದ್ದ ಕೋಲ್ಕತ್ತ ನೈಟ್ ರೈಡರ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ನಡುವಿನ ಪಂದ್ಯವು ಒಂದು ದಿನ ಮುಂಚಿತವಾಗಿ (ಏ.16) ನಡೆಯಲಿದೆ.

ಅಹಮದಾಬಾದ್‌ನಲ್ಲಿ ಏ.16ರಂದು ನಡೆಯಬೇಕಿದ್ದ ಗುಜರಾತ್ ಟೈಟನ್ಸ್– ಡೆಲ್ಲಿ ಕ್ಯಾಪಿಟಲ್ಸ್ ನಡುವಿನ ಪಂದ್ಯ ಏ.17 ರಂದು ನಡೆಯುತ್ತದೆ ಎಂದು ಬಿಸಿಸಿಐ ಹೇಳಿಕೆಯಲ್ಲಿ ತಿಳಿಸಿದೆ.

ಟಿ20 ವಿಶ್ವಕಪ್: ಹಿಂದೆಸರಿದ ಸ್ಟೋಕ್ಸ್

ಲಂಡನ್: ಟೆಸ್ಟ್ ಕ್ರಿಕೆಟ್ ಕಡೆ ಗಮನ ಹರಿಸುವ ಉದ್ದೇಶದಿಂದ ಇಂಗ್ಲೆಂಡ್‌ನ ಆಲ್‌ರೌಂಡ್ ಆಟಗಾರ ಬೆನ್ ಸ್ಟೋಕ್ಸ್‌ಅವರು ಮುಂಬರುವ ಟಿ20 ವಿಶ್ವಕಪ್ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

ವೆಸ್ಟ್ ಇಂಡೀಸ್ ಹಾಗೂ ಅಮೆರಿಕದ ಜಂಟಿ ಆತಿಥ್ಯದಲ್ಲಿ ಜೂನ್‌ನಲ್ಲಿ ನಡೆಯುವ ವಿಶ್ವಕಪ್ ಟೂರ್ನಿಗೆ ಎರಡು ತಿಂಗಳ ಮುಂಚಿತವಾಗಿ ಇಂಗ್ಲೆಂಡ್ ತಂಡದ ಟೆಸ್ಟ್ ತಂಡದ ನಾಯಕನೂ ಆಗಿರುವ ಸ್ಟೋಕ್ಸ್ ತಮ್ಮ ನಿರ್ಧಾರವನ್ನು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಗೆ ತಿಳಿಸಿದ್ದಾರೆ.

'ಕ್ರಿಕೆಟ್‌ನ ಎಲ್ಲಾ ಸ್ವರೂಪಗಳಲ್ಲಿ ಆಲ್‌ರೌಂಡರ್ ಆಗಿ ಪೂರ್ಣ ಪಾತ್ರ ನಿರ್ವಹಿಸಲು ಮತ್ತು ಬೌಲಿಂಗ್ ಫಿಟ್‌ನೆಸ್ ಅನ್ನು ಮರಳಿ ಪಡೆಯುವತ್ತ ಗಮನ ಹರಿಸುತ್ತಿದ್ದೇನೆ. ಹೀಗಾಗಿ, ಐಪಿಎಲ್ ಮತ್ತು ವಿಶ್ವಕಪ್ ಟೂರ್ನಿಯಿಂದ ಹೊರಗುಳಿಯಲು ಬಯಸಿದ್ದೇನೆ' ಎಂದು 32 ವರ್ಷದ ಸ್ಟೋಕ್ಸ್ ಹೇಳಿದ್ದಾರೆ.

ಭಾರತದಲ್ಲಿ ಇತ್ತೀಚೆಗೆ ನಡೆದಿದ್ದ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಆಲ್‌ರೌಂಡರ್ ಆಗಿ ತಮ್ಮ ಕಾರ್ಯ ಪೂರ್ಣಗೊಳಿಸುವಲ್ಲಿ ಸ್ಟೋಕ್ಸ್ ವಿಫಲರಾಗಿದ್ದರು. ಈ ಟೆಸ್ಟ್ ಸರಣಿಯಲ್ಲಿ ಭಾರತದ ಎದುರು ಇಂಗ್ಲೆಂಡ್ 1-4 ಅಂತರದಲ್ಲಿ ಸೋಲು ಅನುಭವಿಸಿತ್ತು. 2022ರ ಟಿ20 ವಿಶ್ವಕಪ್ ಗೆಲುವಿನಲ್ಲಿ ಇಂಗ್ಲೆಂಡ್ ಪರ ಸ್ಟೋಕ್ಸ್ ಮಹತ್ವದ ಪಾತ್ರ ನಿರ್ವಹಿಸಿದ್ದರು. ಮೆಲ್ಬರ್ನ್‌ನಲ್ಲಿ ನಡೆದಿದ್ದ ಫೈನಲ್‌ನಲ್ಲಿ ಪಾಕಿಸ್ತಾನ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿ ಇಂಗ್ಲೆಂಡ್ ತಂಡವು ಚಾಂಪಿಯನ್ ಆಗಿತ್ತು.

ಗೆಲುವಿನತ್ತ ಲಂಕಾ ಓಟ

ಚಿತ್ತಗಾಂಗ್ (ಬಾಂಗ್ಲಾದೇಶ), (ಎಎಫ್‌ಪಿ): ಬೌಲರ್‌ಗಳ ಸಂಘಟಿತ ಪ್ರದರ್ಶನದಿಂದ ಶ್ರೀಲಂಕಾ ತಂಡ, ಎರಡನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲೂ ಬಾಂಗ್ಲಾದೇಶ ವಿರುದ್ಧ ಜಯದ ಹಾದಿಯಲ್ಲಿ ದಿಟ್ಟ ಹೆಜ್ಜೆಯಿಟ್ಟಿದೆ.

ಗೆಲುವಿಗೆ 511 ರನ್‌ಗಳ ಗುರಿ ಎದುರಿಸಿರುವ ಆತಿಥೇಯರು ನಾಲ್ಕನೇ ದಿನವಾದ ಮಂಗಳವಾರ ಆಟ ಮುಗಿದಾಗ 7 ವಿಕೆಟ್‌ಗೆ 268 ರನ್ ಗಳಿಸಿದ್ದರು. ಗಗನಕುಸುಮವಾಗಿರುವ ಗೆಲುವಿಗೆ ಇನ್ನೂ 243 ರನ್ ದೂರ ಸಾಗಬೇಕಾಗಿದೆ.

ಪ್ರಭಾತ್ ಜಯಸೂರ್ಯ, ಲಾಹಿರು ಕುಮಾರ ಮತ್ತು ಕಮಿಂದು ಮೆಂಡಿಸ್ ತಲಾ ಎರಡು ವಿಕೆಟ್ ಪಡೆದರು. ಬಾಂಗ್ಲಾ ಪರ ಮೊಮಿನುಲ್ ಹಖ್ ಅರ್ಧ ಶತಕ (50, 56 ಎಸೆತ) ಗಳಿಸಿದರೆ, ಮೆಹಿದಿ ಹಸನ್ ಮಿರಾಜ್ 44 ರನ್ (49 ಎಸೆತ) ಗಳಿಸಿ ಅಜೇಯರಾಗುಳಿದರು. ಸಿಲ್ಹೆಟ್‌ನಲ್ಲಿ ನಡೆದ ಮೊದಲ ಟೆಸ್ಟ್‌ನಲ್ಲಿ ಬಾಂಗ್ಲಾದೇಶ 328 ರನ್‌ಗಳಿಂದ ಸೋಲನುಭವಿಸಿತ್ತು.

ಸ್ಕೋರುಗಳು: ಶ್ರೀಲಂಕಾ: 531 ಮತ್ತು 7 ವಿಕೆಟ್‌ಗೆ 157 ಡಿಕ್ಲೇರ್ಡ್ (ಆ್ಯಂಜೆಲೊ ಮ್ಯಾಥ್ಯೂಸ್ 57, ಪ್ರಭಾತ್ ಜಯಸೂರ್ಯ ಔಟಾಗದೇ 28; ಹಸನ್ ಮಹಮೂದ್ 65ಕ್ಕೆ4); ಬಾಂಗ್ಲಾದೇಶ: 178 ಮತ್ತು 67 ಓವರುಗಳಲ್ಲಿ 7 ವಿಕೆಟ್‌ಗೆ 268 (ಮೊಮಿನುಲ್ ಹಖ್ 50, ಶಕೀಬ್ ಅಲ್ ಹಸನ್ 36, ಲಿಟ್ಟನ್ ದಾಸ್ 38; ಲಾಹಿರು ಕುಮಾರ 41ಕ್ಕೆ2, ಕಮಿಂದು ಮೆಂಡಿಸ್ 22ಕ್ಕೆ2, ಪ್ರಭಾತ್ ಜಯಸೂರ್ಯ 79ಕ್ಕೆ 2).

ವೇಟ್‌ಲಿಫ್ಟಿಂಗ್: ಬಿಂದ್ಯಾರಾಣಿಗೆ ಕಂಚು

ಫುಕೆಟ್ (ಥಾಯ್ಲೆಂಡ್), (ಪಿಟಿಐ): ಕಾಮನ್ವೆಲ್ತ್ ಗೇಮ್ಸ್ ಪದಕ ವಿಜೇತೆ ಬಿಂದ್ಯಾರಾಣಿ ದೇವಿ ಅವರು ಐಡಬ್ಲ್ಯುಎಫ್ ವಿಶ್ವ ಕಪ್ ವೇಟ್‌ಲಿಫ್ಟಿಂಗ್‌ನ ಮಹಿಳೆಯರ 55 ಕೆ.ಜಿ. ವಿಭಾಗದಲ್ಲಿ ಮಂಗಳವಾರ ಕಂಚಿನ ಪದಕ ಗೆದ್ದುಕೊಂಡರು.

25 ವರ್ಷದ ಬಿಂದ್ಯಾರಾಣಿ ಒಟ್ಟು 196 ಕೆ.ಜಿ (83 + 113 ಕೆ.ಜಿ) ಭಾರ ಎತ್ತಿದರು. ಈ ತೂಕ ವಿಭಾಗ ಒಲಿಂಪಿಕ್ಸ್‌ನಲ್ಲಿ ಇರುವುದಿಲ್ಲ. ಆದರೆ ಇದು ಮಣಿಪುರದ ಸ್ಪರ್ಧಿಯ ಉತ್ತಮ ಸಾಧನೆಯೇನಲ್ಲ. 2022ರ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ 203 ಕೆ.ಜಿ ಎತ್ತಿದ್ದರು.

ಉತ್ತರ ಕೊರಿಯಾದ ಕಾಂಗ್ ಗ್ಯಾಂಗ್ 234 ಕೆ.ಜಿ (103 + 131) ಭಾರ ಎತ್ತಿ ಚಿನ್ನ ಗೆದ್ದರು. ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ರುಮೇನಿಯಾದ ಕ್ಯಾಂಬಿ ಮಿಹೇಲ ವೆಲಂಟಿನಾ ಒಟ್ಟು 201 ಕೆ.ಜಿ. ಭಾರ ಎತ್ತಿ ಬೆಳ್ಳಿ ಪಡೆದರು.